ಸಮಕಾಲೀನ ಶಿಲ್ಪಕಲೆಯ ಸಂವೇದನೆಯ ನೆಲೆಗಳು

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಫೆಲೊಶಿಫ್‌ಗಾಗಿ ಸಲ್ಲಿಸಿರುವ ಸಂಶೋಧನ ಪ್ರಬಂಧ



ಸಂಶೋಧಕರು

ಡಾ. ಶಿವಾನಂದ ಎಚ್. ಬಂಟನೂರ

ಸಹಾಯಕ ಪ್ರಾಧ್ಯಾಪಕರು

ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಕನ್ನಡ ಭವನ ಜೆ.ಸಿ.ರಸ್ತೆ, ಬೆಂಗಳೂರು

2015

ಸಮಕಾಲೀನ ಶಿಲ್ಪಕಲೆಯ ಸಂವೇದನೆಯ ನೆಲೆಗಳು

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಪೆಲೊಶಿಫ್‌ಗಾಗಿ ಸಲ್ಲಿಸಿರುವ ಸಂಶೋಧನ ಪ್ರಬಂಧ

ಸಂಶೋಧಕರು

ಡಾ. ಶಿವಾನಂದ ಎಚ್. ಬಂಟನೂರ

ಸಹಾಯಕ ಪ್ರಾಧ್ಯಾಪಕರು

ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು

2014–15

ಪ್ರಮಾಣ ಪತ್ರ

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ೨೦೧೪-೧೫ನೇ ಸಾಲಿನ ಫೆಲೋಷಿಪ್‌ಗಾಗಿ **ಸಮಕಾಲೀನ ಶಿಲ್ಪಕಲೆಯ ಸಂವೇದನೆಯ ನೆಲೆಗಳು** ಎಂಬ ಸಂಶೋಧನ ಪ್ರಬಂಧವನ್ನು ಸಿದ್ಧಪಡಿಸಿ ಸಲ್ಲಿಸಿರುವೆನು.

ಸದರಿ ಪ್ರಬಂಧದ ವಿಷಯವನ್ನು ಯಾವುದೇ ಪದವಿ ಅಥವಾ ಬೇರಾವುದೇ ಉದ್ದೇಶಕ್ಕಾಗಿ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ವಂದನೆಗಳೊಂದಿಗೆ

ದಿನಾಂಕ : ೨೮.೦೭.೨೦೧೬

ಸ್ಥಳ : ಕಮಲಾಪುರ

ತಮ್ಮ ವಿಶ್ವಾಸದ

ಡಾ. ಶಿವಾನಂದ ಎಚ್. ಬಂಟನೂರ

ಪರಿವಿಡಿ

ಅಧ್ಯಾಯ :ಒಂದು

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ಇದುವರೆಗಿನ ಅಧ್ಯಯನಗಳು

ಚಲನಶೀಲವಾದ ಮಾನವನ ಬದುಕು ಅಗಾಗ ಬದಲಾವಣೆಗಳನ್ನು ಕಾಣುತ್ತದೆ. ಅಥವಾ ಬಯಸುತ್ತದೆ. ಇದು ಯಾವುದೇ ನಾಗರೀಕತೆ ಹಾಗೂ ಸಮಾಜದ ಜೀವಂತಿಕೆಯ ಲಕ್ಷಣವೂ ಹೌದು. ಸೃಜನಶೀಲತೆಯೇ ಜೀವಾಳವಾಗಿರುವ ಚಿತ್ರ- ಶಿಲ್ಪಗಳಂತಹ ಗಂಭೀರ ಕಲೆಗಳಲ್ಲಿ ಪರಿವರ್ತನೆ ಸಹಜ ಕ್ರಿಯೆ. ಒಮ್ಮೆ ಒಂದು ರೂಪ ಶೈಲಿ ಸ್ವೀಕಾರಕ್ಕೊಳಗಾಗಿ ಅದೊಂದು ಸಾಂಪ್ರದಾಯವಾಗಿ ಚಲಾವಣೆಗೆ ಬರುತ್ತದೆ. ಅದರ ಅನುಕರಣೆ ಕ್ಲೀಷೆಯಾದಾಗ ಅದು ತನ್ನ ಸತ್ವ ಹಾಗೂ ಉತ್ಸಾಹಗಳನ್ನು ಕಳೆದುಕೊಳ್ಳುತ್ತದೆ. ಆಗ ಕಲಾವಿದರು ತಮ್ಮ ಅಭಿವ್ಯಕ್ತಿಗೆ ಹೊಸರೂಪ, ತಂತ್ರ, ಮಾಧ್ಯಮಗಳ ಅನ್ವೇಷಣೆಯಲ್ಲಿ ತೊಡಗುತ್ತಾರೆ. ಈ ಹುಡುಕಾಟದಲ್ಲಿ ಯಾವುದೋ ಒಂದು ರೂಪ- ತಂತ್ರ ಅವಿಷ್ಕಾರಗೊಳ್ಳುತ್ತದೆ. ಅದು ಪಸರಿಸುತ್ತದೆ.[1] ಅನೇಕರು ಅದರಲ್ಲಿನ ಹೊಸತನಗಳಿಂದ ಆಕರ್ಷಿತರಾಗುತ್ತಾರೆ. ಅದನ್ನು ತಮ್ಮ ಅಭಿವ್ಯಕ್ತಿಯ ಮುಖ್ಯವಾಹಿನಿಯಾಗಿಸಿಕೊಳ್ಳುತ್ತಾರೆ. ಹೀಗೆ ಪ್ರಾಚೀನ ಕಾಲದಿಂದಲೂ ಚಿತ್ರ- ಶಿಲ್ಪಕಲೆಗಳಲ್ಲಿ ಬದಲಾವಣೆ ಸಾಗಿಬಂದಿದೆ. ಕರ್ನಾಟಕದ ಸಂದರ್ಭಕ್ಕೂ ಇದು ಅನ್ವಯವಾಗುತ್ತದೆ. ನಮ್ಮ ಅನೇಕ ಶಿಲ್ಪಿಗಳು ಸಮಕಾಲೀನವಾಗಿ ಅಭಿವ್ಯಕ್ತಿಗೆ' ಸಮಕಾಲೀನ ಶಿಲ್ಪಕಲೆಯ ಸಂವೇದನೆಯ ಹಲವು ನೆಲೆಗಳ ಚರಿತ್ರೆಯನ್ನೇ ಸೃಷ್ಟಿ ಮಾಡಿದ್ದಾರೆ. ಮುಂದಿನ ಪೀಳಿಗೆಗೆ ನಮ್ಮ ಸಮಕಾಲೀನರ ಈ ಎಲ್ಲ ಸಾಧನೆ ತಿಳಿಯುವಂತಾಗಬೇಕೆಂಬ ಆಶಯ ಪ್ರಸ್ತುತ ಅಧ್ಯಯನದ ಉದ್ಧೇಶಗಳಲ್ಲಿ ಒಂದಾಗಿದೆ.

ಕರ್ನಾಟಕದ ಪಾರಂಪರಿಕ ಶಿಲ್ಪಕಲೆ ಸ್ಥಳೀಯ ಸೀಮೆಗಳನ್ನು ಮೀರಿ ಬೆಳೆದು ವಿಜೃಂಭಿಸುವುದರೊಂದಿಗೆ ಭಾರತೀಯ ಶಿಲ್ಪಕಲೆಯ ಪಾರಂಪರಿಕ ಸೊಗಸಿನ ಜೊತೆ ಜೊತೆಗೆ ಬೆಳೆದು- ಉಳಿದು ಬಂದಿದೆ. ಅಲ್ಲದೆ ಹೊಸ ಹೊಸ ಆಯಾಮಗಳನ್ನು ಕಾಲಕಾಲಕ್ಕೆ ನಮ್ಮ ಜನಸಂಸ್ಕೃತಿಯ ಒಂದು ಪ್ರಮುಖ ಚಹರೆಯಾಗಿ ಅರಳಿದ ಸಂಪ್ರದಾಯ ವಿಶ್ವವಿಖ್ಯಾತವಾದುದಾಗಿದೆ. ಅದು ಆಧುನಿಕ ಪಾಶ್ಚಾತ್ಯ ಹಾಗೂ ಯುರೋಪಿನ

ಶಿಲ್ಪಕಲಾವಿದರ ವೈಯಕ್ತಿಕ ದೃಶ್ಯಾತ್ಮಕ ಅಭಿವ್ಯಕ್ತಿಯ ಹಾಗೆ ಅಲ್ಲ! ಆದರೆ ಈ ಸಂದರ್ಭದ ನಮ್ಮ ಸಮಕಾಲೀನ ಶಿಲ್ಪಿಗಳು ಮುಂದೆ ಹೋಗಿ ಹಿಂದಿನಿಂದಲೂ ಗಣನೀಯವಾಗಿರುವ, ಪಾಶ್ಚಾತ್ಯ ಹಾಗೂ ಯುರೋಪು ರಾಷ್ಟ್ರಗಳ ಶಿಲ್ಪಿಗಳ' ಸ್ವಯಂ ವೈಭವದ ವೈಯಕ್ತಿಕ ಅಭಿವ್ಯಕ್ತಿಯ ದೃಷ್ಟಿಯೊಂದಿಗೆ ಸ್ಪರ್ಧಿಸುವಂತೆ ಮಾತ್ರವೇ ಅಲ್ಲ; ತಮ್ಮದೇ ಆದ ಅನನ್ಯ ಗ್ರಹಿಕೆಗಳಿಂದ ಸೃಷ್ಟಿಸಿದ್ದಾರೆ. ಪಾಶ್ಚಿಮಾತ್ಯ ಕಲಾ ಇತಿಹಾಸಕಾರರೊಬ್ಬರು[೨] ರೋಡಿನ್‌ರ ಶಿಲ್ಪವೊಂದರ ಪಕ್ಕದಲ್ಲಿ ಭಾರತೀಯ ಶಿಲ್ಪವೊಂದನ್ನು ಇಟ್ಟರೆ ಹೇಗಿರುತ್ತದೆ? ಎಂದು ವಿಮರ್ಶಿಸಿದ್ದು– ನಮ್ಮ ದೇಶದ ಸಮಕಾಲೀನ ಸಂದರ್ಭದ ಶಿಲ್ಪಗಳನ್ನೇ ನೋಡಿಲ್ಲದ ಸಂದರ್ಭದಲ್ಲಿ ಎಂಬುದು ಗಮನಾರ್ಹ. ಪ್ಯಾರಿಸ್‌ನಲ್ಲಿ[೩] ನೆಲೆಸಿರುವ ಭಾರತೀಯ ಕಲಾವಿದ ಅನಿಲ್ ಕಪೂರ್ ನಮ್ಮ ಮಣ್ಣಿನ ಬೇರುಗಳ ಸತ್ವ ಹೊಂದಿದ ತಮ್ಮ ಶಿಲ್ಪಗಳ ವಿಶಿಷ್ಟ ಅಭಿವ್ಯಕ್ತಿಯಿಂದ[೪] ಇಂತಹ ಸಿನಿಕ ಕಲಾ ಇತಿಹಾಸಕಾರ/ ವಿಮರ್ಶಕರಿಗೆಲ್ಲ ಅಲ್ಲಿಯೇ ಉತ್ತರಿಸಿದಂತೆ ಕಾಣುತ್ತಾರೆ. ನಮ್ಮ ಶಿಲ್ಪಕಲೆಯ ಸಂಪ್ರದಾಯ ಎಂದರೆ ನಮ್ಮ ಇಂದಿನ ಸಮಕಾಲೀನ ದೃಶ್ಯಕಲೆಗೆ ಬೇರುಗಳು ಇದ್ದಂತೆ. ಸಮಕಾಲೀನ ಶಿಲ್ಪಕಲೆಯ ಹಳೆಯ ಪ್ರಕಾರದ ಕಾಂಡ ಚಿಗುರು– ಹೂ– ಪರಿಮಳಗಳನ್ನು ಭಾವ ಬಣ್ಣಗಳನ್ನು ಪಡೆದು ಸಂಭ್ರಮಿಸಿದಂತಹುದು. ಅಂತೆಯೇ ಪ್ರಸ್ತುತ ಅಧ್ಯಯನ ಬೇರುಗಳ ಅಧ್ಯಯನವಲ್ಲ! ಹೂ– ಹಣ್ಣುಗಳ ಅಧ್ಯಯನವೆನ್ನಬೇಕು.

ಹಾಗೆ ನೋಡಿದರೆ ನಮ್ಮ ಶಿಲ್ಪಕಲೆಯ ಬೇರುಗಳ ಆಳ ಇತಿಹಾಸ ಪೂರ್ವದಷ್ಟು ಹಳೆಯದು. ಅತ್ಯಂತ ಆಶ್ಚರ್ಯವನ್ನುಂಟು ಮಾಡುವಂತಹ ಎಂಟರಿಂದ ಹತ್ತು ಅಡಿಗಳ ಎತ್ತರದ ಇತಿಹಾಸ ಪೂರ್ವಕಾಲದ ಮಾನವನ ರೂಪಗಳ ಶಿಲ್ಪಗಳು ಈಗಲೂ ನೋಡಬಹುದು. ಬಳ್ಳಾರಿ ಜಿಲ್ಲೆಯ ಕಮತಿಯಲ್ಲಿರುವ ಈ ಶಿಲ್ಪಗಳು ಪೂರ್ಣ ಪ್ರಮಾಣದಲ್ಲಿ ನಿಂತ ಭಂಗಿಯಲ್ಲಿವೆ. ಇವು ಚಪ್ಪಡಿ (ಗ್ರಾನೈಟ್) ಕಲ್ಲಿನ ಚಪ್ಪಟೆ ನಿರ್ವಹಣೆಯ ರಚನೆಗಳಾಗಿವೆ. ಹತ್ತಿರದಿಂದ ಹಲವು ಕೋನಗಳಲ್ಲಿ ಈ ಶಿಲ್ಪಗಳನ್ನು ನೋಡಿದರೆ, 'ಹೇನ್ರಿ ಮೂರ್‌ನ' ಸರಳೀಕೃತ ಸುಂದರ ಆಕಾರದ ಶಿಲ್ಪಗಳನ್ನು ನೆನಪಿಗೆ ತರುತ್ತವೆ. ಈ ಶಿಲ್ಪಗಳು 'ಆದಿಮ ಸತ್ವ' ಹಾಗೂ' ವ್ಯಕ್ತಿ ಆರಾಧನೆಯ ಪರಾಕಾಷ್ಠೆ ಎನ್ನಬಹುದು. ಇದು ನಮ್ಮ ಇತಿಹಾಸ ಪೂರ್ವಕಾಲದ ಶಿಲ್ಪಕಲೆ ಚರಿತ್ರೆಯ ಹೆಗ್ಗಳಿಕೆಯೇ ಸರಿ[೫] ಎನ್ನುತ್ತಾರೆ ಕಲಾ ವಿಮರ್ಶಕ ಕೆ.ವಿ. ಸುಬ್ರಹ್ಮಣ್ಯಂ. ಕಾಲಾನಂತರದಲ್ಲಿ ನಮ್ಮಲ್ಲಿ ಇಂತಹ ಹೆಗ್ಗಳಿಕೆಯ ಶ್ರೀಮಂತ ಶಿಲ್ಪಪರಂಪರೆ ಅದೆಷ್ಟೋ ಪ್ರಮಾಣದಲ್ಲಿ ವೈವಿಧ್ಯಮಯವಾಗಿ ಸೌಂದರ್ಯದ ಬಹು ಆಯಾಮಗಳಲ್ಲಿ ಸೃಷ್ಟಿಯಾಯಿತು.

ಶತಶತಮಾನಗಳ ಹಿಂದೆಯೇ ಸೃಷ್ಟಿಯಾಗಿ ಇಂದಿಗೂ ತಮ್ಮ ಸೌಂದರ್ಯವನ್ನು ಸೂಸುತ್ತ ಜಗತ್ತಿನ ಕಣ್ಣುಗಳನ್ನು ತನ್ನತ್ತ ಸೆಳೆದಿರುವ ನಮ್ಮ ಶಿಲ್ಪ ಸಂಪತ್ತು ಮುಖ್ಯವಾಗಿ ಚಾಲುಕ್ಯ, ಹೊಯ್ಸಳ, ವಿಜಯನಗರ ಪರಂಪರೆ ನಮ್ಮ ಮುಂದಿದೆ.[೬] ಗ್ರಾಮೀಣರ ಬದುಕಿನ ಅಭಿವ್ಯಕ್ತಿಯೇ ಆಗಿರುವ ಮಣ್ಣಿನ ಸೊಗಡಿನ ಜಾನಪದ ಶಿಲ್ಪಕಲಾ ಸಂಪತ್ತು ಕೂಡ ಅಗಾಧವಾದ ಪ್ರಭಾವವನ್ನು ಬೀರಿದೆ. ಕರ್ನಾಟಕ ರಾಜ್ಯದ ಹಲವು ಪ್ರದೇಶಗಳ ಪ್ರತಿಯೊಂದು ಹಳ್ಳಿಯೂ ಒಂದು ಪರಿಪೂರ್ಣವಾದ 'ಕಲಾವಸ್ತು ಸಂಗ್ರಹಾಲಯ' (museum) ದಂತೆ ಪರಂಪರೆಯ ಹಲವು ಪಲ್ಲಟಗಳು, ಕಾಲದ ಹೊಡೆತಗಳನ್ನು ಮೀರಿ

ನಿಂತಿವೆ. ಕಲಬುರಗಿ, ವಿಜಯಪುರ, ಬಾಗಲಕೋಟೆ, ಗದಗ, ಬಳ್ಳಾರಿ ಜಿಲ್ಲೆಗಳ ಹಲವು ಹಳ್ಳಿಗಳು ಮೇಲಿನ ಮಾತುಗಳಿಗೆ ನಿದರ್ಶನವಾಗಿವೆ. ಅಲ್ಲಿನ ಸ್ಥಳೀಯ ಸೊಗಡಿನ ಮನೆ-ಮಠಗಳು, ಗೃಹಲಂಕಾರಗಳು, ಕೆತ್ತನೆಗಳು, ಹಬ್ಬ- ಹರಿದಿನಗಳ ಆಚರಣೆ ಆಂದರ್ಭದಲ್ಲಿ ರಚನೆಯಾಗುವ ಜೋಕುಮಾರ, ಹುತ್ತಪ್ಪ, ದುರುಗಮ್ಮ, ಮಾರೆಮ್ಮ, ದ್ಯಾಮವ್ವ, ಕರೆಮ್ಮ, ಇಂತಹ ಹತ್ತು ಹಲವಾರು ಶಿಲ್ಪಗಳು ನಮ್ಮ ಗ್ರಾಮೀಣ ಜನಪದರ ಶಿಲ್ಪ ಸಂಸ್ಕೃತಿಯ ಕುರುಹುಗಳಾಗಿ ಬೆರಗು ಮೂಡಿಸುವಂತಿವೆ.

ದಕ್ಷಿಣ ಕನ್ನಡದ ಮೆಕ್ಕಿಕಟ್ಟೆಯ ಭೂತ, ಸೋಮ ಶಿಲ್ಪಗಳು, ಕಿನ್ನಾಳ ಗೊಂಬೆಗಳು, ಕಲಘಟಗಿ, ಗೋಕಾಕ, ಗೋನಾಳ, ತೊನಸ್ಯಾಳ, ಜಾಲಿಹಾಳ, ಮೈಸೂರಿನ ಚನ್ನಪಟ್ಟಣದ ಸುಂದರ ಗೊಂಬೆಗಳು ಶತ- ಶತಮಾನಗಳಿಂದಲೂ ತಮ್ಮ ವೈಶಿಷ್ಟ್ಯತೆಯನ್ನು ಉಳಿಸಿಕೊಂಡು ಬಂದವುಗಳಾಗಿವೆ. ಇಂದು ಆಧುನಿಕತೆ, ಬದಲಾದ ಬದುಕಿನ ಸಂದರ್ಭ ಮತ್ತು ಜಾಗತೀಕರಣದ ಹಿನ್ನೆಲೆಯಲ್ಲಿ ಇಂತಹ ಸ್ಥಳೀಯ ಕಲೆಗಳು ಅಚ್ಚರಿಯ ಕಾರಣಗಳಿಗಾಗಿ ಬಹುದೊಡ್ಡ ರೀತಿಯಲ್ಲಿ ದೇಶ ವಿದೇಶಗಳಲ್ಲಿ ಹೆಸರಾಗಿವೆ. ಮಾರಾಟವೂ ಹೆಚ್ಚಿದೆ. ಆದರೆ ಇಂದಿನ ಅವಸರದ ಜಗತ್ತಿನಲ್ಲಿ ಇಂತಹ ಹಲವಾರು ದೇಶೀ ಕಲೆಗಳು ತಮ್ಮ ನೈಜ ಸೊಗಡಿನ ಆವರಣವನ್ನು ಹಲವು ಬಗೆಯಲ್ಲಿ ಕಳೆದುಕೊಂಡಿವೆ ಎಂಬುದೂ ಅಷ್ಟೇ ಸತ್ಯ. 'ನಿಮಗೆ ಸಾವಿರಾರು ವರ್ಷಗಳ ಇತಿಹಾಸದ ಸಂಕೋಲೆ ಇದೆ: ಅದು ನಿಮ್ಮನ್ನು ಮುಂದೆ ಹೋಗಲು ಬಿಡದೆ ಹಿಂದಕ್ಕೆ ಜಗ್ಗುತ್ತಿದೆ. ನಮಗೆ ಅಂತಹ ಸಂಕೋಲೆಗಳಾವವೂ ಇಲ್ಲ.' ಎಂಬ ಅಭಿಪ್ರಾಯವನ್ನು ಅಮೇರಿಕೆಯ ಶಿಲ್ಪಿಯೊಬ್ಬರು ಕಲಬುರ್ಗಿಯಲ್ಲಿ (೧೯೯೨) ನಮ್ಮ ಕಲಾವಿಮರ್ಶಕ ಶ್ರೀ ಕೆ. ವಿ. ಸುಬ್ರಹ್ಮಣ್ಯಂ ಅವರೊಂದಿಗಿನ ಮಾತುಕತೆಯಲ್ಲಿ ವ್ಯಕ್ತಮಾಡಿದ್ದರಂತೆ. ಅಂದರೆ, ನಮ್ಮ ವೈವಿಧ್ಯಮಯ ಸಂಸ್ಕೃತಿ, ಕಲೆಗಳ ಸುದೀರ್ಘ ಇತಿಹಾಸಕ್ಕೆ ಅವರು ಬೆರಗಾಗಿದ್ದರು. ನಮ್ಮ ಅಜಂತಾ, ಎಲ್ಲೋರಾ, ಬಾದಾಮಿ, ಹಂಪೆಗಳ ಚಿತ್ರ ಶಿಲ್ಪ ಪರಂಪರೆ ಅವರಿಗೆ ಗೊತ್ತೇ ಇರಲಿಲ್ಲ. ಇಂತಹ ಶ್ರೀಮಂತ ಪರಂಪರೆಯ ಚಿತ್ರ ಶಿಲ್ಪಕಲೆಯ ಸಂಪ್ರದಾಯ ಬಹಳ ಸತ್ವಪೂರ್ಣವಾಗಿರುವುದರಿಂದಲೇ ನಮ್ಮ ಆಧುನಿಕ ಸಮಕಾಲೀನ ಶಿಲ್ಪಕಲೆ ತನ್ನ ಆಯಾಮಗಳನ್ನು ಹಲವು ರೀತಿಗಳಲ್ಲಿ ವಿಸ್ತರಿಸಿಕೊಳ್ಳುವುದು ಸಾಧ್ಯವಾಗಿದೆ.

ಇಂತಹ ದೇಶಿ ಪರಂಪರೆಯ ಪ್ರಭಾವಗಳನ್ನು ಬಳಸಿಕೊಂಡು ನಮ್ಮ ಸಮಕಾಲೀನ ಕಲಾವಿದರು ಏನನ್ನು ಚಿಂತಿಸಿದರು, ಸೃಷ್ಟಿಸಿದರು ಎಂಬುದನ್ನು ಇಂತಹ ಅಧ್ಯಯನಗಳ ಮೂಲಕವೇ ತಿಳಿಯಲು ಸಾಧ್ಯವೆಂಬುದನ್ನು ಅರಿತು ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಪ್ರಸ್ತುತ 'ಸಮಕಾಲೀನ ಶಿಲ್ಪಕಲೆಯ ಸಂವೇದನೆಯ ನೆಲೆಗಳು' ಅಧ್ಯಯನದಲ್ಲಿ ಈ ರೀತಿಯ ಸಮಕಾಲೀನತೆಯನ್ನು ಗರ್ಭೀಕರಿಸಿಕೊಂಡು ಕಾಲ ಮತ್ತು ಸಂದರ್ಭಕ್ಕೆ ಪ್ರಸ್ತುತವೆನಿಸುವ ಸಮಕಾಲೀನ ಕಲಾವಿದರು, ಅವರು ವಿವಿಧ ಮಾಧ್ಯಮಗಳಲ್ಲಿ ರಚಿಸುವ ವೈವಿಧ್ಯಮಯವಾದ ಶಿಲ್ಪಕಲಾಕೃತಿಗಳನ್ನು ಗಣನೆಗೆ ತೆಗೆದುಕೊಂಡು, ಸಾಧ್ಯವಾದಷ್ಟು ಕಲಾವಿದರ ಭೌತಿಕ

ವಿವರಗಳನ್ನು ಕೈಬಿಟ್ಟು ಕಲಾಕೃತಿನಿಷ್ಠವಾದ ಭಾವಾವೇಶಗಳನ್ನು, ತುಡಿತ ತಲ್ಲಣಗಳನ್ನು ಬದುಕಿನ ವಿವಿಧ ಸನ್ನಿವೇಷ, ಸಂದರ್ಭಗಳಿಂದ ಪ್ರೇರಣೆಗೊಂಡು ಸಂವೇದನಾಶೀಲವಾಗಿ ಸೃಜನಶೀಲತೆಯಿಂದ ಕೂಡಿದ ಸೃಷ್ಟಿಗಳನ್ನು ಕೇಂದ್ರೀಕರಿಸಿದೆ. ಭಿವ್ಯಕ್ತಿಸಲೇಬೇಕೆಂಬ ತುಡಿತದಿಂದ ಸೃಷ್ಟಿಸಲ್ಪಟ್ಟಿರುವ, ಸಾಂದರ್ಭಿಕವಾಗಿಯೂ ಕಾಲಧರ್ಮಕ್ಕೆ ಕನ್ನಡಿ ಹಿಡಿಯಲೆಂದೇ ಮೂಡಿಬಂದಿರುವ ಮತ್ತು ಬಹುಮುಖ್ಯವೆನಿಸುವ ಶಿಲ್ಪಕಲಾಕೃತಿಗಳನ್ನು ಮತ್ತು ಕಲಾವಿದರನ್ನು ಪರಿಗಣಿಸಿ ಈ ಅಧ್ಯಯನ ಮಾಡಲಾಗಿದೆ.

ಮೊದಲನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನಗಳನ್ನು ತಿಳಿಸುವುದರ ಜೊತೆಗೆ ಪೀಠಿಕೆಯಾಗಿ ಸಮಕಾಲೀನ ಶಿಲ್ಪಕಲೆಯ ಆರಂಭಿಕ ಸಂದರ್ಭ, ದೃಷ್ಟಿ-ಸೃಷ್ಟಿಗಳನ್ನು ಕಟ್ಟಿಕೊಡುತ್ತದೆ. ಜೊತೆಗೆ ಈ ಅಧ್ಯಯನಕ್ಕೂ ಪೂರ್ವದಲ್ಲಿ ಕರ್ನಾಟಕದ ಸಮಕಾಲೀನ ಶಿಲ್ಪಕಲೆಯ ಕುರಿತು ಕನ್ನಡದಲ್ಲಿ ಯಾರ್‍ಯಾರು ಏನೇನನ್ನು ಬರೆದಿದ್ದಾರೆ ಪ್ರಕಟಿಸಿದ್ದಾರೆ ಎಂಬುದರ ಕುರಿತು 'ಇದುವರೆಗಿನ ಅಧ್ಯಯನಗಳು' ಶಿರ್ಷಿಕೆಯಡಿಯಲ್ಲಿ ಪರಿಚಯಿಸಲಾಗಿದೆ. ತನ್ಮೂಲಕ ಸಮಕಾಲೀನ ಶಿಲ್ಪಕಲಾ ಸಾಹಿತ್ಯದ ಅವಲೋಕನವೂ ಆಗಿದೆ.

ಎರಡನೆಯ ಅಧ್ಯಾಯದಲ್ಲಿ ಸಮಕಾಲೀನ ಶಿಲ್ಪಗಳು ಸೃಷ್ಟಿಗೊಂಡಿರುವ ವಿವಿಧ ಮಾಧ್ಯಮಗಳನ್ನು ಕುರಿತು, ಅವುಗಳ ಗುಣ ವೈಶಿಷ್ಟ್ಯ, ಸೃಷ್ಟಿ ಸಾಧ್ಯತೆಗಳನ್ನು ನಿರ್ವಹಣಾ ಕ್ರಮಗಳನ್ನು ಕುರಿತು ಹಲವು ಅಂಶಗಳನ್ನು ಅಧ್ಯಯನದ ಮೂಲಕ ಕಟ್ಟಿಕೊಡಲಾಗಿದೆ. ಒಂದೊಂದು ಮಾಧ್ಯಮವೂ ತನ್ನದೇ ಆದ ಸ್ವಭಾವ- ಗುಣಗಳ ರೋಚಕತೆ ಮತ್ತು ವೈಶಿಷ್ಟ್ಯತೆಗಳನ್ನು ಹೊಂದಿರುವುದನ್ನು ನಿರೂಪಿಸಲಾಗಿದೆ. ಕೆತ್ತುವ ಕ್ರಮದಿಂದ ಶಿಲ್ಪ ರಚಿಸುವುದು, ಮೆತ್ತುವ ಕ್ರಮದಿಂದ ಶಿಲ್ಪ ರಚಿಸುವುದು, ಒತ್ತಿ ರೂಪಿಸುವ ಕ್ರಮದಿಂದ ಶಿಲ್ಪ ರೂಪಿಸುವುದು. ಅಲ್ಲದೆ ಎರಕ ಹೊಯ್ಯುವ ಮೂಲಕ ಶಿಲ್ಪ ರೂಪಿಸುವ ಕ್ರಮಗಳನ್ನು ಪದ್ಧತಿಗಳನ್ನು ಹಾಗೂ ಅವುಗಳ ಫಲಿತಗಳನ್ನು ಚರ್ಚಿಸಲಾಗಿದೆ. ಆಯಾ ಮಾಧ್ಯಮಗಳಲ್ಲಿ ತಜ್ಞತೆ ಹೊಂದಿರುವ ಕಲಾವಿದರನ್ನು ಸಂಪರ್ಕಿಸಿ ಮಾಹಿತಿ ಸಂಗ್ರಹಿಸಿ ದಾಖಲಿಸಲಾಗಿದೆ. ಸಂಕೀರ್ಣ ಮಾಧ್ಯಮಗಳಲ್ಲಿ ಗುರುತಿಸಿರುವ ಸಗಣಿ, ನಾರು, ಗೋಣಿ ಚೀಲ, ಹುಲ್ಲು, ಬಿದಿರು, ಅರಳೆ, ಕಾಗದದ ಗೊಜ್ಜು ಮೊದಲಾದ ತೀರ ಸಾಮಾನ್ಯವೆನಿಸುವ ಮಾಧ್ಯಗಳಲ್ಲಿ ರೂಪಿಸಲ್ಪಡುವ ಶಿಲ್ಪಗಳನ್ನು ಅವುಗಳ ಸೌಂದರ್ಯವನ್ನು ವಿವೇಚಿಸಲಾಗಿದೆ. ಮುಖ್ಯವಾಗಿ ಮಣ್ಣಿನ ಮಾಧ್ಯಮ, ಮರಮಾಧ್ಯಮ, ಶಿಲಾಮಾಧ್ಯಮ, ಲೋಹಮಾಧ್ಯಮ, ಸಿಮೆಂಟ್ ಮಾಧ್ಯಮ, ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮ, ಫೈಬರ್ ಗ್ಲಾಸ್ ಮಾಧ್ಯಮದ ಶಿಲ್ಪಗಳನ್ನು ಸಮಕಾಲೀನ ಕಲಾವಿದರು ರಚಿಸಿರುವುದರಿಂದ ಈ ಮಾಧ್ಯಮಗಳನ್ನು ಕುರಿತು ಆಯಾ ಮಾಧ್ಯಮಗಳ ಸೃಷ್ಟಿ ಸಾಧ್ಯತೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಒಂದೊಂದು ಮಾಧ್ಯಮದಲ್ಲಿ ಕಲಾವಿದರು ಹೇಗೆ ಶಿಲ್ಪ ಕಲಾಕೃತಿಗಳನ್ನು ಸೃಷ್ಟಿಸಿರುವರೆಂಬುದನ್ನು ಕಾಣಬಹುದಾಗಿದೆ.

ಮೂರನೆಯದಾದ 'ಸಮಕಾಲೀನ ಶಿಲ್ಪಕಲೆಯ ಚಾರಿತ್ರಿಕ ನೋಟ' ದಲ್ಲಿ ಕರ್ನಾಟಕದಲ್ಲಿ ಆಧುನಿಕ ಸಮಕಾಲೀನ ಶಿಲ್ಪಕಲೆ ಹೇಗೆ ಬೀಜಾಂಕುರ ಪಡೆಯಿತು ಮತ್ತು ಅನೇಕ ಹೊಳುಹುಗಳೊಂದಿಗೆ ಏಳು ಬೀಳುಗಳೊಂದಿಗೆ, ದೇಶೀ ಕಲಾ ಚಳುವಳಿಗಳ

ಗಾಳಿಯ ರಭಸವನ್ನು ಎದುರಿಸಿ ಹೇಗೆ ಬೆಳೆಯಿತು ಎಂಬುದನ್ನು ತಿಳಿಸಲಾಗಿದೆ. ಎರಡು ಮೂರು ಹಂತಗಳಲ್ಲಿ ಕಲಾವಿದರು ಮೊದಲು ಹೇಗೆ ಪಶ್ಚಿಮದ ಆಧುನಿಕ ಕಲೆಯನ್ನು ಅನುಕರಿಸಿದರೆಂಬುದನ್ನು, ತದನಂತರದ ದಿನಗಳಲ್ಲಿ ಸ್ವಂತಿಕೆಯನ್ನು ಹೇಗೆ ಮೆರೆದರು ಎಂಬುದನ್ನು ನಿರ್ವಚಿಸಲಾಗಿದೆ ಮತ್ತು ಕಲಾವಿದರ ಸೃಷ್ಟಿಗಳನ್ನು ಪ್ರಸ್ತಾಪಿಸಿ ಅಧ್ಯಯನದ ಆಳ- ವಿಸ್ತಾರವನ್ನು ಹೆಚ್ಚಿಸಲು ಯತ್ನಿಸಲಾಗಿದೆ. ಜೊತೆಗೆ ಸಮಕಾಲೀನ ಶಿಲ್ಪಕಲೆಯನ್ನು ಬೆಳೆಸುವ ನಿಟ್ಟಿನಲ್ಲಿ ಅಕಾಡೆಮಿಗಳು, ವಿಶ್ವೇಶ್ವರಯ್ಯ ಮ್ಯೂಸಿಯಂನಂತಹ ದೊಡ್ಡ ಸಂಸ್ಥೆಗಳು, ಕಲಾ ಕಾಲೇಜುಗಳು, ನಾಡಿನ ಇತರ ಸಂಘ ಸಂಸ್ಥೆಗಳು ಅಲ್ಲದ ವಿಶ್ವವಿದ್ಯಾಲಯದಂತಹ ಉನ್ನತ ಶಿಕ್ಷಣ ಸಂಸ್ಥೆಗಳು, ಸಾಂಸ್ಕೃತಿಕ ಸಂಘಗಳು ಸಾಮೂಹಿಕವಾಗಿ ಮಾಡಿದ ಶಿಲ್ಪ ಶಿಬಿರ, ಕಾರ್ಯಾಗಾರ ಮೊದಲಾದ ಚಟುವಟಿಕೆಗಳ ಕುರಿತೂ ಅನೇಕ ಒಳನೋಟಗಳನ್ನು ಈ ಅಧ್ಯಾಯದಲ್ಲಿ ಪ್ರಸ್ತಾಪಿಸಿ ಚರ್ಚಿಸಲಾಗಿದೆ. ಅನೇಕ ಸಮಕಾಲೀನ ಶಿಲ್ಪಗಳು ಮತ್ತು ಅವರ ಶಿಲ್ಪಕಲಾಕೃತಿಗಳ ಛಾಯಾಚಿತ್ರಗಳನ್ನು ಈ ಅಧ್ಯಾಯಕ್ಕೆ ಸಂಬಂಧಿಸಿದಂತೆ ಪ್ರಸ್ತಾಪಿಸಿ ಅಧ್ಯಯನ ಮಾಡಲಾಗಿದೆ. ಅನೇಕ ಗ್ರಂಥಗಳನ್ನು, ಲೇಖನಗಳನ್ನು ಪರಾಮರ್ಶನಕ್ಕೆ ಬಳಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಆಧುನಿಕ ಸಮಕಾಲೀನ ಶಿಲ್ಪಕಲೆಯು ಕರ್ನಾಟಕದಲ್ಲಿ ತನ್ನ ಪ್ರಭಾವವನ್ನು ಬೀರಲು ಆರಂಭಿಸಿದಾಗ ಅಂದಿನ ಕಲಾಸಂದರ್ಭ ಹೇಗಿತ್ತು, ದೇಶದಲ್ಲಿ ಅದರಲ್ಲೂ ಮುಂಬೈ, ಕೊಲ್ಕತ್ತಾ ಮತ್ತು ಶಾಂತಿನಿಕೇತನಗಳಂತಹ ಕಲಾಕೇಂದ್ರಗಳಲ್ಲಿ ಏನೇನು ಪ್ರತಿರೋಧಗಳು, ಪ್ರತಿಭಟನೆಗಳು ಮತ್ತು ಪ್ರಯೋಗಗಳು (ದೇಶಿ ನೆಲೆಯಲ್ಲಿ) ನಡೆದವು ಎಂಬುದನ್ನು ಸೋದಾಹರಣವಾಗಿ ವಿವರಿಸಲಾಗಿದೆ. ಮುಖ್ಯವಾಗಿ ಕರ್ನಾಟಕದಲ್ಲಿ ಸಾಂಪ್ರದಾಯಿಕ ಶಿಲ್ಪಕಲೆಯ ವಿರುದ್ಧ ಸೆಟೆದು ನಿಲ್ಲಲು, ತನ್ಮೂಲಕ ಸಂಪ್ರದಾಯವನ್ನು ಹಾಳುಮಾಡಲೆಂದೇ ಸಮಕಾಲೀನ ಶಿಲ್ಪಕಲೆ ತನ್ನ ಬಾಹುಗಳನ್ನು ಚಾಚುತ್ತಿದೆಯೇನೋ ಎಂಬಂತಹ ಭಾವನೆ ಕೆಲವರಲ್ಲಿ ಮೂಡಿದುದು ಕ್ರಮೇಣ ಆಧುನಿಕ-ಸಮಕಾಲೀನ ಶಿಲ್ಪಕಲೆ ಚಿತ್ರಕಲೆಯಂತೆ ಸಾರ್ವತ್ರಿಕವಾದುದರ ಬಗ್ಗೆ ವಿವರಿಸಲಾಗಿದೆ.

ಕೆ. ವೆಂಕಟಪ್ಪ, ಧನಂಜಯ ಶಿಲ್ಪಿ, ರಾಜಾರಾಂ, ಎನ್. ಎಚ್. ಕುಲಕರ್ಣಿ ಮತ್ತು ಅವರಂತಹ ಮಹಾನ್ ಶಿಲ್ಪಿಗಳ ಆಧುನಿಕ ಸಮಕಾಲೀನ ಶಿಲ್ಪಗಳು, ಅವರು ಮಾಡಿರುವ ಪ್ರಯೋಗಗಳನ್ನು, ಅವರು ಪಶ್ಚಿಮದಿಂದ ಪಡೆದ ಪ್ರೇರಣೆ, ಪ್ರಭಾವಗಳನ್ನು ಪರಾಮರ್ಶಿಸಲಾಗಿದೆ. ಇವರ ಕಲಾಕೃತಿಗಳಲ್ಲಿ ಆಳವಾದ ಚಿಂತನೆ, ತುಡಿತ ಮಿಡಿತಗಳ ಗಾಢವಾದ ಅಭಿವ್ಯಕ್ತಿ ಇಲ್ಲದಿದ್ದರೂ, ಕರ್ನಾಟಕದ ಆಧುನಿಕ ಸಮಕಾಲೀನ ಶಿಲ್ಪಕಲೆಯ ಮುಂದಿನ ಬೆಳವಣಿಗೆಗೆ ಹೇಗೆ ಮೊದಲ ಮೆಟ್ಟಿಲಾದುವು ಎಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ ಮತ್ತು ಪೂರಕವಾಗಿ ಅನೇಕ ಛಾಯಾಚಿತ್ರಗಳನ್ನು ಪರಾಮರ್ಶನ ಲೇಖನ, ಗ್ರಂಥಗಳ ಪಟ್ಟಿಯನ್ನು ನೀಡಲಾಗಿದೆ.

ಐದನೆಯ ಅಧ್ಯಾಯವಾದ 'ಸಮಕಾಲೀನ ಶಿಲ್ಪಕಲೆಯ ಎರಡನೆಯ ಘಟ್ಟ' ದಲ್ಲಿ ನಂತರದ ಪೀಳಿಗೆಯ ಕಲಾವಿದರು ಆಧುನಿಕ ಶಿಲ್ಪಕಲೆಯನ್ನು ಕುರಿತು ನಡೆಸಿದ ಪ್ರಯೋಗಗಳ ಕುರಿತು ಬೆಳಕು ಬೀರಲಾಗಿದೆ. ಇದು ಕರ್ನಾಟಕದಲ್ಲಿ ಸಮಕಾಲೀನ

ಶಿಲ್ಪಕಲೆಯನ್ನು ಹೇಗೆ ಪಸರಿಸಿತು ಎಂಬುದನ್ನು ವಿವರಿಸುತ್ತದೆ. ಅಲ್ಲದೆ ಹೊಸ ಪೀಳಿಗೆಯ ಕಲಾವಿದರು ಆಕರ್ಷಿತರಾಗಿ ಹೊಸ ಅನುಭವಗಳಿಂದ ಅಭಿವ್ಯಕ್ತಿಸಿ ಹೇಗೆ ರೋಮಾಂಚನ ಅನುಭವಿಸಿದರು, ಶಿಲ್ಪ ಕಲಾವಿದರು, ಸಮಕಾಲೀನತೆಯೆಡೆಗೆ ಮುಖಮಾಡಿ ಸ್ವಂತಿಕೆ-ಸ್ವಾತಂತ್ರ್ಯಗಳ ಸಂಭ್ರಮದಲ್ಲಿ ಏನೇನನ್ನು ಹೇಗೆ ಹೇಗೆ? ಸೃಷ್ಟಿಸಿದರು. ವೈಯಕ್ತಿಕ ಶೈಲಿ ಮತ್ತು ವಸ್ತು ವಿಷಯಗಳಿಂದ ವೈಯಕ್ತಿಕ ಗುರುತನ್ನು ಹೇಗೆ ದಾಖಲಿಸಿದರು ಎಂಬುದನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಅಲ್ಲದೆ ಕಲಾಕೃತಿಗಳ ವಿಮರ್ಶೆಯನ್ನು ಸಾಂದರ್ಭಿಕ ವಿಶ್ಲೇಷಣೆಯಲ್ಲಿ ಬೆರೆಸಿ ವಿವರಿಸಲಾಗಿದೆ.

ಆರನೆಯ ಅಧ್ಯಾಯವು ಸಮಕಾಲೀನ ಶಿಲ್ಪಕಲೆಯ ಮೂರನೆಯ ಘಟ್ಟ. ಇದರಲ್ಲಿ ಹೊಸ ಪೀಳಿಗೆಯ ಕಲಾವಿದರನ್ನು ಕುರಿತ ಅಧ್ಯಯನವಿದೆ. ಶಿಲ್ಪಕಲಾವಿದರು ಮತ್ತು ಅವರ ಶಿಲ್ಪಕಲಾಕೃತಿಗಳನ್ನು ಮುಖ್ಯವಾಗಿ ಇದರಲ್ಲಿ ಅಧ್ಯಯನ ಮಾಡಲಾಗಿದೆ. ಒಬ್ಬೊಬ್ಬ ಶಿಲ್ಪಿಯ ಕುರಿತು ತುಡಿತ ಮಿಡಿತಗಳನ್ನು/ ಆಲೋಚನೆಗಳನ್ನು ಪ್ರಸ್ತಾಪಿಸಿ ಆ ಆಲೋಚನೆಗಳನ್ನು ಶಿಲ್ಪಕಲಾಕೃತಿಗಳಲ್ಲಿ ಹೇಗೆ ದೃಶ್ಯಾತ್ಮಕಗೊಳಿಸಿರುವರು ಎಂಬುದನ್ನು ಮತ್ತು ಕಲ್ಲು, ಮರ, ಅಲ್ಲದೆ ಸಿಮೆಂಟ್, ಫೈಬರ್‌ನಂತಹ ಹೊಸಮಾಧ್ಯಮಗಳಲ್ಲಿ ಮಾಡಿದ ಪ್ರಯೋಗಗಳನ್ನು ವಿವರಿಸಲಾಗಿದೆ. ಹೊಸರೂಪ, ಹೊಸ ಶೈಲಿ ಹೊಸ ವಸ್ತು, ಸಂಗತಿಗಳು ನೋಡುಗ ವರ್ಗದಲ್ಲಿ ಹೇಗೆ ಸಂಚಲನ ಉಂಟುಮಾಡಿವೆ ಎಂಬುದನ್ನು ಪ್ರಸ್ತಾಪಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಕರ್ನಾಟಕದಲ್ಲಿ ಮತ್ತು ಹೊರಗೆ ಸಮಕಾಲೀನ ಶಿಲ್ಪಕಲೆಯ ಕುರಿತು ಬೇರೆ ಬೇರೆ ಸಂಘ ಸಂಸ್ಥೆಗಳು, ಅಕಾಡೆಮಿಗಳು ಏರ್ಪಡಿಸಿರುವ ಸಮಕಾಲೀನ ಶಿಲ್ಪಕಲಾ ಶಿಬಿರಗಳನ್ನು ಕಾರ್ಯಾಗಾರಗಳನ್ನು ಕುರಿತು ಆಧಾರಗಳ ಸಮೇತ ಪ್ರಸ್ತಾಪಿಸಿ ವಿವರಿಸಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ ಕರ್ನಾಟಕದಾದ್ಯಂತ ಮತ್ತು ಹೊರಗೆ ನಮ್ಮ ಕಲಾವಿದರು ಏರ್ಪಡಿಸಿರುವ ಶಿಲ್ಪಕಲಾ ಪ್ರದರ್ಶನಗಳನ್ನು ಕುರಿತು ಹಾಗೂ ಕಲಾಕೃತಿಗಳ ಮಾಧ್ಯಮ ಶೈಲಿ, ತಂತ್ರಗಳು ಹೀಗೆ ಹಲವಾರು ಅಂಗಗಳ ಕುರಿತು ಅಧ್ಯಯನ ಮಾಡಲಾಗಿದೆ. ಅಧ್ಯಾಯ ಒಂಭತ್ತರಲ್ಲಿ ಕರ್ನಾಟಕದಾದ್ಯಂತ ಸ್ಥಾಪಿಸಲಾಗಿರುವ 'ಸಮಕಾಲೀನ ಶಿಲ್ಪವನಗಳನ್ನು' ಕುರಿತು, ಅವುಗಳ ರೂಪ, ಸ್ವರೂಪಗಳ ಕುರಿತು ಅಲ್ಲಿರುವ ಶಿಲ್ಪಗಳು ಅವುಗಳ ಸಂವೇದನೆ ತಾತ್ವಿಕತೆ ಮೊದಲಾದ ಅಂಶಗಳನ್ನು ಅಧ್ಯಯನದ ಮೂಲಕ ಚರ್ಚಿಸಿ ವಿವರಿಸಲಾಗಿದೆ. ಶಿಲ್ಪವನಗಳ ಸ್ಥಾಪನೆ, ಅದರ ಹಿಂದಿನ ಉದ್ದೇಶ, ಸಾಫಲ್ಯಗಳ ಕುರಿತು ಚಿಂತನೆಯಿಂದ ಕೂಡಿದ ಹಲವು ಸಂಗತಿಗಳನ್ನು ಪ್ರಸ್ತಾಪಿಸಿ ವಿವರಿಸಲಾಗಿದೆ.

ಹತ್ತನೆಯ ಅಧ್ಯಾಯವು ಸಮಾರೋಪವಾಗಿದ್ದು, ಸಮಕಾಲೀನತೆಯ ಪ್ರಸ್ತುತತೆ ಮತ್ತು ಅಗತ್ಯಗಳ ಕುರಿತು ಚರ್ಚಿಸುವುದರೊಂದಿಗೆ ಎಲ್ಲ ಅಧ್ಯಾಯಗಳ ಫಲಿತಗಳನ್ನು ಪ್ರಸ್ತಾಪಿಸಿ ಚರ್ಚಿಸಲಾಗಿದೆ ಮತ್ತು ಮುಂದಿನ ಪೀಳಿಗೆಗೆ ಮತ್ತು ಅಧ್ಯಯನಕಾರರಿಗೆ ಇದರಿಂದಾಗುವ ಪ್ರಯೋಜನಗಳನ್ನು ಪ್ರಸ್ತಾಪಿಸಲಾಗಿದೆ.

ಇದುವರೆಗಿನ ಅಧ್ಯಯನಗಳು

ಕನ್ನಡದಲ್ಲಿ ಕಲಾಸಾಹಿತ್ಯ ಮೇಲ್ನೋಟಕ್ಕೆ ಇಲ್ಲವೇ ಇಲ್ಲವೇನೋ ಎನ್ನುವಂತಹ ಸಂದರ್ಭದಿಂದ ನಾವು ಇಂದು ಬಹುದೂರ ಸಾಗಿಬಂದಿದ್ದೇವೆ. ಚಿತ್ರ, ಶಿಲ್ಪಕಲೆಗಳ ಕುರಿತು ಸ್ವಲ್ಪಮಟ್ಟಿನ ಸಾಹಿತ್ಯ ಸೃಷ್ಟಿಯಾಗಿರುವ ಸಂದರ್ಭವನ್ನು ನಾವೀಗ ಕಾಣುತ್ತೇವೆ. ಶ್ರೇಷ್ಠ ಕಲಾಸಾಹಿತ್ಯ ಸೃಷ್ಟಿಯಾಗಲು ಶ್ರೇಷ್ಠ ಕಲೆಯೂ ಸೃಷ್ಟಿಯಾಗಿ ಸ್ಫೂರ್ತಿ ನೀಡಬೇಕಷ್ಟೇ. ಪಾಶ್ಚಾತ್ಯರಲ್ಲಿ ಇವೆರಡೂ ಒಟ್ಟೊಟ್ಟಿಗೇ ನಡೆದುವು. ನಮ್ಮಲ್ಲಿ ಯಾವತ್ತೂ ಹಾಗಾಗಿಲ್ಲ. ಇಲ್ಲಿ ಕಲಾಸೃಷ್ಟಿ ಮೊದಲು ಬಳಿಕ ಕಲಾಸಾಹಿತ್ಯ. ಅದೂ ಅಲ್ಪ ಪ್ರಮಾಣದಲ್ಲಿ ಸಾಧ್ಯವಾಗಿದೆ.

ಮೂಲತಃ ಚಿತ್ರ, ಶಿಲ್ಪ, ಸಂಗೀತ ಮತ್ತು ನೃತ್ಯಕಲೆಗಳಂತಹ ಕ್ಷೇತ್ರಗಳಲ್ಲಿ ಶಾಬ್ದಿಕ ರೂಪದ ಸಾಹಿತ್ಯಕ್ಕೆ ಗೌಣ ಆದ್ಯತೆ. ಹಾಗಿದ್ದೂ ಬೆರಳೆಣಿಕೆಯಷ್ಟು ಜನರಾದರೂ ಇವುಗಳ ಕುರಿತು ಬರೆಯುತ್ತ ಬಂದಿರುವುದು ಸೋಜಿಗದ ಸಂಗತಿ. ಅದರಲ್ಲೂ ಶಿಲ್ಪಕಲೆಯ ಕುರಿತು ಕೆ.ವಿ.ಸು ಅವರಂತಹವರು ಹಲವರು ಇಲ್ಲಿ ನೆನಪಾಗುತ್ತಾರೆ. ಸಮಕಾಲೀನ ಶಿಲ್ಪಕಲೆಯ ಕುರಿತು ಕನ್ನಡದಲ್ಲಿ ಪ್ರಕಟಗೊಂಡಿರುವ ಸಾಹಿತ್ಯ ಬಹಳ ಕಡಿಮೆ. ಡಾ. ಶಿವರಾಮ ಕಾರಂತರು ಬರೆದ ಕಲಾ ಪ್ರಪಂಚವೇ ಆದಿಗ್ರಂಥವನ್ನಬೇಕು. ಆಧುನಿಕ ಶಿಲ್ಪಕಲೆಯ ಕುರಿತು ಈ ಪುಸ್ತಕದಲ್ಲಿ ಆಂಶಿಕವಾಗಿ ಮಾತ್ರ ಪ್ರಸ್ತಾಪವಿದೆ. ಇದನ್ನು ಬಿಟ್ಟರೆ ಕೆ.ವಿ. ಸುಬ್ರಹ್ಮಣ್ಯಂ ಅವರು ಬರೆದಿರುವ 'ಕರ್ನಾಟಕದ ಆಧುನಿಕ ಶಿಲ್ಪಕಲೆ', ಸಿ. ಪಿ. ರಾಜಾರಾಮ್, 'ಆರ್. ಎಸ್. ನಾಯ್ಡು', 'ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ', ಡಾ. ಶಿವಾನಂದ ಎಚ್. ಬಂಟನೂರ ಬರೆದಿರುವ 'ಸಮಕಾಲೀನ ಶಿಲ್ಪಕಲೆ' ಮೊದಲಾದ ಪುಸ್ತಕಗಳು ಆಧುನಿಕ–ಸಮಕಾಲೀನ ಶಿಲ್ಪಕಲೆ ಕುರಿತಾಗಿ ಪ್ರಕಟಗೊಂಡಿರುವ ಅಪರೂಪದ ಅಧ್ಯಯನಗಳಾಗಿವೆ.

ಈ ಮೇಲಿನ ಲೇಖಕರಲ್ಲದೆ ಎಸ್.ಎನ್. ಚಂದ್ರಶೇಖರ್, ಅ.ಲ. ನರಸಿಂಹನ್, ಎನ್. ಮರಿಶಾಮಾಚಾರ್, ಎಚ್.ಎ. ಅನಿಲ್‌ಕುಮಾರ್, ಚಿ.ಸು. ಕೃಷ್ಣಶೆಟ್ಟಿ, ಪ್ರೊ. ಎಂ.ಎಚ್. ಕೃಷ್ಣಯ್ಯ, ರವಿಕುಮಾರ ಕಾಶಿ, ಮೊದಲಾದವರು ಆಧುನಿಕ ಸಮಕಾಲೀನ ಶಿಲ್ಪಕಲೆ/ ಕಲಾವಿದರ ಕುರಿತು ಹಲವು ಒಳನೋಟಗಳ ಕುರಿತು ಲೇಖನ, ಪುಸ್ತಕಗಳನ್ನು ಬರೆದು ಪ್ರಕಟಿಸಿರುವರು. ಅಪರೂಪಕ್ಕೆ ಸಮಕಾಲೀನ ಶಿಲ್ಪಕಲೆಯ ಕ್ಯಾಟಲಾಗ್‌ಗಳನ್ನು ಬರೆದಿರುವರು.

ಕೆ. ವಿ. ಸುಬ್ರಹ್ಮಣ್ಯಂ ಅವರ 'ಕರ್ನಾಟಕದ ಆಧುನಿಕ ಶಿಲ್ಪಕಲೆ' ಗ್ರಂಥವು ಪುಟ್ಟದಾಗಿದ್ದು ಕರ್ನಾಟಕದಲ್ಲಿ ಆಧುನಿಕ ಶಿಲ್ಪಕಲೆಯ ಉಗಮ ಬೆಳವಣಿಗೆ, ಪ್ರಮುಖ ಕಲಾವಿದರು, ಅವರ ಸಂವೇದನೆಯ ನೆಲೆಗಳು, ಅಭಿವ್ಯಕ್ತಿಯ ಸ್ವರೂಪ, ಮಾಧ್ಯಮಗಳು ತಂತ್ರ, ನಿರ್ವಹಣೆ, ಆಶಯ, ತುಡಿತ–ಮಿಡಿತಗಳು ಅಲ್ಲದೆ ಶಿಲ್ಪಗಳಲ್ಲಿ ತಂದುಕೊಂಡ ಮೈವಳಿಕೆ ಇತ್ಯಾದಿ ಅಂಶಗಳನ್ನು ಕುರಿತು ಸಂಕ್ಷಿಪ್ತವಾಗಿ, ಅಷ್ಟೇ ಅರ್ಥಪೂರ್ಣವಾಗಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾಗಿದೆ.

ಕರ್ನಾಟಕದ ಆಧುನಿಕ ಶಿಲ್ಪಕಲೆಯ ಆರಂಭದ ಕಲಾವಿದರು, ಅವರ ಸೃಷ್ಟಿಗಳು ಅವುಗಳ ಸತ್ವ ಮತ್ತು ಸಮಕಾಲೀನ ಪ್ರಸ್ತುತತೆ ಅಲ್ಲದೆ ಪ್ರಮುಖ ಕಲಾವಿದರನ್ನು ಉಲ್ಲೇಖಿಸಿ

ಅವರ ಸೃಷ್ಟಿ ಸಾಧ್ಯತೆ ಮತ್ತು ಮಿತಿಗಳನ್ನು ಒಳಗೊಂಡಂತೆ ಅನೇಕ ಅಂಶಗಳನ್ನು ಬಿಂಬಿಸಲಾಗಿದೆ. ಅನೇಕ ಕಲಾವಿದರ ಕಲಾಕೃತಿಗಳನ್ನು ಕಪ್ಪು-ಬಿಳುಪಿನ ಛಾಯಾಚಿತ್ರಗಳನ್ನು ಒಳಪುಟಗಳಲ್ಲಿ ಅಡಗಿಸಿರುವುದು ಪುಟ್ಟ ಪುಸ್ತಕದ ತೂಕ ಹೆಚ್ಚಿಸಿದೆ.

ದೃಶ್ಯಕಲಾ ಇತಿಹಾಸಕಾರ ಮತ್ತು ವಿಮರ್ಶಕರಾಗಿರುವ ಎಚ್.ಎ. ಅನಿಲ್ ಕುಮಾರ ಅವರ 'ನೋಟ ಪಲ್ಲಟ' ಪುಸ್ತಕದಲ್ಲಿ 'ಸಮಕಾಲೀನ ಶಿಲ್ಪಕಲೆ: ಭೂತ-ವರ್ತಮಾನಗಳ ಗೊಂದಲ' ಲೇಖನವಿದ್ದು, ಇದು ಆಧುನಿಕ ಸಮಕಾಲೀನ ಶಿಲ್ಪಕಲೆಯ ಕುರಿತು ಹಲವು ವಿಭಿನ್ನ ದೃಷ್ಟಿಕೋನಗಳಿಂದ ಕೂಡಿದೆ. ಮತ್ತು ಹಲವು ಒಳನೋಟಗಳನ್ನು ನೀಡುತ್ತದೆ. ಶಿಲ್ಪಕಲೆಯನ್ನು ಇತರ ಕಲಾ ಪ್ರಕಾರಗಳಿಂದ ಬೇರ್ಪಡಿಸಿ ನೋಡುವುದು ಕಾಲದೇಶದ ಚೌಕಟ್ಟಿಗೊಳಪಟ್ಟ ಒಂದು ಕ್ರಮವೆಂಬುದನ್ನು ಹೇಳಿ, ಈ ಕ್ರಮವನ್ನು ನಗಣ್ಯವೆನ್ನುತ್ತ ಆಧುನಿಕೋತ್ತರ ಕಾಲದಲ್ಲೂ ಶಿಲ್ಪವನ್ನು ನೋಡುವ ಸಾಂಪ್ರದಾಯಿಕ ದೃಷ್ಟಿಕೋನ ಇನ್ನೂ ಇರುವುದನ್ನು ನೆನಪಿಸಲಾಗಿದೆ. ಮತ್ತು ಗ್ರೀಕ್ ಶಿಲ್ಪಿಗಳು ಹಾಗೂ ಶಿಲ್ಪಗಳ ಉದಾಹರಣೆಗಳನ್ನು ನೀಡಿ ವಿವರಿಸಲಾಗಿದೆ. ಮುಂದುವರಿದು ಆಧುನಿಕ ಸಂದರ್ಭದಲ್ಲಿ ಶಿಲ್ಪವನ್ನು ನೋಡುವ ಬದಲಾದ ದೃಷ್ಟಿ ಕ್ರಮವನ್ನು ಚರ್ಚಿಸಲಾಗಿದೆ. ಅಲ್ಲದೆ ಹೊಸ ಮಾಧ್ಯಮಗಳು ನುಸುಳಿದುದನ್ನು ಪ್ರಸ್ತಾಪಿಸುತ್ತದೆ. ಪಾಶ್ಚಾತ್ಯ ದುಶಾಂಪನ ಪ್ರಯೋಗಗಳಿಂದ ಹಿಡಿದು ಕರ್ನಾಟಕದ ಉಮೇಶ್‌ರ ನೆಲಾಕೃತಿಯವರೆಗಿನ ಬದಲಾವಣೆ ಮತ್ತು ಬೆಳವಣಿಗೆಗಳನ್ನು ವಿಶ್ಲೇಷಿಸಲಾಗಿದೆ. ಮೈಸೂರಿನ ಚಾಮುಂಡಿ ಬೆಟ್ಟದ 'ಮಹಿಷಾಸುರನ ಶಿಲ್ಪ' ಹಾಗೂ ಕಲಾಮಂದಿರದ 'ಆವರಣದಲ್ಲಿನ ಆಶುಶಿಲ್ಪಗಳನ್ನು' ತೌಲನಿಕವಾಗಿ ನೋಡಿದಾಗ ಅರಿವಿಗೆ ಬರುವ ಅಸಲೀತನಗಳನ್ನು ಚರ್ಚಿಸಲಾಗಿದೆ. ಮುಖ್ಯವಾಗಿ ಮೈಸೂರಿನ ಕಲಾ ಮ್ಯೂಸಿಯಂಗಳು ಪ್ರಮುಖ, ಬೀದಿಬದಿಯ ಅಕಾಡಮಿಕ್ ಶಿಲ್ಪಗಳು, ಕಲಾಮಂದಿರದ ಆಶು ಶಿಲ್ಪ, ಇವೆಲ್ಲ ಹಲವು ಕಾಲ, ಸಂಸ್ಕೃತಿಗಳನ್ನು ಕ್ರಮವಾಗಿ ಬ್ರಿಟೀಷರು, ಮೈಸೂರು ಒಡಯರ್ ಹಾಗೂ ಪ್ರಜಾಪ್ರಭುತ್ವದ ರಾಜಕೀಯ ಹಿನ್ನೆಲೆಯಲ್ಲಿ ಆಗಿಹೋದದ್ದು ಕಲಾ ಸಂಕೇತಗಳನ್ನು ಬಿಂಬಿಸುತ್ತದೆ. ಆದರೆ ಜನ ಸಮೂಹಕ್ಕೆ ಮಹಿಷ ಧಾರ್ಮಿಕ ಗುರುತಾದರೆ ರಾಜರ ಶಿಲ್ಪಗಳು ಹಿಂದಿನ ಮೈಸೂರಿನ ವೈಭವಸೂಚಿಯಾಗಿವೆ. ಆಶು ಶಿಲ್ಪವು ಹೆಚ್ಚು ನಾವೀನ್ಯತೆಗಳನ್ನುಳ್ಳ ಕೃತಿಯಾಗುತ್ತದೆ. ಅದೇ ಶಿಲ್ಪ ಮತ್ತೊಂದು ಕಲಾಪ್ರಕಾರಕ್ಕೆ (ನಾಟಕ) ರಂಗಮಂಚವಾಗುತ್ತದೆ.

ಶಿಲ್ಪಕಲೆಗೆ ಸಮಕಾಲೀನತೆಯೆಂಬ ನಮಗೆ ತೀರ ಹತ್ತಿರವಾದ ಕಾಲ, ಸ್ಥಳ ಮತ್ತು 'ಪ್ರತಿಕ್ರಿಯಿಸುವ ರೀತಿ' ಹೀಗಿದೆ. ಮೇಲ್ನೋಟಕ್ಕೆ ಗೊಂದಲಮಯ, ಕಲಸುಮೇಲೋಗರವಾಗಿ ಕಾಣುವ ಮೇಲಿನ ಮೈಸೂರಿನ ಉದಾಹರಣೆಗಳು, ಪ್ರಪಂಚದ ಕಲಾಕೇಂದ್ರಗಳ ನಗರಗಳಿಗೆ ಸಂಕೇತ. ಈ ಗೊಂದಲಗಳು ಗೊಂದಲಗಳಾಗಿರದೆ ಕಲೆಯ ಮಿತಿಯನ್ನು ಮೀರಿದ ಬದುಕಿನ ಸಂಕೀರ್ಣತೆಗೊಂದು ಸಂಕೇತವಷ್ಟೆ. ಎರಡಕ್ಕಿಂತ ಹೆಚ್ಚು ಭಿನ್ನ ಕಾಲಗಳನ್ನು ಸಮಕಾಲೀನಗೊಳಿಸುತ್ತ ಹೋಗುವುದು, ಆಧುನಿಕ ಶಿಲ್ಪ ಪ್ರಕಾರಗಳಿಂದ ನಾವು ಅರಗಿಸಿಕೊಂಡಿರುವ ಒಂದು ಆಶಾದಾಯಕ ಪಾಠವಷ್ಟೆ ಎಂಬುದನ್ನು ವಿವರಿಸಲಾಗಿದೆ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ (೨೦೦೪) ಪ್ರಟಗೊಂಡಿರುವ ಕೆ.ವಿ. ಸುಬ್ರಹ್ಮಣ್ಯಂ ಅವರ ಪುಸ್ತಕ ಸಿ.ಪಿ. ರಾಜಾರಾಮ್ ವ್ಯಕ್ತಿಕೇಂದ್ರಿತ ಬರವಣಿಗೆಯಾಗಿದೆ. ಲೇಖಕರು ಹೇಳುವಂತೆ ನಮ್ಮ ರಾಜ್ಯದ ಶಿಲ್ಪಕಲೆ ವಿಶ್ವದಲ್ಲೇ ಹೆಸರು ಪಡೆದಿದೆ. ಶಿಲ್ಪಕಲೆಯ ತವರೂರು ಎನಿಸಿದೆ. ಈ ನಾಡಿನಲ್ಲಿ ಅನೇಕ ಶಿಲ್ಪ ಶೈಲಿಗಳು ಹುಟ್ಟಿ ತಮ್ಮದೇ ಆದ ವಿಶಿಷ್ಟ ಸ್ಥಾನ ಪಡದಿವೆ. ಅನೇಕ ಹೆಸರಾಂತ ಶಿಲ್ಪಿಗಳು ದುಡಿದು ತಮ್ಮ ಅನರ್ಘ್ಯ ಪರಂಪರೆಯನ್ನು ಬಿಟ್ಟು ಹೋಗಿದ್ದಾರೆ. ಅಂತಹವರಲ್ಲಿ ಸಿ.ಪಿ. ರಾಜಾರಾಮ ಕೂಡ ಒಬ್ಬರು. ಸಮಕಾಲೀನ ಶಿಲ್ಪಕಲೆ ಇವರಿಂದಲೇ ಮೊದಲ್ಗೊಂಡಿತೆಂಬ ಅಭಿಪ್ರಾಯವನ್ನೂ ವ್ಯಕ್ತಮಾಡಿದ್ದಾರೆ.

ಪ್ರಸ್ತುತ ಕೃತಿಯು ೨೮ ಪುಟಗಳ ಮಿತಿಯಲ್ಲಿದ್ದು, ಶಿಲ್ಪಿಯ ಮನೆತನದ ಹಿನ್ನೆಲೆ ಪರಿಚಯಗಳೊಂದಿಗೆ ಅವರು ಪಡೆದ ಪ್ರೇರಣೆ, ಕೃತಿ ರಚನೆಯಲ್ಲಿ ತೊಡಗಿದ ರೀತಿ, ಶಾಲೆಯಲ್ಲಿ ಕಲಿಯುವಾಗ ಕಲಾಕೃತಿಗಳಲ್ಲಿ ಕಂಡುಬಂದ ವೈಶಿಷ್ಟ್ಯತೆ, ಮಾಧ್ಯಮ, ಬೀರಿದ ಪ್ರಭಾವಗಳನ್ನು ಪರಿಚಯಿಸುತ್ತ ಅವರ ಒಟ್ಟು ಕಲಾಕೃತಿಗಳ ವೈಶಿಷ್ಟ್ಯತೆ ವೃತ್ತಿ ಬದುಕಿನೊಂದಿಗೆ ರಚನೆ ಪ್ರದರ್ಶನಗಳನ್ನು ಮಾಡಿಕೊಂಡು ಬಂದಿರುವುದರ ಕುರಿತು ಸೊಗಸಾಗಿ ವಿವರಿಸಿರುವರು.

ಅಕ್ಕಮ್ಮ, ಸಿ.ಬಿ. ಪೊನ್ನಪ್ಪ ದಂಪತಿಗಳ ಮಗನಾಗಿ ೧೯೨೭ರಲ್ಲಿ ಜನಿಸಿದ ರಾಜಾರಾಮರ ತಂದೆಯ ಸೈನಿಕವೃತ್ತಿ- ಸ್ವಾತಂತ್ರ್ಯ ಮತ್ತು ದೇಶಭಕ್ತಿ, ಸಂಗೀತಗಾರ್ತಿಯಾಗಿದ್ದ ತಾಯಿಯ ಪ್ರೀತಿ ಮತ್ತು ಕಲೆ ಇವರ ವ್ಯಕ್ತಿತ್ವವನ್ನು ರೂಪಿಸಿದ ರೀತಿ ಇದರಿಂದ ರಾಜಾರಾಮ ಸೈನಿಕ ಮತ್ತು ಕಲಾವಿದನಾಗಿ ರೂಪಿಸಿಗೊಂಡುದು. ಕೊಡಗಿನ ಬೆಟ್ಟ ಗುಡ್ಡಗಳಲ್ಲಿ ಅಲೆದಾಡುತ್ತಲೇ ಅಲ್ಲಿನ ಗಿಡ ಮರಗಳ ವಿವಿಧ ರೂಪ-ಆಕಾರಗಳಿಂದ ಆಕರ್ಷಿತನಾಗಿ ಶಿಲ್ಪಗಳನ್ನು ಸೃಷ್ಟಿಸಲು ತೊಡಗಿದುದು, ಮೊದಲಾದ ಸಂಗತಿಗಳನ್ನು ಮನೋಜ್ಞವಾಗಿ ಕಟ್ಟಿಕೊಟ್ಟಿದ್ದಾರೆ. ರಾಜಾರಾಮ್ ತಮ್ಮ ಸೈನಿಕ ವೃತ್ತಿಯೊಂದಿಗೆ ವಿದೇಶಗಳ ಪರ್ಯಟನೆ, ಅಲ್ಲಿನ ಕಲೆ- ವಸ್ತು ಸಂಗ್ರಹಾಲಯ ಹಾಗೂ ಕಲಾವಿದರಿಂದ ಸ್ಫೂರ್ತಿ ಪಡೆದ ಸಮಕಾಲೀನ ಶಿಲ್ಪಗಳನ್ನು ಸೃಷ್ಟಿಸಿದ ರೀತಿಯನ್ನು ದಾಖಲೆಗಳ ಸಮೇತ ಪುಸ್ತಕ ಹೆಣೆದಿದ್ದಾರೆ. ಅವರು ಮಾಡಿದ ಪ್ರದರ್ಶನ ವಿವರಗಳನ್ನು ಕಲಾಕೃತಿಗಳ ರಚನೆ, ಮೈವಳಿಕೆ, ವಸ್ತು- ವಿಷಯ ತಂತ್ರಗಳೆಲ್ಲವನ್ನು ಮಾಹಿತಿಪೂರ್ಣವಾದ ಪುಸ್ತಕವಾಗಿಸಿರುವರು.

ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಆರ್.ಎಸ್. ನಾಯ್ಡು ಅವರ ಕುರಿತು ಪುಸ್ತಕ ಮುದ್ರಣಗೊಂಡಿದೆ. ಮೂವತ್ತಾರು ಪುಟಗಳ ಈ ಕೃತಿಯಲ್ಲಿ ನಾಡಿನ ಹಳೆಯ ತಲೆಮಾರಿನ, ಅಂತರಾಷ್ಟ್ರೀಯ ಖ್ಯಾತಿ ಪಡೆದ ಕಲಾವಿದ ಹಾಗು ಸ್ವಾಂತಂತ್ರ್ಯ ಹೋರಾಟಗಾರ ಆರ್.ಎಸ್. ನಾಯ್ಡು ಅವರ ಜೀವನ ಸಾಧನೆಯನ್ನು ಪರಿಚಯಿಸುವಂತಹ

ಕೃತಿಯಾಗಿದೆ. ಪ್ರಸ್ತುತ ಕೃತಿಯಲ್ಲಿ ಕನ್ನಡ ಮತ್ತು ಇಂಗ್ಲೀಷ್ ಎರಡೂ ಮಾಧ್ಯಮದಲ್ಲಿ ಅವರ ಪರಿಚಯವನ್ನು ಓದುಗರಿಗೆ ನೀಡಿರುವುದು ಸ್ವಾಗತಾರ್ಹ ಬೆಳವಣಿಗೆ.

ಲೇಖಕ ಕೆ.ವಿ. ಸುಬ್ರಹ್ಮಣ್ಯಂ ಅವರು ಪ್ರಸ್ತಾಪಿಸುವಂತೆ ಆರ್. ಎಸ್. ನಾಯ್ಡುರವರು ಮಾನವೀಯತೆಯನ್ನು ಬದುಕಿನ ಮೌಲ್ಯವನ್ನಾಗಿ ಅರಗಿಸಿಕೊಂಡಿದ್ದರು. ಹಾಗಾಗಿಯೇ ಅವರಿಗೆ ಅಸಂಖ್ಯಾತ ಮಿತ್ರರು ಅಭಿಮಾನಿಗಳು, ಅದೃಶ್ಯ ಅಭಿಮಾನಿಗಳೂ ಇದ್ದರು; ಇದ್ದಾರೆ. ಐ.ಆರ್.ಟಿ., ಬಿ.ವಿ.ಕೆ. ಶಾಸ್ತ್ರಿ, ಆರ್ ಸೀತಾರಾಮ್, ಆರ್. ಎಂ. ಹಡಪದ, ಎಚ್. ಎಸ್.ಇನಾಮತಿ, ಕೆ.ಆರ್. ಕೃಷ್ಣಮೂರ್ತಿಯವರುಗಳು ಈ ವಿಶಿಷ್ಟ ವ್ಯಕ್ತಿಯ ಮಾನವೀಯತೆಯನ್ನು ಅನುಭವಿಸಿದವರು. ಕಲೆಯು, ನೆಮ್ಮದಿಯ ವಾತಾವರಣದಲ್ಲಿ ಮಾತ್ರ ಹುಟ್ಟಿಬರುತ್ತದೆ ಎಂಬ ನಂಬಿಕೆ ಹಲವರದು. ಆದರೆ ಆರ್. ಎಸ್. ನಾಯ್ಡುರಂತಹ ಕ್ರಾಂತಿಕಾರಿ ಮನಸ್ಥಿತಿಯವರೂ ಅಭಿವ್ಯಕ್ತಿಗೆ ಪೂರಕವಾಗಿ ದೃಶ್ಯ ಸಂಸ್ಕೃತಿಯ ಚಿತ್ರ ಹಾಗೂ ಶಿಲ್ಪ/ ಮಾಧ್ಯಮಗಳನ್ನು ಜೊತೆಗೆ ಅಕ್ಷರ ಮಾಧ್ಯಮದ ಕ್ಯಾಲಿಗ್ರಾಫಿ ಕಲೆಯನ್ನು ಬಳಸಿಕೊಂಡಂತಹವರು. ಬಹುಮುಖ ಪ್ರತಿಭೆಯ ಕಲಾವಿದರಾದ ಆರ್.ಎಸ್. ನಾಯ್ಡು ಅವರ ಜನನ, ಬಾಲ್ಯದ ಪರಿಚಯದ ಕುರಿತು ಔಪಚಾರಿಕವಾಗಿ ಪ್ರಸ್ತಾಪಿಸಿದ್ದು, ಹೆಚ್ಚಾಗಿ ಅವರ ಬಹುಮುಖ ಪ್ರತಿಭೆಯ ಸಾಹಿತ್ಯ, ದೃಶ್ಯಕಲೆ, ಮನಃಶಾಸ್ತ್ರ, ಯೋಗ, ಇತ್ಯಾದಿ ಹಲವು ಆಸಕ್ತಿಗಳು ಅವರ ವ್ಯಕ್ತಿತ್ವದ ವಿವಿಧ ಮಜಲುಗಳಾಗಿವೆ. ಇವುಗಳ ಕುರಿತಾಗಿಯೇ ಈ ಕೃತಿಯಲ್ಲಿ ಲೇಖಕರು ಗಮನಹರಿಸಿರುವುದು ಮೆಲುನೋಟಕ್ಕೇ ಗುರುತಿಸಬಹುದು.

ಆರ್.ಎಸ್. ನಾಯ್ಡುರವರು ಹುಟ್ಟಿದ್ದು ಬೆಂಗಳೂರಿನಲ್ಲಿ. ರಂಗಸ್ವಾಮಿ ಸೀತಾಪತಿ ನಾಯ್ಡು ಇವರ ಪೂರ್ಣ ಹೆಸರು. ತಂದೆ ಅರಣ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದರು. ತಮಿಳುನಾಡಿನ ತಿರುಚಿನಾಪಳ್ಳಿಯಲ್ಲಿದ್ದ ಅಜ್ಜ ನಿವೃತ್ತ ಸೇನಾಧಿಕಾರಿ. ಹಾಗಾಗಿ ಅಜ್ಜನ ಊರಿನಲ್ಲಿ ಬಾಲ್ಯ ವಿದ್ಯಾಭ್ಯಾಸ ನಡೆದಿದ್ದು, ನಂತರ ಬೆಂಗಳೂರು, ಧಾರವಾಡದ ಕರ್ನಾಟಕ ಕಾಲೇಜು ಹಾಗೂ ಪುಣೆಯ ಫರ್ಗುಸನ್ ಕಾಲೇಜುಗಳಲ್ಲಿ ಮುಂದುವರೆಯಿತು ಎಂಬುದು ಸಂಕ್ಷಿಪ್ತ ರೀತಿಯಲ್ಲಿ ಅವರ ಬಾಲ್ಯವನ್ನು ಪರಿಚಯಿಸುತ್ತ ಅವರ ಹೋರಾಟದ ಸಂದರ್ಭ ರಾಜಕೀಯ ಒಡನಾಟ ಮತ್ತು ಅವರ ರೇಖಾ ಚಿತ್ರಗಳ ರಚನೆಯು ಮಾರ್ಕ್ಸವಾದಿ ಧೋರಣೆಯಂತೆ ದೃಶ್ಯಕಲೆಯನ್ನು ಸಾಮಾಜಿಕ ಮತ್ತು ರಾಜಕೀಯ ಕಾರಣಗಳಿಗೆ ‘ ಕಲೆ ಜನರಿಗಾಗಿ’ ಎಂಬಂತೆ ಆರ್.ಎಸ್.ಎನ್. ಬಳಸಿಕೊಂಡ ರೀತಿ ಆ ಸಂದರ್ಭದ ಒಂದು ಅಚ್ಚರಿ ಎಂಬುದನ್ನು ಈ ಕೃತಿಯಲ್ಲಿ ಅರ್ಥಪೂರ್ಣ ವಿಷಯವಾಗಿ ವಿವರಿಸಿರುವರು.

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ ೨೦೦೮ರಲ್ಲಿ ಪ್ರಕಟಗೊಂಡ ‘ಸಿ.ಪಿ. ರಾಜಾರಾಂ’ ಕೃತಿ ಕೆ.ವಿ. ಸುಬ್ರಹ್ಮಣ್ಯಂ ಅವರ ರಚನೆಯಾಗಿದೆ. ಗಾತ್ರದಲ್ಲಿ ಚಿಕ್ಕ ಪುಸ್ತಕವಾಗಿದ್ದು, ಕೆಲವೇ ಪುಟಗಳಲ್ಲಿ ರಾಜಾರಾಂ ಅವರ ಜೀವನವನ್ನು ಖಂಡರಿಸಿರುವುದು ಮನೋಜ್ಞವಾಗಿದೆ. ಕೊಡಗಿನವರಾದ ಚಪ್ಪುಡಿರ ಪೊನ್ನಪ್ಪ ರಾಜಾರಾಂ ಅವರು ಒಬ್ಬ ಮಿಲಿಟರಿ ಅಧಿಕಾರಿಗಳಾಗಿದ್ದೂ ಶಿಲ್ಪಕಲೆಯನ್ನು ರೂಢಿಸಿಕೊಂಡ ಸಂಗತಿಗಳನ್ನು ಸುಬ್ರಹ್ಮಣ್ಯಂ ಅವರು ಕೆಲವೇ ಪುಟಗಳಲ್ಲಿ ಬರೆದರೂ ಕಲಾವಿದರ ಜೀವನ ಸಾಧನೆಗಳನ್ನು ಪ್ರಭಾವಿಯಾಗಿ ಚಿತ್ರಿಸಿದ್ದಾರೆ. ಭಾಷೆಯ ದೃಷ್ಟಿಯಿಂದ ಉತ್ತಮವಾದ ಕೃತಿಯಾಗಿದ್ದು ಮೌಲಿಕವಾಗಿದೆ.

ಸುಂದರ ಮುಖಪುಟ ವಿನ್ಯಾಸದಿಂದ ಕೂಡಿದ ಕೃತಿ. ರಾಜಾರಾಂ ಅವರ ಭಾವಚಿತ್ರ ಹಾಗೂ ಅವರ ಕೆಲವು ಶಿಲ್ಪಕೃತಿಗಳ ಛಾಯಾಚಿತ್ರಗಳನ್ನು ಒಳಗೊಂಡ ಕೃತಿಯಾಗಿದೆ. ಈ ಅಜ್ಞಾತ ಸಾಧಕನ ಪರಿಚಯವನ್ನು ಮಾಡಿಕೊಡುವಲ್ಲಿ ಕೃತಿ ಉಪಯುಕ್ತವಾಗಿದೆ. ಸೃಜನಶೀಲವಾಗಿ ರೂಪಗೊಂಡ ಕೃತಿ ಓದುಗನಿಗೆ ಒಂದು ರೀತಿಯ ಮುದನೀಡುವಂತೆ ಬರಹ ರೂಪತಳೆದಿದೆ. ವಿಷಯವನ್ನು ಓದುಗನಿಗೆ ತಲುಪಿಸುವಲ್ಲಿ ಸಾಫಲ್ಯ ಪಡೆದಿದೆ.

'ಲೋಹಫಲಕ ಮಾಂತ್ರಿಕ ಎಲ್.ಪಿ. ಅಂಚನ್' ಎಂಬ ಪುಸ್ತಕವನ್ನು ಚಿ.ಸು. ಕೃಷ್ಣಶೆಟ್ಟಿಯವರು ಬರೆದಿದ್ದಾರೆ. ೨೦೦೬ ರಲ್ಲಿ ಶಿಲ್ಪಕಲಾ ಅಕಾಡೆಮಿಯಿಂದ ಪ್ರಕಟಗೊಂಡಿದೆ. ವ್ಯಕ್ತಿಕೇಂದ್ರಿತವಾದ ಪುಸ್ತಕವಾದರೂ ಇದು ವ್ಯಕ್ತಿ ಜೀವನದೊಂದಿಗೆ ವಿಮರ್ಶಾತ್ಮಕವಾಗಿಯೂ ಮೂಡಿಬಂದಿದೆ. ಪರಂಪರೆ ಮತ್ತು ಪ್ರಗತಿಪರರ ನಡುವಿನ ಕಾಲದ ಅಂತರದ ಸ್ವರೂಪವು ಬದಲಾವಣೆಯಲ್ಲಿಯ ಸ್ಥಿತಿಗತಿಗಳಲ್ಲಿ ಕಲಾವಿದನ ವೈವಿಧ್ಯಮಯ ಸಂಸ್ಕೃತಿ ಹೇಗೆ ರೂಪಿತವಾಗುತ್ತದೆ. ಕಲೆಯಲ್ಲಿ ಕಲಾವಿದನ ಮಹತ್ವವು ಹೇಗೆ ನಿರೂಪಿತ ಗೊಂಡಿರುತ್ತದೆ ಎನ್ನುವುದರ ಬಗ್ಗೆ ವಿಮರ್ಶಾತ್ಮಕವಾಗಿ ವಿವರಿಸಿದ್ದಾರೆ. ವರ್ತಮಾನದೊಂದಿಗೆ ಪರಂಪರೆಯ ಬೆಸುಗೆಯನ್ನ ಕಲಾವಿದನಲ್ಲಿ ಕಾಣುತ್ತೇವೆ. ಎಂಬ ಒಟ್ಟು ಅಭಿಪ್ರಾಯದಲ್ಲಿ ಕಲಾವಿದನ 'ಸಮನ್ವಯ' ಪ್ರತಿಭೆಯ ಮೇಲೆ ಬೆಳಕು ಚೆಲ್ಲುತ್ತದೆ. ಅಂತೆಯೆ ವೈಚಾರಿಕ ಅಂಶಗಳನ್ನು ವ್ಯಕ್ತಿಕೇಂದ್ರಿತವಾಗಿ ಬರೆಯುವಾಗಲೂ ನಿರೂಪಿಸಿರುವುದರಿಂದ ಈ ಕೃತಿ ಸೃಜನಾತ್ಮವಾಗಿ ಮೂಡಿಬಂದಿದೆ ಎಂದರೆ ತಪ್ಪಲ್ಲ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ ೨೦೦೭ ರಲ್ಲಿ ಆಗಿನ ಅಧ್ಯಕ್ಷರಾದ ವೆಂಕಟಾಚಲಪತಿ ಅವರ ನೇತೃತ್ವದಲ್ಲಿ 'ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ' ಕೃತಿಯು ಪ್ರಕಟಣೆಗೊಂಡಿದ್ದು ೧೬೭ ಪುಟಗಳನ್ನು ಹೊಂದಿದೆ. ಈ ಪುಸ್ತಕವು ಕರ್ನಾಟಕದ ಶಿಲ್ಪ ಶೈಲಿಗಳು, ಸಮಕಾಲೀನ ಶಿಲ್ಪಕಲೆ ಹಾಗೂ ಶಿಲ್ಪಿಗಳ ಕುರಿತಾದ ಸಮಗ್ರ ವಿಷಯವನ್ನು ಒಳಗೊಂಡಿದೆ.

ಜಾಗತೀಕರಣದ ಅಬ್ಬರದಲ್ಲಿ ಹಲವು ಆಯಾಮಗಳನ್ನು ಪಡೆದುಕೊಂಡ ಕನ್ನಡ ಶಿಲ್ಪಕಲೆಯ ಬೆಳವಣಿಗೆಗಳು ಅಚ್ಚರಿಗೊಳಿಸುತ್ತವೆ. ಲೇಖಕರ ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ ಈ ಎಳೆಗಳ ಒಳನೋಟಗಳನ್ನು ಆಸಕ್ತಿಯಿಂದ ಓದಿಸಿಕೊಂಡು ಹೋಗುವಂತೆಯೇ ಚಿಂತನೆಗೆ ತೊಡಗುವಂತೆ ಮಾಡುತ್ತದೆ. ಸ್ಥಳೀಯ ಗಡಿಗಳನ್ನು ಮೀರಿ ನಮ್ಮ ಶಿಲ್ಪಿಗಳು ಜಾಗತಿಕವಾಗಿ ಮಾನ್ಯತೆ ಪಡೆದಿದ್ದಾರೆ ಎಂಬುದರ ವಿವರಗಳು; ಐತಿಹಾಸಿಕ ಪ್ರಜ್ಞೆ ಹಾಗು ಸಮಕಾಲೀನ ಸತ್ವಗಳೆರಡನ್ನು ಅರಗಿಸಿಕೊಂಡು ಕಾಣಿಸಿಕೊಂಡಿವೆ. ಸಂಪ್ರದಾಯ ಜಾನಪದೀಯವಲ್ಲದ ಆದಿಮ ಸತ್ವಗಳನ್ನು ಅರಗಿಸಿಕೊಂಡು ಕನ್ನಡ ಶಿಲ್ಪಕಲೆಯ ಪ್ರಕಾರ ಜಾಗತಿಕ ಪ್ರಭಾವಗಳನ್ನು ಅರಗಿಸಿಕೊಂಡು ಇನ್‌ಸ್ಟಾಲೇಷನ್ ಕಲಾಪ್ರಕಾರಕ್ಕೆ ಜಿಗಿದು ಬಹು ಎತ್ತರಕ್ಕೆ ಚಿಮ್ಮಿ ವಿಖ್ಯಾತವಾಗಿರುವುದು ಇಂದಿನ ಹೊಸ ಪೀಳಿಗೆಯ ಶಿಲ್ಪಿಗಳ ಅಸಾಧಾರಣ ಸೃಷ್ಟಿಶೀಲ ಪ್ರತಿಭಾ ಪ್ರಕ್ರಿಯೆಯೇ ಕಾರಣ ಎನ್ನುತ್ತಾರೆ.

ಕನ್ನಡ ಶಿಲ್ಪಕಲೆಯು ಇಂದು–ನಿನ್ನೆ–ನಾಳೆಗಳ ಬಗೆಗೆ ದೃಶ್ಯಧ್ಯಾನದಂತೆ ಮೂರು ಆಯಾಮಗಳ ಅಭಿವ್ಯಕ್ತಿ ಮೂಡಿ ಬಂದಿರುವುದನ್ನು ವಿವರಿಸಿದ್ದಾರೆ. ಶಿಲ್ಪಕಲೆಯ ಅಧ್ಯಯನ

ಮಾಡುವವರಿಗೆ ಉಪಯುಕ್ತವಾಗುವಂತೆ ಶಿಲ್ಪಗಳ ಚಿತ್ರಗಳನ್ನು ಕೃತಿಯಲ್ಲಿ ಅಳವಡಿಸಿದ್ದಾರೆ. ಹೆಚ್ಚಾಗಿ ೧೯೮೦- ೨೦೦೬ರ ನಡುವೆ ರೂಪುಗೊಂಡ ಈ ಶಿಲ್ಪ ಸೃಷ್ಟಿ ಕನ್ನಡ ಶಿಲ್ಪಕಲೆಯ ವಿಶಿಷ್ಟ ಹೊಳಹುಗಳನ್ನು ಬಿಂಬಿಸುತ್ತವೆ. ಶಿಲ್ಪಕಲೆ ತನ್ನ ಮೂರು ಆಯಾಮಗಳನ್ನು ಮೀರಿ ಇನ್‌ಸ್ಟಾಲೇಷನ್ ಕಲೆಯಲ್ಲಿ ತನ್ನ ಅವಕಾಶದ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ನೋಡುಗರನ್ನು ತನ್ನ ಅತಿಮುಖ್ಯ ಅಂಗವನ್ನಾಗಿಸಿಕೊಂಡು ಅಂತರಾಷ್ಟ್ರೀಯ ಮಾನ್ಯತೆಯ ಜೊತೆ ಜೊತೆಗೆ ಭಾರತದಲ್ಲಿ ಹೆಚ್ಚು ಶಕ್ತಿಯುತವಾಗಿ ಕಾಣಿಸಿಕೊಂಡಿದ್ದು ಕರ್ನಾಟಕದಲ್ಲಿ ಎಂಬ ಅಂಶ ಹೆಚ್ಚು ಪ್ರಸ್ತುತ ಎಂಬುದನ್ನು ಲೇಖಕರು ಸ್ಪಷ್ಟವಾಗಿ ಧಾಖಲಿಸಿದ್ದಾರೆ.

ಕಲಾವಿದ/ ಕಲಾವಿದೆಯರು ಆ ಸಂದರ್ಭದ ವಿಶಿಷ್ಟ ದೃಷ್ಟಿಧೋರಣೆಗಳಿಗೆ, ದೃಶ್ಯ ಪಲ್ಲಟಗಳ ಸಮಕ್ಷಮತೆಗೆ ಸಾಕ್ಷೀಭೂತರಾಗಿ ಅವೆಲ್ಲವುಗಳನ್ನು ಅರಗಿಸಿಕೊಂಡು ಅಭಿವ್ಯಕ್ತಿಸುತ್ತಾರೆ. ಹಾಗಾಗಿ ಅವರ ಅಭಿವ್ಯಕ್ತಿಯ ಬಗ್ಗೆ ಅವರ ಹೇಳಿಕೆಗಳು ಗಣನೀಯ ಹೊಳಹುಗಳನ್ನು ನೀಡಬಲ್ಲವು. ಈ ಪುಸ್ತಕದಲ್ಲಿ ಹಲವಾರು ಕಲಾವಿದ/ ಕಲಾವಿದೆಯರ ಹೇಳಿಕೆಗಳನ್ನು ಕೊನೆಯ ಪುಟಗಳಲ್ಲಿ ಕೊಡಲಾಗಿದೆ.

ಪಠ್ಯವನ್ನು ಬಿಟ್ಟು ಒಟ್ಟು ಚಿತ್ರಗಳನ್ನು ಓದುಗರು ಗಮನಿಸಿದರೂ ಅವರಿಗೆ ನಮ್ಮ ಶಿಲ್ಪಕಲೆಯ ಒಟ್ಟಾರೆ ಚಿತ್ರ ಮೂಡಿಬರುವಂತೆ ದೃಶ್ಯಾತ್ಮಕವಾಗಿದ್ದು ಕನ್ನಡ ಸಮಕಾಲೀನ ಶಿಲ್ಪಕಲೆ ಯಾವ ದಿಕ್ಕಿನಲ್ಲಿ ಇಂದು ಸಾಗುತ್ತಿದೆ. ಈ ಬಗ್ಗೆ ವಿಮರ್ಶಾತ್ಮಕವಾಗಿ, ವಿವರವಾಗಿ ಬರೆದ ಈ ಪುಸ್ತಕ ದೃಶ್ಯಕಲಾ ಇತಿಹಾಸಕಾರರಿಗೆ, ಮುಂದಿನ ಯುವ ಶಿಲ್ಪಿಗಳಿಗೆ ಕಲಾವಿದರಿಗೆ ಅತ್ಯಂತ ಮಾಹಿತಿಪೂರ್ಣ ಗ್ರಂಥವಾಗಿದೆ.

ಈ ಪುಸ್ತಕವು ಆರು ಅಧ್ಯಾಯಗಳನ್ನು ಒಳಗೊಂಡಿದ್ದು, ಕನ್ನಡ ಶಿಲ್ಪ ನಿನ್ನೆಯ ಇಂದು ಎಂಬ ಅಧ್ಯಾಯದಲ್ಲಿ ಮೇಲೆ ತಿಳಿಸಿರುವಂತೆ ಶಿಲ್ಪ: ಕನ್ನಡ ಶಿಲ್ಪವು ಇತಿಹಾಸ ಪೂರ್ವಕಾಲದಿಂದ ಇತಿಹಾಸ ಹಾಗೂ ನಮ್ಮ ಸಮಕಾಲೀನ ಕಾಲದಲ್ಲಿ ನಡೆದು ಬಂದ ಹಾದಿ, ಪಡೆದುಕೊಂಡ ಟಿಸಿಲುಗಳು ನೂರಾರು ಶಿಲ್ಪಗಳು ಹಲವು ಶೈಲಿಗಳಲ್ಲಿ ವೈವಿಧ್ಯಮಯ ನೆಲೆಗಳನ್ನು ಅಭಿವ್ಯಕ್ತಿಸುತ್ತಿದ್ದು ಕನ್ನಡ ಶಿಲ್ಪಕಲೆ ಸ್ಥಳೀಯ ಗಡಿಗಳನ್ನು ಮೀರಿ ಭಾರತೀಯ ಶಿಲ್ಪಕಲೆಯ ಸಂಪ್ರದಾಯ ಸೊಗಸಿನ ಜೊತೆಜೊತೆಗೆ ಬೆಳೆದು ಉಳಿದು ಹೊಸ ಆಯಾಮಗಳನ್ನು ಕಾಲಕಾಲಕ್ಕೆ ಪಡೆದುಕೊಂಡಿರುವ ರೀತಿ, ಸ್ವರೂಪ, ಪಶ್ಚಿಮ ಹಾಗೂ ಯುರೋಪು ರಾಷ್ಟ್ರಗಳ ಶಿಲ್ಪಗಳ ಸ್ವಯಂ ವೈಭವದ ವೈಯಕ್ತಿಕ ನೆಲೆಯಲ್ಲಿ ಅಭಿವ್ಯಕ್ತಿಸಿರುವ ರೀತಿ ಇವೆಲ್ಲವುಗಳನ್ನು ಅನೇಕ ಶಿಲ್ಪಕಲಾಕೃತಿಗಳನ್ನಿಟ್ಟುಕೊಂಡು ವಿವರಣೆ ನೀಡಿದ್ದಾರೆ. ಕಲಾವಿದರು ಸಾಹಿತಿಗಳ ಸ್ಫೂರ್ತಿಗೆ ಮನ್ನಣೆಗೊಂಡು ಪ್ರಭಾವಿಸಿ, ಶೈಲಿಗಳಲ್ಲಿ ಹೊಸತನದ ರಚನೆಯನ್ನು ಕಂಡುಕೊಂಡರೂ ಅವುಗಳಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಆಗಸ್ಟರೋಡಿನ್, ಮೇಡಾಮೋರೊಸ್ಸೋ ಮತ್ತಿತರರು ಪ್ರಭಾವಿತಗೊಂಡು ಆಧುನಿಕತೆಯ ಮಾಧ್ಯಮಗಳನ್ನು ಉಪಯೋಗಿಸಿಕೊಂಡು ಕಲಾಭಿವ್ಯಕ್ತಿಸಬೇಕೆಂಬ ಮನಸ್ಸು ಯಾರಿಗೆ, ಯಾವ ಸಂದರ್ಭದಲ್ಲಿ ಯಾವರೀತಿಯಲ್ಲಿ ಉಂಟಾಯಿತೆಂಬುದೂ ಕುತೂಹಲಕರ ಅಂಶಗಳನ್ನು ಒಳಗೊಂಡಿದ್ದಾಗಿದೆ ಎಂಬ ಅಸ್ಪಷ್ಟತೆಯನ್ನು ಸೂಚಿಸಿದ್ದಾರೆ.

ಬ್ರಿಟೀಷರ ಸುಮಾರು ೧೫೦ ವರ್ಷಗಳ ಆಳ್ವಿಕೆಯು ಭಾರತೀಯ ಲಲಿತ ಕಲೆಗಳನ್ನು ಅಲ್ಲೋಲ ಕಲ್ಲೋಲ ಮಾಡಿಬಿಟ್ಟಿತು. ಸಾವಿರಾರು ವರ್ಷಗಳಿಂದ ಬೆಳೆದು ಬಂದಿದ್ದ ಸಂಪ್ರದಾಯವನ್ನು ಅವರು ಸಂಪೂರ್ಣವಾಗಿ ಜೀರ್ಣಿಸಿಕೊಳ್ಳಲು ಅಸಮರ್ಥರಾಗಿದ್ದರು. ಅವನಿಂದ್ರನಾಥ ಠ್ಯಾಗೋರ್, ಭಾರತೀಯ ಲಲಿತಕಲೆಗಳ ಆಧುನಿಕ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳುವ ನಿಟ್ಟಿನಲ್ಲಿ ಅನೇಕ ಚಿತ್ರಕಾರರಿಗೆ, ಶಿಲ್ಪಿಗಳಿಗೆ ಮಾರ್ಗದರ್ಶಿಯಾದರು. ೧೯೩೦ರಲ್ಲಿ ಪ್ರಥಮವಾಗಿ ಪ್ರದೋಷ ದಾಸ್‌ಗುಪ್ತ, ಚಿಂತಾಮಣಿಕರ್, ಶಂಖು ಚೌದರಿಯರುಗಳು ಹೊಸ ಗಾಳಿಗೆ ಹಾಯ್ ಎಂದು ಮೈಚಾಚಿ ಪ್ಯಾರಿಸ್, ಲಂಡನ್ ದೇಶಗಳಿಗೆ ಹೋಗಿ ಶಿಲ್ಪಕಲೆಯ ಸಮಕಾಲೀನ ಸತ್ವಗಳನ್ನು ಕಲಿತು ಬಂದರು. ಹಾಗೇ ನಮ್ಮಲ್ಲಿಯೇ ಕಲಿತು ಬೆಳೆದವರಲ್ಲಿ ಎನ್. ಎಚ್. ಕುಲಕರ್ಣಿ, ಧನಂಜಯ ಶಿಲ್ಪಿ, ಶರಣಪ್ಪ, ವೀರಪ್ಪ ಹೀಗೆ ಅನೇಕರು ಸಂಪ್ರದಾಯ ಶಿಲ್ಪಕಲೆಯನ್ನು ಮೈಗೂಡಿಸಿಕೊಂಡಿರುವುದನ್ನು ಇಲ್ಲಿ ಕಾಣಬಹುದು. ಸಿ.ಪಿ. ರಾಜಾರಾಮ್ ಅರವರು ಕರ್ನಾಟಕದ ಆಧುನಿಕ ಶಿಲ್ಪಕಲೆಗೆ ನಾಂದಿಹಾಕಿದರೆನ್ನಾಲಾಗಿದೆ. ನಂತರದಲ್ಲಿ ೬೦ರ ದಶಕದಲ್ಲಿ ಕಾಣಿಸಿಕೊಂಡ ಜಿ. ವೆಂಕಟಾಚಲಂ ಮತ್ತಿತರರು ಮಿಶ್ರ ಮಾಧ್ಯಮದಲ್ಲಿ ಶಿಲ್ಪಸರಣಿಯನ್ನು ಸೃಷ್ಟಿಸುತ್ತ ಉಸಿರುಗಟ್ಟಿಸುವಂತಹ ಸಂದರ್ಭಗಳಿಂದ ಪ್ರಭಾವಿತಗೊಂಡು ಇನ್‌ಸ್ಟಾಲೇಷನ್ ಸೃಷ್ಟಿಗಳು, ಪ್ರಿಂಟ್, ವರ್ಣಚಿತ್ರ ಶಿಲ್ಪ ಹೀಗೆ ಕಲಾಕೃತಿಗಳಲ್ಲಿನ ಅಭಿವ್ಯಕ್ತಿಗಳನ್ನು ಲೇಖಕರು ಇಲ್ಲಿ ಪರಿಚಯಿಸಿದ್ದಾರೆ. ೨೦೦೬ ರಲ್ಲಿ ಮರಳು, ಕಂಚು, ಟೆರಾಕೊಟಾ ಮಾಧ್ಯಮದಲ್ಲಿ ಮೂಡಿಬಂದಿರುವ ಸೃಷ್ಟಿಗಳು ಮಹಿಳಾ ಕಲಾವಿದರೂ ಇಲ್ಲಿ ತಮ್ಮನ್ನು ದುಡಿಸಿಕೊಂಡುರುವುದು ವಿಶೇಷ.

ಈ ನಿಟ್ಟಿನಲ್ಲಿ ಬರೆದಿರುವ ಕಲಾವಿದ / ಕಲಾವಿದೆಯರ ಕುರಿತಾದ ಲೇಖನಗಳ ಜೊತೆಗೆ ಸ್ವ ಅಭಿವ್ಯಕ್ತಿಯನ್ನು ಕುರಿತು ಹೇಳಿಕೊಂಡಿರುವ ಕೆಲವು ಮುಖ್ಯ ಅಂಶಗಳನ್ನು ಲೇಖಕರು ನಮ್ಮ ಮುಂದಿಡಲು ಪ್ರಯತ್ನಿಸಿದ್ದಾರೆ. ಒಟ್ಟಾರೆ ಈ ಕೃತಿಯು ನಮ್ಮ ಕನ್ನಡ ಸಮಕಾಲೀನ ಶಿಲ್ಪಕಲೆಯು ಯಾವ ದಿಕ್ಕಿನಲ್ಲಿ ಸಾಗಿಬಂದಿದೆ, ಸಾಗುತ್ತಿದೆ ಎಂಬುದರ ಬಗ್ಗೆ ವಿಶ್ಲೇಷಿಸಿದ್ದಾರೆ. ಇದಕ್ಕೆ ಪೂರಕವಾಗಿ ಬೆಳೆದುಕೊಂಡು ಬರುತ್ತಿರುವ ಇನ್‌ಸ್ಟಾಲೇಷನ್ ಅಭಿವ್ಯಕ್ತಿಯನ್ನು ಅನೇಕ ಕಲಾವಿದರು ದುಡಿಸಿಕೊಂಡಿದ್ದು, ಅದರ ಹುಟ್ಟು, ಬೆಳವಣಿಗೆ, ಮಾಧ್ಯಮ ವಿಮರ್ಶಾತ್ಮಕ ಬರಹಗಳು, ಪ್ರದರ್ಶನಗಳು ಈ ಬಗ್ಗೆ ಎಲ್ಲ ವಿವರಣೆಗಳನ್ನು ಈ ಕೃತಿಯಲ್ಲಿ ಸಮಗ್ರ ರೀತಿಯಲ್ಲಿ ವಿಮರ್ಶಾತ್ಮಕವಾಗಿ, ವಿವರಣಾತ್ಮಕವಾಗಿ ದೃಶ್ಯಕಲಾ ಇತಿಹಾಸ ಓದುಗರಿಗೆ ಹೆಚ್ಚಿನ ಅನುಕೂಲವಾಗುವಂತೆ ಕಟ್ಟಿಕೊಟ್ಟಿದ್ದು ಉಪಯುಕ್ತ ಗ್ರಂಥವಾಗಿದೆ.

ಇದ್ದಕ್ಕಿದ್ದ ಹಾಗೇ ನಮ್ಮ ಸಮಕಾಲೀನ ಕಲಾವಿದ ಶಿವಾನಂದ ಬಂಟನೂರ ಎಷ್ಟು ಎತ್ತರಕ್ಕೆ ಬೆಳೆದ. ಅವನ ಸುತ್ತ ಅವನೇ ರಚಿಸಿದ ಚಿತ್ರ ಶಿಲ್ಪಗಳು ಮತ್ತು ಪದ ಸಂಪತ್ತಿನ ದೃಶ್ಯಗಳು ಹೇಗೆ ಕಣ್ಣಿಗೆ ಕಟ್ಟಿದಂತೆ ಇವೆ. ಇದನ್ನು ಹೀಗೆಯೂ ಹೇಳಬಹುದೇನೋ.. 'ಶಲ್ಯದ ತುದಿಗೆ ಸೆರಗು ಕಟ್ಟಿಕೊಂಡ ಹಾಗೆ' ಯಾಕೆಂದರೆ ಬದುಕಲಿಕ್ಕೆ ಹೊಸಗಾಳಿ ಬೇಕಲ್ಲ! ಬಾಗಿಲು ತೆರೆದರೆ ಹೊಸ್ತಿಲು ದಾಟದೇ ಉಳಿಯುವುದು ಹೇಗೆ ಸಾಧ್ಯ ಹೇಳಿ? ಶಿಲ್ಪಗಳನ್ನು ಸೃಷ್ಟಿಸಿಯೂ 'ಹೇಳಬಹುದಾದ ಬಾಕಿ' ಯನ್ನು ಪದ ದೃಶ್ಯಗಳಾಗಿಸಿ ಕೊಟ್ಟಿರುವ ಶಿವಾನಂದ

ನಮ್ಮ ನಡುವಿನ ಸೃಜನಶೀಲ ಕಲಾವಿದ. ಎಲ್ಲ ಗದ್ದಲಗಳ ಆಚೆಗೂ ಅವರು ನಾಡಿನ ಕಲಾ ಲೋಕಕ್ಕೆ ಪರಿಚಯವಿರುವುದು 'ಸಂಕೀರ್ಣಾಕಾರವನ್ನು' ಬೆಚ್ಚಿಸಬಲ್ಲ ಅವರ ಕಲಾ ಬರಹಗಳ ಕುರಿತು. ಕೆಲವೇ ಮಾತುಗಳಲ್ಲಿ ಮಾರ್ಮಿಕವಾಗಿ ಬಲು ನಿರಾಯಾಸವಾಗಿ ಹೇಳಬೇಕಾದ್ದನ್ನು ಹೇಳಿ ಮುಗಿಸಬಲ್ಲ ಸಹಜವಂತಿಕೆಯಿಂದ ಮತ್ತು ಮಜಬೂತಾದ ಬರಹಗಳು ಗಮನ ಸೆಳೆಯುತ್ತವೆ.

ಶಿವಾನಂದ ಬಂಟನೂರರು ಬರೆದ ಶಿಲ್ಪಕಲೆ ಕುರಿತ ಬರಹಗಳ ಪುಸ್ತಕ 'ಮಾಟದೊಳಗಣ ನೋಟ' ಓದಿದರೆ ಗೊತ್ತಾಗುತ್ತದೆ, ಕಲಾವಿಮರ್ಶೆಯನ್ನು ಸೀರಿಯಸ್ಸಾಗಿ ಅಧ್ಯಯನ ಮಾಡಿದವರಿಗೆ ಮಾತ್ರ 'ಕಲಾಸೃಷ್ಟಿ'ಯ 'ಮಾಟದೊಳಗಣ ನೋಟ' ಗುರುತು ಹಿಡಿಯಲು ಸಾಧ್ಯ.

ಕಲಾವಿದ ಶಿವಕುಮಾರ ಮಡ್ನಾಳ, ಆನಂದಬಾಬು, ಗೌತಮ ಅಂದಾನಿ ಹೀಗೆ ಅನೇಕರ ಶಿಲ್ಪ ಕಲಾಕೃತಿಗಳ ಕುರಿತು ಬರದಿರುವರು. ಶಿವಾನಂದ ಬಂಟನೂರ ಒಂದು ಮಾತನ್ನು ಪ್ರಜ್ಞಾ ಪೂರ್ವಕವಾಗಿ ಹೇಳಿದ್ದನ್ನು ನೆನಪಿಸುತ್ತೇನೆ. 'ಕಲಾಕೃತಿಯನ್ನು ರಕ್ಷಿಸಿದವನನ್ನು ಕಲಾಕೃತಿ ರಕ್ಷಿಸುತ್ತದೆ.' ಎಂಥಾ ಮಾತು.

ಸಾಂಪ್ರದಾಯಿಕ, ಜನಪದ ಹಾಗೂ ಆಧುನಿಕ–ಸಮಕಾಲೀನ ಶಿಲ್ಪಕಲೆ ಕುರಿತು ಬರೆದ ಲೇಖನಗಳ ಸಂಪುಟ 'ಮಾಟದೊಳಗಣ ನೋಟ' ಭಾರತೀಯ ಪ್ರಾಚೀನ ಸಾಹಿತ್ಯ ಕೃತಿಗಳಾದ ರಾಮಾಯಣ ಮಹಾಭಾರತಗಳಲ್ಲಿ ಲೋಹ ಶಿಲ್ಪಕಲೆಯ ಕುರಿತ ಉಲ್ಲೇಖಗಳಿಂದ ಆರಂಭವಾಗುವ 'ಶಿಲ್ಪಕಲೆಯ ಯಾತ್ರೆ' ಆಧುನಿಕ ಸಮಕಾಲೀನ ಕಲಾವಿದರಾದ ವೆಂಕಟಾಚಲಪತಿ, ವಿ.ಎ. ದೇಶಪಾಂಡೆ, ಜಾನ್ ದೇವರಾಜ, ಭಾಸ್ಕರ್ ರಾವ್, ನಾರಾಯಣ ಸೂತ್ರದಾರ, ಸ್ವತಃ ಬಂಟನೂರು ಅವರಲ್ಲಿಗೆ ಬಂದು ನಿಲ್ಲುತ್ತದೆ. ಐತಿಹಾಸಿಕ ಪ್ರಜ್ಞೆಯ ಜೊತೆಗೆ ಸಮಕಾಲೀನ ಪ್ರಜ್ಞೆಯನ್ನು ತಮ್ಮದಾಗಿಸಿಕೊಂಡ ಶಿವಾನಂದ ಬಂಟನೂರು ನಮ್ಮ ನಡುವಿನ ಹೊಸ ತಲೆಮಾರಿನ ಅತ್ಯಂತ ಅರ್ಥಪೂರ್ಣ ಮತ್ತು 'ಚಿತ್ರ ಭಾಷಾ' ಲೇಖಕ.

ಚಿತ್ರಕಲೆ ಮತ್ತು ಶಿಲ್ಪಕಲೆಯೊಳಗಿನ ಸೃಷ್ಟಿ ಪ್ರಜ್ಞೆ ಸಮುದಾಯ ಪ್ರಜ್ಞೆಯಾಗಿ ಹೊರಳುವ ಕವಲಿನಲ್ಲಿ ಒಂದು 'ಅಜ್ಞಾತವಲಯ'ವಿದೆ. ಅದು ಅನುಭವವನ್ನೂ ಬೆಳಕಾಗಿಸುವ, ಕಲಾಸೃಷ್ಟಿಗೆ ಅರ್ಥ ತುಂಬುವ ಅಕ್ಷರಗಳ ತಾಣ. ಎಷ್ಟೋ ಕಾಲ ತಾಯಿಯ ಒಡಲಲ್ಲಿ ಮೌನದಿ ಕೂತು ಮೊದಲ ಬಾರಿ ಕಂಪಿಸುವ ಮಗುವಿನಂತೆ, ಸುಡುವ ಬೇಸಿಗೆಯಲ್ಲಿ ಒಂದೇ ಒಂದು ಹನಿ ನೀರಿಗೆ ಪುಳಕಗೊಳ್ಳುವ ಭೂಮಿಯಂತಹ– ಇಂಥ ಹಲವು ಚಿತ್ರಸೃಷ್ಟಿಯ ಕಥನಗಳನ್ನು ಶಿವಾನಂದ ಬಂಟನೂರ ರೂಪಿಸಿದ್ದಾರೆ. ಹೇಳಿಕೊಳ್ಳುವ, ಹೇಳುವ ತೀವ್ರತೆ ಕಲಾ ಮಾಧ್ಯಮದಲ್ಲಿ ಗಾಢವಾಗಿದೆ. ಈ ತೀವ್ರತೆಯು ಪ್ರತಿ ಓದುಗನಿಗೆ ಕಾಡುವಂತಾಗಬೇಕು.

ನೆನಪಿರಲಿ; ನನಗೆ ಕಾಡಿದ್ದಕ್ಕಾಗಿಯೇ ಇಷ್ಟೆಲ್ಲ! ಹೀಗಿದ್ದೂ ಹೇಳುಲಿಕ್ಕಿನ್ನೂ ಬಾಕಿಯಿದೆ. ಬೇರೆ ಬೇರೆ ಸಂದರ್ಭಗಳಲ್ಲಿ ಬರೆದ ಲೇಖನಗಳನ್ನು ಒಂದೆಡೆ ಸೇರಿಸಿ,

ಕೃತಿಯಾಗಿಸಿ ಅದನ್ನು ಓದುವುದಕ್ಕೆ ನನ್ನನ್ನೂ ಹಚ್ಚಿದ ಶಿವಾನಂದ ಬಂಟನೂರ ಅವರಿಗೆ ನನ್ನ ನಮಸ್ತೆ.

ಖ್ಯಾತ ನೃತ್ಯಗಾತಿ ಮತ್ತು ವಿದ್ವಾಂಸರಾಗಿರುವ ಡಾ. ಚೂಡಾಮಣಿ ನಂದಗೋಪಾಲ ಅವರ 'ಶಿಲೆ-ಕಲೆ' ಎಂಬ ಕೃತಿಯು ೨೦೦೭ ರಲ್ಲಿ ಪ್ರಕಟವಾಗಿದೆ. ಇದು ನಾಟ್ಯಶಾಸ್ತ್ರವನ್ನು ಕುರಿತಾದ ಕೃತಿಯಾಗಿದ್ದರೂ ಶಿಲ್ಪದಲ್ಲಿ ನಾಟ್ಯಶಾಸ್ತ್ರದ ಮಹತ್ವವನ್ನು ಕಂಡರಿಸುವಲ್ಲಿ ಮಹತ್ವದ್ದಾಗಿದೆ. ಲೇಖಕರು ಭಾರತೀಯ ವಾಸ್ತುಶಿಲ್ಪದಲ್ಲಿ ನಾಟ್ಯ ಶಿಲ್ಪಗಳನ್ನು ಕುರಿತು ಅಧ್ಯಯನ ಕೈಗೊಂಡು ನಾಟ್ಯ ಶಾಸ್ತ್ರವು ಶಿಲ್ಪದಲ್ಲಿ ಹೇಗೆ ತನ್ನ ಸ್ವರೂಪವನ್ನು ಪಡೆದಿದೆ ಎಂಬುದನ್ನು ವಿವರಿಸಿದ್ದಾರೆ. ವಿವಿಧ ನಾಟ್ಯ ಭಂಗಿಗಳ ಕುರಿತು ಸಾಹಿತ್ಯದಲ್ಲಿ ಪ್ರಾಸಂಗಿಕವಾಗಿ ಎಲ್ಲೆಲ್ಲಿ ಹೇಗೆ ಹೇಳಲಾಗಿದೆ ಎನ್ನುವುದನ್ನು ಕೆಲವು ಮಹತ್ವದ ಉದಾಹರಣೆಗಳನ್ನು ನೀಡಿ ವಿವರಿಸಿದ್ದಾರೆ. ವಿವಿಧ ಶಾಸನ, ಹಸ್ತಪ್ರತಿ, ಪ್ರಾಚೀನ ಕಾವ್ಯ, ಹೀಗೆ ಅನೇಕ ಜ್ಞಾನಶಾಖೆಗಳಿಂದ ನಾಟ್ಯಶಾಸ್ತ್ರದ ಕುರಿತಾಗಿ ವಿಷಯವನ್ನು ಸಂಗ್ರಹಿಸಿ ಬರೆದಿದ್ದಾರೆ. ರತ್ನಾಕರವರ್ಣಿಯ ಭರತೇಶವೈಭವದಲ್ಲಿ ಬರುವ ನಾಟ್ಯಕಲೆಯ ಪ್ರಸಂಗ ವಿವಿಧ ನಾಟ್ಯಪ್ರಕಾರಗಳ ವೈಭವಗಳ ಕುರಿತಾದ ವರ್ಣನೆಗಳನ್ನು ಈ ಕೃತಿಯಲ್ಲಿ ವಿವರಿಸಲಾಗಿದೆ. ಐತಿಹಾಸಿಕ ಸ್ಥಳಗಳಾದ ಬಾದಾಮಿ, ಐಹೊಳೆ, ಪಟ್ಟದಕಲ್ಲು, ಹಂಪಿ, ಬೇಲೂರು, ಕೋನಾರ್ಕ ಮುಂತಾದ ಶಿಲ್ಪಕಲಾ ಕೇಂದ್ರಗಳಲ್ಲಿಯ ನೃತ್ಯಶಿಲ್ಪಗಳನ್ನು ವಿವರಿಸಿ ಅವುಗಳ ಛಾಯಾಚಿತ್ರಗಳನ್ನು ಪ್ರಕಟಿಸಲಾಗಿದೆ.

ನೃತ್ಯ, ಗೀತ, ಶಿಲ್ಪದ ದೃಷ್ಟಿಯಿಂದ ಮಹತ್ವದ ಮಾಹಿತಿಯನ್ನು ಒದಗಿಸುವ ಈ ಕೃತಿ ಮೂರು ಕಲೆಗಳು ಸಂಧಿಸುವ ಸಂದರ್ಭವನ್ನ ಓದುಗರ ಮುಂದೆ ತರೆದಿಡುವಲ್ಲಿ ಸಫಲವಾಗಿದೆ. ಸಾಂದರ್ಭಿಕವಾಗಿ ನಾಟ್ಯಭಂಗಿ, ಹಸ್ತಮುದ್ರೆಗಳ ಕುರಿತಾಗಿ ರೇಖಾ ಚಿತ್ರಗಳನ್ನು ಬಳಸಿದುದು ಕೃತಿಯನ್ನು ಹೆಚ್ಚು ಪ್ರಭಾವಿ ಹಾಗೂ ಮೌಲಿಕವಾಗುವಂತೆ ಮಾಡಿದೆ. ಸುಮಾರು ೩೬೫ ಪುಟಗಳನ್ನು ಈ ಕೃತಿ ಒಳಗೊಂಡಿದೆ.

ಡಾ. ಶಿವಾನಂದ ಬಂಟನೂರ ಅವರ 'ಸಮಕಾಲೀನ ಶಿಲ್ಪಕಲೆ' ಕೃತಿಯು ೨೦೧೦ ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಗೊಂಡಿದೆ. ಈ ಕೃತಿಯು ಸಮಕಾಲೀನ ಶಿಲ್ಪಕಲೆಯ ಕುರಿತಾಗಿ ಅನೇಕ ವಿಚಾರಗಳನನು ತಿಳಿಸಿಕೊಡುತ್ತದೆ. ಕೆ. ವೆಂಕಟಪ್ಪ ಅವರಿಂದ ಸಮಕಾಲೀನ ಶಿಲ್ಪವನ್ನು ಇದರ ಕಾಲವನ್ನು ಗುರ್ತಿಸಬಹುದೆಂಬ ಅಭಿಪ್ರಾಯವನ್ನು ಒಳಗೊಂಡು, ಕೃತಿಯಲ್ಲಿ ಅನೇಕ ಸಮಕಾಲೀನ ಕಲಾವಿದರ ಸಾಧನೆ, ಕಲಾ ರಚನೆಯ ವಿಧಾನ, ಮಾಧ್ಯಮ, ತಂತ್ರ, ಶೈಲಿ, ವಸ್ತುವಿಷಯ ಮುಂತಾಗಿ ವಿವರಿಸಲಾಗಿದೆ. ಈ ಕೃತಿಯ ಮೂಲಕ ಲೇಖಕರು ಅನೇಕ ಲೇಖಕರ ಜೀವನ ಸಾಧನೆಗಳನ್ನು ಸ್ಥೂಲವಾಗಿ ಪರಿಚಯಿಸುವುದರ ಜೊತೆಗೆ ಕಲೆಯು ಹೇಗೆ ನಿರೂಪಿತವಾಗಿದೆ ಎಂದು ವಿವರಿಸುತ್ತಾ ಶಿಲ್ಪ ಕಲಾಕೃತಿಗಳ ಶೀರ್ಷಿಕೆಗಳನ್ನು ವಿವರಿಸಿ ಅವುಗಳ ಹಿನ್ನೆಲೆಯಾಗಿ ಕೃತಿಯ ಸ್ವರೂಪವನ್ನು ಕಂಡರಿಸಿದ್ದಾರೆ. ಆ ಮೂಲಕ ಕಲೆಯ ಕ್ರಮಬದ್ಧ ಚರಿತ್ರೆಯನ್ನು ಅದು ಬೆಳದುಬಂದ ದಾರಿ ಹಾಗೂ ಕ್ರಮಗಳನ್ನು ನಿರ್ದಿಷ್ಟವಾಗಿ ಹೇಳುವಲ್ಲಿ ವಿಷಯದ ಸ್ಪಷ್ಟತೆಯೊಂದಿಗೆ ಭಾವಪೂರ್ಣತೆಯು ಅಡಕವಾಗಿದೆ. ಲೇಖಕರು ಸ್ವತಃ ಶಿಲ್ಪಕಲಾವಿದರಾಗಿಯೂ

ಪ್ರಾಸಂಗಿಕವಾಗಿ ಕೃತಿಯ ಸಂದರ್ಭಗಳನ್ನು ವಿವರಿಸುವಲ್ಲಿ ಕೃತಿಗಳ ಸಮಕಾಲೀನ ಪಾತ್ರವನ್ನು ಹಾಗೂ ಸ್ವರೂಪವನ್ನು ಕಂಡರಿಸುವುದು ವಿಶೇಷವಾಗಿದೆ.

ಹಿರಿಯ ಮತ್ತು ಪ್ರಮುಖ ಕಲಾವಿದರಾದ ವೆಂಕಟಾಚಲಪತಿ, ಜಾನ್ ದೇವರಾಜ್, ವೀರಣ್ಣ ಅರ್ಕಸಾಲಿ, ನಾರಾಯಣ ಸೂತ್ರಧಾರ, ಪೊನ್ನಪ್ಪ ರಾಜಾರಾಂ, ಯುಸೂಫ್ ಅರಕ್ಕಲ್, ಧನಂಜಯ ಶಿಲ್ಪಿ, ರಮೇಶ್ಚಂದ್ರ, ಕೆ.ರಾಘವೇಂದ್ರ ಮುಂತಾದವರ ಕಲಾಕೃತಿಗಳ ಛಾಯಾಚಿತ್ರಗಳನ್ನು ಪ್ರಕಟಿಸಿರುವುದು ಈ ಕೃತಿಗೆ ಮೌಲ್ಯವನ್ನು ತಂದುಕೊಟ್ಟಿದೆ. ೩೫ ಪುಟಗಳ ಚಿಕ್ಕದಾದ ಕೃತಿಯು ವಿಚಾರದ ದೃಷ್ಟಿಯಿಂದಲೂ ಬರವಣಿಗೆಯ ದೃಷ್ಟಿಯಿಂದಲೂ ಮೌಲಿಕವಾಗಿದೆ.

ನಮ್ಮ ನಡುವಿನ ಮಹತ್ವದ ಶಿಲ್ಪಿ ವೆಂಕಟಾಚಲಪತಿ ಅವರ ಕುರಿತು ಕೆ.ವಿ.ಸು. ಇತ್ತೀಚೆಗೆ ಬರೆದ ಪುಸ್ತಕ 'ವೆಂಕಟಾಚಲಪತಿ: ಕನ್ನಡ ಸಮಕಾಲೀನ ಶಿಲ್ಪಕಲೆಯ ಜಕಣಾಚಾರಿ' ಒಂದು ಮಹತ್ವದ ಕೃತಿಯಾಗಿದೆ. ದೇವನಹಳ್ಳಿಯ ಶಿಲ್ಪಿ ಎ.ಸಿ.ಎಚ್. ಆಚಾರ್ಯರಲ್ಲಿ ಶಿಲ್ಪಕಲೆಯನ್ನು ಕಲಿತ ಇವರು ಆಧುನಿಕ ಶೈಲಿಯ ಶಿಲ್ಪಿಯಾಗಿ ರೂಪುಗೊಂಡ ಬಗೆಯನ್ನು, ಅವರ ಬದುಕಿನ ರೋಚಕ ಘಟನೆಗಳನ್ನು, ಪ್ರಸಿದ್ಧರಿಂದ ಬಂದ ಪತ್ರಗಳನ್ನು ಕಲಾಕೃತಿಗಳ ನೆಳಲುಗಳನ್ನು ಒಳಗು ಮಾಡಿಕೊಂಡು ಪುಸ್ತಕವನ್ನು ರಚಿಸಿದ್ದಾರೆ. ಈ ಪುಸ್ತಕ ವೆಂಕಟಾಚಲಪತಿಯವರ ಅತ್ಯುತ್ತಮ ಸಾಧನೆಯನ್ನು ಎತ್ತಿ ಕಾಣಿಸುವಂತೆ ಅತ್ಯಂತ ಸರಳ ಮತ್ತು ಸಹಜ ಬರವಣಿಗೆಯಲ್ಲಿದೆ. ಸಂಗ್ರಹವಾಗಿ ಹೇಳುವುದಾದರೆ ವೆಂಕಟಾಚಲಪತಿಯವರನ್ನು ಕುರಿತ, ದೃಶ್ಯಕಲೆಯಲ್ಲಿ ಅಷ್ಟೇ ಪರಿಣಿತಿಯನ್ನು ಹೊಂದಿರುವ ಕಲಾ ಸಾಹಿತಿಯೊಬ್ಬರು ಅವರ ಒಟ್ಟಾರೆ ಜೀವನ ಸಾಧನೆಗೆ ಪ್ರತಿಕ್ರಿಯಿಸಿರುವ ರೀತಿಯ ಪುಸ್ತಕವಿದಾಗಿದೆ. ಕರ್ನಾಟಕದ ಶಿಲ್ಪಿಗಳ ಕುರಿತು ಬಂದ ಪುಸ್ತಕಗಳಲ್ಲಿ ಓದಲೇಬೇಕಾದ ಬಹು ಮುಖ್ಯವಾದ ಪುಸ್ತಕ ಇದಾಗಿದೆ.

ದೃಶ್ಯಕಲೆಯ ಸೌಂದರ್ಯವನ್ನು ಶಾಸ್ತ್ರೀಯ ವಲಯದಲ್ಲಿ ಶಾಬ್ದೀಕರಿಸುವ ಪರಂಪರೆ ತೀರ ಅಪರೂಪ. ಕಲಾಸೃಷ್ಟಿ ಅದರ ರೂಪ, ಶೈಲಿ, ಆಶಯ, ಮಾಧ್ಯಮಗಳ ನಲೆಯಲ್ಲಿ ಯಾವುದು ಹೇಗಿದ್ದರೆ ಚೆನ್ನ, ಸೌಂದರ್ಯಾನುಭವಕಾರಿ ಎಂಬಿತ್ಯಾದಿ ಅಲಿಖಿತ ತತ್ವ ಸಿದ್ಧಾಂತಗಳ ನೆಲೆಯಲ್ಲಿ ಕನ್ನಡ ದೃಶ್ಯಕಲಾ ಸಾಹಿತ್ಯಕ್ಕೆ ಕೆ.ವಿ. ಸುಬ್ರಹ್ಮಣ್ಯಂರ ಕೊಡುಗೆ ಗಣನೀಯವಾಗಿದೆ. ಹೊಸ ಪರಿಭಾಷೆ ವ್ಯಾಖ್ಯಾನಮುಖಿ ನಿಲುವುಗಳು ಪ್ರಕಟವಾಗಿವೆ. ಈ ನಿಟ್ಟಿನಲ್ಲಿ ಪ್ರಾದೇಶಿಕ ವೈಶಿಷ್ಟ್ಯ ಹೊಂದಿದ 'ಮಧ್ಯಪ್ರದೇಶದ ಕಲೆ' ಎಂಬ ಕಿರು ಪುಸ್ತಕ ಉಲ್ಲೇಖಾರ್ಹವಾದದ್ದು. ಭಾರತೀಯ ದೃಶ್ಯಕಲೆಯಲ್ಲಿ ತನ್ನದೇ ಆದ ಚಹರೆಗಳನ್ನು ಕಾಣಿಸುವ ಮಧ್ಯಪ್ರದೇಶದ ಕಲೆಯ ಚಾರಿತ್ರಿಕ ನೆಲೆ, ಅದರ ವೈವಿಧ್ಯತೆ ಬೆಳವಣಿಗೆ, ವಸ್ತು ಮತ್ತು ವಿಷಯಗಳ ಹರವು, ಕಲಾವಿದರನ್ನು ಕುರಿತ ಹಲವಾರು ಸಂಗತಿ ಇತ್ಯಾದಿಗಳನ್ನು ಕೆ.ವಿ.ಸು. ಇಲ್ಲಿ ವಿವೇಚಿಸಿದ್ದಾರೆ. ಪ್ರಖ್ಯಾತ ಪಚ್ಮಡಿ ಗಿರಿಧಾಮದ ಬಳಿಯ ಮಹಾದೇವ ಗುಹೆಗಳಲ್ಲಿನ ಸುಂದರ ಚಿತ್ರಗಳು, ಬಸ್ತಾರ್, ಜಗದಲಪುರ, ಕೊಂಡಗಾಂಮ್, ನನ್ನಾವುರಿ, ಚಿಂದ್ವಾಗಳಲ್ಲಿನ ಬುಡಕಟ್ಟು ಜನರ ಚಿತ್ರ, ಶಿಲ್ಪಗಳನ್ನು ಅವುಗಳ ವಿಶಿಷ್ಟ ಬಣ್ಣಗಾರಿಕೆಗಳನ್ನು ಪರಿಚಯಿಸಿರುವರು. ಸಾಂಚಿ ಸ್ತೂಪ, ಉದಯಗಿರಿಯ ಗುಹಾ ಶಿಲ್ಪಗಳು, ಪಾರಮಾರರ

ನೀಲಕಂಠೇಶ್ವರ ದೇವಾಲಯ ಶಿಲ್ಪಗಳನ್ನು ಪರಿಚಯಿಸುವುದರೊಂದಿಗೆ, ಪ್ರಸಿದ್ಧ ಖಜುರಾಹೋ ದೇವಾಲಯದ ಗೋಪುರಗಳ ಸೊಗಸು, ಶಿಲ್ಪಗಳ ಸಮ್ಮೋಹಕ ಗುಣ, ಶಿಲ್ಪಿಗಳ ಕೈಚಳಕ ಮೊದಲಾದ ಅಂಶಗಳನ್ನು ಚಿತ್ರಿಸಿದ್ದಾರೆ. ಅಲ್ಲದೆ ಅಲ್ಲಿನ ಇನ್ನೂ ಹಲವಾರು ದೇವಾಲಯ ವಾಸ್ತುಶಿಲ್ಪಗಳ ಸೌಂದರ್ಯಾಂಶಗಳನ್ನು ಶಾಬ್ದೀಕರಿಸಿದ್ದಾರೆ. ಆ ರಾಜ್ಯದ ಸಮಕಾಲೀನ ಚಿತ್ರಕಾರರಾದ ಬೇಂದ್ರೆ ಮತ್ತು ರಝಾರನ್ನು ಕಲಾವಿದರಿಗೆ ಸ್ಫೂರ್ತಿಯಾಗಿರುವ 'ಭಾರತ ಭವನ' ಮತ್ತು ಅದರ ಚಟುವಟಿಕೆಗಳನ್ನು ಪ್ರಂಶಂಸಿದ್ದಾರೆ.

ಕರ್ನಾಟಕದ ಆಧುನಿಕ ಶಿಲ್ಪಕಲೆಯ ಹಲವು ಆಯಾಮಗಳನ್ನು ದಾಖಲೆ ಸಹಿತ ವಿವರಿಸುವ 'ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ' ೧೬೭ ಪುಟಗಳ ವ್ಯಾಪ್ತಿಯಲ್ಲಿ ರಚಿತವಾಗಿರುವ ತೀರ ಅಪರೂಪದ ಪುಸ್ತಕ. ಕರ್ನಾಟಕದ ಸಮಕಾಲೀನ ಶಿಲ್ಪಕಲೆ ಮತ್ತು ಕಲಾವಿದರ ಕುರಿತ ಈ ಗ್ರಂಥ ಸಮಗ್ರತೆಯಿಂದ ಕೂಡಿದೆ. ಆಧುನಿಕ ಸಮಕಾಲೀನ ಶಿಲ್ಪಕಲೆಯ ಹುಟ್ಟು ಬೆಳವಣಿಗೆ, ಪ್ರಮುಖ ಕಲಾವಿದರು, ಅವರ ಸಂವೇದನೆಗಳೊಟ್ಟಿಗೆ ಆಧುನಿಕೋತ್ತರ ಸಮಕಾಲೀನ ಶಿಲ್ಪಗಳು ಹಾಗೂ ಶಿಲ್ಪಿಗಳ ಕುರಿತ ಹಲವಾರು ಒಳನೋಟಗಳನ್ನು ಅನಾವರಣ ಮಾಡಿರುವ ಗ್ರಂಥವೂ ಇದಾಗಿದೆ. ಹಿಂದಿನ ಸತ್ವಗಳೆಲ್ಲವನ್ನು ಅರಗಿಸಿಕೊಂಡು ಜಾಗತಿಕವಾಗಿ ಅಭಿವ್ಯಕ್ತಿಸುತ್ತ ಇನ್‌ಸ್ಟಾಲೇಷನ್ ಕಲಾಪ್ರಕಾರಕ್ಕೆ ಜಿಗಿದ ಹೊಸ ಪೀಳಿಗೆಯ ಅಸಾಧಾರಣ ಸೃಷ್ಟಿಗಳು, ಅರ್ಥ ಆರ್ಟ್, ಸ್ಥಳನಿರ್ದಿಷ್ಟ- ಕಾಲನಿರ್ದಿಷ್ಟ ಪ್ರಯೋಗಗಳು, ಅಲ್ಲದೆ ವಿಡಿಯೋ ಇನ್‌ಸ್ಟಾಲೇಷನ್, ದೇಹವನ್ನೇ ದುಡಿಸಿಕೊಂಡಿರುವಿಕೆ, ಸ್ತ್ರೀ ಸಂವೇದನೆ, ಶಿಲ್ಪಕಲೆಯ ನಿನ್ನೆ- ಇಂದು- ನಾಳೆ ಇತ್ಯಾದಿಗಳ ಬಗ್ಗೆ ಚರ್ಚೆಯಿದೆ. ಹಲವು ಕಲಾವಿದ/ ಕಲಾವಿದೆಯರ ಹೇಳಿಕೆಗಳೂ, ಬಹಳಷ್ಟು ಕಲಾಕೃತಿಗಳ ನೆಳಲುಗಳನ್ನು ಅಚ್ಚುಹಾಕಿರುವುದೂ ಪರಿಣಾಮಕಾರಿಯಾಗಿದೆ.

ದೃಶ್ಯಕಲೆಯ ಎಲ್ಲ ರೂಪ, ಶೈಲಿ, ಸಿದ್ಧಾಂತಗಳನ್ನೂ ನುಂಗಿಹಾಕಿ 'ಈ ಹೊತ್ತಿನ ದೃಶ್ಯಕಲೆ ಎಂದರೆ ಅದು ಇನ್‌ಸ್ಟಾಲೇಷನ್ ಆರ್ಟ್' ಎಂಬಂತೆ ಈಚಿನ ದಶಕಗಳಲ್ಲಿ ತನ್ನ ಭಾಹುಗಳನ್ನು ಚಾಚಿದ ಕಲಾ ಪ್ರಕಾರದ ಕುರಿತು 'ಇನ್‌ಸ್ಟಾಲೇಷನ್ ಕಲಾ ಪ್ರಪಂಚ' ಶೀರ್ಷಿಕೆಯಲ್ಲಿ ಪ್ರಕಟವಾದುದು ಸುಬ್ರಹ್ಮಣ್ಯಂರ ಇನ್ನೊಂದು ಪುಸ್ತಕ. ಆಯ್ದ ಕಲಾಕೃತಿಗಳು, ಪ್ರದರ್ಶನಗಳನ್ನು ಕುರಿತ ಹೇಳಿಕೆಗಳನ್ನೊಳಗೊಂಡಂತೆ ವಿಷಯದ ವಿಸ್ತಾರವಿದೆ. ಜಾಗತಿಕವಾಗಿ ಹಲವು ಬೆಳವಣಿಗೆಗಳ ನಡುವೆ ಸಮಕಾಲೀನ ಅಭಿವ್ಯಕ್ತಿಯ ಚಿತ್ರ, ಶಿಲ್ಪ, ಗ್ರಾಫಿಕ್ ಮಾಧ್ಯಮಗಳ ಸಾಧ್ಯತೆಗಳನ್ನು ಮೀರಿ ಇನ್‌ಸ್ಟಾಲೇಷನ್ ಕಲೆಯ ಪ್ರಕಾರವನ್ನು ಅರಗಿಸಿಕೊಳ್ಳುವ ನಡೆ ಈಚೆಗೆ ಗಂಭೀರವಾಗಿ ಕಾಣಿಸಿಕೊಂಡಿದ್ದನ್ನು 'ಶಿಲ್ಪಕಲೆಯ ಪ್ರಥಮ ಪಲ್ಲಟ' ವಾಗಿ ಕಂಡು ವಿಶ್ಲೇಷಿಸಿರುವುದು ವಿಶೇಷ.

೨೦೦೮ ರಲ್ಲಿ ಕನ್ನಡ ಪ್ರಭ ಪತ್ರಿಕೆಯಲ್ಲಿ ಪ್ರಕಟವಾದ ಕೆ.ವಿ.ಸು. ಅವರ 'ಸಮಕಾಲೀನ ಶಿಲ್ಪಗಳ ಕೆಲವು ನೋಟಗಳು' ಉಲ್ಲಾಸ್‌ಕರ್ ಡೇ, ರಾಮಮೂರ್ತಿ, ವೆಂಕಟಾಚಲಪತಿ, ಆನಂದ ಬಾಬು ಎಂ. ಅಂಬರಖಾನೆ, ಶಿವಾನಂದ ಎಚ್. ಬಂಟನೂರ, ಜಗನ್ನಾಥ ಜಕ್ಕೇಪಳ್ಳಿ, ಕೆ. ರಾಘವೇಂದ್ರ, ಎಂ. ರಘುರಾಮ, ಎಂ. ವಿಶ್ವನಾಥ, ನಾಗಪ್ಪ

ಪ್ರಧಾನಿ, ಬಿ. ಎಂ. ರವಿಕುಮಾರ, ರಾಜೇಶ್ ದೇವಣಗಾಂವ ಅವರುಗಳ ಅಭಿವ್ಯಕ್ತಿಗಳನ್ನು ಸೂಕ್ಷ್ಮ ರೀತಿಯಲ್ಲಿ ವಿಮರ್ಶಕರು ಪ್ರಸ್ತುತಪಡಿಸಿದ್ದಾರೆ.

ಭಾರತೀಯ ಸಾಂಪ್ರದಾಯಿಕ ದೃಶ್ಯಕಲೆಯ ಅಭಿವ್ಯಕ್ತಿಯಲ್ಲಿ ವೈಯುಕ್ತಿಕತೆ ಎಂಬುದೇ ಇಲ್ಲ. ಎಲ್ಲವೂ ಸಾಮಾಜಿಕ. ತಮ್ಮ ಒಳಗಿನ ಒತ್ತಡದ ಕಾರಣಕ್ಕಾಗಿ ಅಭಿವ್ಯಕ್ತಿಸಿ ಬಿಡುಗಡೆ ಹೊಂದುವ ಪರಿಪಾಠ ಹಿಂದೆ ಇರಲಿಲ್ಲ. ಈಗ ಅನಿವಾರ್ಯ. ಕನ್ನಡ ದೃಶ್ಯಕಲಾ ಇತಿಹಾಸದಲ್ಲಿ ಈ 'ಗುಂಪು' ಪ್ರರ್ದಶನಗಳಿಗೆ ತನ್ನದೇ ಆದ ಇತಿಹಾಸವಿದೆ. ಇಡೀ ರಾಜ್ಯದಲ್ಲಿ ೧೯೪೦-೬೫ರ ನಡುವೆ ಹಲವು ಐತಿಹಾಸಿಕ ಪ್ರಾಮುಖ್ಯತೆ ಪಡೆದ ಗುಂಪು ಪ್ರದರ್ಶನಗಳು ನಡೆದಿವೆ. ಇದೇ ನಿಟ್ಟಿನಲ್ಲಿ ಬೆಂಗಳೂರಿನ Contemporary Sculptures Foum ೨೦೦೮ ರ ಶಿಲ್ಪಗಳ ಪ್ರದರ್ಶನ ಚಿತ್ರಕಲಾ ಪರಿಷತ್ತಿನಲ್ಲಿ ನಡೆಯಿತು. ಹಿರಿಯ ಶಿಲ್ಪಿ ವೆಂಕಟಾಚಲಪತಿಯವರ ಆಶಯದ ಈ ಗುಂಪು ಪ್ರದರ್ಶನದಲ್ಲಿ 'ಹೊಸ ಚಿಗುರಿನೊಂದಿಗೆ ಹಳೆ ಬೇರುಗಳೂ ಕೂಡಿರುವುದು ಬಹುಮುಖ್ಯ ಬೆಳವಣಿಗೆಗಳಲ್ಲಿ ಒಂದು' ಎಂದು ಹೇಳಬಹುದು.

ಒಟ್ಟಾರೆ ಹಲವು ಆಯಾಮಗಳನ್ನು ಪಡೆದುಕೊಳ್ಳುತ್ತ ಸಾಗಿರುವ ನಮ್ಮವರ ಶಿಲ್ಪಕಲೆಯ ಕೆಲವು ಪ್ರಮುಖ ನಮೂನೆಗಳನ್ನು ನೋಡಿ ಅನುಭವಿಸುವ ಸಂದರ್ಭವನ್ನು ಸೃಷ್ಟಿಸಿದ ವಿಶಿಷ್ಟ ಗುಂಪಿನ ಪ್ರದರ್ಶನ ಇದಾಗಿತ್ತು ಎಂಬ ಭಾವನೆ ಕಲಾವಲಯದಲ್ಲಿ ವ್ಯಕ್ತವಾಯಿತು.

ಮೊದಲ ಬಾರಿಗೆ (೨೦೧೪) ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು 'ಕರ್ನಾಟಕ ಶಿಲ್ಪಸಂಚಲನ' ಎಂಬ ಅರ್ಧವಾರ್ಷಿಕ ಪತ್ರಿಕೆಯನ್ನು ಪ್ರಕಟಿಸುತ್ತಿದೆ. ಮೊದಲ ಸಂಚಿಕೆಯನ್ನು ಡಾ. ಶಿವಾನಂದ ಎಚ್. ಬಂಟನೂರ ಸಂಪಾದನೆ ಮಾಡಿರುವರು. ಈ ಸಂಚಿಕೆಯಲ್ಲಿ ಅಕಾಡೆಮಿಯ ನೂತನ ಅಧ್ಯಕ್ಷರು, ಇದುವರೆಗಿನ ಅಧ್ಯಕ್ಷರು, ಅಕಾಡೆಮಿಯ ಕಾರ್ಯಕ್ರಮಗಳು ಎನ್ನುವ ಶೀರ್ಷಿಕೆಗಳಡಿಯಲ್ಲಿ ಸ್ಥೂಲ ನೋಟಗಳನ್ನು ನೀಡಿದ್ದಾರೆ. ಶಿಲ್ಪಗಳಲ್ಲಿ ನಾಟ್ಯಶಾಸ್ತ್ರ ದರ್ಶನ, ಸಾರ್ವಜನಿಕ ಶಿಲ್ಪ: ಅಭಿಮಾನ ಮತ್ತು ಸಂರಕ್ಷಣೆ, ಕನ್ನಡ ಶಿಲ್ಪಕಲೆಯ ಸಮಕಾಲೀನ ಸಂವೇದನೆ ಎಂಬ ಲೇಖನಗಳನ್ನೂ ಅಳವಡಿಸಿ ಪ್ರಟಿಸಿರುವುದು ವಿಶೇಷ. ಶಿಲ್ಪಕಲೆ ಅದರಲ್ಲೂ ಸಮಕಾಲೀನ ಶಿಲ್ಪಕಲೆಯ ಕುರಿತು ಗಂಭೀರವಾದ ಹೆಜ್ಜೆಗಳನ್ನು ಈ ಪತ್ರಿಕೆ ಇರಿಸಿದೆಯನ್ನಬಹುದು.

ಟಿಪ್ಪಣಿಗಳು

೧. ಅ.ಲ. ನರಸಿಂಹನ್, ಎನ್. ಮರಿಶಾಮಾಚಾರ್ (ಸಂ): ಶಿಲ್ಪಕಲಾ ಪ್ರಪಂಚ: ಲೇ: ಚಿ.ಸು.ಕೃಷ್ಣಸೆಟ್ಟಿ, ಪುಟ ೫೦೩

೨. John maxan, the Art Institute of Chicago 1965.

೩. ಕೆ.ವಿ.ಸು: ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ, ಪು, ೧

೪. Mother as a mountain : sculptur, june- 2007, magazine, anih kapoor- andras

solsminst, Washington- Internotional sculpture center.

೫. ಕೆ.ವಿ. ಸುಬ್ರಹ್ಮಣ್ಯಂ: ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ: ಪುಟ, ೩

೬. ಡಾ. ಶರಣಬಸಪ್ಪ ಕೋಲಕಾರ; ಹಂಪಿ ಪ್ರದೇಶದ ಆದಿಮ ಚಿತ್ರಗಳು ಪುಟ, ೧

೭. ಡಾ. ಶಿವಾನಂದ ಎಚ್. ಬಂಟನೂರ: ಮಾಟದೊಳಗಣ ನೋಟ, ಪು, ೬೭

೮. ಕೆ.ವಿ.ಸು.: ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ, ಪುಟ ೨

೯. ಕೆ.ವಿ.ಸು. : ಕರ್ನಾಟಕದ ಆಧುನಿಕ ಶಿಲ್ಪಕಲೆ, ಪುಟ, ೧೯

೧೦. ಎಚ್. ಎ. ಅನಿಲ್‌ಕುಮಾರ್: ನೋಟ ಪಲ್ಲಟ: ಪುಟ, ೯೮

೧೧) ಕೆ.ವಿ.ಸು: ಸಿ. ಪಿ. ರಾಜಾರಾಮ್, ೨೦

೧೨. ಕೆ.ವಿ. ಸು: ಆರ್. ಎಸ್. ನಾಯ್ಡು, ೧೪

೧೩. ಚಿ.ಸು. ಕೃಷ್ಣಶೆಟ್ಟಿ: ಲೋಹಫಲಕ ಮಾಂತ್ರಿಕ ಎಲ್.ಪಿ.ಅಂಚನ್,ಪುಟ ೨೬

೧೪) ಕೆ.ವಿ. ಸು: ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ, ಪುಟ ೨೭

೧೫) ಡಾ. ಚೂಡಾಮಣಿ ನಂದಗೋಪಾಲ: ಶಿಲೆ ಕಲೆ

೧೬. ದೃಶ್ಯ ಬೆಳಕು: ತ್ರೈಮಾಸಿಕ: ಡಾ. ಪರಶುರಾಮ(ಸಂ): ಮಹಿಪಾಲ ರೆಡ್ಡಿ ಮೂನ್ನೂರು ಪುಟ ೪೦

೧೭. ಕೆ.ವಿ.ಸು.(ಸಂ): ಲಲಿತಕಲೆಗಳು ಸಂಪುಟ ೧೬ ಪುಟ,

೧೮. ಡಾ. ಶಿವಾನಂದ ಎಚ್. ಬಂಟನೂರ: ಸಮಕಾಲೀನ ಶಿಲ್ಪಕಲೆ,

೧೯. ಕೆ.ವಿ.ಸು. : ವೆಂಕಟಾಚಲಪತಿ : ಕನ್ನಡ ಸಮಕಾಲೀನ ಶಿಲ್ಪಕಲೆಯ ಜಕಣಾಚಾರಿ

೨೦. ಡಾ. ಶಿವಾನಂದ ಎಚ್. ಬಂಟನೂರ (ಸಂ): ಕರ್ನಾಟಕ ಶಿಲ್ಪಸಂಚಲನ, ಸಂಪುಟ ೧, ಸಂಚಿಕೆ ೧, ಜೂನ್– ನವೆಂಬರ್ ೨೦೧೪,

ಅಧ್ಯಾಯ: ಎರಡು

ವಿವಿಧ ಮಾಧ್ಯಮಗಳು ಮತ್ತು ಸೃಷ್ಟಿ ಸಾಧ್ಯತೆಗಳು

ಸಮಕಾಲೀನ ಶಿಲ್ಪಕಲೆ ವೈವಿಧ್ಯಮಯವಾಗಿ ಬೆಳದಿದೆ. ಒಂದೊಂದು ಮಾಧ್ಯಮದಲ್ಲಿ ಒಂದೊಂದು ರೀತಿಯಲ್ಲಿ ಅರಳಿದೆ. ಅಂದರೆ ಮಣ್ಣು, ಶಿಲೆ, ಮರ, ಲೋಹ, ಸಿಮೆಂಟ್, ಪ್ಲಾಸ್ಟರ್ ಆಫ್ ಪ್ಯಾರಿಸ್, ಫೈಬರ್ ಗ್ಲಾಸ್, ಅಲ್ಲದೆ ಸಂಕೀರ್ಣ ಮಾಧ್ಯಮಗಳಲ್ಲಿ ಸೃಷ್ಟಿಯಾಗಿರುವುದನ್ನು ಕಾಣುತ್ತೇವೆ. ಆಯಾ ಮಾಧ್ಯಮಗಳ ಸ್ವಭಾವ, ಸೃಷ್ಟಿ ಸಾಧ್ಯತೆ ಇತ್ಯಾದಿ ಅಂಶಗಳು ವಿಶೇಷವಾಗಿ ಗಮನ ಸೆಳೆಯುತ್ತವೆ. ಆಯಾ ಮಾಧ್ಯಮಗಳು ಹಾಗೂ ಅವುಗಳ ವೈಶಿಷ್ಟ್ಯಗಳನ್ನು ಈ ಅಧ್ಯಾಯದಲ್ಲಿ ಗಮನಿಸಲಾಗಿದೆ.

ಮಣ್ಣಿನ ಮಾಧ್ಯಮ

ಪ್ರಪಂಚದಲ್ಲಿ ಪ್ರಾಚೀನ ಕಾಲದಿಂದಲೂ ಮಣ್ಣಿಗೆ ಬಹಳ ಮಹತ್ವ ನೀಡುತ್ತ ಬರಲಾಗಿದೆ. ಬದುಕಿನ ಅನೇಕ ಆಯಾಮಗಳಲ್ಲಿ ಮಣ್ಣಿನ ಪಾತ್ರವಿದೆ. ಅಂತೆಯೇ ಶಿಲ್ಪಕಲೆಯಲ್ಲಿ ಕೂಡ. ಶಿಲ್ಪ ರಚನೆಗೆ ಬಹಳಷ್ಟು ಕಾಲದ ಹಿಂದಿನಿಂದಲೇ ಮಣ್ಣನ್ನು ಬಳಸುತ್ತ ಬರಲಾಗಿದೆ.

ನಮ್ಮ ಜನಪದ ಶಿಲ್ಪಕಲೆಯಲ್ಲಿ, ಸಂಪ್ರದಾಯ ಶಿಲ್ಪಕಲೆಗಳಿಗಿಂತಲೂ ಪೂರ್ವದ ಆದಿಮ ಕಾಲದಿಂದಲೇ ಶಿಲ್ಪರಚನೆಗೆ ಮಣ್ಣಿನ ಬಳಕೆ ಹೇರಳವಾಗಿದ್ದುದು ಕಂಡುಬರುತ್ತದೆ. ಜನಪದರಿಗೆ ಮಣ್ಣು ಎಂದರೆ 'ಸಂಪತ್ತನ್ನು ಹೆರುವ ಜೀವಶಕ್ತಿ' ಅಂತೆಯೇ ಮಣ್ಣನ್ನು ಪೂಜಿಸುವ ಅನೇಕ ಆಚರಣೆಗಳು ಜನಪದರಲ್ಲಿವೆ.

'ಮಡಿಕೆಯ ಮಾಡುವರೆ ಮಣ್ಣೇ ಮೊದಲು' ಎಂಬ ಮಾತಿನಂತೆ ಮನುಷ್ಯನಿಗೆ ಸೌಂದರ್ಯ ಪ್ರಜ್ಞೆಯುಂಟಾಗಿ, ಆ ಅನುಭವ ಶಿಲ್ಪ ರಚನೆಗೆ ತೊಡಗಲು ಮಣ್ಣೇ ಮೊದಲ ಮಾಧ್ಯಮವಾಗಿ ಬಳಕೆಯಾಗಿರಲು ಸಾಧ್ಯವಿದೆ. ಹರಪ್ಪ ಮತ್ತು ಮಹೆಂಜೋದಾರೋಗಳ ಉತ್ಖನನದಲ್ಲಿ ದೊರೆತ ಕಲಾತ್ಮಕ ಪಾತ್ರೆಗಳು, ಆಟಿಕೆಗಳು ಮುಂತಾದುವೆಲ್ಲ ಮಣ್ಣಿನ ಶಿಲ್ಪಗಳ ರಚನೆಯ ಪ್ರಾಚೀನತೆಯನ್ನು ಅರುಹುತ್ತವೆ. ನಮ್ಮ ಸಂಪ್ರದಾಯ ಶಿಲ್ಪಕಲೆಯಲ್ಲಿ ಮಣ್ಣಿನ ಮಾಧ್ಯಮ ವಿಶೇಷವಾಗಿ ಬಳಕೆಯಾಗಿದೆ. ಅನೇಕ ದೇವ-ದೇವತೆಗಳ ಶಿಲ್ಪಗಳು, ಪ್ರಾಣಿ ಶಿಲ್ಪಗಳು, ಪಕ್ಷಿ ಶಿಲ್ಪಗಳು, ವ್ಯಕ್ತಿ ಶಿಲ್ಪಗಳು ರಚನೆಯಾಗಿವೆ.

ಆಧುನಿಕ ಸಮಕಾಲೀನ ಶಿಲ್ಪಕಲೆಯ ಸಂದರ್ಭದಲ್ಲೂ ಮಣ್ಣಿನ ಮಾಧ್ಯಮ ತನ್ನ ಮಹತ್ವವನ್ನು ಉಳಿಸಿಕೊಂಡಿರುವುದು ಸೋಜಿಗ. ಏಕೆಂದರೆ ಸಿಮೆಂಟ್, ಪ್ಲಾಸ್ಟರ್ ಆಫ್ ಪ್ಯಾರಿಸ್ ಮತ್ತು ಫೈಬರ್‌ಗ್ಲಾಸ್‌ನಂತಹ ಹೊಸ ಮಾಧ್ಯಮಗಳು ಅವಿಷ್ಕಾರಗೊಂಡು ಈ ಮಾಧ್ಯಮಗಳಲ್ಲಿ ಶಿಲ್ಪಗಳು ರಚನೆಯಾಗುತ್ತಿದ್ದರೂ, ಮಣ್ಣಿನ ಮಾಧ್ಯಮದಲ್ಲೂ ಅನೇಕ ರೀತಿಯಲ್ಲಿ ಸಮಕಾಲೀನ ಶಿಲ್ಪಗಳು ಇಂದೂ ಕೂಡ ರಚನೆಯಾಗುತ್ತಲಿವೆ. ಮಣ್ಣಿನ ಮಾಧ್ಯಮದಲ್ಲಿ ಶಿಲ್ಪಗಳನ್ನು ಎರಡು ರೀತಿಯಲ್ಲಿ ರಚನೆ ಮಾಡಲಾಗುತ್ತದೆ. 1). ಮಣ್ಣಿನ ಮಾಧ್ಯಮದಲ್ಲಿ ಶಿಲ್ಪ ಕಲಾಕೃತಿಗಳನ್ನು ರಚಿಸಿ ಒಣಗಿಸುವುದು ಒಂದು ವಿಧಾನ. 2). ಮಣ್ಣಿನ ಮಾಧ್ಯಮದಲ್ಲಿ ಶಿಲ್ಪಕಲಾಕೃತಿಗಳನ್ನು ರಚಿಸಿ ಒಣಗಿಸಿ ಬಳಿಕ ಬೆಂಕಿಯಲ್ಲಿ ಸುಡುವುದು ಮತ್ತೊಂದು ವಿಧಾನ. ಇಂಥ ಶಿಲ್ಪಗಳನ್ನು 'ಸುಡಾವೆ' ಶಿಲ್ಪಗಳು ಎಂದು ಕರೆಯುವರು. ಇಂಗ್ಲಿಷನಲ್ಲಿ ಟೆರಾಕೊಟ್ಟಾ ಎಂದು ಕರೆಯಲಾಗುವುದು. ಶಿಲ್ಪ ರಚನೆಗೆ ಯೋಗ್ಯ ಅಥವಾ ಸೂಕ್ತವಾದ ಮಣ್ಣನ್ನು ಸಂಗ್ರಹಿಸಿ, ಅದಕ್ಕೆ ನೀರು ಬೆರೆಸಿ ಚೆನ್ನಾಗಿ ಹದಗೊಳಿಸಲಾಗುವುದು, ನಂತರ ಶಿಲ್ಪ ಕಲಾಕೃತಿಗಳನ್ನು ರಚಿಸಲು ಸೂಕ್ತವಾಗುತ್ತದೆ.

ಕೆಲವೊಮ್ಮೆ ಮಣ್ಣಿನಲ್ಲಿ ಹತ್ತಿ (ಕಾಟನ್) ಯನ್ನು ಬೆರೆಸಿ ಚೆನ್ನಾಗಿ ಕುಟ್ಟಿ ಹದಗೊಳಿಸಿಕೊಂಡು ನಂತರ ಶಿಲ್ಪ ಕಲಾಕೃತಿಗಳನ್ನು ರಚಿಸುವುದೂ ಇದೆ. ಇದರಿಂದ ಶಿಲ್ಪಗಳು ಬಹುಕಾಲ ಒಡೆಯದೆ ಉಳಿದುಕೊಳ್ಳುತ್ತವೆ. ಅರ್ಥಾತ್ ಬಾಳಿಕೆ ಬರುತ್ತವೆ.

ನಮ್ಮ ನಾಡಿನಲ್ಲಿ ಜನಪದರು ನೂರಾರು ವರ್ಷಗಳಿಂದ ಮಣ್ಣಿನ ಮಾಧ್ಯಮದಲ್ಲಿ ಶಿಲ್ಪಗಳನ್ನು ರಚಿಸುತ್ತ ಬಂದಿರುವರು. ಕುಂಬಾರಿಕೆ ಕಲೆಯಲ್ಲಿ ಮಣ್ಣು ಬಹುಮುಖ್ಯ ಪಾತ್ರವಹಿಸಿದೆ. ಕುಂಬಾರರು ಅನೇಕ ಜನಪದ ಶಿಲ್ಪಗಳನ್ನು ರಚಿಸುವುದರೊಂದಿಗೆ ಮಡಕೆ- ಕುಡಿಕೆಗಳನ್ನು ರಚಿಸುತ್ತ ಬಂದಿರುವರು. ಇಂದಿಗೂ ಈ ಮಾಧ್ಯಮ ಮತ್ತು ಕಲೆ ತನ್ನ ಮಹತ್ವವನ್ನು ಉಳಿಸಿಕೊಂಡು ಬಂದಿದೆ.

ಆದರೆ ಆಧುನಿಕ ಸಮಕಾಲೀನ ಕಾಲಘಟ್ಟದಲ್ಲಿ ಸೃಜನಶೀಲ ಶಿಲ್ಪಗಳ ಅಭಿವ್ಯಕ್ತಿಗೂ ಕೂಡ ಮಣ್ಣಿನ ಮಾಧ್ಯಮವನ್ನು ಕಲಾವಿದರು ಬಳಸಿರುವುದು ವಿಶೇಷವಾಗಿದೆ. ಕೆ. ವೆಂಕಟಪ್ಪ, ಶ್ರೀ ಶಂಕರ, ವೆಂಕಟಾಚಲಪತಿ- ವಿ. ಎ. ದೇಶಪಾಂಡೆ ಅಲ್ಲದೆ ವಿಶೇಷವಾಗಿ ಎನ್. ಪುಷ್ಪಮಾಲಾ, ಯುಸೂಫ್ ಅರಕ್ಕಲ್, ಜಾನ್ ದೇವರಾಜ್ ಮೊದಲಾದ ಕಲಾವಿದರು ಬಳಸಿ ಅದ್ಭುತವಾದ ಸಂವೇದನೆಯಿಂದ ಕೂಡಿದ ಸೃಜನಶೀಲ ಕಲಾಕೃತಿಗಳನ್ನು ರಚಿಸಿರುವರು.

ಯುವ ಪೀಳಿಗೆಯಲ್ಲಿ ಮುಖ್ಯರಾಗುವ ವಿಜಯರಾವ್, ಪ್ರದೀಪ ಕುಮಾರ, ಝಾನ್ ದೇವರಾಜ್, ಡಾ. ಶಿವಾನಂದ ಎಚ್. ಬಂಟನೂರ, ಜಗನ್ನಾಥ ಜಕ್ಕೇಪಳ್ಳಿ, ನಾಗಪ್ಪ ಪ್ರಧಾನಿ, ಉಮೇಶ ಮದ್ದನಹಳ್ಳಿ ಇನ್ನೂ ಮೊದಲಾದ ಕಲಾವಿದರು ಈ ಮಾಧ್ಯಮದಲ್ಲಿ ಗಮನಾರ್ಹವಾದ ಸಮಕಾಲೀನ ಶಿಲ್ಪಗಳನ್ನು ರಚಿಸಿರುವರು.

ಮರ ಮಾಧ್ಯಮ

ಮರ ಇಲ್ಲವೆ ಕಟ್ಟಿಗೆಯನ್ನು ದಿಮ್ಮಿ, ದಾರು ಎಂದೂ ಕರೆಯಲಾಗುತ್ತದೆ. ಕಟ್ಟಿಗೆ ಅಥವಾ ಮರ (ವುಡ್) ಮಾನವನ ಬದುಕಿನ ಒಂದು ಭಾಗವೇ ಆಗಿದೆ. ಮರ ಹಲವು ವಿಧಗಳಲ್ಲಿ, ಹಲವು ಉದ್ದೇಶಗಳಿಗಾಗಿ ಜಗತ್ತಿನಲ್ಲಿ ಸಾವಿರಾರು ವರ್ಷಗಳಿಂದ ಬಳಸಲ್ಪಡುತ್ತಿದೆ. ಜನನದಿಂದ ಮೊದಲ್ಗೊಂಡು ಮರಣದವರೆಗೆ ಅದು ಮನುಷ್ಯನಿಗೆ ಪ್ರಯೋಜನಕಾರಿಯಾಗಿದೆ. ಉದಾ– ತೊಟ್ಟಿಲು ಮರದ್ದೆ, ಶವದ ಪೆಟ್ಟಿಗೆಯೂ ಕೂಡ ಮರದ್ದೆ. ಈ ಮರದ ಬಳಕೆ ಬಹು ಪ್ರಾಚೀನವಾದುದು. ಮರದ ತೊಗಟೆ ಮನುಷ್ಯನ ಮೊದಲ ಉಡುಪಾಗಿತ್ತೆಂಬುದು ಆಶ್ಚರ್ಯವೆನಿಸಿದರೂ ಐತಿಹಾಸಿಕ ಸತ್ಯ.

ಭಾರತದಲ್ಲಿ ಮರದ ಕಲಾತ್ಮಕ ಬಳಕೆಯು ಸಿಂದೂ ಸಂಸ್ಕೃತಿಯಷ್ಟು ಪ್ರಾಚೀನ. ಆಗ ಮರದ ಕಂಬ, ತೊಲೆಗಳಿಂದ ಕಟ್ಟಡ ಅಥವಾ ಮನೆಗಳು ರಚನೆಯಾಗುತ್ತಿದ್ದವು. ಋಗ್ವೇದ, ಬೃಹತ್ ಸಂಹಿತೆ, ವಿಷ್ಣು ಧರ್ಮೋತ್ತರ ಪುರಾಣಗಳಲ್ಲಿ ಬಡಗಿ ಕಲೆಯ ಪ್ರಸ್ತಾಪವಿದೆ. ಮೌರ್ಯರ ಅರಮನೆಗಳು[1] ಮರದಿಂದಲೇ ನಿರ್ಮಿತವಾದವುಗಳಾಗಿವೆ.

ಮರದ ಬಳಕೆ ಅಥವಾ ಮರದಲ್ಲಿ ಶಿಲ್ಪಗಳನ್ನು ರಚಿಸಿರುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಅತ್ಯಂತ ಪ್ರಾಚೀನ ಕುರುಹುಗಳು ಬಳ್ಳಾರಿ ಜಿಲ್ಲೆಯಲ್ಲಿ ಲಭ್ಯವಿವೆ. ಈ ಜಿಲ್ಲೆಯ ತೆಕ್ಕಲುಕೋಟೆ ಮತ್ತು ಸಂಗನಕಲ್ಲುಗಳಲ್ಲಿ ನಡೆದ ಪುರಾತತ್ವ ಉತ್ಖನನದಿಂದ ನವ ಶಿಲಾಯುಗದ ಕಾಲದಲ್ಲಿ ವೃತ್ತಾಕಾರದ ವಾಸದ ಮನೆಗಳನ್ನು ಬಿದಿರಿನ ಕಂಬಗಳನ್ನು ನಿರ್ಮಿಸುತ್ತಿದ್ದ ಸಂಗತಿ ಬೆಳಕಿಗೆ ಬಂದಿದೆ. (ಕಾಲ. ಕ್ರಿ. ಪೂ. ಸು.15000 ಇದು ಮನುಷ್ಯನು ತನ್ನ ನಿರ್ದಿಷ್ಟ ಉದ್ದೇಶವೊಂದಕ್ಕೆ ಮರವನ್ನು[2] ಬಳಸಿಕೊಂಡ ಮೊದಲ ಉದಾಹರಣೆಯೆನ್ನಬಹುದು. ಮೆಗಸ್ತನೀಸ್ ತನ್ನ ಬರಹದಲ್ಲಿ ರಾಜಧಾನಿ ಪಾಲಿಬೋಥ್ರದ (ಪಾಟಲೀಪುತ್ರ ಇಂದಿನ ಬಿಹಾರದ ರಾಜಧಾನಿ ಪಾಟ್ನಾ ಆಗಿದ್ದು ಇಲ್ಲಿ ನಡೆದ ಉತ್ಖನನಗಳು ಮೆಗಸ್ತಾನೀಸನ ಹೇಳಿಕೆಯನ್ನು ಸಮರ್ಥಿಸಿವೆ. ಉತ್ಖನನದ ಸಂದರ್ಭದಲ್ಲಿ ಅರಮನೆಗೆ ಸಂಬಂಧಿಸಿದ ಮರದ ಅವಶೇಷಗಳು ದೊರೆತಿವೆ. ಒಟ್ಟಾರೆ ಭಾರತದಲ್ಲಿ ಕ್ರಿ. ಪೂ 400[3] ರಲ್ಲೇ ಕಟ್ಟಡಗಳು ಮತ್ತು ಉಬ್ಬು ಶಿಲ್ಪಗಳ ರಚನೆಗೆ ಮರವನ್ನು ಬಳಸುತ್ತಿದ್ದರೆಂದು ತಿಳಿಯುತ್ತದೆ.

ಶಿಲ್ಪ ರಚನೆಗೆ ಮರವನ್ನು ಬಳಸುವುದು ತೀರ ಪ್ರಾಚೀನ ಪದ್ಧತಿಯೆ ಆಗಿದೆ. ದೇವತೆಗಳ ಪ್ರತೀಕವಾಗಿ ಪ್ರತಿಮೆಗಳನ್ನು ಕಂಡರಿಸುವುದು ಮಾನವನ ಸಂಸ್ಕೃತಿ ಮೊದಲಾದಾಗಲೇ ಕಾಣಿಸಿಕೊಳ್ಳುತ್ತದೆ.[4] ಆದರೆ ಅಷ್ಟು ಹಳೆಯ ಮರದ ಕಲಾಕೃತಿಗಳು ನಮ್ಮ ಕಾಲದವರೆಗೆ ಉಳಿದು ಬಂದಿಲ್ಲ ಮರ ಬಹುಕಾಲ ಉಳಿಯಲಾರದು ಬಿಸಿಲು, ಗಾಳಿ ಮಳೆಗೆ ಕೆಡುತ್ತದೆ. ಹುಳು ಹುಪ್ಪಟೆ ಹಿಡಿದು ಹಾಳಾಗುತ್ತದೆ. ಆದರೂ ಪ್ರಾಚೀನ ಸಂಸ್ಕೃತಿಯ ಮಾನವ ಕಲ್ಲಿನಲ್ಲಿ, ಮೂಳೆಯಲ್ಲಿ ಕೆತ್ತಲು ಮೊದಲು ಮಾಡುವ ಪೂರ್ವದಲ್ಲಿ ಮರದಲ್ಲಿ ಕೆತ್ತನೆ ಕೆಲಸ ಆರಂಭವಾದುದು ಸಹಜವೇ. ಮರದ ಕೆತ್ತನೆಗೆ ಬೇಕಾಗುವ ಉಳಿ, ಬಾಚಿ ಮುಂತಾದವುಗಳನ್ನು ಅವನು ಕಲ್ಲಿನಲ್ಲೇ ಮಾಡಿಕೊಂಡ ನಿದರ್ಶನಗಳಿವೆ. ಶಿಲ್ಪಕೃತಿಗಳ ವಿವಿಧ ಅವಯವಗಳನ್ನು ಬೇರೆ ಬೇರೆಯಾಗಿ ಮಾಡಿಕೊಂಡು ಅವನ್ನೆಲ್ಲ ಒಟ್ಟಿಗೆ ಸೇರಿಸಿ

ಶಿಲ್ಪಕೃತಿಯನ್ನು ಸಿದ್ಧಪಡಿಸುವ ಸೌಕರ್ಯ ಮರದಲ್ಲೇ ಹೆಚ್ಚು. ಹೀಗಾಗಿ ಮರದ ಮಾಧ್ಯಮ ಮಹತ್ವವನ್ನು ಪಡೆದುಕೊಂಡು ಬಂದಿದೆ. ತುಳು ನಾಡಿನಲ್ಲಿ ಅತ್ಯಂತ ಪ್ರಾಚೀನ ಗೊಂಬೆಗಳು ಮರದವೇ ಹೆಚ್ಚಾಗಿವೆ. ಕೇರಳದಲ್ಲಿ ದೇವತಾ ಮೂರ್ತಿಗಳು ಮರದವೇ ಆಗಿವೆ[5] ಎಂಬುದನ್ನು ಇಲ್ಲಿ ಗಮನಿಸಬೇಕು. ಹಂಪೆಯಲ್ಲಿ ನಡೆದ ಉತ್ಖನನಗಳಿಂದ ಕಟ್ಟಡಗಳ ನಿರ್ಮಾಣದಲ್ಲಿ ಹೆಚ್ಚಾಗಿ ಮರವನ್ನು ಬಳಸಿರುವುದು[6] ತಿಳಿಯುತ್ತದೆ.

ಉತ್ತರ ಕರ್ನಾಟಕದಲ್ಲಿ ಹೇಳಿಕೊಳ್ಳುವಂತಹ ಯಾವುದೇ ದಟ್ಟವಾದ ಅರಣ್ಯವಿಲ್ಲ ಆದರೂ ದೇವಾಲಯ, ಗೃಹವಾಸ್ತು ಹಾಗೂ ಕೆಲವು ಗ್ರಾಮ ದೇವತಾ ಶಿಲ್ಪಗಳನ್ನು ರಚಿಸಲು ಹೆಚ್ಚಾಗಿ ಮರವನ್ನೇ ಬಳಸಿದ್ದು ಕಾಣುತ್ತೇವೆ. ಸಾಮಾನ್ಯವಾಗಿ ಇಲ್ಲಿ ಸಿಗುವ ಬೇವು, ಗೊಬ್ಬಳಿ, ಬನ್ನಿ, ಬಾಗೆ, ಹುಣಸೆ, ಕಗ್ಗಲಿ, ಬಿಳಿಜಾಲಿ, ಕಂಜಾಲಿ, ಕತ್ತಾಳೆ, ಚಳ್ಳೆ, ಕಳ್ಳಿ, ಈಚಲು, ಚಂಡರಿಕೆ, ಮಾವು, ಹೊಂಗೆ, ಮಳಿಗೆ, ದಿಂಡಿಗ, ನಂದಿ, ಚಿಬ್ಬಲಿ, ಹುರುಗಲ, ಸಾಗುವಾನಿ, ಹಲಸು ಮುಂತಾದ ಮರಗಳಲ್ಲಿ ಗ್ರಾಮದೇವತೆಗಳ ಪ್ರತಿಮೆಗಳು ಮತ್ತು ವಾಹನಗಳು, ರಥಗಳು ಅಲ್ಲದೆ ಗೃಹವಾಸ್ತುಗಳು ರಚನೆಗೊಂಡಿವೆ. ಅದರಲ್ಲೂ ಬೇವಿನ ಮರವು ಈ ಪ್ರದೇಶದ ಜನರಿಗೆ ವರದಾನವೇ ಆಗಿದೆ. ಬೇವಿನ ಮರ ಇಲ್ಲಿ ಸಮೃದ್ಧವಾಗಿ ಬೆಳೆಯುತ್ತದೆ. ಸಾಗುವಾನಿ, ಬೀಟೆ ಮರಗಳು ಕೆತ್ತನೆಗೆ ಹೆಚ್ಚು ಸೂಕ್ತವಾಗಿದ್ದರೂ ಅವೆಲ್ಲ ಇಲ್ಲಿ ಅಪರೂಪ, ಸಾಮಾನ್ಯರ ಕೈಗೆಟುಕದಿರುವಂಥಹವು.

ಹೀಗಾಗಿ ರೈತರು ತಮ್ಮ ಹೊಲಗಳಲ್ಲೇ ಬೇಳೆಯುವ ಬೇವು ಮಾವು ಮುಂತಾದವುಗಳನ್ನೇ ಮನೆ, ದೇವಾಲಯ, ದೇವತಾ ಶಿಲ್ಪಗಳು ಇತ್ಯಾದಿಗಳ ರಚನೆಗೆ ಬಳಸಿದ್ದಾರೆ. ಬೇವಿನ ಮರವನ್ನು ಭಾರತದ ಮೂಲವಾಸಿ[7] ಎಂದು ಕರೆಯಲಾಗಿದೆ. ಎರೆ ಭೂಮಿಯೇ ಹೆಚ್ಚಾಗಿರುವ ಉತ್ತರ ಕರ್ನಾಟಕದಲ್ಲಿ ಎರೆ ಭೂಮಿಯಲ್ಲೇ ಚೆನ್ನಾಗಿ ಬೆಳೆಯುವ ಬೇವು ಸಮೃದ್ಧವಾಗಿದೆ. (ಇದರ ನೆರಳು ಕೂಡ ಎಲ್ಲ ಕಾಲಕ್ಕೂ ಯೋಗ್ಯ ಮತ್ತು ಬೇವು ಔಷಧೀಯ ಗುಣ ಉಳ್ಳದ್ದು) ಈ ಮರವನ್ನು ಸಾಮಾನ್ಯವಾಗಿ ಹುಳು ತಿನ್ನುವುದಿಲ್ಲ. ಹಾಗಾಗಿ ಈ ಮರಕ್ಕೆ ಅತ್ಯಂತ ಮಹತ್ವ ದೊರಕಿದೆ.

ಬೇವಿನ ಮರದಿಂದ ಹಲಗೆ, ಕಂಬ ಬಾಗಿಲು-ದ್ವಾರ, ತೊಲೆ, ಜಂತಿಗಳನ್ನು ಮಾಡಲಾಗಿದೆ. ರಥಶಿಲ್ಪ, ಪಲ್ಲಕ್ಕಿ, ಮಂಟಪ ಮುಂತಾದವುಗಳನ್ನು ಸಹ ನಿರ್ಮಿಸಲಾಗಿದೆ. ಅಲ್ಲದೆ ಬೇವಿನ ಮರವನ್ನು ಆಟಿಕೆಗಳನ್ನು ನಿರ್ಮಿಸಲು, ವ್ಯವಸಾಯೋಪಕರಣಗಳನ್ನು, ಗ್ರಾಮದೇವತೆಗಳನ್ನು ಮಾಡಲೂ ಸಹ ಬಳಸಲಾಗಿದೆ. ತಾಳಿಕೆ- ಬಾಳಿಕೆಯಲ್ಲಿ ಕೂಡ ಬೆಲೆಬಾಳುವ ಮರಗಳಷ್ಟೇ ಉತ್ಕೃಷ್ಟ ಗುಣಗಳನ್ನು ಬೇವಿನ ಮರ ಹೊಂದಿದೆ. ಹೀಗಾಗಿ ಬಯಲು ಸೀಮೆಯ ಜನರಿಗೆ ಬೇವು ಒಂದು ವರದಾನವಾಗಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ ಕ್ವಚಿತ್ತಾಗಿ ಮೈಸೂರು- ಬೆಂಗಳೂರು, ಕಾರವಾರ ಪ್ರದೇಶಗಳಲ್ಲಿ ಸಾಗುವಾನಿ ಮರ- ಶಿವಾನಿ ಮರ ಹಾಗೂ ಹಲಸೆ, ಹೆಬ್ಬಲಸು ಮರಗಳನ್ನು ಶಿಲ್ಪರಚನೆಗೆ ಬಳಸಲಾಗಿದೆ.[10]

ಹೀಗೆ ಅತ್ಯಂತ ಮಹತ್ವ ಪಡೆದ ಮರದ ಮಾಧ್ಯಮದಲ್ಲಿ ನಮ್ಮ ಹಳ್ಳಿಗರು ಜನಪದರು, ಕೃಷಿಕರು ಅಥವಾ ಕುಶಲಿಗಳಿಂದ ನೂರಾರು ಶಿಲ್ಪಗಳು ಅನೇಕ ಕಾರಣಗಳಿಗಾಗಿ ರಚನೆಗೊಂಡಿರುವವು.

ಆಧುನಿಕ – ಸಮಕಾಲೀನ ಕಲಾ ಸಂದರ್ಭದಲ್ಲೂ ಕೂಡ ಈ ಎಲ್ಲ ಪ್ರಕಾರದ ಮರಗಳನ್ನು ನಮ್ಮ ಕಲಾವಿದರು ಶಿಲ್ಪ ಸೃಷ್ಟಿಗೆ ಬಳಸಿರುವರು. ವಿಶೇಷವಾಗಿ ರಾಮಮೂರ್ತಿ, ಓಂ ಪ್ರಕಾಶ, ಎಂ. ಸಿ. ರಮೇಶ, ರಮೇಶ್ಚಂದ್ರ, ಪ್ರದೀಪ್‌ಕುಮಾರ, ಶಿವಾನಂದ ಬಂಟನೂರ, ನಿಂಗಪ್ಪ ಕೇರಿ, ನಟರಾಜ ಶಿಲ್ಪಿ ಮೊದಲಾದ ಸಮಕಾಲೀನ ಶಿಲ್ಪಿಗಳು ತಮ್ಮ ಕಲಾಭಿವ್ಯಕ್ತಿಗೆ ವಿವಿಧ ಮರಗಳನ್ನು ಮಾಧ್ಯಮವಾಗಿ ಬಳಸಿ ಸಂವೇದನಾಶೀಲವಾದ ಸಮಕಾಲೀನ ಶಿಲ್ಪಕಲಾಕೃತಿಗಳನ್ನು ರಚಿಸಿರುವರು. ಶಿಲೆ ಮತ್ತು ಲೋಹಮಾಧ್ಯಮಗಳಿಗಿಂತ ಮರವು ತೂಕದಲ್ಲಿ ಹಗುರವಾಗಿರುವುದರಿಂದ ಕೆಲವು ಶಿಲ್ಪಿಗಳಿಗೆ ಇದು ಬಲು ಇಷ್ಟವಾದ ಮಾಧ್ಯಮವೂ ಆಗಿದೆ. ತೀರ ಚಿಕ್ಕ ಅಳತೆಯಿಂದ ಹಿಡಿದು ಆಳೆತ್ತರದ ಸಮಕಾಲೀನ ಶಿಲ್ಪಗಳನ್ನು ನಮ್ಮ ಕಲಾವಿದರು ರಚಿಸಿರುವರು.

ಶಿಲಾ ಮಾಧ್ಯಮ

ಪ್ರಾಚೀನ ಕಾಲದಿಂದಲೂ ಪ್ರಪಂಚದಲ್ಲಿ ಶಿಲ್ಪಕಲಾ ಸೃಷ್ಟಿಗೆ ಪ್ರಾಧಾನವಾಗಿ ಶಿಲೆ(ಸ್ಟೋನ್) ಬಳಕೆಗೊಂಡಿದೆ. ಹಳೆಯ ಶಿಲಾಯುಗದಲ್ಲೇ ಬಂಡೆಗಳ ಮೇಲೆ ಮೂಡಿಬಂದ ಪ್ರಾಣಿಗಳ ಕೆತ್ತನೆಯ ಶಿಲ್ಪಗಳು ಉಳಿದುಬಂದಿವೆ.[11]

ಈ ಶಿಲ್ಪಾವಶೇಷಗಳು ಶಿಲ್ಪಕಲಾಕೃತಿಗಳ ಕೆತ್ತನೆಗೆ ಶಿಲೆಯು ಮಾಧ್ಯಮವಾಗಿ ಬಳಕೆಯಾದುದರ ಪ್ರಾಚೀನತೆಯ ಬಗೆಗೆ ಸಾಕ್ಷಿಯನ್ನೊದಗಿಸುತ್ತವೆ. ಸೈಂಧವ ಸಂಸ್ಕೃತಿಯ ಶೋಧದಲ್ಲಿ ಸುಣ್ಣದಕಲ್ಲು, ಬಳಪದ ಕಲ್ಲುಗಳಲ್ಲಿ ಮಾಡಿದ ಮೂರ್ತಿ ಶಿಲ್ಪಗಳು, ಆಟಿಕೆ ಶಿಲ್ಪಗಳು ದೊರೆತಿವೆ.[12] ಜಗತ್ತಿನ ಪ್ರಾಚೀನ ಈಜಿಪ್ತ, ಗ್ರೀಕ್ ಮುಂತಾದ ಸಂಸ್ಕೃತಿಗಳು ಶಿಲ್ಪ ರಚನೆಯಲ್ಲಿ ಶಿಲಾ ಮಾಧ್ಯಮಕ್ಕೆ ಹೆಚ್ಚಿನ ಆದ್ಯತೆ ನೀಡಿರುವುದು ಕಂಡು ಬರುತ್ತದೆ. ನಮ್ಮ ದೇಶದಲ್ಲೂ ಸೈಂಧವ ಸಂಸ್ಕೃತಿಯ ಹರವಿನಲ್ಲೇ ಶಿಲಾಶಿಲ್ಪಗಳು ದೊರೆತಿವೆ. ಮಹೆಂಜೋದಾರೋವಿನಲ್ಲಿ ದೊರೆತ ಸಣ್ಣ ಪ್ರಮಾಣದ ಸುಣ್ಣದ ಕಲ್ಲಿನ ಶಿಲ್ಪಗಳು ಇದಕ್ಕೆ ಉದಾಹರಣೆಯಾಗಿವೆ. ಪ್ರಾಚೀನ ಗ್ರಂಥಗಳಲ್ಲಿ ಶಿಲಾಶಿಲ್ಪದ ಉಲ್ಲೇಖ ಸ್ಪಷ್ಟವಾಗಿದ್ದರೂ ಅಶೋಕನ ಕಾಲದಲ್ಲೇ ಶಿಲ್ಪಕೃತಿಗಳು ದೊರೆಯುವುವೆಂಬುದನ್ನು ಗಮನೀಸಬೇಕು. ಇವುಗಳೆಲ್ಲ ಮರಳುಗಲ್ಲಿನಲ್ಲಿವೆ. ಈ ಎಲ್ಲ ಉಲ್ಲೇಖಗಳ ಹಿನ್ನೆಲೆಯಲ್ಲಿ ಭಾರತದಲ್ಲಿನ ಶಿಲಾಶಿಲ್ಪದ ಪ್ರಾಚೀನತೆಯನ್ನು ತಿಳಿಯಬಹುದಾಗಿದೆ. ಭಾರತೀಯ ಶಿಲ್ಪವು ಶಿಲೆಯಲ್ಲಿ ಶ್ರೀಮಂತವಾಗಿ ಅರಳಿನಿಂತದ್ದನ್ನು ಕಾಣುತ್ತೇವೆ. ಶಿಲ್ಪಕ್ಕೆ ಮರ– ಮಣ್ಣು ಮತ್ತಿತರ ಮಾಧ್ಯಮಗಳಿಗಿಂತಲೂ ಹೆಚ್ಚು ಸರಳ ಮತ್ತು ಅನುಕೂಲಕರವೆನಿಸಿದ, ಸ್ವಾರಸ್ಯವೆನಿಸಿದ ಮಾಧ್ಯಮವೆಂದರೇನೇ ಶಿಲೆ. ಮೈಕೆಲ್ ಎಂಜಿಲೋನ ಪ್ರಕಾರ 'ದಿಟವಾದ ಶಿಲ್ಪವೆಂದರೆ ಅದು ಕೆತ್ತನೆಯಿಂದ ರೂಪಿತಗೊಂಡದ್ದು, ಅದೂ ಶಿಲೆಯಲ್ಲಿ ಖಂಡರಿಸಿರುವುದು.[13]

ಈ ಎಲ್ಲ ಅಂಶಗಳು ಶಿಲ್ಪ ಕೆತ್ತನೆಯಲ್ಲಿ ಶಿಲಾ ಮಾಧ್ಯಮಕ್ಕಿರುವ ಮಹತ್ವವನ್ನು ತಿಳಿಸುತ್ತವೆ. ಇಂದಿಗೂ ಕೂಡ ಶಿಲ್ಪಕೆತ್ತನೆಗೆ ಶಿಲೆ ಮುಖ್ಯ ಮಾಧ್ಯಮವಾಗಿ ತನ್ನ ಸ್ಥಾನವನ್ನು ಉಳಿಸಿಕೊಂಡಿದೆ.

ಶಿಲೆಯಲ್ಲಿ ಹಲವಾರು ಬಗೆಗಳಿವೆ. ಆದರೆ ಶಿಲ್ಪಕೆತ್ತನೆಗೆ ಬಳಸುವ ಶಿಲೆಗಳನ್ನು ಸಾಮಾನ್ಯ ಶಿಲೆ, ಮರಳು, ಶಿಲೆ, ಬಳಪ ಶಿಲೆ, ಅಮೃತ ಶಿಲೆ, ಚಪ್ಪಡಿ ಶಿಲೆ (ಗ್ರಾನೈಟ್) ಮತ್ತು ಕಪ್ಪು ಶಿಲೆಗಳೆಂದು ಅವುಗಳನ್ನು ವಿಂಗಡಿಸಬಹುದು. ಈ ವಿವಿಧ ಬಗೆಯ ಶಿಲೆಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಒಂದು; ಮೃದು ಶಿಲೆ, ಇನ್ನೊಂದು; ಕಠಿಣ ಶಿಲೆ. ನಮ್ಮ ಪೂರ್ವಜರು. ಕರ್ನಾಟಕದಲ್ಲಿ ಆಯಾ ಪ್ರದೇಶಗಳಲ್ಲೇ ಸಿಗುವ ಶಿಲೆಗಳನ್ನೇ ಸಾಮಾನ್ಯವಾಗಿ ಶಿಲ್ಪಕಲೆಗೆ ಬಳಸಿಕೊಂಡು ಬಂದಿರುವರು.

ನಮ್ಮ ಗ್ರಾಮೀಣ ಜನಪದರು ಮೂರ್ತಿಶಿಲ್ಪಗಳ ನಿರ್ಮಾಣಕ್ಕೆ ಬಳಸಿದ ಮಣ್ಣು, ಕಟ್ಟಿಗೆ, ಲೋಹಗಳಂತೆ ಶಿಲೆಯೂ ಮಹತ್ವದ ಮಾಧ್ಯಮವಾಗಿದೆ. ಈ ಶಿಲಾ ಮಾಧ್ಯಮದಲ್ಲೇ ಅವರು ತ್ಮಮ ಬದುಕಿನ ಆಯ್ದ ಅಪೂರ್ವ ಘಟನೆಗಳನ್ನು ದಾಖಲಿಸುವಂತಹ ಶಿಲ್ಪಗಳನ್ನು ಕಂಡರಿಸಿರುವರು.

ಆಧುನಿಕ – ಸಮಕಾಲೀನ ಸಂದರ್ಭದಲ್ಲೂ ಈ ಎಲ್ಲ ಬಗೆಯ ಶಿಲಾ ಮಾಧ್ಯಮಗಳನ್ನು ಕಲಾವಿದರು ತಮ್ಮ ಅಭಿವ್ಯಕ್ತಿಗೆ ಬಳಸುತ್ತಿರುವರು.

ಕರ್ನಾಟಕದಲ್ಲಿ ಅಮೃತ ಶಿಲೆಯೊಂದನ್ನು ಬಿಟ್ಟು, ಉಳಿದೆಲ್ಲ ಪ್ರಕಾರದ ಶಿಲೆಗಳೂ ನೈಸರ್ಗಿಕವಾಗಿ ದೊರೆಯುತ್ತವೆ. ಮೈಸೂರು ಭಾಗದಲ್ಲಿ (ಹೆಚ್.ಡಿ. ಕೋಟೆ) ದೊರೆಯುವ ಒಂದು ಬಗೆಯ ಮೃದು ಶಿಲೆ ದೇವತಾ ಶಿಲ್ಪಗಳ ರಚನೆಗೆ ಏಷ್ಟೋ ದಶಕಗಳಿಂದ ಶಿಲ್ಪಿಗಳು ದುಡಿಸಿಕೊಳ್ಳುತ್ತ ಬಂದಿರುವರು. ಈ ಶಿಲೆಯನ್ನೇ ಸ್ವಲ್ಪಮಟ್ಟಿಗೆ ಹೋಲುವ ಬಾಗಲಕೋಟೆ ಹತ್ತಿರದ ಕಗಲಗೊಂಬ ಶಿಲೆಯನ್ನು ಬಹಳ ವರ್ಷಗಳ ಕಾಲದಿಂದ ಶಿಲಾಮೂರ್ತಿಗಳ ನಿರ್ಮಾಣಕ್ಕೆ ಬಳಸುತ್ತ ಬರಲಾಗಿದೆ. ಆಧುನಿಕ ಸಮಕಾಲೀನ ಶಿಲ್ಪಿಗಳೂ ಸಹ ಈ ಶಿಲೆಗಳನ್ನು ತಮ್ಮ ಅಭಿವ್ಯಕ್ತಿಗೆ ದುಡಿಸಿಕೊಳ್ಳುತ್ತಿರುವರು.

ಬಾದಾಮಿ, ಐಹೊಳೆ, ಪಟ್ಟದಕಲ್ಲು ಭಾಗಗಳಲ್ಲಿ ಮರಳು ಶಿಲೆ ಹರಡಿಕೊಂಡಿದೆ. ದೊಡ್ಡ ದೊಡ್ಡ ಬೆಟ್ಟಗಳೇ ಇಲ್ಲಿ ವ್ಯಾಪಿಸಿಕೊಂಡಿವೆ. ಹಲವು ಶತಮಾನಗಳ ಹಿಂದೆಯೇ ಈ ಪ್ರದೇಶವನ್ನಾಳಿದ ಚಾಲುಕ್ಯರು ಇಲ್ಲಿನ ಮರಳು ಶಿಲೆಯನ್ನು ಅದ್ಭುತವಾಗಿ ಬಳಸಿಕೊಂಡು ಅತ್ಯದ್ಭುತವಾದ ಶಿಲ್ಪಕಲಾಕೃತಿಗಳನ್ನು, ದೇವಾಲಯ ಹಾಗೂ ಗುಹಾ ದೇವಾಲಯಗಳನ್ನು ನಿರ್ಮಿಸಿರುವರು. ಬಾದಾಮಿಯ ಗುಹಾ ದೇವಾಲಯಗಳು ಮತ್ತು ಅಲ್ಲಿ ಖಂಡರಿಸಲ್ಪಟ್ಟ ಶಿಲ್ಪಗಳು, ಪಟ್ಟದ ಕಲ್ಲು ಹಾಗೂ ಐಹೊಳೆಗಳಲ್ಲಿನ ದೇವಾಲಯಗಳು ಮರಳು ಶಿಲೆಯಲ್ಲಿ ಅರಳಿದ್ದು ಜಗದ್ವಿಖ್ಯಾತಿಯನ್ನು ಪಡೆದಿವೆ. ಐಹೊಳೆಯನ್ನು ದೇವಾಲಯಗಳ ನಿರ್ಮಾಣದ ಪ್ರಯೋಗ ಕೇಂದ್ರವೆಂದೇ ಕರೆಯುವರು. ಅಂದಿನ ಶಿಲ್ಪಿಗಳು ಈ ಮರಳು ಶಿಲೆಯಲ್ಲಿ ಅತ್ಯಂತ ನವಿರಾದ ಶಿಲ್ಪಗಳನ್ನು ರಚಿಸಿರುವರು.

ಕಲಬುರಗಿ ಭಾಗದಲ್ಲಿನ ಸನ್ನತಿ ಹಾಗೂ ಕನಗನ ಹಳ್ಳಿಗಳ ಉತ್ಖನನದಲ್ಲಿ ದೊರಕಿದ ಬೌದ್ಧಸ್ತೂಪ ಹಾಗೂ ಸ್ತೂಪಶಿಲ್ಪಗಳೂ ಅದ್ಭುತ, ಇಲ್ಲಿ ಸ್ಥಳೀಯವಾಗಿ ಸಿಗುವ ಬಳಪದ ಕಲ್ಲನ್ನೇ ಬಳಸಿ ಅದ್ಭುತವಾದ ಶಿಲ್ಪಗಳನ್ನು ಅಂದಿನ ಶಿಲ್ಪಿಗಳು ರಚಿಸಿರುವುದು ಇಂದಿಗೂ ಆಶ್ಚರ್ಯವನ್ನುಂಟುಮಾಡುತ್ತದೆ.

ಬೆಂಗಳೂರು ಭಾಗದಲ್ಲಿ, ಹಂಪೆ ಮತ್ತು ಇಲಕಲ್‌ಗಳಲ್ಲಿ ಹರಡಿಕೊಂಡಿರುವ ಗ್ರಾನೈಟ್ ಕಲ್ಲು ಅತ್ಯಂತ ಕಠಿಣವಾದುದಾಗಿದೆ. ಆದರೂ ಈ ಮಾಧ್ಯಮವನ್ನು ವಿಜಯನಗರದ ಕಾಲದ ಶಿಲ್ಪಿಗಳು ಬಳಸಿಕೊಂಡಿರುವ ರೀತಿ ಬೆರಗನ್ನುಂಟುಮಾಡುವಂಥದು. ಜಗತ್ಪ್ರಸಿದ್ಧವಾಗಿರುವ ಹಂಪೆಯ ಬೆರಗಿಗೆ ಒಂದರ್ಥದಲ್ಲಿ ಅಲ್ಲಿನ ಗ್ರಾನೈಟ್ ಶಿಲೆಯಲ್ಲಿ ಅರಳಿದ ದೇವಾಲಯಗಳು ಮತ್ತು ಶಿಲ್ಪಗಳೇ ಕಾರಣವಾಗಿವೆ.

ಅತ್ಯಂತ ಕಠಿಣವಾದ ಈ ಶಿಲೆಯನ್ನು ಅಂದಿನ ಶಿಲ್ಪಿಗಳು ಬಳಸಿಕೊಂಡು ಸುಂದರವಾದ ಶಿಲ್ಪಗಳನ್ನು ಕಂಡರಿಸಿ ಜಗತ್ತಿನ ಗಮನ ಸೆಳೆದಿರುವರು. ಆಧುನಿಕ ಸಂದರ್ಭದಲ್ಲೂ ಕೆಲವು ಶಿಲ್ಪಿಗಳು ಅಪರೂಪಕ್ಕೆ ಈ ಶಿಲೆಯನ್ನು ಬಳಸಿ ಶಿಲ್ಪಗಳನ್ನು ರಚಿಸಿರುವುದುಂಟು.

ಇಲಕಲ್ ಭಾಗದಲ್ಲಿ ಕೆಂಪು ಗ್ರಾನೈಟ್ ಶಿಲೆಯ ಹರವು ಹೆಚ್ಚಾಗಿದ್ದು, ವಿದೇಶಕ್ಕೂ ರವಾನೆಯಾಗುತ್ತದೆ. ಈ ಶಿಲೆಯನ್ನು ಅಪರೂಪಕ್ಕೆ ಶಿವಾನಂದ ಬಂಟನೂರ, ನಾಗಪ್ಪ ಪ್ರದಾನಿಯವರಂತಹ ಕಲಾವಿದರು ಕಲಾಕೃತಿಗಳ ಕೆತ್ತನೆಗೆ ದುಡಿಸಿಕೊಂಡಿರುವರು. ಬೇಲೂರು ಹಳೆಬೀಡುಗಳಲ್ಲಿ ಬಳಸಿದ ಕೃಷ್ಣ ಶಿಲೆಯು ಕೆತ್ತನೆಗೆ ಅತ್ಯಂತ ಸೂಕ್ತವಾದುದೆಂಬುದಕ್ಕೆ ಅಲ್ಲಿನ ಶಿಲ್ಪಗಳ ಕೆತ್ತನೆಯ ಸೂಕ್ಷ್ಮತೆ ಹಾಗೂ ಸೌಂದರ್ಯವೇ ಸಾಕ್ಷಿಯಾಗಿದೆ.

ಈ ಎಲ್ಲ ಬಗೆಯ ಶಿಲೆಗಳನ್ನು ನಮ್ಮ ಆಧುನಿಕ ಸಮಕಾಲೀನ ಶಿಲ್ಪ ಕಲಾವಿದರೂ ತಮ್ಮ ಸಂವೇದನಾಶೀಲ ಶಿಲ್ಪಗಳ ಸೃಷ್ಟಿಗಾಗಿ ದುಡಿಸಿಕೊಳ್ಳುತ್ತಿರುವುದನ್ನು ಕಾಣುತ್ತೇವೆ. ಮಣ್ಣು ಮತ್ತು ಮರದ ಮಾಧ್ಯಮದ ಶಿಲ್ಪಗಳಿಗೆ ಹೋಲಿಸಿದರೆ ಕಲ್ಲಿನ ಶಿಲ್ಪಗಳು ಹೆಚ್ಚು ಕಾಲ ಬಾಳುತ್ತವೆಯಾದ್ದರಿಂದ ಶಿಲಾಮಾಧ್ಯಮ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ ಮಾತ್ರವಲ್ಲ ಕೆಲವು ಶಿಲ್ಪಿಗಳಿಗೆ ಶಿಲೆ' ಅತ್ಯುತ್ತಮ ಆಸಕ್ತಿದಾಯಕ ಮಾಧ್ಯಮ ಕೂಡಾ ಆಗಿದೆ.

ವಿ.ಎ. ದೇಶಪಾಂಡೆ, ವಿಜಯರಾವ್, ಪ್ರದೀಪಕುಮಾರ, ಜಾನ್ ದೇವರಾಜ್, ರಾಮಮೂರ್ತಿ, ಭಾಸ್ಕರರಾವ್, ನಾಗಪ್ಪ ಪ್ರದಾನಿ, ಶಿವಾನಂದ ಬಂಟನೂರ, ಜಗನ್ನಾಥ ಜಕ್ಕೇಪಳ್ಳಿ, ವೀರಣ್ಣ ಅರ್ಕಸಾಲಿ, ಕೆ. ರಾಘವೇಂದ್ರ, ಗೋಪಾಲ ಕಮ್ಮಾರ, ನಾರಾಯಣ ಸೂತ್ರದಾರ, ಗುರುರಾಜ ನಾಯಕ, ಎನ್.ಎಸ್. ಪ್ರದೀಪ್‌ಕುಮಾರ, ಎಂ.ಸಿ. ರಮೇಶ್, ಡಿ. ಎಚ್. ಕುಲಕರ್ಣಿ, ವೆಂಕಟಾಚಲಪತಿ, ಗೀತಾಂಜಲಿ ಆಚಾರ್, ಜಿ. ಲಕ್ಷ್ಮೀಪತಿ, ಗೋಪಾಲ್ ಕಮ್ಮಾರ್ ಮೊದಲಾದ ಶಿಲ್ಪಿಗಳು ಕಲ್ಲನ್ನು ದುಡಿಸಿಕೊಂಡು ಶಿಲ್ಪಗಳನ್ನು ರಚಿಸಿರುವರು. ಅತ್ಯಂತ ಸಂವೇದನಾಶೀಲ ಶಿಲ್ಪಕಲಾಕೃತಿಗಳನ್ನು ಈ ಎಲ್ಲ ಕಲಾವಿದರು ರಚಿಸಿರುವರು.

ಲೋಹ ಮಾಧ್ಯಮ

ಲೋಹಗಳ ಶೋಧ ಪ್ರಾಚೀನವಾದುದು ಹಾಗೆಂದರೂ ಅದು ಶಿಲ್ಪಗಳ ಸೃಷ್ಟಿಗೆ ಮಣ್ಣು ಹಾಗೂ ಮರದ ಮಾಧ್ಯಮಗಳ ನಂತರ ಬಳಕೆಗೆ ಬಂದಿದೆ. ಮಾನವನು ಪ್ರಾಚೀನ ಕಾಲದಿಂದಲೂ ಶಿಲ್ಪಗಳ ಸೃಷ್ಟಿಗೆ ಲೋಹಗಳನ್ನು ಬಳಸಿಕೊಂಡು ಬಂದಿರುವುದಕ್ಕೆ ಸಾಕಷ್ಟು ನಿದರ್ಶನಗಳು ದೊರೆಯುತ್ತವೆ. ಭಾರತದಾದ್ಯಂತವೂ ನಡೆಸಲಾದ ಪ್ರಾಚೀನ ನೆಲೆಗಳಲ್ಲಿನ ಶೋಧಗಳಲ್ಲಿ ಲೋಹದ ಖಡ್ಗ, ಭರ್ಚಿ, ಉಳಿ ಮುಂತಾದ ಆಯುಧ, ಉಪಕರಣಗಳು ದೊರಕಿವೆ. ಮಧ್ಯ ಪ್ರದೇಶದ ಗಂಗೇರಿಯ, ದಕ್ಷಿಣದ ಚಿನ್ನವಳ್ಳಿ ಹಾಗೂ ಮಸ್ಕಿಗಳಲ್ಲಿ, ಹಾಗೆಯೇ ಪ್ರಾಚೀನ ಸಂಸ್ಕೃತಿಯ ನೆಲೆಗಳಾದ ಹರಪ್ಪಾ, ಮೆಹೆಂಜೊದಾರೋಗಳಲ್ಲಿ ಬೆಳ್ಳಿ, ಕಂಚು, ಹಿತ್ತಾಳೆ ಹಾಗೂ ಕಬ್ಬಿಣದ ವಸ್ತುಗಳು, ವಿಗ್ರಹಗಳು ಮತ್ತು ಆಟಿಕೆಗಳು ದೊರಕಿವೆ. ಇವು ಲೋಹ ಮಾಧ್ಯಮದ ಶಿಲ್ಪಕಲೆಯ ವಿಕಾಸದ ಹಂತಗಳನ್ನು ತಿಳಿಸುತ್ತವೆ. ಅದರಲ್ಲಿಯೂ ಕಂಚಿನ ನರ್ತಕಿಯ ವಿಗ್ರಹ ಮತ್ತು ಚಕ್ಕಡಿಗಳು[೧೪] ಕಲಾಪೂರ್ಣ ರಚನೆಗಳಾಗಿವೆ.

ಋಗ್ವೇದ ಕಾಲದಲ್ಲಿಯ ಲೋಹಗಳ ಉತ್ಪಾದನೆ ಹಾಗು ಅದರ ಬಳಕೆಯು ಇತ್ತೆಂದು ತಿಳಿಯುತ್ತದೆ. ಕ್ರಿ. ಪೂ. ಸುಮಾರು ೩೦೦ ರಲ್ಲಿದ್ದ ಸುಶ್ರುತನಲ್ಲಿ ಅತ್ಯಂತ ನೈಪುಣ್ಯದಿಂದ ತಯಾರಿಸಲಾದ ೧೨೭ ಶಸ್ತ್ರ ಚಿಕಿತ್ಸಾ ಉಪಕರಣಗಳ ಪ್ರಸ್ತಾಪವಿದೆ. ಹೆರೊಡೊಟಸ್ ಮತ್ತು ಕೆಲ್ಸಿಯಸ್‌ರು ಲೋಹದ ರಥ ಹಾಗೂ ಖಡ್ಗಗಳ ಬಗೆಗೆ ಹೇಳುತ್ತಾರೆ[೧೫] ಮೌರ್ಯರ ಕಾಲದಲ್ಲಿಯೂ ಚಿನ್ನ, ಬೆಳ್ಳಿ ಹಾಗೂ ಕಬ್ಬಿಣಗಳ ಉತ್ಪಾದನೆಯು ರಾಜ್ಯದ ಸ್ವಾಮ್ಯದಲ್ಲಿದ್ದುದು ಮತ್ತು ಲೋಹಗಳನ್ನು ಆಭರಣ, ಪಾತ್ರೆ ಇತ್ಯಾದಿ ಅಲಂಕಾರ ಹಾಗೂ ಗೃಹೋಪಯೋಗಿ ವಸ್ತುಗಳ ತಯಾರಿಕೆಗಾಗಿಯೂ ಆಯುಧ ರಥಾದಿ ಯುದ್ಧೋಪಕರಣಗಳಿಗಾಗಿಯೂ[೧೬] ಬಳಸಿಕೊಳ್ಳುತ್ತಿದ್ದುದು ತಿಳಿಯುತ್ತದೆ.

ಪ್ರಾಚೀನ ಭಾರತದಲ್ಲಿ ಮತ್ತು ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯಾನಂತರದ ಕಾಲದಲ್ಲಿ ಚಿನ್ನ, ಬೆಳ್ಳಿಯಂತಹ ಲೋಹಗಳನ್ನು ದೇವತಾ ವಿಗ್ರಹಗಳಿಗಾಗಿ, ಪೂಜಾ ಪರಿಕರಗಳು ಹಾಗೂ ಗೃಹೋಪಯೋಗಿ ಪಾತ್ರೆ ಪರಿಕರಗಳಿಗಾಗಿ ನಾಣ್ಯಗಳಿಗಾಗಿ, ವಿಶೇಷವಾಗಿ ಆಭರಣಗಳು ಮತ್ತು ಕಬ್ಬಿಣ ಮುಂತಾದ ಇತರ ಲೋಹಗಳಿಂದ ತಯಾರಿಸಲಾದ ನಿತ್ಯ ಬಳಕೆಯ ವಸ್ತುಗಳಿಗಾಗಿ ಮತ್ತು ಅಲಂಕಾರಿಕ ವಸ್ತುಗಳ ರಚನೆಗಾಗಿ ಬಳಕೆ ಮಾಡುತ್ತ ಬಂದಿದೆ. ವಿವಿಧ ಲೋಹಗಳಲ್ಲಿ ಕುಶಲ ಶಿಲ್ಪಿಗಳು ನಡೆಸಿದ ಪ್ರಯೋಗಗಳಿಂದಾಗಿ ಇಂದು ಲೋಹ ಶಿಲ್ಪಕಲೆಯ ಪರಿಧಿಯು ವಿಸ್ತಾರ ಹಾಗೂ ವೈವಿಧ್ಯತೆಯನ್ನು ಪಡೆದಿದೆಯೆನ್ನಬಹುದು. ನಮ್ಮ ಜನಪದರು, ಗ್ರಾಮೀಣ ಕುಶಲಿಗಳು ಅನೇಕ ವರ್ಷಗಳಿಂದ ಇತರ ಮಾಧ್ಯಮಗಳಲ್ಲಿ ಹೇಗೊ ಹಾಗೆ ಲೋಹ ಮಾಧ್ಯಮದಲ್ಲಿಯೂ ಶಿಲ್ಪಗಳನ್ನು ರಚಿಸಿಕೊಂಡು ಬಂದಿರುವರು. ಇಂತಹ ನೂರಾರು ಬಗೆಯ ಶಿಲ್ಪಗಳು ಜನಪದ ಆಚರಣೆ ವಿಧಿಕ್ರಿಯೆಗಳ ಸಂದರ್ಭಗಳಲ್ಲಿ ಆಕರ್ಷಣೆಯ ಕೇಂದ್ರವಾಗಿ ಇದ್ದು ಗಮನ ಸೆಳೆಯುತ್ತವೆ.[೧೭]

ಲೋಹಶಿಲ್ಪ ರಚನಾ ವಿಧಾನ

ಲೋಹಶಿಲ್ಪ ರಚನೆಯಲ್ಲಿ ಮುಖ್ಯವಾಗಿ ಎರಡು ವಿಧಾನಗಳನ್ನು ಅನುಸರಿಸಲಾಗುತ್ತದೆ.

೧. ಲೋಹದ ಎರಕ ಹೊಯ್ಯುವ ಮೂಲಕ ಶಿಲ್ಪ ರಚಿಸುವ ವಿಧಾನ

೨. ಲೋಹದ ಹಾಳೆಯಿಂದ ಶಿಲ್ಪ ರಚಿಸುವ ವಿಧಾನ.

೧. **ಎರಕ ಹೊಯ್ಯುವಿಕೆ** : ಎರಕ ಹೊಯ್ಯುವಿಕೆ ಅತ್ಯಂತ ಪ್ರಾಚೀನ ಕಾಲದಿಂದ ಬಂದುದು. ಕಂಚಿನ ಯುಗದ ಮನುಷ್ಯನಿಗೆ ಈ ತಂತ್ರದ ಅರಿವು ಇತ್ತೆಂದು ಭಾವಿಸಲಾಗಿದೆ.[೪] ಈಗಲೂ ಈ ವಿಧಾನ ಜನಪ್ರೀಯವೇ ಆಗಿದೆ. ಈ ಎರಕ ಹೊಯ್ಯುವಿಕೆಯ ವಿಧಾನದಿಂದ ಎರಡು ಬಗೆಯಲ್ಲಿ ಶಿಲ್ಪಗಳನ್ನು ರಚಿಸಲಾಗುತ್ತದೆ.

ಅ) ಮೇಣದಂತಹ ಸುಲಭವಾಗಿ ಕರಗುವಂತಹ ವಸ್ತುವಿನಿಂದ ಮೂಲ ಶಿಲ್ಪಕೃತಿಯನ್ನು ರಚಿಸಲಾಗುತ್ತದೆ. ನಂತರ ಇದರ ಸುತ್ತ ಜೇಡಿ ಮಣ್ಣು ಮತ್ತಿತರ ವಸ್ತುಗಳಿಂದ ಅಚ್ಚಿನ ಗೂಡು ಕಟ್ಟುತ್ತಾರೆ. ನಂತರ ಅದನ್ನು ಬಿಸಿ ಮಾಡುವುದರ ಮೂಲಕ ಒಳಗಿನ ಮೇಣವನ್ನೆಲ್ಲ ಹೊರ ತೆಗೆಯಲಾಗುತ್ತದೆ. ಆಗ ಮೇಣವಿದ್ದ ಭಾಗವೆಲ್ಲ ಟೊಳ್ಳಾಗಿ ಉಳಿಯುತ್ತದೆ. ನಂತರ ಈ ಟೊಳ್ಳು ಭಾಗಕ್ಕೆ ಕಾಯಿಸಿ ದ್ರವರೂಪಮಾಡಿಕೊಂಡಿರುವ ಲೋಹವನ್ನು ಸುರಿಯಲಾಗುತ್ತದೆ. ಸ್ವಲ್ಪ ಸಮಯದ ನಂತರ ಅಚ್ಚನ್ನು ಒಡೆದು, ಪ್ರತಿಕೃತಿಯನ್ನು ಪಡೆಯಲಾಗುತ್ತದೆ. ಕೆಲವೊಮ್ಮೆ ಜಾಣ್ಮೆಯಿಂದ ಒಂದೇ ಅಚ್ಚಿನಿಂದ ಹಲವು ಪ್ರತಿ ತೆಗೆಯಲೂ ಸಾಧ್ಯವಿದೆ. ಇದು ಒಂದು ವಿಧಾನ.

ಆ) ಎರಕ ಹೊಯ್ಯುವಿಕೆಯ ಇನ್ನೊಂದು ವಿಧಾನದಲ್ಲಿ ಮೊದಲು ಮೇಣದಲ್ಲಿ ಬೇಕಾದ ಆಕೃತಿಯನ್ನು ಟೊಳ್ಳಾಗಿರುವಂತೆ ಮಾಡಿಕೊಂಡಿರುತ್ತಾರೆ. ಆ ಟೊಳ್ಳು ಜಾಗಕ್ಕೆ ಜೇಡಿ ಮಣ್ಣನ್ನು ತುಂಬಿರುತ್ತಾರೆ. ಇಲ್ಲವೆ ಮೊದಲೇ ಕೆಸರಿನಿಂದ ಮಾಡಬೇಕೆಂದಿರುವ ಶಿಲ್ಪದ ಕರಡು ರೂಪವನ್ನು ರಚಿಸಿಕೊಂಡು ಅದರ ಮೇಲೆ ಮತ್ತೆ ಮೇಣದ ಹೊದಿಕೆಯಿಂದ ಶಿಲ್ಪವನ್ನು ಪೂರ್ಣಗೊಳಿಸಿಕೊಂಡು ಆ ಮೇಣದ ಶಿಲ್ಪದ ಹೊರ ಭಾಗಕ್ಕೆ ಮತ್ತೆ ವಿಶೇಷವಾಗಿ ಹದಗೊಳಿಸಿದ ಜೇಡಿ ಮಣ್ಣಿನ ಕೆಸರಿನಿಂದ[೫] ಮೆತ್ತುತ್ತಾರೆ. ಅನಂತರ ಈ ಗೂಡನ್ನು ಉಬೆಯಲ್ಲಿ ಕಾಯಿಸುವರು. ಆಗ ಮೇಣವೆಲ್ಲ ಕರಗಿಹೋಗಿ ಮೇಣದ ಶಿಲ್ಪವಿದ್ದ ಭಾಗ ಟೊಳ್ಳಾಗಿ ಉಳಿಯುತ್ತದೆ. ಆ ಟೊಳ್ಳಾಗಿರುವ ಜಾಗಕ್ಕೆ ಲೋಹದ ದ್ರವವನ್ನು ಎರಕ ಹೊಯ್ಯಲಾಗುತ್ತದೆ. ಶಿಲ್ಪವು ಸೂಕ್ಷ್ಮ ಇಲ್ಲವೆ ಆಕಾರದಲ್ಲಿ ದೊಡ್ಡದಿದ್ದರೆ ಅಲ್ಲಲ್ಲಿ ಕೊಳವೆಗಳನ್ನು ಇಟ್ಟಿರುತ್ತಾರೆ. ಲೋಹ ತಣ್ಣಗಾಗಿ ಗಟ್ಟಿಗೊಂಡ ಮೇಲೆ ಅಚ್ಚನ್ನು ಒಡೆದು ಶಿಲ್ಪವನ್ನು ಪಡೆಯಲಾಗುವುದು. ಈ ವಿಧಾನದಿಂದ ಒಂದಕ್ಕಿಂತ ಹೆಚ್ಚು ಪ್ರತಿಗಳನ್ನು ತೆಗೆಯಲು ಸಾಧ್ಯವಿಲ್ಲ.

ಇನ್ನೊಂದು ವಿಧಾನದಲ್ಲಿ ಹಲವಾರು ಸಣ್ಣ ಸಣ್ಣ ಅಚ್ಚುಗಳನ್ನು ಮಾಡಿ ಅವುಗಳನ್ನು ಜೋಡಿಸಿ ಎರಕ ಹೊಯ್ದು ಶಿಲ್ಪಗಳನ್ನು ರಚಿಸಲಾಗುತ್ತದೆ. ಸಾಮಾನ್ಯವಾಗಿ ದೊಡ್ಡ

ಪ್ರಮಾಣದ ಶಿಲ್ಪ, ಇಲ್ಲವೆ ಶಿಲ್ಪದ ಸೂಕ್ಷ್ಮ ವಿವರಗಳನ್ನು ಮಾಡಲು ಈ ಪದ್ಧತಿಯನ್ನು ಶಿಲ್ಪಿಗಳು ಅನುಸರಿಸುತ್ತಾರೆ. ಜನಪದ ಶಿಲ್ಪಗಳನ್ನು ರಚಿಸುವಲ್ಲಿ ಈ ಪದ್ಧತಿಯೂ ಅಪರೂಪವಾಗಿ ಕಂಡು ಬರುತ್ತದೆ.

೨. ಲೋಹದ ಹಾಳೆಯಿಂದ ಶಿಲ್ಪ ರಚಿಸುವ ವಿಧಾನ : ಲೋಹವನ್ನು ಹಾಳೆಯಂತೆ ತೆಳ್ಳಗೆ ಮಾಡಿಕೊಂಡು ಒತ್ತುವಿಕೆ ಇಲ್ಲವೆ ಬಾಗಿಸುವಿಕೆಯಿಂದ ಉಬ್ಬು ಇಲ್ಲವೆ ದುಂಡು ಶಿಲ್ಪಗಳನ್ನು ರಚಿಸುವರು. ಲೋಹದ ಹಾಳೆಯಿಂದ ಶಿಲ್ಪ ರಚಿಸುವ ವಿಧಾನದಲ್ಲೂ ಎರಡು ಬಗೆಗಳಿವೆ. ಅ) ಲೋಹದ ಹಾಳೆಯ ಒಂದು ಬದಿಯಿಂದ ಒತ್ತುವಿಕೆಯಿಂದ ರೂಪಿಸುವುದು. ಆ) ಲೋಹದ ಹಾಳೆಯಿಂದ ಬಿಡಿ ಬಿಡಿ ಭಾಗಗಳನ್ನು ಮಾಡಿಕೊಂಡು ಜೋಡಿಸಿ ದುಂಡು ಶಿಲ್ಪವನ್ನು ರಚಿಸುವುದು. ಲೋಹದ ಹಾಳೆಯ ಒಂದು ಬದಿಯಿಂದ ಒತ್ತುವಿಕೆಯಿಂದ ರೂಪಿತವಾಗುವುದು ಉಬ್ಬು ಶಿಲ್ಪವಾಗುತ್ತದೆ. ಇದರಲ್ಲಿ ಕಲ್ಪನೆಗೇ ಹೆಚ್ಚಿನ ಒತ್ತು. ಏಕೆಂದರೆ ಹಿಮ್ಮೈ ಕೆಲಸವೇ ಇಲ್ಲಿ ಹೆಚ್ಚಾಗಿ ಇರುವುದರಿಂದ ಶಿಲ್ಪಕಾರನಿಗೆ ತಾನು ಮೂಡಿಸುತ್ತಿರುವ ಶಿಲ್ಪದ ಬಗೆಗೆ ಖಚಿತ ಜ್ಞಾನ ಅಗತ್ಯವಾಗಿ ಇರಬೇಕಾಗುತ್ತದೆ. ಹೀಗಾಗಿ ರಚಿಸಬೇಕಾಗಿರುವ ಶಿಲ್ಪದ ಚಿತ್ರವನ್ನು ಮೊದಲೇ ಕಾಗದದ ಹಾಳೆಯ ಮೇಲೆ ರೂಪಿಸಿಕೊಂಡು ಅನಂತರ ಲೋಹದ ಹಾಳೆಗೆ ವರ್ಗಾಯಿಸುತ್ತಾರೆ. ಹೀಗೆ ಲೋಹದ ಹಾಳೆಯ ಒತ್ತುವಿಕೆಯ ಕ್ರಮ ಎರಡು ರೀತಿಯಲ್ಲಿದೆ.

ಕ್ರಮ, ೧. ಹಾಸಿಗೆ ಇಲ್ಲವೆ ಇನ್ನಾವುದೇ ಮೆತ್ತಗಿನ ವಸ್ತುವಿನ ಮೇಲೆ ಚಿತ್ರಿತ ಲೋಹದ ಹಾಳೆಯನ್ನಿಟ್ಟು ಮರದ ಕೈ ಸಾಧನಗಳಿಂದ ಲೋಹದ ಹಾಳೆಯ ಮೇಲಿರುವ ಚಿತ್ರದ ಮೇಲೆ ಒತ್ತುವಿಕೆಯಿಂದ ಉಬ್ಬು ಶಿಲ್ಪವಾಗಿ ರೂಪಿಸುವುದು ಒಂದು ವಿಧಾನ. ಇದು ಸರಳ ವಿಧಾನವೂ ಹೌದು.

ಕ್ರಮ, ೨. ಚದರಸದ ನೆಲೆಗಟ್ಟಿನ ಸಹಾಯದಿಂದ ಉಬ್ಬು ಶಿಲ್ಪ ರಚಿಸುವುದು. ಇದು ಒಂದು ಬಗೆಯ ಮರದಿಂದ ದೊರೆಯುವ ಅಂಟು ಪದಾರ್ಥ. ಇದು ಅರಗು ಅಥವಾ ರ್‍ಯಾಳದಂತೆ ಇರುತ್ತದೆ. ಇದರ ಜಿಗುಟುತನವು ಮೃದು ಮತ್ತು ಕಠಿಣವಾಗುವುದಕ್ಕೋಸುಗ ಸಸ್ಯಮೂಲದ ಎಣ್ಣೆ ಮತ್ತು ನಯವಾದ ಮಣ್ಣನ್ನು ಬಳಸಿರುತ್ತಾರೆ. ಈ ಮಿಶ್ರಣ ಬೆಂಕಿಯಿಂದ ಕಾಯಿಸಿದಾಗ ಬೆಲ್ಲದ ಪಾಕದಂತೆ ಮೃದುವಾಗುತ್ತದೆ. ಇದನ್ನು ರ್‍ಯಾಳ ಎಂದೂ ಕರೆಯಲಾಗುತ್ತದೆ. ಈ ರ್‍ಯಾಳ ಅಥವಾ ಅರಗಿನ ಮೇಲೆ ಮೊದಲೇ ಚಿತ್ರ ಮಾಡಿಟ್ಟುಕೊಂಡಿರುವ ಲೋಹದ ಹಾಳೆ ಅಥವಾ ಫಲಕವನ್ನಿಟ್ಟು, ಮೊನಚಾದ ಸಾಧನದಿಂದ ಅಥವಾ ಚಾಣದ ಸಹಾಯದಿಂದ ಚಿತ್ರದ ಮೇಲೆ ಕಚ್ಚುಗಳ ಮೂಲಕ ಗುರುತು ಮಾಡಿಕೊಂಡು ನಂತರ ಅರ್ಧ ಚಂದ್ರಾಕೃತಿಯ ಹಾಗೆ ಎರಡೂ ಮೊನೆಗಳು ಗುಂಡಾಗಿರುವ ಸುತ್ತಿಗೆಯಿಂದ ಲೋಹದ ಫಲಕದ ಹಿಂಬದಿಯನ್ನು ದಪ್ಪವಾಗಿ ಉಬ್ಬುವಂತೆ ಬಡಿಯಲಾಗುವುದು. ಇದರಿಂದ ಮೇಲೆ ಸ್ಥೂಲ ಶಿಲ್ಪಾಕೃತಿ ನಿರ್ಮಾಣವಾಗುತ್ತದೆ. ಇದನ್ನು ಆಗಾಗ ಪರಿಶೀಲಿಸುತ್ತ ಬಡಿಯುತ್ತ ಹೋಗುವರು. ಈ ಹಂತದಲ್ಲಿ ಪೂರ್ಣ ಆಕೃತಿಯನ್ನು ಪಡೆಯಲು ಆಗಾಗ್ಗೆ ನೆಲಗಟ್ಟಿನಿಂದ ಬೇರ್ಪಡಿಸುವುದೂ ಮತ್ತು ಅಂಟಿಸುವುದೂ ನಡೆಯುತ್ತದೆ. ಲೋಹದ ಜಿಗುಟನ್ನು ಕಾಯ್ದುಕೊಳ್ಳಲು ಆಗಾಗ ಲೋಹವನ್ನು

ಕಾಯಿಸುತ್ತಿರಬೇಕಾಗುತ್ತದೆ. ನಂತರ ಉಬ್ಬಿದ ಲೋಹದ ತಗಡಿನ ಮೇಲೆ ಸೂಕ್ಷ್ಮ ವಿವರಗಳನ್ನು ಬಿಡಿಸಿ ಕೊನೆಯಲ್ಲಿ ಹೊಳಪನ್ನು ನೀಡಲಾಗುತ್ತದೆ.

ಆ) ಇನ್ನೊಂದು ವಿಧಾನದಲ್ಲಿ ಚದರಸದ ನೆಲೆಗಟ್ಟಿನ ಸಹಾಯದಿಂದ ಶಿಲ್ಪದ ಬಿಡಿ ಭಾಗಗಳನ್ನು ರಚಿಸಿಕೊಂಡು ಅವುಗಳನ್ನು ಒಂದಕ್ಕೊಂದು ಜೋಡಿಸಿ, ಬೆಸೆದು ಶಿಲ್ಪಗಳನ್ನು ರಚಿಸುವರು. ಇವು ಒಳಗೆ ಟೊಳ್ಳಾಗಿರುತ್ತವೆ ಮತ್ತು ಹೆಚ್ಚಾಗಿ ದೊಡ್ಡ ಆಕಾರದ ಶಿಲ್ಪಗಳಾಗಿರುತ್ತವೆ.

ಸಿಮೆಂಟ್ ಮಾಧ್ಯಮ

ಸಿಮೆಂಟ್ ಶಿಲ್ಪರಚನೆಗೆ ಬಲಸಲ್ಪಡುವ ಆಧುನಿಕ ಮಾಧ್ಯಮಗಳಲ್ಲೊಂದು. ಮನೆಗಳನ್ನು, ಬಹು ಅಂತಸ್ತಿನ ಕಟ್ಟಡಗಳನ್ನು, ನೀರಿನ ತೊಟ್ಟಿಗಳನ್ನು ಮೊದಲಾದ ಔಪಯೋಗಿಕ ನಿರ್ಮಾಣಕ್ಕಾಗಿ ಬಳಸುವಂತಹ ಮಾಧ್ಯಮವಿದು. ಮಣ್ಣಿಗೆ ನೀರು ಬೆರೆಸಿ ಹದಗೊಳಿಸಿ ಶಿಲ್ಪಗಳನ್ನು ರಚಿಸುವಂತೆ ಕೃತಕವಾಗಿ ತಯಾರಿಸಲ್ಪಟ್ಟ ಹುಡಿರೂಪದ ಸಿಮೆಂಟಿಗೆ ನೀರು, ಮರಳು ಉಕ್ಕಿನ ಸಳಿಗಳು ಅಲ್ಲದೆ, ಕೆಲವೊಮ್ಮೆ ಮರಳನ್ನು ಸೇರಿಸದೆಯೂ ಹದಗೊಳಿಸಿ ಶಿಲ್ಪ ರಚನೆಗೆ ಬಳಸಲಾಗುವುದು.

ಶಿಲ್ಪ ರಚನೆಯ ವಿಧಾನ

ಸಿಮೆಂಟ್ ಮಾಧ್ಯಮದಲ್ಲಿ ಶಿಲ್ಪಕಲಾಕೃತಿಗಳನ್ನು ರಚಿಸಲು ಕೆಲವು ಸಲ ಇಟ್ಟಿಗೆ, ಇಟ್ಟಿಗೆಯ ಚೂರುಗಳನ್ನು ಒಡೆದು ಹರಳುಗೊಳಿಸಿದ ಕಲ್ಲುಗಳನ್ನು ಹಾಗೂ ಮರಳನ್ನು, ನೀರಿನೊಂದಿಗೆ ಬೆರೆಸಿ ರಚಿಸಲಾಗುವುದು. ಅನೇಕ ಗೋಪುರಗಳನ್ನು, ಅವುಗಳಲ್ಲಿ ಅಳವಡಿಸಲಾದ ಶಿಲ್ಪಗಳನ್ನು ಇಟ್ಟಿಗೆ, ಇಟ್ಟಿಗೆಯ ಚೂರುಗಳನ್ನು ನೀರಿನಲ್ಲಿ ಮಿಶ್ರಮಾಡಿ ಹದಗೊಳಿಸಲಾದ ಸಿಮೆಂಟಿನಿಂದ ಅಂಟಿಸುತ್ತ : ಕರಡು ಆಕೃತಿಗಳನ್ನು ರಚಿಸಿ ಬಳಿಕ ಮೇಲ್ಮೈಗೆ ಸಂಪೂರ್ಣವಾಗಿ ಸಿಮೆಂಟ್ ಲೇಪಿಸಿ ರೂಪಿಸುವರು. ಬಿಡಿಯಾಗಿ ಶಿಲ್ಪಗಳನ್ನು ರಚಿಸಲು ಮೊದಲು ಕಬ್ಬಿಣದ ಸರಳು (ರಾಡ್) ಗಳನ್ನು ಬಳಸಿ ಅವುಗಳನ್ನು ಬೇಕಾದ ಅಳತೆಗೆ ಕತ್ತರಿಸಿ ಸಣ್ಣಗಿರುವ ಕಟ್ಟು ತಂತಿಯಿಂದ ಅಲ್ಲಲ್ಲಿ ಚೆನ್ನಾಗಿ ಕಟ್ಟಿಕೊಂಡು ಒಂದು ಎಲುಬಿನ ಹಂದರದಂತೆ ಯೋಜಿತ ಶಿಲ್ಪದ ಕಚ್ಚಾ ಆಕಾರವನ್ನು ರಚಿಸಿಕೊಳ್ಳಲಾಗುವುದು. ಬಳಿಕ ನೀರು ಬೆರೆಸಿ, ಹದಗೊಳಿಸಿದ ಸಿಮೆಂಟನ್ನು ಬಳಸಿ ಇಟ್ಟಿಗೆ ಅಥವಾ ಕಲ್ಲಿನ ಚೂರುಗಳನ್ನು ಅಚಿಟಿಸುತ್ತ ಶಿಲ್ಪದ ಉಬ್ಬು- ತಗ್ಗುಗಳನ್ನು ರಚಿಸಿಕೊಂಡು ಅದು ಚೆನ್ನಾಗಿ ಬಿಗಿಗೊಂಡ ಮೇಲೆ (೪-೬ ಘಂಟೆಗಳ ಬಳಿಕ) ಇಮೆಂಟ್ ಮೆತ್ತುವ ಮೂಲಕ ಉಬ್ಬುಶಿಲ್ಪ ಅಥವಾ ದುಂಡು ಶಿಲ್ಪವನ್ನು ಪೂರ್ಣಗೊಳಿಸಲಾಗುವುದು.

ಶಿಲ್ಪಕಲಾಕೃತಿಗಳು ಸಾಂಪ್ರದಾಯಿಕವೇ ಇರಲಿ, ನೈಜಶೈಲಿಯದೇ ಆಗಿರಲಿ ಅಥವಾ ಸಮಕಾಲೀನ ಶೈಲಿಯದೇ ಆಗಿರಲಿ ಹೆಚ್ಚೂ ಕಡಿಮೆ ಈ ಮೇಲಿನ ತಂತ್ರಗಳನ್ನೇ ಅನುಸರಿಸಲಾಗುವುದು. ಶಿಲ್ಪರಚನೆ ಪೂರ್ಣಗೊಂಡ ಬಳಿಕವೂ ೨೧ ದಿನಗಳ ಕಾಲ ಅದಕ್ಕೆ ಕನಿಷ್ಟ ದಿನಕ್ಕೆರಡು ಬಾರಿ ನೀರು ಹುಯ್ಯಲಾಗುವುದು. ಹೀಗೆ ಮಾಡುವುದರಿಂದ ಶಿಲ್ಪಗಳು ದೀರ್ಘಕಾಲ ಉಳಿಯಬಲ್ಲವು.

ಕರ್ನಾಟಕದಲ್ಲಿ ಸಿಮೆಂಟ್ ಮಾಧ್ಯಮದಲ್ಲಿ ಹಲವಾರು ಸಮಕಾಲೀನ ಶಿಲ್ಪಕಲಾವಿದರು ಕಲಾಕೃತಿಗಳನ್ನು ರಚಿಸಿ ಗಮನ ಸೆಳೆದಿರುವವರು. ನಾರಾಯಣ ಸೂತ್ರದಾರ, ವೆಂಕಟಾಚಲಪತಿ, ವೆಂಕಟೇಶ, ಬಿ.ಸಿ. ಶಿವಕುಮಾರ, ಜಗನ್ನಾಥ ಜಕ್ಕೇಪಳ್ಳಿ, ಕೆ. ನಾರಾಯಣರಾವ್, ನಿತ್ಯಾನಂದ, ನಾಗಪ್ಪ ಪ್ರದಾನಿ, ಬಾಬುರಾವ್ ಎಚ್, ವಿಶಾಲ್, ಕೆ.ಎಸ್. ಕೃಷ್ಣಮೂರ್ತಿ, ಪುಷ್ಪರಾಜ್, ಕಿರಣ್ ಕೆ.ಬಿ, ರುಕ್ಕಪ್ಪ ಕುಂಬಾರ, ಸಿದ್ದೇಶ, ಜೀವನ ಟಿ.ಡಿ., ವಿನಾಯಕ ಕೆ.ಎಂ., ರಹಮತ್ ಉಲ್ಲಾ ಎನ್, ಪ್ರಶಾಂತ್ ಎನ್, ವಿಜಿಲ್ ಎಸ್, ವೀರಣ್ಣ ಅರ್ಕಸಾಲಿ, ಶಿವಾನಂದ ಬಂಟನೂರ, ಈರಣ್ಣ ಕಂಬಾರ, ಬಿ.ಜಿ. ಗೌರಿಶಂಕರ, ಬಸವರಾಜ ಹಿರೇಗೌಡ, ದಾನಯ್ಯ ಚೌಕಿಮಠ, ಶಿವರಾಯ ವಡ್ಡರ, ಶ್ರೇಯಸ್, ಅಶೋಕ್ ವೆಂಕಪ್ಪ ಕೋಳಿ, ಹಣಮಂತ ಬೆಳವಣಿಗಿ, ಎಚ್.ಆರ್. ಶಿವಕುಮಾರ, ಗುರುಶಾಂತಪ್ಪ, ಚಿಮ್ಮನ್, ಮಹ್ಮದ್, ನಾರಾಯಣ ಬಡಿಗೇರ, ಕೆ.ವಿಜಯ, ರಾಜು ಬೀದರ್, ಡಿ. ಹುಸೇನ್, ಕೆ.ಜಿ. ಮಲ್ಲಿಕಾರ್ಜುನ ಮೊದಲಾದ ಶಿಲ್ಪಿಗಳು ಆಧುನಿಕ ಸಮಕಾಲೀನ ಶಿಲ್ಪಗಳನ್ನು ಗಮನಾರ್ಹ ರೀತಿಯಲ್ಲಿ ರಚನೆ ಮಾಡಿರುವವರು.

ಶಿಲೆ, ಲೋಹ ಮತ್ತು ಕೆಲವು ಬಗೆಯ ಮರಗಳಲ್ಲಿ ರಚಿಸಲಾಗುವ ಶಿಲ್ಪಗಳಿಗಿಂತ ಸಿಮೆಂಟ್ ಶಿಲ್ಪಗಳ ಆಯಸ್ಸು ಬಹಳ ಕಡಿಮೆ. ಹೆಚ್ಚೆಂದರೆ, ೫೦-೭೫ ವರ್ಷಗಳ ಕಾಲ ಸಿಮೆಂಟ್ ಮಾಧ್ಯಮದ ಶಿಲ್ಪಗಳು ಬಾಳಿಕೆ ಬರುತ್ತವೆ. ನಂತರ ಸಿಮೆಂಟ್ ತನ್ನ ಜಿಗಟುತನ ಕಳೆದುಕೊಳ್ಳುತ್ತ ಬರತ್ತದೆ. ಆದರೂ ಕೂಡ ಸಿಮೆಂಟ್ ಸುಲಭವಾದ ಮತ್ತು ಶಿಲ್ಪರಚನೆಗೆ ಅನುಕೂಲಕರವಾಗಿರುವ ಮಾಧ್ಯಮವಾಗಿರುವುದರಿಂದ ಅದು ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿದೆ. ತೀರ ಈಚೆಗೆ ಕರ್ನಾಟಕದಲ್ಲಿ ಬಹಳಷ್ಟು ಕಲಾವಿದರು ಈ ಮಾಧ್ಯಮವನ್ನು ಬಳಿಸಿ ಶಿಲ್ಪಗಳನ್ನು ರಚಿಸಿರುವವರು. ದೊಡ್ಡ ದೊಡ್ಡ ಉಧ್ಯಾನಗಳು, ಶಿಲ್ಪವನಗಳು, ಮಕ್ಕಳ ವನಗಳು[೧೮] ಮೊದಲಾದೆಡೆಗಳಲ್ಲಿ ಸಿಮೆಂಟ್ ಶಿಲ್ಪಗಳನ್ನು ರಚಿಸಿರುವುದನ್ನು ಕಾಣುತ್ತೇವೆ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯೂ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಹಲವಾರು ಶಿಲ್ಪಕಲಾ ಶಿಬಿರಗಳನ್ನು ಸಿಮೆಂಟ್ ಮಾಧ್ಯಮವನ್ನೇ ಮುಖ್ಯವಾಗಿ ಇರಿಸಿಕೊಂಡು ಯಶಸ್ವಿಗೊಳಿಸಿದೆ. ವಿಶೇಷವಾಗಿ ವೆಂಕಟಾಚಲಪತಿಯವರು ಅಧ್ಯಕ್ಷರಾಗಿದ್ದಾಗ ಕೆಲವು ಶಿಬಿರಗಳನ್ನು ಸಿಮೆಂಟ್ ಮಾಧ್ಯಮದಲ್ಲಿ ಸಮಕಾಲೀನ ಶೈಲಿಯಲ್ಲಿ ಮಾಡಲಾಗಿದೆ. ಶ್ರೀ ಮಹಾದೇವಪ್ಪ ಶಂಭುಲಿಂಗಪ್ಪ ಶಿಲ್ಪಿಯವರು ಅಧ್ಯಕ್ಷರಾಗಿರುವ ಮತ್ತು ಶ್ರೀಮತಿ ಇಂದ್ರಮ್ಮ ಅವರು ರಿಜಿಸ್ಟಾರ್ ಆಗಿರುವ ಅವಧಿಯಲ್ಲಿ ದಾಖಲೆಯ ಸಂಖ್ಯೆಯಲ್ಲಿ ಸಿಮೆಂಟ್ ಶಿಲ್ಪಗಳು ಜರುಗಿವೆ. ಇವುಗಳಲ್ಲಿ ಬಹುಪಾಲು ಸಮಕಾಲೀನ ಶೈಲಿಯ ಶಿಬಿರಗಳು ನಡೆದಿರುವುದು ಗಮನಾರ್ಹ.

ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮ

ಪ್ಲಾಸ್ಟರ್ ಆಫ್ ಪ್ಯಾರಿಸ್; ಇದನ್ನು ಸಂಕ್ಷಿಪ್ತವಾಗಿ ಪಿ.ಒ.ಪಿ. ಎಂದೂ ಕರೆಯಲಾಗುತ್ತದೆ. ಇದು ಸಿಮೆಂಟಿನ ಇನ್ನೊಂದು ರೂಪವೆನ್ನಬಹುದು. ಸಿಮೆಂಟ್ ಪಾಟಿ ಅಥವಾ ಇಪ್ಪೆವಿಲೆ ಬಣ್ಣದ್ದಾಗಿದ್ದರೆ, ಪಿ.ಒ.ಪಿ. ಬಿಳಿಯ ಬಣ್ಣದ್ದಾಗಿರುತ್ತದೆ. ಆದರೆ

ಸಿಮೆಂಟ್‌ನಂತೆಯೇ ಹುಡಿರೂಪದಲ್ಲಿ ದೊರೆಯುತ್ತದೆ. ನೀರು ಬೆರೆಸಿ ಹದಗೊಳಿಸಿಕೊಂಡು ಶಿಲ್ಪಗಳನ್ನು ರಚಿಸಲಾಗುತ್ತದೆ. ಈ ಮಾಧ್ಯಮ ಯುರೋಪ್ ಮತ್ತು ಬ್ರಿಟೀಶ್ ಮೂಲದಿಂದ ಭಾರತಕ್ಕೆ ಬಂದಿರುವುದಾಗಿದೆ.

ಶಿಲ್ಪ ರಚನೆಯ ವಿಧಾನ

ಸಣ್ಣ ಅಳತೆಯ ಶಿಲ್ಪಗಳಾಗಿದ್ದರೆ ಯಾವುದೇ ಪರಿಕರಗಳನ್ನು ಬಳಸದೆ ಪಿ.ಓ.ಪಿ. ಯಿಂದಲೇ ಶಿಲ್ಪಗಳನ್ನು ರಚಿಸಲಾಗುವುದು. ಆಳೆತ್ತರದ ಅದಕ್ಕೂ ದೊಡ್ಡದಾದ ಶಿಲ್ಪಗಳನ್ನು ರಚಿಸಬೇಕಾದಲ್ಲಿ ಲೋಹದ ಕಂಬಿ ರಾಡುಗಳನ್ನು ಬಳಸಿ ಶಿಲ್ಪಗಳನ್ನು ರಚಿಸುವರು. ಸಮಕಾಲೀನ ಶಿಲ್ಪಕಲಾವಿದರು ಕ್ವಚಿತ್ತಾಗಿ ಈ ಮಾಧ್ಯಮವನ್ನು ಬಳಸುವರು. ಆದರೆ ಲೋಹ ಅಥವಾ ಫೈಬರ್ ಗಾಜಿನ ಮಾಧ್ಯಮಗಳಲ್ಲಿ ಶಿಲ್ಪಗಳನ್ನು ರಚಿಸಬೇಕೆಂದಾದಲ್ಲಿ ಪಿ.ಒ.ಪಿ ಯನ್ನು ಮೌಲ್ಡ್ ತೆಗೆಯಲು (ಅಚ್ಚು) ಹೆಚ್ಚಾಗಿ ಬಳಸುವರು. ಇದನ್ನು ನೀರಲ್ಲಿ ಬೆರೆಸಿದ ಕೆಲವೇ ಹೊತ್ತಿನಲ್ಲಿ ಘಟ್ಟಿಗೊಂಡು ಕಲ್ಲಿನಂತಾಗುವುದು. ಹಾಗಾಗಿ ಪ್ಲಾಸ್ಟರನ್ನು ಕೆಸರಿನಂತೆ ಮಾಡಿಕೊಂಡು ಮೆತ್ತುವ ಮೂಲಕವೂ, ಕಲ್ಲಿನಂತೆ ಮಾಡಿಕೊಂಡು ಕೆತ್ತುವುದರ ಮೂಲಕವೂ ಶಿಲ್ಪಗಳನ್ನು ರಚಿಸುವುದು ವಾಡಿಕೆ.

ಶಿಲ್ಪಿ ವೆಂಕಟಾಚಲಪತಿ, ಓಂ ಪ್ರಕಾಶ್, ಎನ್. ಪುಷ್ಪಮಾಲಾ, ವಿ.ಎ. ದೇಶಪಾಂಡೆ, ರಘುರಾಮ, ಕೃಷ್ಣದೇವಾಡಿಗ, ಶಿವಕುಮಾರ ಬಿ.ಸಿ., ಜಗನ್ನಾಥ ಜಕ್ಕೇಪಳ್ಳಿ, ನಾಗಪ್ಪ ಪ್ರಧಾನಿ, ಮೊದಲಾದ ಸಮಕಾಲೀನ ಕಲಾವಿದರು ಈ ಪಿ.ಓ.ಪಿ ಮಾಧ್ಯಮದಲ್ಲಿ ಶಿಲ್ಪಕಲಾಕೃತಿಗಳನ್ನು ರಚಿಸಿರುವುದಿದೆ.

ಸಂಕೀರ್ಣ ಮಾಧ್ಯಮ

ಮಣ್ಣು, ಕಟ್ಟಿಗೆ, ಕಲ್ಲು, ಲೋಹ, ಸಿಮೆಂಟ್, ಪ್ಲಾಸ್ಟರ್ ಆಫ್ ಪ್ಯಾರಿಸ್ ಮೊದಲಾದ ಘಟ್ಟಿಯಾಗಿರುವ ಮಾಧ್ಯಮಗಳನ್ನು ಬಳಸಿಕೊಂಡು ಸೃಷ್ಟಿಸುವ ಶಿಲ್ಪಗಳನ್ನು ಹೊರತುಪಡಿಸಿ ಸಗಣಿ, ಹಿಟ್ಟು, ನಾರು, ಚಿಂದಿ ಬಟ್ಟೆ, ಸಕ್ಕರೆ, ಬೆಲ್ಲ, ಕಾಗದ, ಮಡಕೆ, ಬೆತ್ತ, ದಂಟು, ಬಿದಿರು, ಮುಂತಾದ ತೀರಾ ಘಟ್ಟಿಯಲ್ಲದ, ಅಖಂಡವಲ್ಲದ ಪರಿಕರ ಅಥವಾ ಪದಾರ್ಥಗಳನ್ನು ಮಾಧ್ಯಮಗಳನ್ನಾಗಿ ಬಳಸಿಕೊಂಡೂ ನಮ್ಮ ಅನೇಕ ಕಲಾವಿದರು ಶಿಲ್ಪಗಳನ್ನು ರಚಿಸಿರುವರು[೧೯]. ನಮ್ಮ ಗ್ರಾಮೀಣ ಜನಪದರು ಜನಪದ ಕಲಾವಿದರೂ ಕೂಡ ಇಂತಹ ಮಾಧ್ಯಮಗಳಲ್ಲಿ ಜನಪದ ಶಿಲ್ಪಗಳನ್ನು ರಚಿಸಿ ಗಮನ ಸೆಳೆದಿರುವರು. ಅಂತೆಯೇ ಸಮಕಾಲೀನ ಶಿಲ್ಪಕಲಾವಿದರೂ ಸಂಕೀರ್ಣ ಮಾಧ್ಯಮಗಳನ್ನು ಪ್ರಯೋಗಾತ್ಮಕವಾಗಿ ಬಳಸಿ ಅದ್ಭುತವಾದ ಅಭಿವ್ಯಕ್ತಿಗಳನ್ನು ನೀಡಿರುವರು.

ಶಿಲ್ಪ ರಚನೆಯ ವಿಧಾನ

ಸಂಕೀರ್ಣ ಮಾಧ್ಯಮದ ಶಿಲ್ಪಕಲಾ ಕೃತಿಗಳು ಬಹಳ ವೈವಿಧ್ಯಮಯವಾಗಿದ್ದು ಗಮನ ಸೆಳೆಯುತ್ತವೆ. ಈ ವೈವಿಧ್ಯಮಯ ಶಿಲ್ಪಗಳ ರಚನೆಗೆ ಬಳಸುವ ಮಾಧ್ಯಮ ಅಥವಾ ಪರಿಕರಗಳು, ರಚನಾಕ್ರಮ ಎಲ್ಲವೂ ವೈವಿಧ್ಯಮಯವಾಗಿರುತ್ತವೆ. ಮಣ್ಣು, ಕಟ್ಟಿಗೆ, ಕಲ್ಲು,

ಲೋಹ ಮಾಧ್ಯಮದ ಶಿಲ್ಪಗಳಂತೆ ಇಲ್ಲಿ ಕೇವಲ ಕೆತ್ತುವುದೋ, ಮೆತ್ತುವುದೋ ಇಲ್ಲವೆ ಎರಕ ಹೊಯ್ಯುವುದು ಮಾತ್ರವೇ ಇರುವುದಿಲ್ಲ, ಸಂಕೀರ್ಣ ಮಾಧ್ಯಮದಲ್ಲಿ ಕೆತ್ತುವುದು, ಮೆತ್ತುವುದು, ಒತ್ತಿ ರೂಪಿಸುವುದು, ಹೆಣೆಯುವುದು, ಜೋಡಿಸುವುದು ಮೊದಲಾದ ಹಲವಾರು ವಿಧದ ರಚನಾ ಕ್ರಮಗಳು ಇರುತ್ತವೆ. ಅಲ್ಲದೆ ಸಂಕೀರ್ಣ ಮಾಧ್ಯಮದಲ್ಲಿ ಅತ್ಯಂತ ಚಿಕ್ಕ ಪ್ರಮಾಣದ ಶಿಲ್ಪಗಳಿಂದ ಹಿಡಿದು ಅತ್ಯಂತ ದೊಡ್ಡ ಆಕಾರದ ಶಿಲ್ಪಗಳೂ ರಚನೆ ಗೊಳ್ಳುವುದುಂಟು. ಈ ಶಿಲ್ಪಗಳನ್ನು ಕೆಲವೊಮ್ಮೆ ಅಶಾಶ್ವತ ಮಾಧ್ಯಮದ ಶಿಲ್ಪಗಳೆಂದು ಕರೆಯಬಹುದು.

ಎಂ.ಎಸ್. ಉಮೇಶ್, ರಮೇಶ್ಚಂದ್ರ, ಶಿಲಾಗೌಡ, ಪುಷ್ಪಮಾಲಾ, ಯುಸೂಫ್ ಅರಕ್ಕಲ್, ಡಾ. ಶಿವಾನಂದ ಎಚ್. ಬಂಟನೂರ, ಎಲ್ ಶಿವಲಿಂಗಪ್ಪ, ರಾಜೇಶ್ ದೇವಣಗಾಂವ್, ಬಿ. ಎಂ. ರವಿಕುಮಾರ, ಜಿ. ಆರ್ ಈರಣ್ಣ, ಮಂಜುನಾಥ ಎ. ಆರ್, ಎಂ. ರಘುರಾಮ, ಕೆ. ರಾಘವೇಂದ್ರ, ಬಿ. ಎನ್, ವಿಚಾರ ಮೊದಲಾದ ಕಲಾವಿದರು ಈ ಮಾಧ್ಯಮದಲ್ಲೂ ಸುಂದರವಾದ ಸಮಕಾಲೀನ ಶಿಲ್ಪಗಳನ್ನು ರಚಿಸಿ ಗಮನ ಸೆಳೆದಿರುವರು.

ಫೈಬರ್ ಗ್ಲಾಸ್ ಮಾಧ್ಯಮ

ಆಧುನಿಕ ಸಮಕಾಲೀನ ಶಿಲ್ಪಗಳ ರಚನೆಯ ಮಾಧ್ಯಮಗಳಲ್ಲಿ ಅತ್ಯಂತ ವಿನೂತನವಾದ ಮತ್ತು ಅನೇಕ ಕಾರಣಗಳಿಂದ ಅನುಕೂಲಕರವಾದ ಮಾಧ್ಯಮವೆಂದರೆ ಫೈಬರ್ ಗ್ಲಾಸ್ ಮಾಧ್ಯಮವಾಗಿದೆ. ಈ ಮಾಧ್ಯಮದಲ್ಲಿ ಮಾಡಬೇಕಾದ ಶಿಲ್ಪವನ್ನು ಮೊದಲು ಮಣ್ಣಿನಲ್ಲಿ (ಕ್ಲೇ) ಮಾಡಿಕೊಳ್ಳಬೇಕು. ಮಣ್ಣಿನಲ್ಲಿ ಮಾಡಲಾದ ಈ ಶಿಲ್ಪಕೃತಿಯನ್ನು ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ ಅಥವಾ ಎಫ್.ಆರ್.ಪಿ.ಯಲ್ಲಿ ಪೀಸ್ ಮೌಲ್ಡ್ ಮಾಡಿಕೊಳ್ಳಬೇಕು. ಆ ಮೌಲ್ಡಿನ ಒಳಗಡೆ ಬಿರುಕುಗಳಿದ್ದರೆ ಸ್ಯಾಂಡ್ ಪೇಪರನಿಂದ ಉಜ್ಜಿ ವ್ಯಾಕ್ಸ್ ಪೋಲ್ ಲೇಪಿಸಿ ಆ ಬಳಿಕ ಪಿ.ವಿ.ಎ ಯನ್ನು ತೆಳುವಾಗಿ ಸವರಿ ಅದರ ಮೇಲೆ ಮಾನ್ಸೂನ್ ವ್ಯಾಕ್ಸನ್ನು ಸೀಮೆ ಎಣ್ಣೆಯಲ್ಲಿ ತೆಳ್ಳಗೆ ಮಾಡಿಕೊಂಡು ಲೇಪನ ಮಾಡಬೇಕು. ನಂತರ ಅದರ ಮೇಲೆ ಫೈಬರ್‌ನಿಂದ ವೇಷ್ಟ ಮೌಲ್ಡ್ ಕಾಷ್ಟಿಂಗ್ ಮಾಡಿಕೊಳ್ಳಬೇಕಾಗುತ್ತದೆ. ಅಂದರೆ ಮೌಲ್ಡ್ ವೇಸ್ಟ್ ಆಗಿ ಕಾಷ್ಟಿಂಗ್ ಉಳಿಯುತ್ತದೆ.

ಫೈಬರ್ ಗ್ಲಾಸ್ ಮಾಧ್ಯಮದ ರಚನೆಗ ಬೇಕಾಗುವ ಸಾಮಾಗ್ರಿಗಳೆಂದರೆ ರೆಜಿನ್, ಜಿ. ಪಿ. ರೆಜಿನ್ (ಅನೇಕ ಬಗೆಯ ರೆಜಿನ್‌ಗಳಿವೆ) ಸೂಕ್ತವಾದುದನ್ನು ಉಪಯೋಗಿಸಬೇಕು. ರೆಜಿನ್‌ಗೆ ಎಕ್ಸಿಲೇಟರ್‌ನ್ನು ಒಣಗುವ ಸಲುವಾಗಿ ಮತ್ತು ಕ್ಯಾಟಲಿಟ್ಸ್‌ನ್ನು ರಜಿನ್ ಗಟ್ಟಿಯಾಗಲು ಬಳಸಬೇಕು. ಈ ಎರಡೂ ರಾಸಾಯನಿಕಗಳನ್ನು ತಂಪು ವಾತಾವರಣ ಇರುವಾಗ ಹೆಚ್ಚು ಬಳಸಬೇಕಾಗುತ್ತದೆ. ಮೊದಲು ಎಕ್ಸಿಲೇಟರ್‌ನ್ನು ಚೆನ್ನಾಗಿ ಕಲಸಿ ನಂತರ ಕ್ಯಾಟಲಿಸ್ಟ್ ಸೇರಿಸಬೇಕು. ನಂತರ ಡಾಯಕೋ ಥಿನ್ನರ್ ಲೇಪಿಸಬೇಕು. ಮತ್ತು ಕ್ಲಿನ್ ಮಾಡಲು ಬ್ರಾಸ್‌ಗಳನ್ನು ಬಳಸಬೇಕು. ಶಿಲ್ಪಕಲಾಕೃತಿಗೆ ಗಟ್ಟಿತನ ಬರಲು ಚಾಪಡ್ ಮ್ಯಾಟ್ ಬೇಕು. ಮೂಲ ರೆಜಿನ್ ಜೊತೆಗೆ ಚಾಪಡ್ ಮ್ಯಾಟ್ ಸೇರಿಯೇ ಫೈಬರ್ ಗ್ಲಾಸ್ ಆಗುತ್ತದೆ. ಹೀಗೆ ಯಾವುದೇ ತರಹದ ಶಿಲ್ಪ ಕಲಾಕೃತಿಗಳನ್ನು ರಚಿಸಲು ಫೈಬರ್ ಗ್ಲಾಸ್ ಮಾಧ್ಯಮ ಅನುಕೂಲಕರವಾಗಿದೆ ಮತ್ತು ಮಣ್ಣು, ಮರ, ಶಿಲಾ ಮಾಧ್ಯಮಗಳಿಗಿಂತ ಈ ಮಾಧ್ಯಮವು

ಅನುಕೂಲಕರ ಮತ್ತು ತೂಕದಲ್ಲಿ ಹಗುರವಾದ ಮಾಧ್ಯಮವಾಗಿದೆ. ಅಂತೆಯೇ ಈ ಮಾಧ್ಯಮವನ್ನು ಬಳಸಿ ಅನೇಕ ಕಲಾವಿದರು ಸಮಕಾಲೀನ ಶಿಲ್ಪಕಲಾಕೃತಿಗಳನ್ನು ರಚಿಸಿ ತಮ್ಮ ಸಂವೇದನಾನುಭವಗಳನ್ನು ತುಂಬಿರುವರು.

ಸಮಕಾಲೀನ ಶಿಲ್ಪಕಲೆ: ಕೆತ್ತನೆಯ ರಚನೆ

ಕಲಾಕೃತಿಗಳ ರಚನೆಯಲ್ಲಿ ಕಲಾವಿದರು ಅಥವಾ ಶಿಲ್ಪಿಗಳು ಅನುಸರಿಸುವ ಹಲವು ವಿಧಾನಗಳಲ್ಲಿ ಕತ್ತನೆಯು ಒಂದು ವಿಧಾನ. ಈ ಕತ್ತನೆ ಪದ್ಧತಿ ಬಹು ಪ್ರಾಚೀನ ಕಾಲದಿಂದ ಮೊದಲ್ಗೊಂಡು ಇಂದಿನವರೆಗೂ ರೂಢಿಯಲ್ಲಿರುವ ವಿಧಾನವಾಗಿದೆ. ಕೇವಲ ಕೆತ್ತಿ ಮಾಡಿರುವುದು ಮಾತ್ರವೇ(ಶಿಲ್ಪ) ಕಲಾಕೃತಿ ಎಂದು ಹಲವು ಪ್ರಾಚೀನ ಶಿಲ್ಪ ಶಾಸ್ತ್ರ ಗ್ರಂಥಗಳಲ್ಲಿ ಉಲ್ಲೇಖಗಳಿವೆ.

ಸಾಮಾನ್ಯವಾಗಿ ಕೆತ್ತನೆಯ ವಿಧಾನದಿಂದ ಮಾತ್ರವಲ್ಲದೆ ಮೆತ್ತುವುದು, ಒತ್ತುವುದು ಎರಕಹೊಯ್ಯುವುದು ಜೋಡಿಸುವುದು ಕಟ್ಟುವುದು ಹೀಗೆ ಹಲವಾರು ವಿಧಾನಗಳಿಂದ ಶಿಲ್ಪ ಕಲಾಕೃತಿಗಳನ್ನು ಅಥವಾ ಕರಕುಶಲ ಕಲಾವಸ್ತುಗನ್ನು ರಚಿಸಲಾಗಿತ್ತದೆ ಮತ್ತು ಈ ಬಗೆಯ ರಚನೆಗಳಿಗಾಗಿ ಹಲವಾರು ಬಗೆಯ ವಸ್ತುಗಳನ್ನು ಬಳಸಲಾಗುತ್ತದೆ.

ಸಾಮಾನ್ಯವಾಗಿ ಕೆತ್ತನೆಯ ವಿಧಾನದಿಂದ ಶಿಲ್ಪ ಕಲಾಕೃತಿಗಳನ್ನು ಅಥವಾ ಕರಕುಶಲ ವಸ್ತುಗಳನ್ನು ರಚಿಸಲು ಕಲ್ಲು, ಮರ, ದಂತ, ಪ್ಲಾಸ್ಟರ್, ರಬ್ಬರ್ ಮುಂತಾದವುಗಳಿಂದ ಹಲವು ವಸ್ತುಗಳನ್ನು ಬಳಸಲಾಗುತ್ತದೆ. ಇಂತಹ ಘನವಸ್ತುಗಳಲ್ಲಿ ನಾವು ಪಡಯಬೇಕೆಂದಿರುವ ಕಲಾರೂಪ ಅಥವಾ ಆಕಾರವನ್ನು ಉಳಿಸಕೊಳ್ಳುತ್ತ ಕೆತ್ತುತ್ತ ಹೋಗಿ ಪಡೆಯಬಹುದು ಈ ಕೆತ್ತುವ ಕ್ರಮದಲ್ಲೂ ಮಾಧ್ಯಮದಿಂದ ಮಾಧ್ಯಮಕ್ಕೆ ಸೂಕ್ಷ್ಮ ವ್ಯತ್ಯಾಸಗಳು ಕಾಣಬರುತ್ತವೆ. ಉದಾಹರಣೆಗೆ ಶಿಲಾಮಾಧ್ಯಮವನ್ನೆ ತೆಗೆದುಕೊಳ್ಳಿ, ಶಿಲೆಗಳಲ್ಲಿ ಮೃದು ಮತ್ತು ಕಠಿಣ ಎಂದು ಪ್ರಧಾನವಾಗಿ ಎರಡು ವಿಧಗಳಾಗಿ ಮಾಡಬಹುದು. ಮೃದುಶಿಲೆಯ ಕೆತ್ತನೆಯ ವಿಧಾನವು ಕಠಿಣ ಶಿಲೆಯ ಕತ್ತನೆಯ ವಿಧಾನಕ್ಕಿಂತ ಸೂಕ್ಷ್ಮವಾದ ಭಿನ್ನತೆ ಹೊಂದಿರುತ್ತದೆ. ಅಲ್ಲದೆ ಅವುಗಳನ್ನು ಕೆತ್ತುವ ಉಪಕರಣಗಳಾದ ಛಾಣ, ಉಳಿ, ಸುತ್ತಿಗೆ, ಗರಗಸ ಇತ್ಯಾದಿಗಳಲ್ಲೂ ವ್ಯತ್ಯಾಸಗಳಿರುತ್ತವೆ. ಹಾಗೇ ಇನ್ನುಳಿದ ಕೆಲವು ಕೆತ್ತನೆಗೆ ಒಳಪಡುವ ಮಾಧ್ಯಮಗಳಿಗೂ ಈ ಅಶಗಳು ಅನ್ವಯವಾಗುತ್ತವೆ.

ಉಬ್ಬು ಕೆತ್ತನೆ ಮತ್ತು ದುಂಡು ಕೆತ್ತನೆ

ಕೆತ್ತನೆಯ ಕ್ರಮದ ಇಂಥ ರಚನೆಗಳನ್ನು ತಾಂತ್ರಿಕ ದೃಷ್ಟಿಯಿಂದ ೧.ಉಬ್ಬುಗೆತ್ತನೆಯ ರಚನೆಗಳು ಹಾಗೂ ೨. ದುಂಡುಗತ್ತನೆಯ ರಚನೆಗಳು ಎಂದು ಎರಡು ವಿಧವಾಗಿ ವಿಂಗಡಿಸಬಹುದು. ಉಬ್ಬು ರಚನೆಗಳು ಮುಂದೆ ಉಬ್ಬಿದಂತೆ ಕಾಣುವ ಹಾಗೆ ಕೆತ್ತಲ್ಪಟ್ಟು ಹಿನ್ನೆಲೆಗೆ ಅಂಟಿಕೊಂಡಂತೆ ರಚಿಸಲಾಗಿರುತ್ತದೆ. ಅಂದರೆ ಇಲ್ಲಿ ಹಿಂಭಾಗದ ಕೆತ್ತನೆ ಇರುವುದಿಲ್ಲ. ಯಾವುದೇ ಒಂದು ರಚನೆಯ ಚೆಪ್ಪಟೆಯಾದ ಹಿನ್ನೆಲೆಯ ಮೇಲೆ ಮುಂದಕ್ಕೆ ಉಬ್ಬಿ ಕಾಣುವಂತಿದ್ದರೆ ಅಂತಹ ರಚನೆಗಳನ್ನು (ಉಬ್ಬು, ಮಾದರಿಯ ರಚನೆಗಳನ್ನು)

ಎದುರುಗಡೆಯಿಂದ ನೋಡಬಹುದೇ ವಿನಹ ದುಂಡು ಮಾದರಿಯ ರಚನೆಗಳನ್ನು ನೋಡುವಂತೆ ಎಲ್ಲ ಬದಿಗಳಿಂದಲೂ ಮತ್ತು ಎಲ್ಲ ಮೈಗಳನ್ನು ನೋಡಲು ಸಾಧ್ಯವಿಲ್ಲ.

ದುಂಡು ಅಥವಾ ಪೂರ್ಣ ಮಾದರಿಯ ಕೆತ್ತನೆಯ ರಚನೆಯು ಸ್ವತಂತ್ರವಾದ ಕೃತಿಯಾಗಿದ್ದು ಅದಕ್ಕೆ ತನ್ನದೇ ಆದ ಹೊರಮೈ ಇರುತ್ತದೆ. ಹೀಗಾಗಿ ಈ ದುಂಡು ಅಥವಾ ಪೂರ್ಣ ಮಾದರಿಯ ರಚನೆಯನ್ನು ಎಲ್ಲಾ ಬದಿಗಳಿಂದ ನೋಡಬಹುದಾಗಿರುತ್ತದೆ. ಯಾವ ಬದಿಯಲ್ಲಾದರೂ ಸರಿ ಆ ಶಿಲ್ಪಕೃತಿಯ ವಿವಿಧ ಮಗ್ಗುಲುಗಳನ್ನು ನೋಡಿ ಪರಿಚಯ ಮಾಡಿಕೊಳ್ಳಬಹುದು ಅಥವಾ ಆ ಕೃತಿಯನ್ನೇ ಯಾವ ಕಡೆಗೆ ಬೇಕಾದರೂ ತಿರುಗಿಸಿ ನೋಡಬಹುದು. ಹೀಗೆ ನಾಲ್ಕೆಂಟು ಕಡೆಗಳಿಂದ ತಿರುಗಿಸಿ ನೋಡಬಹುದಾದುದು ದುಂಡು ಅಥವಾ ಪೂರ್ಣ ಮಾದರಿಯ ಕೆತ್ತನೆಯಾಗಿರುತ್ತದೆ. ದುಂಡು ಎಂದರೆ ಅದರರ್ಥ ತೀರ ದುಂಡಾಗಿಯೇ ಇರಬೇಕೆಂದಿಲ್ಲ ಎಲ್ಲ ದಿಕ್ಕುಗಳಿಂದ ಅದನ್ನು ನೋಡಲು ಸಾಧ್ಯವಾಗುವಂತಿರಬೇಕು.

ಶಿಲಾ ಕೆತ್ತನೆ

ಪ್ರಾಚೀನ ಕಾಲದಿಂದಲೂ ಶಿಲ್ಪಗಳನ್ನು ರಚಿಸಲು ಪ್ರಧಾನವಾಗಿ ಶಿಲೆ ಬಳಕೆಗೊಂಡಿದೆ. ಹಳೆಯ ಶಿಲಾಯುಗದಲ್ಲೇ ಬಂಡೆಗಳ ಮೇಲೆ ಮೂಡಿಬಂದ ಪ್ರಾಣಿಗಳ ಕೆತ್ತನೆಯ ಶಿಲ್ಪಗಳು ಉಳಿದು ಬಂದಿವೆ. ಈ ಶಿಲ್ಪಾವಶೇಷಗಳು ಶಿಲ್ಪ ಕೆತ್ತನೆಗೆ ಶಿಲೆಯು ಮಾಧ್ಯಮವಾಗಿ ಬಳಕೆಯಾದುದರ ಪ್ರಾಚೀನತೆಯ ಬಗೆಗೆ ಸಾಕ್ಷಿಯನ್ನೊದಗಿಸುತ್ತವೆ. ಸೈಂಧವ ಸಂಸ್ಕೃತಿಯ ಶೋಧದಲ್ಲಿ ಸುಣ್ಣದ ಕಲ್ಲು, ಬಳಪದ ಕಲ್ಲುಗಳಲ್ಲಿ ಮೂಡಿದ ಮೂರ್ತಿ ಶಿಲ್ಪಗಳು ಆಟಿಕೆ ಶಿಲ್ಪಗಳು ದೊರತಿವೆ. ಜಗತ್ತಿನ ಅತಿ ಪ್ರಾಚೀನ ಈಜಿಪ್ತ, ಗ್ರೀಕ್ ಮುಂತಾದ ಸಂಸ್ಕೃತಿಗಳು ಶಿಲ್ಪ ರಚನೆಯಲ್ಲಿ ಶಿಲಾ ಮಾಧ್ಯಮಕ್ಕೆ ಹಚ್ಚಿನ ಆದ್ಯತೆ ನೀಡಿರುವುದು ಕಂಡುಬರುತ್ತದೆ. ನಮ್ಮ ದೇಶದಲ್ಲೂ ಸೈಂಧವ ಸಂಸ್ಕೃತಿಯ ಹರವಿನಲ್ಲೇ ಶಿಲಾ ಶಿಲ್ಪಗಳು ದೊರೆತಿವೆ. ಮಹೆಂಜೋದಾರೋವಿನಲ್ಲಿ ದೊರತ ಸಣ್ಣ ಪ್ರಮಾಣದ ಸುಣ್ಣದ ಕಲ್ಲಿನ ಶಿಲ್ಪಗಳು ಇದಕ್ಕೆ ಉದಾಹರಣೆಯಾಗಿವೆ. ಪ್ರಾಚೀನ ಗ್ರಂಥಗಳಲ್ಲಿ ಶಿಲಾಶಿಲ್ಪದ ಉಲ್ಲೇಖ ಸ್ಪಷ್ಟವಾಗಿದ್ದರೂ ಅಶೋಕನ ಕಾಲದಲ್ಲೇ ಶಿಲ್ಪಕೃತಿಗಳು ದೊರೆಯುವುವೆಂಬುದನ್ನು ಗಮನಿಸಬೇಕು. ಇವುಗಳೆಲ್ಲ ಮರಳುಗಲ್ಲಿನಲ್ಲಿವೆ. ಕ್ರಿಸ್ತಶಕಾರಂಭದ ಅನಂತರ ಬಾರತೀಯ ಶಿಲ್ಪವು ಶಿಲೆಯಲ್ಲಿ ಶ್ರೀಮಂತವಾಗಿ ಅರಳಿ ನಿಂತಿರುವುದನ್ನು ಕಾಣುತ್ತೇವೆ. ಶಿಲ್ಪಕ್ಕೆ ಮರ ಮತ್ತಿತರ ಮಾಧ್ಯಮಗಳಿಗಿಂತಲೂ ಶಿಲೆಯೇ ಹೆಚ್ಚು ಅನುಕೂಲವೆನಿಸಿದೆ. ಹಾಗೂ ಸ್ವಾರಸ್ಯವೆನಿಸಿದೆ. ಮೈಕೆಲ್ ಎಂಜಿಲೋನ ಪ್ರಕಾರ 'ದಿಟವಾದ ಶಿಲ್ಪವೆಂದರೆ ಅದು ಕೆತ್ತನೆಯಿಂದ ರೂಪುಗೊಂಡಿದ್ದು ಅದೂ ಶಿಲೆಯಲ್ಲಿ ಕಂಡರಿಸಿರುವುದು. ಇಂದಿಗೂ ಕೂಡಾ ಕೆತ್ತನೆಯ ರಚನೆಗಳಾಗಿ ಪ್ರಮುಖ ಮಾಧ್ಯಮವಾಗಿ ಶಿಲೆ ತನ್ನ ಸ್ಥಾನವನ್ನು ಉಳಿಸಿಕೊಂಡಿದೆ.

ಶಿಲಾ ಕತ್ತನೆಯ ಉಪಕರಣಗಳು

ಶಿಲೆ ಅಥವಾ ಕಲ್ಲು ಯಾವುದೇ ಬಗೆಯದ್ದಾಗಲೀ ಅದನ್ನು ಕೆತ್ತಲು ಬಳಸುವ ಸಾಧನಗಳು ಲೋಹ (ಉಕ್ಕು) ದಿಂದ ತಯಾರಿಸಿದವುಗಳೇ ಆಗಿರುತ್ತವೆ. ಆದರೆ ಬಳಪದ

ಕಲ್ಲಿನಂತಹ ಮೃದು ಶಿಲೆಗಳನ್ನು ಕೆತ್ತಲು ಉಪಕರಣಗಳನ್ನು ಮೊನಚಾಗಿ ಮಾಡಿಕೊಂಡಿದ್ದರೆ ಗ್ರಾನೈಟ್ (ಚಪ್ಪಡಿ ಕಲ್ಲು)ನಂತಹ ಕಠಿಣ ಶಿಲಾ ಕತ್ತನೆಗೆ ಉಪಕರಣಗಳು ಅಷ್ಟೊಂದು ಮೊನಚಾಗಿರುವುದಿಲ್ಲ. ಶಿಲ್ಪಿಗಳು ಶಿಲಾ ಕತ್ತನೆಗೆ ಉಳಿ ಅಥವಾ ಭಾಣಗಳನ್ನು ಬಳಸುತ್ತಾರೆ. ಈ ಉಳಿ ಅಥವಾ ಭಾಣಗಳ ತುದಿಯಲ್ಲಿ ಕಲವೊಮ್ಮ ಕಚ್ಚಾ ವಜ್ರವನ್ನು ಅಳವಡಿಸಲಾಗಿರುತ್ತದೆ.

ಗ್ರಾನೈಟ್ ಕಲ್ಲುಗಳನ್ನು ಕೊರೆಯಲು ವಿದ್ಯುತ್ ಚಾಲಿತ ಯಂತ್ರಗಳನ್ನು ಅಂದರೆ ಆಧುನಿಕ ಉಪಕರಣಗಳು ಬಳಸುವುದು ಈಗ ರೂಢಿಯಲ್ಲಿದೆ. ಕೊರೆಯುವ ಉಪಕರಣಗಳ ಮುಂತುದಿಯಲ್ಲೂ ಕಚ್ಚಾವಜ್ರ ಇರುತ್ತದೆ. ಸಮಕಾಲೀನ ಶಿಲ್ಪಿಗಳು ಇಂತಹ ಕೊರೆಯುವ, ಕೆತ್ತುವ ಉಜ್ಜುವ, ವಿವಿಧ ಬಗೆಯ ಉಪಕರಣಗಳನ್ನು ಕಲಾಕೃತಿ ರಚನೆಯಲ್ಲಿ ಧಾರಾಳವಾಗಿ ಇಂದು ಬಳಸಿಕೊಳ್ಳುತ್ತಲಿದ್ದಾರೆ. ಇವುಗಳ ಬಳಕೆಯಿಂದ ವೇಗದ ರಚನೆಯೂ ಸಾಧ್ಯವಾಗಿದೆ.

ಮರಗೆತ್ತನೆ

ನಿಸರ್ಗ ಜನ್ಯವಾದ ಹಾಗೂ ಸಹಜವಾಗಿ ದೊರಕುವ ಮರ ಅಥವಾ ಕಟ್ಟಿಗೆಯು ಕೆತ್ತನೆಯ ರಚನೆಗೆ ಒಂದು ಪ್ರಮುಖ ಮಾಧ್ಯಮವಾಗಿದೆ. ಈ ಕಟ್ಟಿಗೆ ಅಥವಾ ಮರವನ್ನು ದಾರು ಕಾಷ್ಠ, ಕೊರಡು ಎಂತಲೂ ಕರೆಯುತ್ತಾರೆ. ಬಹುಪ್ರಾಚೀನ ಕಾಲದಿಂದಲೂ ಶಿಲ್ಪಕಲೆಯ ಕ್ಷೇತ್ರದಲ್ಲಿ ಕೆತ್ತನೆಯ ರಚನೆಗೆ ಮೂಲ ಪ್ರೇರಣೆಯಾಗಿ ತನ್ನ ಸ್ಥಾನವನ್ನು ಉಳಿಸಿಕೊಂಡು ಬಂದಿದೆ. ಈ ಕಟ್ಟಿಗೆ ಅಥವಾ ಮರ.

ಜಗತ್ತಿನಲ್ಲಿ ಪ್ರಾಗೈತಿಹಾಸಿಕ ಕಾಲದಿಂದಲೂ ಕಟ್ಟಿಗೆ ಅಥವಾ ಮರವನ್ನು ವಿವಿಧ ವಸ್ತುಗಳು ಅಥವಾ ಸಾಧನ ಸಾಮಗ್ರಿಗಳನ್ನು ರಚಿಸಲು ಬಳಸಿಕೊಂಡು ಬಂದಿರಬಹುದಾದರೂ ಈ ಮಾಧ್ಯಮವು ಶಿಲೆಯ ಹಾಗೆ ಹೆಚ್ಚು ಕಾಲ ಬಾಳಿಕೆ ಬಾರದ ಸಾಮಾಗ್ರಿಯಾಗಿದೆ. ಹಾಗಾಗಿ ಈ ಮಾಧ್ಯಮದ ರಚನೆಯ ಪಳಿಯುಳಿಕೆಗಳು ದೊರೆತಿಲ್ಲವೆನ್ನಬಹುದು. ಹಾಗಿದ್ದೂ ಕಟ್ಟಿಗೆ ಅಥವಾ ಮರದ ಕೆತ್ತನೆಯ ಶಿಲ್ಪಕಲೆಗಾರಿಕೆ ತುಂಬಾ ಪ್ರಾಚೀನವಾದುದಾಗಿದೆ. ಆಧುನಿಕ ಸಂದರ್ಭದಲ್ಲೂ ಪ್ರಮುಖ ಪಾತ್ರ ವಹಿಸುತ್ತಲಿದೆ.

ಕೆತ್ತನೆಯ ಕಲಾತ್ಮಕವಾದ ರಚನೆಗಳಿಗಾಗಿ ಮಾನವನು ಕಲ್ಲು ಅಥವಾ ಶಿಲೆಯನ್ನು ಬಳಸಿಕೊಳ್ಳುವ ಮೊದಲು ಬಳಸಿಕೊಂಡ ಸಾಮಾಗ್ರಿಯೇ ಮರ ಅಥವಾ ಕಟ್ಟಿಗೆಯಾಗಿದೆ ಎಂದು ತಿಳಿದು ಬರುತ್ತದೆ. ಶಿಲ್ಪ ಹಾಗೂ ವಾಸ್ತು ಶಿಲ್ಪಗಳಲ್ಲಿನ ಪ್ರಾರಂಭದ ರಚನೆಗಳೂ ಕಾಷ್ಠಶಿಲ್ಪಗಳೇ ಆಗಿವೆ ಎಂಬುದು ಉಲ್ಲೇಖಾರ್ಹ. ಋಗ್ವೇದದಲ್ಲಿ ಕಾಷ್ಠಿಶಿಲ್ಪ ದೇವಾಲಯದ ಉಲ್ಲೇಖವಿದೆ. ಬೃಹತ್ ಸಂಹಿತೆ ಹಾಗೂ ಶಿಲ್ಪ ಶಾಸ್ತ್ರಗಳಲ್ಲಿ ಮರ ಕಡಿಯುವ ಮತ್ತು ಮರವನ್ನು ಹದಗೊಳಿಸುವ ಹಾಗೂ ಯಾವ ಶಿಲ್ಪಗಳಿಗೆ ಎಂಥ ಕಟ್ಟಿಗೆಯನ್ನು ಬಳಸಬೇಕೆಂಬುದರ ಬಗೆಗಿನ ವಿವರಗಳಿವೆ. ಈ ವಿವರಗಳು ಈ ಕಲೆಯ ಪ್ರಾರಂಭ ಹಾಗು ವಿಕಾಸವನ್ನು ಸೂಚಿಸುತ್ತವೆ. ಮೌರ್ಯ ಚಂದ್ರಗುಪ್ತರ ಅರಮನೆಯು ಕಟ್ಟಿಗೆಯದೇ ಆಗಿದ್ದಿತು. ಇದು ಆ ಕಾಲದ ಕಾಷ್ಠ ಶಿಲ್ಪಿಗಳ ಕುಶಲತೆಗೆ ನಿದರ್ಶನವೆಂದು ಹೇಳಲಾಗುತ್ತದೆ.

ಮರಗೆತ್ತನೆ ಕಲೆಯು ಪ್ರಾಚೀನ ಕಾಲದಿಂದಲೂ ನಿತ್ಯ ಜೀವನದ ಹಲವಾರು ಅವಶ್ಯಕತೆಗಳನ್ನು ಪೂರೈಸುತ್ತ ಬಂದ ಪ್ರಯೋಜಕ ಕಲೆಯಾಗಿದೆ. ಇಂಥ ಪ್ರಾಚೀನ ಕುಶಲಕಲಾ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬಂದ ಅನೇಕ ಪಟ್ಟಣ, ಊರುಗಳನ್ನು ಭಾರತದಾದ್ಯಂತ ಇಂದಿಗೂ ಕೂಡ ನೋಡಬಹುದಾಗಿದೆ. ಪ್ರಮುಖವಾದ ಕೆಲಸವನ್ನು ಇಲ್ಲಿ ಉಲ್ಲೇಖಿಸಬಹುದು. ಲಖನೌ, ಕಾಶ್ಮೀರ, ಗುಜರಾತ, ಸೌರಾಷ್ಟ್ರ ಹಾಗೂ ನಾಸಿಕ್‌ಗಳಲ್ಲಿ ಕಟ್ಟಿಗೆಯಿಂದ ತಯಾರಿಸಿದ ಅನೇಕ ವಾಸ್ತುಗಳಲ್ಲಿ ಕಂಬ, ತೊಲೆ, ಬೋದಿಗೆ, ಕಿಟಕಿ, ಕಮಾನು ಮುಂತಾದವುಗಳು ಗಮನಾರ್ಹವಾಗಿವೆ. ಹಾಗೆಯೇ ಪಂಜಾಬ, ಉತ್ತರ ಪ್ರದೇಶ, ಅಲಿಘರ, ಅಜಮ್‌ಘರ, ಬರಲಿ, ಮಥುರಾ, ಬುಲಂದಶಹರ, ಗಾಜಿಪೂರ, ಮುಂತಾದೆಡೆಗಳಲ್ಲಿನ ಪೀಠೋಪಕರಣಗಳ ಅಲಂಕಾರಿಕ ಕೆತ್ತನೆಗಳೂ ವಿಶ್ವ ವಿಖ್ಯಾತವಾದವುಗಳಾಗಿವೆ. ಅದರಂತೆ ತಮಿಳುನಾಡಿನ ತಿರುಚಿನಾಪಳ್ಳಿ, ತಿರುವಾಂಕೂರು, ಕರ್ನಾಟಕದ ಮೈಸೂರು, ಸಾಗರ, ಕುಮಟಾ, ಕಿನ್ನಾಳ, ಗೋಕಾಕ, ತಾಳೀಕೋಟೆ, ಹೊಳ ಆಲೂರು, ರಾಯಚೂರು, ಶಿವಮೊಗ್ಗ, ಉತ್ತರ ಕನ್ನಡ ಮುಂತಾದೆಡೆಗಳಲ್ಲಿನ ಶ್ರೀಗಂಧ ಬೇವು, ಹೊನ್ನೆ, ನಂದಿ ಮತ್ತಿ ಮೊದಲಾದ ಕಟ್ಟಿಗೆಯ ಕಲಾತ್ಮಕ ವಸ್ತುಗಳ ತಯಾರಿಕೆ ಮತ್ತು ಶಿಲ್ಪಕಲಕೃತಿಗಳು ಲೋಕವಿಖ್ಯಾತವಾದವುಗಳಾಗಿವೆ.

ಮರಗೆತ್ತನೆಯ ಉಪಕರಣಗಳು

ಕಟ್ಟಿಗೆ ಅಥವಾ ಮರ ಯಾವುದೇ ಜಾತಿಯದಾಗಿರಲಿ ಅದರ ಕೆತ್ತನೆಗೆ ಬಳಸುವ ಉಪಕರಣಗಳು ಲೋಹದ (ಉಕ್ಕು) ಮಾಧ್ಯಮದವುಗಳಾಗಿದ್ದು ಮೊನಚಾದವುಗಳಾಗಿರುತ್ತವೆ. ಸಾಮಾನ್ಯವಾಗಿ ಈ ಉಪಕರಣಗಳನ್ನು ೧. ಕೆತ್ತುವ ೨. ಕೊಯ್ಯುವ ೩. ಕೊರೆಯುವ ಸಾಧನಗಳೆಂದು ಪ್ರಧಾನವಾಗಿ ಮೂರು ಬಗೆಯಲ್ಲಿ ವಿಂಗಡಿಸಬಹುದಾದರೂ ಅಳೆಯುವ ವಿಭಾಗಿಸುವ ಸಾಧನಗಳೆಂದು ಇನ್ನೊಂದು ಪ್ರಕಾರವನ್ನೂ ಸೇರಿಸಬಹುದು.

ಕೆತ್ತುವ ಸಾಧನಗಳಲ್ಲಿ ವಿವಿಧ ಆಕಾರ ಮತ್ತು ಅಳತೆಯ ಉಪಕರಣಗಳನ್ನು ಕಾಣುತ್ತೇವೆ. ಅವುಗಳನ್ನು ಉಳಿ ಮತ್ತು ಬಾಚಿ ಎಂದು ಎರಡು ವಿಧಗಳಲ್ಲಿ ವಿಂಗಡಿಸಬಹುದು. ಬಾಚಿಯ ಇನ್ನೊಂದು ಪ್ರಕಾರದ ಉಜ್ಜುಗೊರಡು ಕೂಡ ಇದರಲ್ಲಿ ಸೇರುತ್ತದೆ. ಈ ಕೆತ್ತುವ ಉಪಕರಣಗಳನ್ನು ಮೊನಚುಗೊಳಿಲು ವಿಶೇಷವಾದ ಕಲ್ಲು ಅಥವಾ ಬೆಣಚುಗಲ್ಲು ಪುಡಿಯನ್ನು ಬಳುತ್ತಾರೆ. ಕೆಲವೊಮ್ಮ ಸಾಣೆ ಹಿಡಿಯುವುದುಂಟು. ಇತ್ತೀಚೆಗೆ ಕೆಲವು ವಿದ್ಯುತ್‌ಚಾಲಿತ ಉಪಕರಣಗಳನ್ನು ಬಳಸಲಾಗುತ್ತಿದೆ. ಕೊಯ್ಯುವ ಸಾಧನಗಳಲ್ಲಿ ಗರಗಸ ಮುಖ್ಯವಾಗಿರುತ್ತದೆ. ಇದು ಉದ್ದಕ್ಕೆ ನೇರವಾಗಿದ್ದು ಒಂದು ಬದಿಗೆ ತ್ರಿಕೋನಾಕಾರದಲ್ಲಿ ಹಲ್ಲುಗಳಿರುತ್ತವೆ. ಒಬ್ಬನೇ ಕುಶಲಿಯು ಚಲಿಸಬಹುದಾದ್ದು ಇಬ್ಬರು ಇಲ್ಲವೆ ಹಲವರು ಸೇರಿ ಗರಗಸದ ಎರಡೂ ತುದಿಗಳಲ್ಲಿ ಹಿಡಿದು ಚಲಿಸುವುದು, ಉದಾಹರಣೆಗೆ ಕೈಗರಗಸ, ದೊಡ್ಡ ಗರಗಸ ಇತ್ಯಾದಿ. ಈಚೆಗೆ ವಿದ್ಯುತ್ಚಾಲಿತ ಚಕ್ರದ ಗರಗಸಗಳು ಬಳಕೆಗೆ ಬಂದಿವೆ. ಕೊರೆಯುವ ಅಥವಾ ರಂಧ್ರ ಮಾಡುವ ಸಾಧನಗಳಲ್ಲೂ ಅನೇಕ ವಿಧಗಳಿವೆ. ಇವುಗಳಲ್ಲೂ ಮನುಷ್ಯಚಾಲಿತ ಮತ್ತು ಯಂತ್ರ ಅಥವಾ

ವಿದ್ಯುತ್‌ಚಾಲಿತವಾದ ಉಪಕರಣಗಳಿವೆ. ಉದಾಹರಣೆಗೆ ಹಿಡಿಗಳು, ಗಿರಮಟಿಗೆ, ಗೀರು ಕಟ್ಟು, ಕತ್ತು ಇತ್ಯಾದಿಗಳು ಬಳಕೆಯಾಗುತ್ತವೆ.

ದಂತ ಕೆತ್ತನೆ

ದಂತ ಕೆತ್ತನೆಯ ರಚನೆಯು ಸಾಮಾನ್ಯವಾಗಿ ಮರಗೆತ್ತನೆಯನ್ನು ಹೋಲುತ್ತದೆ. ಆದರೆ ಕಟ್ಟಿಗೆಗಿಂತ ದಂತವು ಹೆಚ್ಚು ಮೃದುವಾಗಿರುತ್ತದೆ. ಅಲ್ಲದೆ ಮರದ ದಿಣ್ಣೆಗಳ ಹಾಗೆ ದಂತವು ದೊಡ್ಡ ಆಕಾರದಲ್ಲಿ ಲಭ್ಯವಿರುವುದಿಲ್ಲ. ಹೀಗಾಗಿ ತುಂಬ ಚಿಕ್ಕ ಆಕಾರದ ಕಲಾಕೃತಿಗಳನ್ನು ದಂತದಲ್ಲಿ ಕೆತ್ತಲಾಗುತ್ತದೆ, ಬಹಳ ಸೂಕ್ಷ್ಮವಾದ ವಿವರ ಮತ್ತು ಸುಳಿಗಳಿಂದ ಕೂಡಿದ ಅಪರೂಪದ, ಬೆಲೆಯುಳ್ಳ ಕಲಾಕೃತಿಗಳನ್ನು ರಚಿಸಲು ಮಾತ್ರ ದಂತವನ್ನು ಉಪಯೋಗಿಸಲಾಗುತ್ತದೆ. ಸಾಮಾನ್ಯವಾಗಿ ಈ ದಂತವು ಆನೆಯದ್ದಾಗಿರುತ್ತದೆ. ದಂತದ ಕತ್ತನೆಗೆ ಮೊನಚಾದ ಲೋಹದ (ಉಕ್ಕು) ಉಪಕರಣಗಳನ್ನು ಬಳಸಲಾಗುತ್ತದೆ. ಇವು ಮರಗೆತ್ತನೆಗೆ ಬಳಸುವ ಉಪಕರಣಗಳಿಗೆ ಹೋಲಿಸಿದರೆ ತುಂಬ ಚಿಕ್ಕವುಗಳಾಗಿದ್ದು ಮೊನಚಾಗಿರುತ್ತವೆ.

ರಬ್ಬರ್ ಶಿಲ್ಪ ಕೆತ್ತನೆ

ರಬ್ಬರ್ ನಿಸರ್ಗಮೂಲದಿಂದ ಬಂದುದು. ದ್ರವರೂಪದಲ್ಲಿ ಪಡೆದು ಸಂಗ್ರಹಿಸಲ್ಪಟ್ಟು ಘನರೂಪಕ್ಕೆ ಪರಿವರ್ತಿತಗೊಂಡದ್ದು. ಈ ರಬ್ಬರ್ ಕೂಡ ಕಲಾವಸ್ತು ಅಥವಾ ಶಿಲ್ಪಗಳ ರಚನೆಗಳಿಗೆ ಒಂದು ಮಾಧ್ಯಮವಾಗಿದೆ, ಆಕರವಾಗಿದೆ. ಈ ರಬ್ಬರನ್ನು ಕೆತ್ತಲು ತೆಳುವಾದ ಮತ್ತು ಹರಿತವಾದ ಲೋಹದ ಉಪಕರಣಗಳನ್ನು ಬಳಸಲಾಗುತ್ತದೆ. ಇದರ ಕೆತ್ತನೆಯೂ ದಂತದ ಕೆತ್ತನೆಯ ರಚನೆಯನ್ನು ಹೋಲುತ್ತದೆಯಾದರೂ ಇವೆರಡರಲ್ಲೂ ಸೂಕ್ಷ್ಮ ವ್ಯತ್ಯಾಸಗಳುಂಟು. ಶಿಲ್ಪಗಳ ರಚನೆಗೆ ಬಹಳ ಅಪರೂಪಕ್ಕೆ ಇದನ್ನು ಬಳಸುತ್ತಾರೆ. ಆದರೆ ಎರಕ ಹೊಯ್ಯುವ, ಮೌಲ್ಡ್ ಮಾಡಲಾಗುವ ರಚನೆಗಳಿಗೆ ರಬ್ಬರ್‌ನ ಇನ್ನೊಂದು ರೂಪ ಪ್ಲಾಸ್ಟಿಕ್‌ನ್ನು ಬಳಸುವುದೂ ರೂಢಿಯಲ್ಲಿದೆ.

ಪ್ಲಾಸ್ಟರ್ ಶಿಲ್ಪ ಕೆತ್ತನೆ

ಸಾಮಾನ್ಯವಾಗಿ ಪ್ಲಾಸ್ಟರ್ ವಸ್ತು ಹುಡಿರೂಪದಲ್ಲಿ ದೊರೆಯುತ್ತದ. ಕರಕುಶಲಿಗಳು ಅಥವಾ ಶಿಲ್ಪಿಗಳು ಈ ಮಾಧ್ಯಮದಲ್ಲಿ ಕೆತ್ತುವ ಪದ್ಧತಿಯಲ್ಲಿ, ಕಲಾಕೃತಿಗಳನ್ನು ರಚಿಸಬೇಕಂದಿದ್ದಲ್ಲಿ ಆ ಪ್ಲಾಸ್ಟರ್ ಹುಡಿಗೆ ಸರಿಯಾದ ಪ್ರಮಾಣದಲ್ಲಿ ನೀರು ಬೆರೆಸಿ, ಹದಗೊಳಿಸಿ ತಮಗೆ ಬೇಕಾದ ಅಳತೆ ಮತ್ತು ಆಕಾರಕ್ಕೆ ಅದನ್ನು ಹೊಂದಿಸಿಕೊಂಡು ಘಟ್ಟಿಗೊಳಿಉತ್ತಾರೆ ಅಥವಾ ಒಣಗಿಸುತ್ತಾರೆ. ಆಗ ಅದು ಒಂದು ಮೃದು ಕಲ್ಲಿನಂತಾಗುತ್ತದೆ, ನಂತರ ಕುಶಲಿಗಳು ತಮಗೆ ಬೇಕಾದ ಕಲಾವಸ್ತುಗಳನ್ನು ಅದರಲ್ಲಿ ಕೆತ್ತುತ್ತ ಪಡೆದುಕೊಳ್ಳುತ್ತಾರೆ. ಇದರ ಕೆತ್ತನೆಗೆ ಲೋಹದಿಂದ ತಯಾರಿಸಿದ ಮೊನಚಾದ ಉಪಕರಣಗಳನ್ನು ಬಳಸುವರು.

ಒಟ್ಟಾರೆ ಕರಕುಶಲ ಅಥವಾ ಶಿಲ್ಪಕಲಾ ವಸ್ತುಗಳ ರಚನೆಯ ವಿವಿಧ ಪದ್ಧತಿಗಳಲ್ಲಿ ಕೆತ್ತನೆ ರಚನೆಯ ಕ್ರಮವೂ ಒಂದಾಗಿದ್ದು ಅತ್ಯಂತ ಪ್ರಮುಖವಾಗಿದೆ. ಕಲ್ಲು, ಮರ, ದಂತ, ಪ್ಲಾಸ್ಟರ್ ಮತ್ತು ರಬ್ಬರ್‌ನಂತಹವುಗಳು ಈ ಬಗೆಯ ರಚನೆಗೆ ಪ್ರಮುಖ ಮಾಧ್ಯಮಗಳಾಗಿ ಬಳಕೆಯಾಗುತ್ತವೆ.

ಟಿಪ್ಪಣಿಗಳು

೧. ಡಾ. ಎಸ್.ಎಂ. ವೃಷಭೇಂದ್ರ ಸ್ವಾಮಿ (ಸಂ): ಜಾನಪದ ಸಾಹಿತ್ಯ ದರ್ಶನ, ಭಾಗ ೧೦, ಪುಟ ೬೭

೨. ಡಾ. ಶಿವಾನಂದ ಎಚ್. ಬಂಟನೂರ: ಕರ್ನಾಟಕ ಜನಪದ ಶಿಲ್ಪಕಲೆ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಪುಟ ೨೮

೩. ಪ್ರೊ, ಎಸ್. ಕೆ. ರಾಮಚಂದ್ರರಾವ್: ಕರ್ನಾಟಕದ ಕಲೆಗಳು ಮೊದಲ ಸಂಪುಟ, ಪುಟ ೮೦

೪. ಡಾ. ಸಿ. ಮಹದೇವ ಬಲ್ಲಾರಿ ಜಿಲ್ಲೆಯ ಮರದ ವಾಸ್ತು ಪುಟ ೫

೫. ಅದೇ ...ಪುಟ, ೬

೬. ಪ್ರೋ. ಎಸ್. ಕೆ. ರಾಮಚಂದ್ರರಾವ್ : ಕರ್ನಾಟಕದ ಕಲೆಗಳು, ಮೊದಲ ಸಂಪುಟ, ಪುಟ ೮೦

೭. ಅದೇ ..

೮. ಡಾ. ಸಿ. ಮಹದೇವ: ಬಲ್ಲಾರಿ ಜಿಲ್ಲೆಯ ಮರದ ವಾಸ್ತು ಪುಟ ೭

೯. ಅದೇ ...ಪುಟ ೧೦

೧೦. ಡಾ. ಶಿವಾನಂದ ಎಚ್. ಬಂಟನೂರ : ಕರ್ನಾಟಕ ಜನಪದ ಶಿಲ್ಪಕಲೆ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಪುಟ ೨೮

೧೧. ಎಸ್.ಕೆ. ರಾಮಚಂದ್ರರಾವ್ : ಕರ್ನಾಟಕದ ಕಲೆಗಳು, ಮೊದಲ ಸಂಪುಟ, ಪುಟ ೭೯

೧೨. ಅದೇ ಪುಟ–೮೫

೧೩. ಡಾ. ಶಿವಾನಂದ ಎಚ್. ಬಂಟನೂರ: ಕರ್ನಾಟಕ ಜನಪದ ಶಿಲ್ಪಕಲೆ: ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಪುಟ ೧೧೯

೧೪. ಡಾ. ಕರೀಗೌಡ ಬೀಚನಹಳ್ಳಿ (ಸಂ): ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ೨, ಪುಟ ೬

೧೫. ಅದೇ ...

೧೬. ಅದೇ.... ೭

೧೭. ಡಾ. ಶಿವಾನಂದ ಎಚ್. ಬಂಟನೂರ: ಕರ್ನಾಟಕ ಜನಪದ ಶಿಲ್ಪಕಲೆ: ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಪುಟ ೧೨೦

೧೮. ಟಿ.ಬಿ. ಸೊಲಬಕ್ಕನವರ (ಗೊಟಗೋಡಿ) ಅವರು ಸಿಮೆಂಟ್ ಶಿಲ್ಪಗಳ ರಚನೆಯಲ್ಲಿ ಕ್ರಾಂತಿಯನ್ನೇ ಮಾಡಿರುವರು. ಅವರ ರಾಕ್ ಗಾರ್ಡನ್ ಜಗದ್ವಿಖ್ಯಾತವಾಗಿದೆ.

ಅಧ್ಯಾಯ: ಮೂರು

ಸಮಕಾಲೀನ ಶಿಲ್ಪಕಲೆಯ ಚಾರಿತ್ರಿಕ ನೋಟ

ಕರ್ನಾಟಕದ ಪಾರಂಪರಿಕ ಶಿಲ್ಪಕಲೆ ಭಾರತೀಯ ಶಿಲ್ಪಕಲೆಯ ಜೊತೆ ಜೊತೆಗೇ ಬೆಳೆದು ಉಳಿದು ಬಂದಿರುವಂತೆ ತನ್ನದೇ ಆದ ಕೊಡುಗೆಯನ್ನೂ ಭಾರತೀಯ ಶಿಲ್ಪಕಲಾ ಪ್ರಪಂಚಕ್ಕೆ ನೀಡಿದೆ.[1] ಚಾಲುಕ್ಯ, ವಿಜಯನಗರ ಸಾಮ್ರಾಜ್ಯಗಳ ಶಿಲ್ಪಕಲೆಯ ಬೆಳವಣಿಗೆಗಳ ನಡುವೆ ಹಲವು ಸುಂದರ ಪುಟಗಳಿವೆಯಾದರೂ ವಿಜಯನಗರದ ಶಿಲ್ಪಶೈಲಿ ಹಿಂದಿನ ಶಿಲ್ಪಶೈಲಿಗಳ ಕೊಡುಗೆಗಳಿಂದ ಪಡೆದುಕೊಂಡು ನೀಡಿದ ತನ್ನದೇ ಆದ ವಿಶಿಷ್ಟ ಫಲ ಮುಂದಿನ ಶಿಲ್ಪಕಲೆಯ ಬೆಳವಣಿಗೆಗೆ ಸ್ಫೂರ್ತಿ ನೀಡಿದ್ದು ಸಹಜ ಮತ್ತು ಸ್ವಾಭಾವಿಕ. ವಿಜಯನಗರದ ಅಂದಿನ ಶಿಲ್ಪಿಗಳು ಗ್ರಾನೈಟ್ ಶಿಲೆಯನ್ನು ದುಡಿಸಿಕೊಂಡು ಮಾಡಿದ ಪ್ರಯೋಗ ಬೆರಗನ್ನುಂಟುಮಾಡುವಂಥದು.[2] ಆ ನಂತರದಲ್ಲಿ ಹಲವಾರು ದಶಕಗಳ ಕಾಲ ನಮ್ಮ ಪಾರಂಪರಿಕ ಶಿಲ್ಪಕಲೆ 'ಯಂತ್ರದ ಚಕ್ರವಾಯಿತೇ ಹೊರತು ಪುಟಿಯುವ ಚಿಲುಮೆಯಾಗಲಿಲ್ಲ'.

ನಮ್ಮ ನಾಡನ್ನು ಆಳಿದ ಮೊಗಲ್ ಮತ್ತು ಬ್ರಿಟೀಷರ ಆಡಳಿತಾವಧಿಯಲ್ಲಿ ನಮ್ಮ ಸಂಪ್ರದಾಯ ಶಿಲ್ಪಿಗಳು ಅಷ್ಟೇನೂ ಪ್ರೋತ್ಸಾಹಕರ ವಾತಾವರಣದಲ್ಲಿ ಇರಲಿಲ್ಲ. ಆದರೆ ಬ್ರಿಟೀಷರ ಅಂತಿಮ ದಿನಗಳಲ್ಲಿ ಅಕಡೆಮಿಕ್ ಶೈಲಿಯ ಶಿಲ್ಪಕಲೆ ಅವರು ಆರಂಭಿಸಿದ ಕಲಾ ಶಾಲೆಗಳಲ್ಲಿ ಕಲಿಸಲ್ಪಟ್ಟಿತಾದರೂ ನಮ್ಮ ಶಿಲ್ಪಕಲಾವಿದರಿಗೆ ಭಾರತದೇಶ ಕಂಡ ಸ್ವಾತಂತ್ರ್ಯದ ಬೆಳಕಲ್ಲಷ್ಟೇ ಆಧುನಿಕ ಶಿಲ್ಪಕಲೆಯ ಜ್ಞಾನ ಮೂಡಲು ಸಾಧ್ಯವಾಯಿತೆನ್ನಬೇಕು. ಹತ್ತೊಂಭತ್ತನೆಯ ಶತಮಾನದ ಅಂತಿಮ ವರ್ಷಗಳಲ್ಲಿನ ಚಿತ್ರ-ಶಿಲ್ಪ ಮತ್ತಿತರ ಕಲೆಗಳಲ್ಲಿ ಬಳಸಲು ಆರಂಭಗೊಂಡ ಆಧುನಿಕ ಎಂಬ ಪದ[3] ಇಡೀ ಇಪ್ಪತ್ತನೆಯ ಶತಮಾನದ ಕಲಾಸೃಷ್ಟಿಗೆ ಪ್ರಮುಖ ಶೀರ್ಷಿಕೆಯೂ ಆಗಿ ಬಳಸಿಕೊಳ್ಳಲ್ಪಟ್ಟಿದ್ದುದು ಗಮನಾರ್ಹ ಅಂಶ. ಆಧುನಿಕ ಅಥವಾ ನವ್ಯಕಲೆ ಎಂಬ ಪದಗಳನ್ನು ಪ್ರಸ್ತಾಪಿಸುವಾಗ ನಮ್ಮಲ್ಲಿ ಪಶ್ಚಾತ್ಯ ಕಲೆಯ ಪ್ರಭಾವ ಅಥವಾ ಅನುಕರಣೆ ದಟ್ಟವಾಗಿ ಕಾಣುತ್ತದೆ, ಕಾಡುತ್ತದೆ.[4] ಅದು ಸಹಜವೂ ಕೂಡ. ಪಾಶ್ಚಾತ್ಯ ಕಲೆಯ ಸಂಪರ್ಕದಿಂದಾಗಿಯೇ ನಮ್ಮ ದೇಶದ ದೃಶ್ಯಕಲೆಯಲ್ಲೂ ಹೊಸತನ ಮೂಡಲಾರಂಭಿಸಿತು(ಅನಿವಾರ್ಯವಾಗಿ ಹೀಗೆ ಹೇಳಬೇಕಾಗಿದೆ). ಆರಂಭದಲ್ಲಿ ಅಧುನಿಕ ಚಿತ್ರಕಲಾವಿದರು ಎದುರಿಸಿದ ವಿವಾದಗಳು, ವೈರುಧ್ಯಗಳು ಮತ್ತು ಸವಾಲುಗಳು

ಏನೇನಿವೆಯೋ ಅವೆಲ್ಲ ಶಿಲ್ಪಕಲೆಯಲ್ಲೂ ಕಾಣಿಸಿಕೊಂಡವು, ಅದು ಸಹಜವೂ ಕೂಡ ಆಗಿದ್ದಿತು.

ಆಧುನಿಕ ಧ್ವನಿ: ಇಪ್ಪತ್ತನೆಯ ಶತಮಾನದ ಭಾರತದ ಶಿಲ್ಪಕಲೆಯ ಆಧುನಿಕ ಧ್ವನಿ ಮೊದಲೆರಡು ದಶಕಗಳಲ್ಲಿ ಸಣ್ಣಗೆ ಕಾಣಿಸಿಕೊಂಡು ಅನಂತರದಲ್ಲಿ ಅದು ಗಂಭೀರವಾಗಿ ಕೇಳಿಬಂತು. ದೇವಿಪ್ರಸಾದ ರಾಯ್ ಚೌಧರಿ, ಪ್ರದೋಷ್ ದಾಸ್ ಗುಪ್ತ, ಶಂಕೋ ಚೌಧರಿ, ರಾಮಕಿಂಕರ್ ಬೈಯ್ಸ್ (ಎಲ್ಲರೂ ರಾಜ್ಯದ ಹೊರಗಿನವರು) ಮೊದಾಲಾದವರ ಶಿಲ್ಪಗಳು ಜೀವದುಂಬಿ ಏರುಧ್ವನಿಯಲ್ಲಿ ಸದ್ದುಮಾಡಿ, ಇತರ ಶಿಲ್ಪಿಗಳಿಗೂ ಸ್ಫೂರ್ತಿ ನೀಡುವಲ್ಲಿ ಯಶಸ್ಸು ಪಡೆದವು.

ನಮ್ಮ ರಾಜ್ಯದ ಆಧುನಿಕ ಶಿಲ್ಪಕಲೆಯ ಚರಿತ್ರೆಯ ಆರಂಭದ ಪುಟಗಳು (20ನೇ ಶತಮಾನದ 2–3 ದಶಕಗಳು) ಅಷ್ಟೇನೂ ರೋಚಕವಾಗಿಲ್ಲ. ಕಾರಣ ಪಾಶ್ಚಾತ್ಯರಂತೆ ನಮ್ಮ ಆಧುನಿಕ ಸಮಕಾಲೀನ ದೃಶ್ಯಕಲೆ ತನ್ನ ಹಿಂದಿನ ಕಲಾ ಸಂಪ್ರದಾಯವನ್ನು ಧಿಕ್ಕರಿಸಲು ಹುಟ್ಟಿಕೊಂಡುದಲ್ಲ. ಬದಲಾಗಿ ಹೊಸ ಅನುಭವಗಳ ಅಭಿವ್ಯಕ್ತಿಗಾಗಿ, ದರ್ಶನಕ್ಕಾಗಿ ಬ್ರಿಟೀಷ್ ಅಕಾಡೆಮಿಕ್ ಶೈಲಿಯನ್ನು ನಮ್ಮ ಮೂಲ(ದೇಶೀ) ನೆಲೆಯ ಸತ್ವಗಳೊಂದಿಗೆ ಸಂಯೋಜಿಸಿ, ನಮಗೆ ಬೇಕಾದಂತೆ ಸೃಷ್ಟಿಸಿಕೊಂಡುದಾಗಿತ್ತು.[5] ಇದನ್ನೇ ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, 'ಅಂದು ನಮ್ಮನ್ನು ಆಳುತ್ತಿದ್ದ ಬ್ರಿಟೀಷ್ ವಸಹಾತುಶಾಹಿ ವ್ಯವಸ್ಥೆಯಲ್ಲಿ ಅವರ ಆಧುನಿಕ ಕಲಾಶೈಲಿಯನ್ನು[6] (ವಿಕ್ಟೋರಿಯನ್ ಅಥವಾ ಆಧುನಿಕ ವಾಸ್ತವ ಶೈಲಿ)[7] ನಮ್ಮ ದೇಶೀ ಕಲಾವಿದರು ನೇರವಾಗಿ ಅನುಕರಿಸಿದರು. ಹೀಗೆ ಅನುಕರಿಸಿ, ಅನುಸರಿಸಿದ್ದರಿಂದಾಗಿ ಆರಂಭದ ದಶಕಗಳ ಶಿಲ್ಪಕಲಾಕೃತಿಗಳಲ್ಲಿ ಆಂತರಿಕ ಒತ್ತಡ, ಅಭಿವ್ಯಕ್ತಿಯ ತುಡಿತಗಳ ಹಾಜರಿಯಲ್ಲಿ ನಿರಂತರತೆ ಕಂಡುಬರುವುದಿಲ್ಲ. ಆದರೆ ಇವರ ಪ್ರಯತ್ನಗಳು ಮುಂದಿನ ಯುವಶಿಲ್ಪಿಗಳಿಗೆ ಹೊಸ ಸ್ಫೂರ್ತಿ ನೀಡಿದ್ದಂತೂ ಸತ್ಯ. ಈ ಮಾತುಗಳಿಗೆ ಉದಾಹರಣೆಯಾಗಿ ಕೆ. ವೆಂಕಟಪ್ಪ,[8] ರೂಪಶಿಲ್ಪಿ ಬಸವಯ್ಯ, ಆರ್. ಎಸ್. ನಾಯ್ಡು, ಧನಂಜಯ ಶಿಲ್ಪಿ, ವೀರಪ್ಪ ಕುಂಬಾರ, ಶ್ರೀಶಂಕರ, ವಾದಿರಾಜ, ಎ.ಸಿ.ಎಚ್.ಆಚಾರ್ಯ ಮೊದಲಾದವರ ಶಿಲ್ಪಗಳನ್ನು ನೆನಪಿಸಿಕೊಳ್ಳಬಹುದು.

ಆರಂಭದಲ್ಲಿ ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಯಲ್ಲಿ, ನಂತರ ಕಲಕತ್ತಾದ ಕಲಾಶಾಲೆಯಲ್ಲಿ ಶಿಕ್ಷಣ ಪಡೆದು ಮೈಸೂರಿಗೆ ಮರಳಿದ್ದ ಕೆ.ವೆಂಕಟಪ್ಪ ಅವರು(1887–1962) ಪಾಶ್ಚಾತ್ಯ ಚಿತ್ರ–ಶಿಲ್ಪಕಲೆಯ ಬಗೆಗಿನ ತಮ್ಮ ಆಸಕ್ತಿಯನ್ನು ಹೆಚ್ಚಿಸಿಕೊಂಡಿದ್ದರು, ಮಾತ್ರವಲ್ಲ ಕೆಲವೇ ದಿನಗಳಲ್ಲಿ ಆ ಹಾದಿಯ ವರ್ಣಚಿತ್ರ ಹಾಗೂ ಶಿಲ್ಪಗಳನ್ನು ಸೃಷ್ಟಿಸಿದರು. ಹೊಸ ಭಾವ ವೈಭವಗಳಿಂದ ಕೂಡಿದ ಅವರ 'ರವೀಂದ್ರರ ಭಾವಶಿಲ್ಪ', 'ಹೋಟೆಲ್ ಮಾಣಿ'ಯ ಶಿಲ್ಪಗಳು ಮೇಲಿನ ಮಾತುಗಳಿಗೆ ಪುಷ್ಟಿನೀಡುವಂತಹವುಗಳಾಗಿವೆ. ಹೀಗೆ ನಮ್ಮ ರಾಜ್ಯದ ಶಿಲ್ಪಕಲೆಯಲ್ಲಿನ ಆಧುನಿಕತೆ ವೆಂಕಟಪ್ಪನವರ ಕಾಲದಿಂದಲೇ ಅಂಕುರಿಸಿತೆಂದರೆ ತಪ್ಪಾಗಲಾರದು.

ರೂಪಶಿಲ್ಪಿ ಎಂದೇ ಖ್ಯಾತರಾಗಿರುವ ಬಸವಯ್ಯ (1900–74) ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಶಾಲೆಯಲ್ಲಿ ಕಲಿತವರು. ನಂತರದ ದಿನಗಳಲ್ಲಿ ಮುಂಬೈಯ

ಶಿಲ್ಪಿಗಳ ಹಲವು ಸ್ಟುಡಿಯೋಗಳಲ್ಲಿ ಕಲಿತು, ರೂಪಶಿಲ್ಪದ ಉನ್ನತ ಹಂತಗಳನ್ನು ಮುಟ್ಟಿದವರು. ಮೈಸೂರಿಗೆ ಹಿಂದಿರುಗಿದ ಮೇಲೆ (1925–40ರ ಅವಧಿಯಲ್ಲಿ) ಹಲವು ವ್ಯಕ್ತಿಗಳ ಭಾವಶಿಲ್ಪ ಹಾಗೂ ರೂಪಶಿಲ್ಪಗಳನ್ನು ರಚಿಸುವ ಮೂಲಕ ಕರ್ನಾಟಕದ ಶಿಲ್ಪಕಲಾ ವಲಯದಲ್ಲಿ ಹೊಸ ಸಂಚಲನ ಮೂಡಿಸಿದರು.

ಶಿಲ್ಪ ಹಾಗೂ ಚಿತ್ರಕಲೆಗಳೆರಡನ್ನೂ ಕರಗತ ಮಾಡಿಕೊಂಡಿದ್ದ ಆರ್.ಎಸ್.ನಾಯ್ಡು ಅವರಂತೂ ಸ್ವಯಂ ಕಲಿಕೆಯ ಕಲಾವಿದರು. 1950–57 ರ ಸುಮಾರಿನಲ್ಲಿ ಕ್ರಮವಾಗಿ ಬೆಂಗಳೂರು, ಮೈಸೂರುಗಳಲ್ಲಿ ವಾಸವಾಗಿದ್ದ ಅವರು ಪಾಶ್ಚಾತ್ಯ ದೃಶ್ಯಕಲೆಯ ವಿವಿಧ ಮಗ್ಗುಲುಗಳನ್ನು ಪರಿಚಯ ಮಾಡಿಕೊಂಡಿದ್ದರು. ಒಮ್ಮೆ ಲಂಡನ್ನಿಗೂ ಹೋಗಿ ಬಂದಿದ್ದರು. ಪ್ಲಾಸ್ಟರ್ ಮಾಧ್ಯಮದಲ್ಲಿ ಹಲವಾರು ಭಾವಶಿಲ್ಪಗಳನ್ನು ಅಲ್ಲದೆ ಭಾವತೀವ್ರತೆ, ವ್ಯಂಗ್ಯ, ವಿಡಂಬನೆಗಳುಳ್ಳ ಉಬ್ಬುಶಿಲ್ಪಗಳನ್ನು ಸೃಷ್ಟಿಸಿದರು. ನಾಯ್ಡು ತಮ್ಮ ಬದುಕಿನ ವಿಕ್ಷಿಪ್ತತೆಯ ಒತ್ತಡಗಳನ್ನು ಶಿಲ್ಪ ಸೃಷ್ಟಿಪ್ರಕ್ರಿಯೆಯಲ್ಲಿ ಹಗುರಗೊಳಿಸಿಕೊಳ್ಳಲು ಯತ್ನಿಸಿದರು. ಅಸಾಮಾನ್ಯವೆನಿಸುವ ಸಂವೇದನಾಶೀಲತೆ ಮತ್ತು ತೀವ್ರ ಚಡಪಡಿಕೆಯುಳ್ಳವರಾಗಿದ್ದ ಇವರು ಮಾರ್ಕ್ಸ್‌ವಾದಿ ತತ್ವಗಳನ್ನು ತಮ್ಮ ಶಿಲ್ಪಗಳಲ್ಲಿ ಅನಾವರಣಗೊಳಿಸಲು ಹವಣಿಸಿದರು. ಪ್ಲಾಸ್ಟರ್ ಮಾಧ್ಯಮದ ಪುಟ್ಟ ಪುಟ್ಟ ಶಿಲ್ಪಗಳು ಇವರ ಶಿಲ್ಪಸೃಷ್ಟಿಯ ಸೂಕ್ಷ್ಮದೃಷ್ಟಿಯನ್ನು ಸಾರುವಂತಹ ರಚನೆಗಳಾಗಿವೆ. ನಾಯ್ಡು ಅವರ ಜೀವನವೇ ರೋಚಕತೆಯಿಂದ ಕೂಡಿದುದಾಗಿತ್ತು. ಬ್ರಿಟೀಷರ ವಿರುದ್ಧ ಬಂಡಾಯ, ಸೆರೆಮನೆ ವಾಸ, ಲೆನಿನ್‌ರ ಶಿಲ್ಪಸೃಷ್ಟಿ, ಆತ್ಮಹತ್ಯಾ ಯತ್ನ, ಇಂತಹ ಹಲವಾರು ಘಟನೆಗಳು ವಿಸ್ಮೃತಿಗೆ ಒಳಗಾಗದಂತಹವುಗಳು.

ಪ್ರಾಯಶಃ ಇದೇ ಕಾಲಘಟ್ಟದಲ್ಲಿ ಮುಂಬೈಯಲ್ಲಿ ಕಾಣಿಸಿಕೊಂಡ ಹೊಸ ಎಚ್ಚರ, ಬದಲಾವಣೆಗಳು ಉತ್ತರ ಕರ್ನಾಟಕದ ಹಲವು ಶಿಲ್ಪ/ ಚಿತ್ರಕಲಾವಿದರನ್ನು ಪ್ರಭಾವಿಸಿದವು. ಕಲಬುರ್ಗಿಯ ಧನಂಜಯ ಶಿಲ್ಪಿ ಅಂತಹವರಲ್ಲೊಬ್ಬರು. ಅವರ ಹಲವು ಭಾವಶಿಲ್ಪಗಳು, ವ್ಯಕ್ತಿಶಿಲ್ಪಗಳು ಆಕರ್ಷಕವಾದ ರಚನೆಗಳು. ತಾಯಿ–ಮಗು ಅಮೃತ ಶಿಲೆಯ ಶಿಲ್ಪವು ಶಿಲ್ಪಿಯವರ ಸೃಷ್ಟಿಪ್ರೌಢಿಮೆಯ ಅತ್ಯುತ್ತಮ ಉದಾಹರಣೆ ಎಂದರೆ ತಪ್ಪಲ್ಲ. ವಿಜಾಪುರ ಜಿಲ್ಲೆ ನಾಗರಾಳದ ಶಿಲ್ಪಿ ವೀರಪ್ಪ ಕುಂಬಾರ ಕೂಡ ಅಮೃತ ಶಿಲೆಯಲ್ಲಿ ಹಲವಾರು ಭಾವಶಿಲ್ಪಗಳನ್ನು ಸೃಷ್ಟಿಸಿರುವರು. ಇವರ ಕೆಲವು ಶಿಲ್ಪಗಳನ್ನು ಮಹಾರಾಷ್ಟ್ರದ ಔಂದ ಮ್ಯೂಸಿಯಂನಲ್ಲಿ ಕಾಣಬಹುದು. ಮೂಲತಃ, ಸಾಂಪ್ರದಾಯಿಕ ಶಿಲ್ಪಿಯಾಗಿರುವ ದೇವನಹಳ್ಳಿಯ ಎ.ಸಿ.ಎಚ್. ಆಚಾರ್ಯ ಅವರು ಅಪರೂಪಕ್ಕೆ ಕೆಲವು ನವ್ಯ ಶಿಲ್ಪಗಳನ್ನು ರಚಿಸಿರುವರು. ಪ್ಲಾಸ್ಟರ್ ಮಾಧ್ಯಮದಲ್ಲಿ ರಚಿಸಿರುವ ಕ್ಯುಬಿಸಂ ಶೈಲಿಯ ಶಿಲ್ಪಕಲಾಕೃತಿಗಳು ಅಂದಿನ ಸಂದರ್ಭದಲ್ಲಿ ಹೊಸ ಅನುಭವವನ್ನೇ ನೀಡಿದವು. ನಂತರದ ದಶಕಗಳಲ್ಲಿ (ಸ್ವಾತಂತ್ರ್ಯೋತ್ತರ ಕಾಲ) ಬಂದ ಹೊಸ ಪೀಳಿಗೆಯಿಂದ ಕರ್ನಾಟಕದ ಆಧುನಿಕ ಸಮಾಲೀನ ಶಿಲ್ಪಕಲೆ ಹೆಚ್ಚು ಗಾಂಭೀರ್ಯತೆ[9] ಮತ್ತು ಸ್ವಂತಿಕೆಗಳನ್ನು ಮೈಗೂಡಿಸಿಕೊಂಡು ಸೃಷ್ಟಿಗೊಂಡಿತೆನ್ನಬೇಕು.

ಸಮಕಾಲೀನ ಸಂವೇದನೆ: ಈ ಹಿನ್ನೆಲೆಯಲ್ಲಿ ಮುಖ್ಯರಾಗುವ ಶಿಲ್ಪಿಗಳೆಂದರೆ, ಪೊನ್ನಪ್ಪ ರಾಜಾರಾಮ, ಎನ್.ಎಚ್. ಕುಲಕರ್ಣಿ, ಎಲ್. ಪಿ. ಅಂಚನ್, ವೆಂಕಟಾಚಲಪತಿ,

ಬಾಲನ್ ನಂಬಿಯಾರ್, ವಿ.ಎ. ದೇಶಪಾಂಡೆ, ಎನ್. ಪುಷ್ಪಮಾಲಾ, ಭಾಸ್ಕರರಾವ್, ಶ್ಯಾಮಸುಂದರ, ಜಾನ್ ದೇವರಾಜ್ ಮೊದಲಾದವರು. ಇವರೆಲ್ಲ ಸೃಷ್ಟಿಸಿರುವ ವಿವಿಧ ಮಾಧ್ಯಮದ ಆಧುನಿಕ ಸಮಕಾಲೀನ ಶೈಲಿಯ ಶಿಲ್ಪಕಲಾಕೃತಿಗಳು ನಿಜವಾಗಿಯೂ ಗಮನಾರ್ಹವಾಗುತ್ತವೆ.

ಮೂಲತಃ ಕೊಡಗಿನವರಾದ ಪೊನ್ನಪ್ಪ ರಾಜಾರಾಮ್(1927–61) ಸೈನಿಕ ವೃತ್ತಿಯಲ್ಲಿದ್ದವರು. ಆ ಸಂದರ್ಭದಲ್ಲಿ ಅವರು ನೂರಾರು ನವ್ಯಶೈಲಿಯ ಶಿಲ್ಪಗಳನ್ನು ಸೃಷ್ಟಿಸಿದರು. ಮರದ ಬೇರು–ಬೊಡ್ಡೆಗಳಲ್ಲಿ ಸಹಜವಾಗಿ ಕಂಡುಬರುವ ಆಕಾರಗಳನ್ನು ಯಥಾವತ್ತಾಗಿ, ಕೆಲವೊಮ್ಮೆ ಅಲ್ಪ ಸ್ವಲ್ಪ ಬದಲಿಸಿ, ಹೊಂದಿಸಿ ಶಿಲ್ಪಗಳನ್ನು ರಚಿಸಿರುವುದು ವಿಶೇಷ. ಇಂಗ್ಲೆಂಡ್, ಸ್ಕಾಟ್‌ಲ್ಯಾಂಡ್, ಬೆಲ್ಜಿಯಂ, ಜರ್ಮನಿ, ಇಟಲಿ ದೇಶಗಳನ್ನು ಸುತ್ತಾಡಿ ಅಲ್ಲಿನ ಮ್ಯೂಸಿಯಂ, ಗ್ಯಾಲರಿ ಮತ್ತು ಪ್ರದರ್ಶನಗಳಲ್ಲಿ ಅಂದಿನ ವಿಖ್ಯಾತ ಶಿಲ್ಪಿಗಳನೇಕರ ಶಿಲ್ಪಗಳನ್ನು ರಾಜಾರಾಮ್ ಗಮನಿಸಿದರು. ಬಳಿಕ ಆ ಪ್ರಭಾವದ ನೆರಳಿನಲ್ಲಿ ಹಲವು ಶಿಲ್ಪಗಳನ್ನು ರಚಿಸಿದರು. 1958 ರಲ್ಲಿ ದೆಹಲಿಯಲ್ಲಿ ತಮ್ಮ ಇಂತಹ ಶಿಲ್ಪಗಳ ಪ್ರದರ್ಶನವೊಂದನ್ನು ಏರ್ಪಡಿಸಿ ಗಮನಸೆಳೆದರು. ವಿಶೇಷವಾಗಿ ಹೇನ್ರಿಮೂರ್, ಬರ್‌ಬರಾ ಹೆಪವೊರ್ತ ಮೊದಲಾದ ಪಾಶ್ಚಾತ್ಯ ಆಧುನಿಕ/ಸಮಕಾಲೀನ ಶಿಲ್ಪಿಗಳ ಪ್ರಭಾವಗಳನ್ನು ಅರಗಿಸಿಕೊಂಡು ಮರದ ಮಾಧ್ಯಮದಲ್ಲಿ ಶಿಲ್ಪಗಳನ್ನು ಸೃಷ್ಟಿಸಿದರು. 1959 ರಲ್ಲಿ ಮುಂಬೈಯಲ್ಲೂ ತಮ್ಮ ಶಿಲ್ಪಗಳನ್ನು ಪ್ರದರ್ಶಿಸಿದರು. 'ಮದರ್ ಆಂಡ್ ಚೈಲ್ಡ್', 'ಡ್ರಮ್ಮರ್', 'ಹೊರೆಹೊತ್ತವೆ, 'ಗುಟ್ಟು' ಮುಂತಾಗಿ ಶೀರ್ಷಿಕೆಗಳನ್ನು ಹೊಂದಿರುವ ಶಿಲ್ಪಗಳು ಗಮನಾರ್ಹವಾದವುಗಳಾಗಿವೆ. ಒಟ್ಟಾರೆ ಅವರ ಶಿಲ್ಪಗಳು ಸಾಂಕೇತಿಕ, ಅಮೂರ್ತ. ನೆರಳು ಬೆಳಕುಗಳನ್ನು ಅವರ ಬುಹುತೇಕ ಶಿಲ್ಪಗಳು ದುಡಿಸಿಕೊಂಡಿವೆ. ರಾಜಾರಾಂರ ಶಿಲ್ಪಗಳನ್ನು ಮೆಚ್ಚಿಕೊಂಡಿದ್ದ ಕಲಾವಿದ ಸತೀಶ್ ಗುಜ್ರಾಲರು ಇವರ ಹೆಸರಿನಲ್ಲಿ ಒಂದು 'ಮ್ಯೂಸಿಯಂ ಆಫ್ ಮಾಡರ್ನ ಆರ್ಟ' ರಾಜಾರಾಂರ ಹೆಸರಿನಲ್ಲಿ ಸ್ಥಾಪಿಸಲು ಇಚ್ಚಿಸಿ ಇವರ ತಂದೆ ಬ್ರಿಗೇಡಿಯರ್ ಪೊನ್ನಪ್ಪ ಅವರಿಗೆ ಪತ್ರವೊಂದನ್ನು ಬರೆದಿದ್ದರಂತೆ. ಇದರಿಂದ ರಾಜಾರಾಮರ ಶಿಲ್ಪಗಳ ಮಹತ್ವದ ಅರಿವು ನಮಗಾಗುತ್ತದಲ್ಲವೇ? ಹಾಗೆ ನೋಡಿದರೆ ನಮ್ಮ ರಾಜ್ಯದ ನಿಜವಾದ ಆಧುನಿಕ– ಸಮಕಾಲೀನ ಶಿಲ್ಪಕಲೆಯ ಚರಿತ್ರೆ ಆರಂಭವಾಗುವುದೇ ರಾಜಾರಾಮ ಅವರಿಂದ ಎನ್ನಬೇಕಾಗುತ್ತದೆ.

ಅನಂತರದಲ್ಲಿ ಬಾದಾಮಿಯವರಾದ ಎನ್. ಎಚ್. ಕುಲಕರ್ಣಿ ಅವರು ಬರೋಡದಲ್ಲಿ ಶಿಲ್ಪಕಲೆಯನ್ನು ಕಲಿತು ವಿವಿಧ ಮಾಧ್ಯಮಗಳಲ್ಲಿ ಗಮನಾರ್ಹವಾದ ಸಮಕಾಲೀನ ಶೈಲಿಯ ಶಿಲ್ಪಗಳನ್ನು ರಚಿಸಿದರು. ಭಾರತೀಯ ಜನಪದ ಹಾಗೂ ಸಾಂಪ್ರದಾಯಿಕ ಕಲೆಗಳೆರಡನ್ನು ಪಾಶ್ಚಾತ್ಯ ಆಧುನಿಕ ಶೈಲಿಗಳೊಡನೆ ಸಮೀಕರಿಸಿದರು. ಸಮಕಾಲೀನ ಶಿಲ್ಪಗಳನ್ನು ಸೃಷ್ಟಿಸಿದರು. 'ಅಶ್ವ' ಸರಣಿಯ ಲೋಹಶಿಲ್ಪಗಳಂತೂ ಇವರಿಗೆ ಪ್ರಸಿದ್ದಿಯನ್ನೇ ತಂದುಕೊಟ್ಟವು. ಅಲ್ಲದೆ ಬೃಹತ್ತಾಗಿರುವ ಅನೇಕ ಪರಿಸರ ಶಿಲ್ಪಗಳನ್ನು ವಿವಿಧ ಮಾಧ್ಯಮಗಳಲ್ಲಿ ನಿರ್ಮಿಸಿರುವುದು ಇವರ ಬಹುದೊಡ್ಡ ಕೊಡುಗೆ. ತಮ್ಮ ಬದುಕಿನ ಬಹುಭಾಗವನ್ನು ದೆಹಲಿಯಲ್ಲೇ ಸವೆಸಿ ಅಮರರಾದರು. ಜನಪದೀಯ ಅಂಶಗಳನ್ನು ತಮ್ಮ ಶಿಲ್ಪಗಳಲ್ಲಿ ಅಡಗಿಸಿರುವ ಎಲ್.ಪಿ.ಅಂಚನ್ ಅವರು ವಿವಿಧ ಮಾಧ್ಯಮಗಳಲ್ಲಿ ಆಧುನಿಕ

ಸಮಕಾಲೀನ ಶಿಲ್ಪಗ'ಳನ್ನು ರಚಿಸಿರುವರು. ವಿಶೇಷವಾಗಿ ಇವರ ಲೋಹದ ಹಾಳೆಯ ಶಿಲ್ಪಕಲಾಕೃತಿಗಳು ಗಮನಾರ್ಹವಾಗಿವೆ. ಬಹುತೇಕ ಕೃತಿಗಳು ಘನಾಕೃತಿ ಶೈಲಿಯವು. ಇವರ ಗಿರಿಕನ್ಯೆ ಶಿಲ್ಪಕ್ಕೆ 1984 ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಶಸ್ತಿಯೂ ಸಂದಿರುವುದು ಹೆಮ್ಮೆಯ ಸಂಗತಿ. ದೇವನಹಳ್ಳಿಯ ಶಿಲ್ಪಿ ಎ.ಸಿ.ಎಚ್. ಆಚಾರ್ಯರಲ್ಲಿ ಶಿಲ್ಪಕಲೆಯನ್ನು ಕಲಿತಿರುವ ಬೆಂಗಳೂರಿನ ವೆಂಕಟಾಚಲಪತಿಯವರು ಸಾಂಪ್ರದಾಯಿಕ ನೆಲೆಯಿಂದ ಆಧುನಿಕ ಶೈಲಿಗೆ ಜಿಗಿದವರು. ನಮ್ಮ ಸಂದರ್ಭದ ಹಿರಿಯ ಪ್ರಮುಖ ಶಿಲ್ಪಿ ಇವರು. ಶಿಲ್ಪಕಲೆಯಲ್ಲಿ ತಮ್ಮದೇ ಆದ ಛಾಪು ಮೂಡಿಸಿದವರು. ಲೋಹ, ಟೆರಾಕೊಟ್ಟ, ಫೈಬರ್, ಕಲ್ಲು ಮುಂತಾದ ಮಾಧ್ಯಮಗಳಲ್ಲಿ ಪರಿಣಾಮಕಾರಿಯಾದಂತಹ ಶಿಲ್ಪಕಲಾಕೃತಿಗಳನ್ನು ನಾಲ್ಕೈದು ದಶಕಗಳಿಂದ ಸೃಷ್ಟಿಸುತ್ತ ಬಂದಿರುವರು. ನೋವು-ನಲಿವುಗಳಿಗೆ ಸಂಬಂದಿಸಿದಂತೆ ವಿಕೃತಿಯನ್ನು ದುಡಿಸಿಕೊಂಡ ಚಲಪತಿಯವರು ರೊಮ್ಯಾಂಟಿಕ್ ನೆಲೆಯಲ್ಲೂ ಹಲವು ಶಿಲ್ಪಗಳನ್ನು ರಚಿಸಿ ಗಮನ ಸೆಳೆದಿರುವರು. ಇವರ ಲೋಹಶಿಲ್ಪವೊಂದಕ್ಕೆ ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ದಕ್ಕಿರುವುದು ಕನ್ನಡ ಸಮಕಾಲೀನ ಶಿಲ್ಪ ಸಂವೇದನೆಗೆ ಸಂದ ಗೌರವವಾಗಿದೆ. ಬೆಂಗಳೂರಲ್ಲಿ ನೆಲೆಸಿರುವ ಕೇರಳ ಮೂಲದವರಾದ, ಬಾಲನ್ ನಂಬಿಯಾರ್ ಕೂಡ ಹಲವಾರು ಶಿಲ್ಪಗಳನ್ನು ರಚಿಸಿರುವರು. ಆಳೆತ್ತರಕ್ಕೂ ಮಿಗಿಲಾಗಿರುವ ಇವರ ಲೋಹ ಶಿಲ್ಪಗಳು ಸರಳೀಕೃತ, ಆಕಾರಗಳಿಂದ ಕೂಡಿದ ಸೃಷ್ಟಿಗಳು. ಸಿಮೆಂಟ್ ಮತ್ತು ಫೈಬರ್ ಮಾಧ್ಯಮಗಳನ್ನು ಇವರು ದುಡಿಸಿಕೊಂಡಿರುವರು. ಈಚೆಗೆ ನೆಲದ ಮೇಲೆ ಹರಡಿದಂತೆ ಕಾಣುವ ಆರ್ಕಿಟೆಕ್ಟೊನಿಕ್ ತರಹದ ಶೈಲಿಯ ಶಿಲ್ಪಕಲಾಕೃತಿಗಳನ್ನು ರಚಿಸಿ ಗಮನ ಸೆಳೆದಿರುವರು. ಕರ್ನಾಟಕದ ಮಟ್ಟಿಗೆ ನವ್ಯಶೈಲಿಯ ಶಿಲ್ಪವೊಂದಕ್ಕೆ ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ಪಡೆದವರಲ್ಲಿ ನಂಬಿಯಾರ್ ಮೊದಲಿಗರು.

ಮೈಸೂರಿನ ಜಯಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿಯಲ್ಲಿ (ಕಾವಾ) ಪ್ರಸ್ತುತ ಡೀನ್‌ರಾಗಿರುವ ಬಾದಾಮಿ ಮೂಲದ ಶಿಲ್ಪಿ ವಿ. ಎ. ದೇಶಪಾಂಡೆ ಬರೋಡಾದಲ್ಲಿ ಶಿಲ್ಪಕಲೆ ಕಲಿತು ಬಂದವರು. ಲೋಹ, ಕಲ್ಲು, ಫೈಬರ್ ಮುಂತಾದ ಮಾಧ್ಯವಗಳನ್ನು ಶಿಲ್ಪರಚನೆಗೆ ಬಳಸಿರುವರು. ವಸ್ತುವೊಂದು ದ್ರವೀರ್ಭವಿಸಿ ತಕ್ಷಣಕ್ಕೆ ಘನೀಕೃತಗೊಂಡಾಗ ಕಾಣುವ ಸ್ಥಿತಿಯನ್ನು ಕೆಲವು ಲೋಹ ಶಿಲ್ಪಗಳಲ್ಲಿ ಸೊಗಸಾಗಿ ತಂದಿರುವರು. ಎದೆಮಟ್ಟದ ಎತ್ತರದ ಕಂಚಿನ ಶಿಲ್ಪಗಳೂ ಆಕರ್ಷಕವಾಗಿವೆ. ಟೆರಾಕೊಟ್ಟ ಮಾಧ್ಯಮದ ಶಿಲ್ಪವೊಂದಕ್ಕೆ (ಹಂದಿಗಳು) ಟ್ರಿನಾಲೆ ಪ್ರಶಸ್ತಿ ಪಡೆದಿರುವ ಎನ್. ಪುಷ್ಪಮಾಲಾ ಹಲವಾರು ಪರಿಣಾಮಕಾರಿ ಸಮಕಾಲೀನ ಶಿಲ್ಪಕಲಾಕೃತಿಗಳನ್ನು ರಚಿಸಿ ಅಂತರ್‍ರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿರುವರು. ದೃಶ್ಯಕಲಾವಲಯದೊಳಗೆ ಜಾನಪದ ಹಾಗು ಜನಪ್ರೀಯ ಕಲಾ ಪ್ರಕಾರಗಳನ್ನು ಭಾರತೀಯ ಸನ್ನಿವೇಶದ ಹಿನ್ನೆಲೆಯಲ್ಲಿ ಸಿಂಹಾವಲೋಕನ ಮಾಡುವ ಉತ್ಸಾಹವಿದ್ದ ಕಾಲವದು. ಆಗ ಪುಷ್ಪಮಾಲ ತಮ್ಮ ಸಮಕಾಲೀನರೊಡನೆ ಅಚ್ಚ ಭಾರತೀಯವಾದುದನ್ನು ಸೃಷ್ಟಿಸುವಲ್ಲಿ ತಲ್ಲೀನರಾದುದು ವಿಶೇಷ ಎಂದು ವಿಮರ್ಶಕ ಕೆ.ವಿ.ಸು.ವ್ಯಾಖ್ಯಾಸುತ್ತಾರೆ. 1983–85ರ ನಡುವಿನ ಅವರ ಟೆರಾಕೊಟ್ಟ ರಚನೆಗಳು ಈ ಅಭಿಪ್ರಾಯಕ್ಕೆ ಉದಾಹರಣೆಯಾಗುತ್ತವೆ. ಈ ಕಲಾಕೃತಿಗಳು ಸಮಕಾಲೀನತೆ ಮತ್ತು ಕಲಾವಿದೆಯ ವೈಯಕ್ತಿಕ ದೃಷ್ಟಿಕೋನಗಳೆರಡರಿಂದಲೂ ಅನನ್ಯವಾಗಿ ಕಾಣುತ್ತವೆ, ಬಹುಕಾಲ ಕಾಡುತ್ತವೆ. ಸಾಮಾಜಿಕ ವ್ಯವಸ್ಥೆ ಮತ್ತು ಶಿಲ್ಪಗಳನ್ನು ಪ್ರಸ್ತುತ ನೋಡುವ ದೃಷ್ಟಿ ಹಾಗು ಕಲೆಯ ಬಗೆಗೆ ನಡೆಯುವ

ಜಿಜ್ಞಾಸೆಗಳ ಸಾಂಪ್ರದಾಯಿಕ ಕ್ಲೀಷೆಗಳ ವಿರುದ್ಧದ ಸಿಟ್ಟನ್ನು ಅವರ ಹಲವು ಶಿಲ್ಪಗಳು ಮೈಗೂಡಿಸಿಕೊಂಡಿವೆ. ಹಾಸ್ಯ, ವಿಡಂಬನೆ, ವ್ಯಂಗ್ಯ ಭಾವಗಳ ಅಭಿವ್ಯಕ್ತಿಗೆ ಟೆರಾಕೊಟ್ಟ ಅಲ್ಲದೆ ಫೈಬರ್, ಪ್ಲಾಸ್ಟರ್, ಮಾಧ್ಯಮಗಳನ್ನೂ ಈ ಶಿಲ್ಪಿನಿ ದುಡಿಸಿಕೊಂಡಿರುವರು. ಬಹುವಾಗಿ ಅಮೂರ್ತ ನೆಲೆಯಲ್ಲಿ ಶಿಲ್ಪಕಲಾಕೃತಿಗಳನ್ನು ರಚಿಸುತ್ತ ಗಮನ ಸೆಳೆದವರಲ್ಲಿ ಯು. ಭಾಸ್ಕರರಾವ್ ಒಬ್ಬರು. ಶಿಲೆ ಮತ್ತು ಲೋಹ ಮಾಧ್ಯಮಗಳಲ್ಲಿ ಹಲವು ಗಮನಾರ್ಹ ಶಿಲ್ಪಗಳನ್ನಿವರು ರಚಿಸಿರುವುದುಂಟು.

ಗ್ರಾಫಿಕ್ ಕಲಾವಿದ ಶ್ಯಾಮಸುಂದರ್ ಹಲವು ಶಿಲ್ಪಗಳನ್ನೂ ರಚಿಸಿರುವರು. ಕಲ್ಲು, ಮರ ಮತ್ತು ಅಲ್ಯೂಮಿನಿಯಂ ಮಾಧ್ಯಮಗಳನ್ನು ಬಳಸಿಕೊಂಡು ಸೃಷ್ಟಿಗೊಂಡ ಬಹುಪಾಲು ಶಿಲ್ಪಗಳಲ್ಲಿ ಬದುಕಿನ ವಿಕೃತ ಸೌಂದರ್ಯ ಅರಳಿದೆ. ಬದುಕಿನ ಭೀಕರ ಅನುಭವಗಳು 'ಕಬಾಬ್' ಸರಣಿ ಶಿಲ್ಪಗಳಲ್ಲಿ ಮೂಡಿಬಂದಿವೆ. ಕೆಲವೊಮ್ಮೆ ಅತ್ಯಂತ ಒರಟು, ವಿಕೃತ ಎನಿಸಿದರೂ ತೀವ್ರ ಸಂವೇದನೆಯಿಂದಾಗಿ ಪರಿಣಾಮಕಾರಿ ಎನಿಸುತ್ತವೆ. ಸಾಮಾಜಿಕ ವ್ಯವಸ್ಥೆಯ ಬಗೆಗೆ ತೀವ್ರವಾಗಿ ಸ್ಪಂದಿಸಿ, ಎಡಪಂಥೀಯ ಧೋರಣೆಯ ದೊಡ್ಡ ಅಳತೆಯ ಶಿಲ್ಪಗಳನ್ನು ರಚಿಸಿದವರು ಜಾನ್ ದೇವರಾಜ್‌ರು. ವ್ಯವಸ್ಥೆಯಲ್ಲಿನ ಸಂಕಟ, ತಳಮಳ ನೋವು-ನಲಿವುಗಳನ್ನು ಬಂಡಾಯದ ನೆಲೆಯಲ್ಲಿ ಅದರಲ್ಲೂ ವಿಕೃತ ರೂಪದಲ್ಲಿ ಅಭಿವ್ಯಕ್ತಿಸಿರುವರು. ತಮ್ಮ ವಿಶಿಷ್ಟ ರೀತಿಯ ಅಭಿವ್ಯಕ್ತಿಗೆ ಮರ, ಶಿಲೆ, ಫೈಬರ್, ಟೆರಾಕೊಟ್ಟ, ಮಾಧ್ಯಮಗಳನ್ನು ದೇವರಾಜ್ ದುಡಿಸಿಕೊಂಡಿರುವರು.

ಚಿತ್ರಕಲಾವಿದರ ಶಿಲ್ಪಗಳು: ಈ ಮಧ್ಯೆ ನಮ್ಮ ಕೆಲವು ಪ್ರಸಿದ್ಧ ಹಿರಿಯ ಚಿತ್ರಕಲಾವಿದರು ಆಗಾಗ ಗಂಭೀರ ನೆಲೆಯ ಶಿಲ್ಪಕಲಾಕೃತಿಗಳನ್ನು ರಚಿಸಿರುವುದುಂಟು. ಆರ್. ಎಂ. ಹಡಪದ, ನಟರಾಜ ಶರ್ಮ, ಯೂಸುಫ್ ಅರಕ್ಕಲ್, ವಿ. ಜಿ. ಅಂದಾನಿ, ಎಲ್. ಶಿವಲಿಂಗಪ್ಪ, ಎಂ. ಎಸ್. ಮೂರ್ತಿ, ರಾಜು, ಕೆ. ಜಿ. ಅರುಣ್, ಬಾಬು ಈಶ್ವರ್ ಪ್ರಸಾದ, ವಿವ್ಯಾನ್ ಸುಂದರಂ, ರಾಜೇಶ್ ದೇವಣಗಾಂ ಮೊದಲಾದವರು ಈ ನಿಟ್ಟಿನಲ್ಲಿ ಪ್ರಮುಖರಾಗಿರುತ್ತಾರೆ. ಇವರೆಲ್ಲ ಬಹುಪಾಲು ಮಣ್ಣು, ಮರ, ಪ್ಲಾಸ್ಟರ್, ಫೈಬರ್, ಮಿಶ್ರ, ಮತ್ತು ಕ್ವಚಿತ್ತಾಗಿ ಕಲ್ಲು ಮಾಧ್ಯಮಗಳಲ್ಲಿ ಶಿಲ್ಪಗಳನ್ನು ಸೃಷ್ಟಿಸಿರುವರು.

ಚಿತ್ರಕಲೆಯಲ್ಲಿ ಗಂಭೀರ ಹೆಜ್ಜೆಗಳನ್ನು ಮೂಡಿಸಿರುವ ಯೂಸೂಫ್ ಅರಕ್ಕಲ್ ಟೆರಾಕೊಟ್ಟ, ಸೆರಾಮಿಕ್ ಮತ್ತು ಲೋಹ ಮಾದ್ಯಮಗಳಲ್ಲಿ ಶಕ್ತಿಯುತ ಅಭಿವ್ಯಕ್ತಿಯಿಂದ ಕೂಡಿದ ಹಲವು ಶಿಲ್ಪಗಳನ್ನು ರಚಿಸಿರುವರು. ಹಲವು ಶಿಲ್ಪಗಳಲ್ಲಿ ವಿಕೃತಿಯ ವೈಭವೀಕರಣವಿದ್ದರೆ 'ಹಸಿವಿನ ಮುಖಗಳು' ಶೀರ್ಷಿಕೆಯ ಶಿಲ್ಪಗಳು ನೀಡುವ ನೋವಿನ ಒಳನೋಟಗಳು ಅನನ್ಯ. ತೀರ ಈಚೆಗೆ ದೊಡ್ಡ ಅಳತೆಯ ಪರಿಸರ ಶಿಲ್ಪಗಳನ್ನು ಯೂಸುಫ್ ರಚಿಸಿರುವರು. ಬಾಬು ಈಶ್ವರಪ್ರಸಾದ್ ಚಿತ್ರಕಲೆಯಲ್ಲಿ ಮಿಂಚುತ್ತಿರುವ ಹೆಸರು. ಆದರೂ ವಿಶಿಷ್ಠ ಚಿಂತನೆಗಳಿಂದ ಕೂಡಿದ ಶಿಲ್ಪಗಳನ್ನು ರಚಿಸಿರುವರು. ಮನುಷ್ಯನ ಅಸಹಾಯಕತೆ, ಸಾವು-ನೋವಿನ ಅನುಭವಗಳಿಂದ ಕೂಡಿದ ಶಿಲ್ಪಗಳು ಇವರಿಂದ ಆಗಾಗ ರಚನೆಗೊಂಡದ್ದಿದೆ. ಹೆನ್ರಿಮೂರ್‌ನಂತಹ ಶಿಲ್ಪಿಯ ಕಲಾಕೃತಿಗಳ ಪ್ರಭಾವಲಯಕ್ಕೆ ಸಿಲುಕಿ ನಂತರ ಸ್ವಂತಿಕೆ ತೋರ್ಪಡಿಸಿದ ಕೆ. ಜಿ. ಅರುಣ್ ಆರಂಭದಲ್ಲಿ ಮರ ಮತ್ತು ಫೈಬರ್

ಮಾಧ್ಯಮಗಳಲ್ಲಿ ಅಭಿವ್ಯಕ್ತಿಸಿದರು. ಅನಂತರ ಕಬ್ಬಿಣ, ಕಂಚುಗಳನ್ನು ಮರದೊಂದಿಗೆ ಅಗತ್ಯ ಕಂಡಲ್ಲಿ ಸಂಯೋಜಿಸಿ ಶಿಲ್ಪಗಳನ್ನು ಸೃಷ್ಟಿಸಿರುವರು. ಎಂ.ಎಸ್. ಮೂರ್ತಿ ಚಿತ್ರಕಲೆ, ಬರೆಹ ಮತ್ತು ಸಂಘಟನೆಗಳೊಂದಿಗೆ ಆಗಾಗ ಶಿಲ್ಪಗಳನ್ನು ರಚಿಸಿರುವುದುಂಟು. ಅಭಿವ್ಯಕ್ತಿಗೆ ಶಿಲೆ, ಮತ್ತು ಮರಗಳನ್ನು ದುಡಿಸಿಕೊಂಡಿರುವರು. ಎಲ್. ಶಿವಲಿಂಗಪ್ಪ ಅವರೂ ಚಿತ್ರಕಲೆಯೊಂದಿಗೆ ಬರೆವಣಿಗೆಯನ್ನು ನಿರಂತರವಾಗಿ ರೂಢಿಸಿಕೊಂಡವರು. ಆಗಾಗ ಶಿಲ್ಪಗಳನ್ನು ಸೃಷ್ಟಿಸುತ್ತ ಬಂದಿರುವರು. ಕಂಚು ಹಾಗೂ ಮರಳುಶಿಲೆಯ ನವ್ಯಶಿಲ್ಪಗಳು ಅವರಿಂದ ಮೂಡಿಬಂದಿವೆ. ಚಿತ್ರಕಲಾವಿದ ರಾಮ್‌ದಾಸ್ ಆಡ್ಯಂತಾಯರು ದಕ್ಷಿಣ ಕನ್ನಡದ ಭೂತಾರಾಧನಾ ಮೂಲದ ಶಿಲ್ಪಗಳು ಹಾಗೂ ಶೃಂಗಾರ ಸುಂದರಿಯಂತಹ ಆಧುನಿಕ ಸಂವೇದನೆಗಳ ಶಿಲ್ಪಗಳನ್ನು ರಚಿಸಿರುವರು. ವಿ.ಆರ್.ಸಿ. ಶೇಖರ್ ಚಿತ್ರದುರ್ಗ ಕೋಟೆಯ ಹಲವು ಭೂದೃಶ್ಯ ಶಿಲ್ಪಗಳನ್ನು ಕಂಚಿನಲ್ಲಿ ರೂಪಿಸಿರುವುದು ವಿಶಿಷ್ಟ ರೀತಿಯದು.

ಎಂ. ರಾಮಮೂರ್ತಿ ಅವರು ತಮ್ಮ ಸಮಕಾಲೀನ ಅನುಭವಗಳನ್ನು ಟೆರಾಕೊಟ್ಟ, ಮರ ಮಾಧ್ಯಮಗಳಲ್ಲಿ ಅಭಿವ್ಯಕ್ತಿಸಿರುವುದು ಗಮನಾರ್ಹ. ರಾಜಕೀಯ ಭ್ರಷ್ಟಾಚಾರ, ಶೋಷಿತರ ನೋವು ಮತ್ತು ಬರದ ಮುಖಗಳು ಅವರ ಶಿಲ್ಪಗಳಲ್ಲಿ ಮೈತಳೆದಿವೆ. ದೃಶ್ಯಕಲೆ ಕುರಿತ ಬರವಣಿಗೆಗೆ ಪರಿಚಿತರಾದ ಎನ್. ಮರಿಶಾಮಾಚಾರ್ ಹಲವು ಶಿಲ್ಪಗಳನ್ನೂ ಸೃಷ್ಟಿಸಿರುವರು. ಪ್ರಸಿದ್ಧ ಚಿತ್ರಕಲಾವಿದ ಎಸ್. ಜಿ. ವಾಸುದೇವ್ ಅವರೂ ಲೋಹದ ಫಲಕಗಳ ಉಬ್ಬು ಶಿಲ್ಪಗಳಲ್ಲಿ ಜನಪದ ಕಲ್ಪನೆಗಳಿಂದ ಸ್ಫೂರ್ತಿಗೊಂಡು ಅಭಿವ್ಯಕ್ತಿಸಿರುವರು. ಸಮಕಾಲೀನ ಸ್ಪಂದನೆಯ ಸೆಳಕುಗಳೂ ಅವರ ಇಂತಹ ಶಿಲ್ಪಗಳಲ್ಲಿ ತೂರಿಕೊಂಡಿವೆ. ಮೈಥುನ, ಅವನು ಮತ್ತು ಅವಳು ಇತ್ಯಾದಿ ಕಲಾಕೃತಿಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

1990ರ ದಶಕದಿಂದ ಈಚೆಗೆ ಹಲವಾರು ಗಂಭೀರ ಯುವ, ಪ್ರತಿಭಾವಂತ ಶಿಲ್ಪಿಗಳನ್ನು ಕಾಣುತ್ತೇವೆ. ವಿಶೇಷವಾಗಿ ಕಲಾ ಶಾಲೆಗಳಿಂದ ಹೊರಬಂದು ಅಭಿವ್ಯಕ್ತಿಸುತ್ತಿರುವವರಲ್ಲಿ ಕೆಲವರು ಶಿಲ್ಪವನ್ನೇ ತಮ್ಮ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ದುಡಿಸಿಕೊಳ್ಳುತ್ತಿರುವವರು. ಹಾಗೂ ಗ್ರಾಫಿಕ್, ವರ್ಣಚಿತ್ರಗಳೊಂದಿಗೆ ಆಗಾಗ ಶಿಲ್ಪಗಳನ್ನು ಸೃಷ್ಟಿಸುತ್ತಿರುವ ಯುವ ಕಲಾವಿದರೂ ಇದರಲ್ಲಿ ಸೇರುತ್ತಾರೆ. ನಾರಾಯಣ ಸೂತ್ರದಾರ, ಭೌನಿ, ಎಂ.ಸಿ.ರಮೇಶ್, ಉಮೇಶ್, ರಮೇಶ್‌ಚಂದ್ರ, ಓಂ-ಪ್ರಕಾಶ, ಸುರೇಶ್, ನಾಗಪ್ಪ ಪ್ರಧಾನಿ, ವಿಜಯರಾವ್, ವೀರಣ್ಣ ಅರ್ಕಸಾಲಿ, ಶಿವಾನಂದ ಬಂಟನೂರ, ರೇಣುಕ ಕೇಸರಮಡು, ರಾಜು ಮೊದಲಾದವರು ಸಮಕಾಲೀನವಾಗಿ ಗಂಭೀರವಾದ ಶಿಲ್ಪಗಳನ್ನು ಸೃಷ್ಟಿಸಿದ್ದಾರೆ. ನಾರಾಯಣ ಸೂತ್ರದಾರ ಮತ್ತು ಬೌನಿ ಅವರುಗಳು ಹೊರರಾಜ್ಯದಿಂದ ಬಂದು ಬೆಂಗಳೂರಲ್ಲಿ ನೆಲೆಸಿರುವವರು. ಬೌನಿ ಮರ, ಲೋಹ, ಫೈಬರ್ ಮೊದಲಾದ ಮಾಧ್ಯಮಗಳಲ್ಲಿ ಶಿಲ್ಪಗಳನ್ನು ಸೃಷ್ಟಿಸುತ್ತಾರೆ. ಮಧ್ಯಪ್ರದೇಶದ ಮೂಲದ ಇವರು ಶಾಂತಿನಿಕೇತನದಲ್ಲಿ ಶಿಲ್ಪಕಲೆಯನ್ನು ಕಲಿತವರು. ಬೌನಿ ಚಿಕ್ಕವಯಸ್ಸಿನಲ್ಲೇ ಗಮನಾರ್ಹ ಸೃಷ್ಟಿಗಳಿಗೆ ಕಾರಣರಾಗಿದ್ದರಂತೆ. ನಾರಾಯಣ ಸೂತ್ರದಾರ್ ಮರ, ಕಲ್ಲು ಮತ್ತು ಲೋಹ ಮಾಧ್ಯಮಗಳಲ್ಲಿ ರಚಿಸಿರುವ ಅಮೂರ್ತ ಶೈಲಿಯ ಹಲವು ಶಿಲ್ಪಗಳು ಸಮಕಾಲೀನವಾಗಿ ಗಮನ ಸೆಳೆಯುವಂಥವು.

ಎಂ.ಸಿ. ರಮೇಶ ಅವರು ಮರ ಮತ್ತು ಶಿಲಾ ಮಾಧ್ಯಮಗಳಲ್ಲಿ ಗಂಭೀರ ನೆಲೆಯ ಶಿಲ್ಪಗಳನ್ನು ಸೃಷ್ಟಿಸುವಲ್ಲಿ ತೊಡಗಿಕೊಂಡಿರುವವರು. ಬದುಕಿನ ವಿಕೃತಿ ಮತ್ತು ಉಸಿರುಗಟ್ಟಿಸುವ ಸಂದರ್ಭಗಳಿಂದ ತಳಮಳಗೊಂಡು ಆ ಅನುಭವಗಳನ್ನು ಶಿಲ್ಪಗಳಲ್ಲಿ ಅಭಿವ್ಯಕ್ತಿಸಿರುವ ರೀತಿ ಗಮನಾರ್ಹವಾದುದು. ತಮ್ಮ ಶಿಲ್ಪಗಳಿಗಾಗಿಯೇ ರಮೇಶ್ 1993 ನೇ ಸಾಲಿನ ಬೇಂದ್ರೆ–ಹುಸೇನ್ ಶಿಷ್ಯವೇತನ ಪಡೆದಿರುವರು. ಪ್ರಯೋಗಶೀಲತೆಯನ್ನೇ ಪ್ರಧಾನವಾಗಿ ಮೆರೆದಿರುವ ಉಮೇಶ್ ಅವರು ಸುತ್ತ ಮುತ್ತ ಬಿಸುಟ ವಸ್ತುಗಳನ್ನು ಆರಿಸಿ ತಂದು ಶಿಲ್ಪಗಳನ್ನು ಸೃಷ್ಟಿಸಿರುವುದು ವಿಶಿಷ್ಟವಾದುದು. ಹಾಗೇ ಓಂಪ್ರಕಾಶ ಅವರು, ಬೃಹತ್ತಾದ ಗಂಭಿರ ಅಭಿವ್ಯಕ್ತಿಯಿಂದ ಕೂಡಿರುವ ಶಿಲ್ಪಗಳನ್ನು ರಚಿಸುವವರಲ್ಲಿ ಪ್ರಮುಖರು. ಮನುಷ್ಯನಲ್ಲಿ ಆಳವಾಗಿ ಬೇರೂರಿರುವ ಮಹತ್ವಾಕಾಂಕ್ಷೆ, ಕಪಟ, ದುರಾಸೆ, ಸ್ವಾರ್ಥ ಮನೋಭಾವಗಳನ್ನು ಪ್ರಶ್ನಿಸುವ ದೃಷ್ಟಿಯ ಇವರ ಶಿಲ್ಪಗಳು ಉತ್ತರಗಳನ್ನೂ ಅನ್ವೇಷಿಸುವ ಸೃಷ್ಟಿಗಳಾಗಿ ಗಮನ ಸೆಳೆಯುತ್ತವೆ. ವಿಶೇಷವಾಗಿ ಮರ, ಫೈಬರ್‌ಗಾಜು ಮಾಧ್ಯಮಗಳನ್ನು ದುಡಿಸಿಕೊಡಿರುವದು ವಿಶೇಷವಾಗಿದೆ. ನಟರಾಜ ಶರ್ಮ ವರ್ಣಚಿತ್ರಗಳ ಜೊತೆಗೆ ಹಲವು ಮಾಧ್ಯಮಗಳಲ್ಲಿ ಗಂಭೀರ ನೆಲೆಯ ಶಿಲ್ಪಗಳನ್ನೂ ಸೃಷ್ಟಿಸಿರುವುದುಂಟು.

ಲೋಹ ಮತ್ತು ಶಿಲಾ ಮಾಧ್ಯಮದಲ್ಲಿ ಹಲವು ಶಿಲ್ಪಗಳನ್ನು ರಚಿಸಿ ಗಮನ ಸೆಳೆದ'ವರು ನಾಗಪ್ಪ ಪ್ರದಾನಿ. ತಾಯಿ–ಮಗು, ಹಲವು ಭಾವಶಿಲ್ಪಗಳು ಸರಣಿಯಾಗಿ ಇವರಿಂದ ಸೃಷ್ಟಿಗೊಂಡಿವೆ. ಭಾವಶಿಲ್ಪಗಳು ರೂಪದರ್ಶಿಯ ಹೊರ ಚಹರೆಯೊಂದಿಗೆ ಒಳನೋಟಗಳನ್ನು ಬಿಂಬಿಸಿದವುಗಳಾಗಿವೆ. ಚಿತ್ರಕಲಾವಿದ ರಮೇಶ್‌ಚಂದ್ರ ಕೂಡ ಹಲವು ಗಂಭೀರ ನೆಲೆಯ ಶಿಲ್ಪಗಳನ್ನು ರಚಿಸಿರುವ'ರು. ಇನ್‌ಸ್ಟಾಲೇಷನ್‌ಗಳನ್ನು ಸೃಷ್ಟಿಸಿದ ಲಲಿತಾಶಂಕರ್ ಅವರ ಶಿಲ್ಪಗಳೂ ಗಮನಾರ್ಹ. ವೀರಣ್ಣ ಅರ್ಕಸಾಲಿ ಅವರು ಶಿಲೆ ಮತ್ತು ಲೋಹ ಮಾಧ್ಯಮಗಳನ್ನು ದುಡಿಸಿಕೊಂಡು ರಚಿಸಿದ ಹಲವು ಅಮೂರ್ತ ಶಿಲ್ಪಗಳು ಗಮನ ಸೆಳೆಯುತ್ತವೆ. ಮರ ಮತ್ತು ಶಿಲೆಗಳಲ್ಲಿ ಹಲವು ಶಿಲ್ಪಗಳನ್ನು ಸೃಷ್ಟಿಸಿರುವವರು ಹಂಪಿ ಕನ್ನಡ ವಿಶ್ವವಿದ್ಯಾಲಯದ ಶಿವಾನಂದ ಬಂಟನೂರ ಅವರು. ಪ್ರಭಾವಗಳನ್ನು ಅರಗಿಸಿಕೊಂಡು ತಮ್ಮ ಶಿಲ್ಪಗಳಲ್ಲಿ ಸ್ವಂತಿಕೆಯನ್ನು ಮೆರೆದಿರುವರು. ಹಲವು ವಸ್ತುಗಳನ್ನು ಅಸೇಂಬಲ್ ಮಾಡಿ ಸಂಯೋಜಿಸಿ ರಚಿಸಿರುವ ಇವರ ಕೆಲವು ಶಿಲ್ಪಗಳು ವಸ್ತುವಿನ ಹೊಸತನ, ಆಕರ್ಷಕ ನಿರ್ವಹಣೆಗಳಿಂದ ಗಮನಾರ್ಹವಾಗಿವೆ.' ಇವರ ಶೀರ್ಷಿಕೆ ರಹಿತವಾದ ಹಲವು ಶಿಲ್ಪಗಳು ಭಾವಪ್ರಚೋದಕವಾಗಿದ್ದರೆ, ಬುದ್ದ ಮತ್ತು ಅವನ ತತ್ವಗಳು, ಇಂಡಿಯನ್ ಬ್ರಶ್ ಫಾರ್ ಮಲ್ಟಿನ್ಯಾಷನಲ್ ಕಂಪನಿ ಶೂಷ್, ಗ್ಯಾಟ್, ಆಕಾಶದ ರೊಟ್ಟಿ ಯಂತಹ ಶೀರ್ಷಿಕೆಯ ಶಿಲ್ಪಗಳು ತೀವ್ರ ವೈಚಾರಿಕ ಸ್ಪಂದನೆಯಿಂದ ಕೂಡಿ ಗಮನಸೆಳೆದಿವೆ.

ಕಳೆದೆರಡು ದಶಕಗಳಿಂದ ಹಲವು ಯುವ ಶಿಲ್ಪಕಲಾವಿದರು ತಮ್ಮ ರಚನೆಗಳಿಂದ ಸಮಕಾಲೀನ ಶಿಲ್ಪಕಲಾ ಕ್ಷೇತ್ರಕ್ಕೆ ಉತ್ತಮ ಕೊಡುಗೆ ನೀಡುವ ಭರವಸೆ ಮೂಡಿಸಿರುವರು. ಆನಂದ ಬಾಬು, ಕೆ. ರಾಘವೇಂದ್ರ, ಬಿ. ಎಮ್. ರವಿಕುಮಾರ, ರಾಜೇಶ್ ದೇವಣಗಾಂವ, ಜಗನ್ನಾಥ ಜಕ್ಕೇಪಳ್ಳಿ, ಎಂ. ವಿಶ್ವನಾಥ, ಎನ್. ಎಸ್. ಪ್ರದೀಪಕುಮಾರ, ಮಹಾಂತೇಶ ಪಲದಿನ್ನಿ, ಸುರೇಂದ್ರ ವಿಶ್ವಕರ್ಮ, ಈರಣ್ಣ ಕಂಬಾರ, ಗುರುರಾಜ ನಾಯಕ್, ವಿವೇಕ್ ರಾವ್, ಡಿ. ರಂಗಸ್ವಾಮಿ, ಆರ್. ಜಗದೀಶ್, ಅರ್ಚನಾ ಸಿಂಗ್, ರವಿ ಷಾ, ಬಿ. ಕೆ.

ಶಿವಕುಮಾರ, ರಘುರಾಮ್, ಶರಣಕುಮಾರ ಹೆಡೆ, ವಿಪಿನ್ ಸಿಂಗ್ ಬದೂರಿಯಾ, ಬಿ. ಆರ್. ಗೀತಾಂಜಲಿ, ಮಂಜುನಾಥ, ಕಂಚಗಾರ, ಮಲ್ಲಿಕಾರ್ಜುನ ಎಂ. ಗೋಪಾಲ ಕಮ್ಮಾರ, ಗೌತಮ ಅಂದಾನಿ, ಮಹಾಂತೇಶ್ ಗುತ್ತೇದಾರ, ಉಮೇಶ್. ಎಸ್. ಮೊದಲಾದವರನ್ನು ಹೆಸರಿಸಬಹುದು. ಆನಂದ ಬಾಬು ಲೋಹ ಮತ್ತು ಟೆರಾಕೊಟ್ಟ ಮಾಧ್ಯಮಗಳಲ್ಲಿ ಸೃಜನಾತ್ಮಕವಾದ ಹಲವು ಶಿಲ್ಪಕಲಾಕೃತಿಗಳನ್ನು ರಚಿಸಿರುವರು. ಗೌತಮ ಅಂದಾನಿ ಮರ ಮತ್ತು ಲೋಹ ಮಾಧ್ಯಮಗಳಲ್ಲಿ ಕುತೂಹಲಕರವಾದ ಹಲವು ಶಿಲ್ಪಗಳನ್ನು ರಚಿಸಿರುವುದುಂಟು; ಲೋಹಫಲಕಗಳಲ್ಲಿ ಆಕಾರಗಳನ್ನು ಕೊರೆದು, ಒಂದನ್ನೊಂದು ಬೆಸೆದು ರಚಿಸಿರುವ ಇವರ ಕೆಲವು ಶಿಲ್ಪಗಳು ವಿಶೇಷವಾದವುಗಳು. ವಿಪಿನ್ ಸಿಂಗ್ ಬದೂರಿಯ ಶಿಲಾಮಾಧ್ಯಮದಲ್ಲಿ ರಚಿಸಿರುವ ಶಿಲ್ಪಗಳು ಚಿತ್ತಾಕರ್ಷಕ. ಶರಣಕುಮಾರ ಹೆಡೆ ಮತ್ತು ಗೋಪಾಲ ಕಮ್ಮಾರ ಅವರುಗಳ ಶಿಲಾಶಿಲ್ಪಗಳೂ ಸಮಕಾಲೀನವಾಗಿ ಗಮನಾರ್ಹವಾದವುಗಳು. ಮಹೇಶ್‌ಕುಮಾರ, ವಿಶ್ವೇಶ್ವರಯ್ಯ ಮೊದಲಾದವರೂ ಸಮಕಾಲೀನ ಶಿಲ್ಪ ಸೃಷ್ಟಿಯಲ್ಲಿ ಭರವಸೆ ಮೂಡಿಸಿರುವ ಯುವ ಕಲಾವಿದರು. ಜಕ್ಕೇಪಳ್ಳಿಯವರು ಹಲವು ಭಾವಶಿಲ್ಪ, ಪೂರ್ಣಶಿಲ್ಪಗಳನ್ನೂ ಸೃಷ್ಟಿಸಿರುವರು. ಬುದ್ಧಿ ಮತ್ತು ಭಾವಗಳನ್ನು ಬೆಸೆದ ಗ್ರಹಿಕೆ ಇವರ ಶಿಲ್ಪಗಳಲ್ಲಿ ಕಾಣಬಹುದು. 'ಮೈ ಕಂಪ್ಯೂಟರ್', 'ಥಿಂಕಿಂಗ್' ಶೀರ್ಷಿಕೆಯ ಶಿಲ್ಪಗಳು ಗಮನ ಸೆಳೆಯುತ್ತವೆ. ಬಿ. ಎಂ. ರವಿಕುಮಾರ ಅವರು ಆಧುನಿಕ ಜೀವನ ತಂದೊಡ್ಡಿದ ಹಲವು ಸವಾಲುಗಳನ್ನು ಮನನ ಮೂಡುವಂತಹ ಬುದ್ಧಿಗಮ್ಯ ಶಿಲ್ಪಗಳನ್ನು ಸೃಷ್ಟಿಸಿರುವರು. ಫೈಬರ್ ಮಾಧ್ಯಮದ ಇವರ 'ಅರ್ಬನ್ ಕೌವ್' ಶೀರ್ಷಿಕೆಯ ಶಿಲ್ಪಕಲಾಕೃತಿ 2008 ರಲ್ಲಿ ಬೆಂಗಳೂರಲ್ಲಿ ಪ್ರದರ್ಶನಗೊಂಡಾಗ ಅತ್ಯಂತ ಗಮನ ಸೆಳೆಯಿತು.

ಒಟ್ಟಾರೆ ಈ ಪರಿಮಿತ ಪುಟಗಳಲ್ಲಿ ಕೆಲವೇ ಪ್ರಮುಖ ಕಲಾವಿದರನ್ನು ಮತ್ತು ಕಲಾಕೃತಿಗಳ ವಿಶ್ಲೇಷಣೆ ಮಾಡಲಾಗಿದೆ, ಆದರೆ ಒಬ್ಬೊಬ್ಬ ಕಲಾವಿದರ ಶಿಲ್ಪಗಳ ಕುರಿತೇ ಸುದೀರ್ಘವಾಗಿ ವಿಶ್ಲೇಷಿಸಲು, ವಿಮರ್ಶಿಸಲು ಸಾಧ್ಯವಿದೆ, ಮಾತ್ರವಲ್ಲ ಪ್ರತ್ಯೇಕ ಪುಸ್ತಕಗಳೂ ಪ್ರಕಟಗೊಳ್ಳಬೇಕಿದೆ. ಶಿಲ್ಪಕಲಾ ಅಕಾಡೆಮಿಯಂತಹ ಸರಕಾರದ ಸ್ವಾಯತ್ತ ಸಂಸ್ಥೆಗಳು ಈ ಕೆಲಸವನ್ನು ಗಂಭೀರವಾಗಿ ಪರಿಗಣಿಸಬೇಕಿದೆ.

ಕಲಾಶಾಲೆಗಳ ಕೊಡುಗೆ: ಸಮಕಾಲೀನ ಶಿಲ್ಪಕಲೆಯ ಬೆಳವಣಿಗೆಯ ದೃಷ್ಟಿಯಿಂದ ಕರ್ನಾಟಕದಲ್ಲಿನ ಕಲಾಶಾಲೆಗಳ ಕೊಡುಗೆಯೂ ಸ್ಮರಿಸುವಂತಹುದೇ ಆಗಿದೆ. ರಾಜ್ಯದ ವಿವಿಧ ಭಾಗಗಳಲ್ಲಿ ನೆಲೆಗೊಂಡಿರುವ ಕಲಾಶಾಲೆಗಳಲ್ಲಿ ಕೆಲವೇ ಕೆಲವು ಶಾಲೆಗಳು ವಿದ್ಯಾರ್ಥಿಗಳಿಗೆ ಸಮಕಾಲೀನ ಶಿಲ್ಪಕಲೆಯನ್ನು ವ್ಯಾಸಂಗಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿವೆ. ಪ್ರಮುಖವಾದವುಗಳೆಂದರೆ ಮೈಸೂರಿನ ಕಾವಾ, ಬೆಂಗಳೂರಿನ ಚಿತ್ರಕಲಾ ಪರಿಷತ್ತು, ಕಲಬುರ್ಗಿಯ ಎಂ.ಎಂ.ಕೆ. ಕಾಲೇಜ್ ಅಫ್ ವಿಜುಯಲ್ ಆರ್ಟ್ ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಬಾದಾಮಿ ಶಾಖೆ ಮೊದಲಾದ ಸಂಸ್ಥೆಗಳಲ್ಲಿ ಸಮಕಾಲೀನ ಶಿಲ್ಪಕಲಾ ವ್ಯಾಸಂಗಕ್ಕೆ ಪ್ರತ್ಯೇಕ ವಿಭಾಗಗಳಿದ್ದು ಇಲ್ಲಿಂದ ಈ ವರೆಗೆ ಶಿಲ್ಪಕಲೆಯಲ್ಲಿ ಅನೇಕರು ಪದವಿ, ಸ್ನಾತಕೋತ್ತರ ಪದವಿಗಳನ್ನು ಹೊಂದಿರುವರು. ಮಣ್ಣು, ಮರ, ಶಿಲೆ, ಲೋಹ, ಫೈಬರ್ ಮೊದಲಾದ ಮಾಧ್ಯಮಗಳಲ್ಲಿ ಶಿಲ್ಪರಚನೆಯ ವ್ಯಾಸಂಗಕ್ಕೆ ಈ ಎಲ್ಲ ಕೇಂದ್ರಗಳಲ್ಲಿ

ಅವಕಾಶ ಕಲ್ಪಿಸಲಾಗಿದೆ. ಆದರೆ ನುರಿತ ಉಪನ್ಯಾಸಕರು ಮತ್ತಿತರ ಕೊರತೆಗಳು ಮಾತ್ರ ಕೆಲವು ಕೇಂದ್ರಗಳಲ್ಲಿದೆ. ಅದನ್ನು ನೀಗುವ ಇಚ್ಛಾಶಕ್ತಿಯ ಕೊರತೆ ಆಯಾ ಸಂಸ್ಥೆಗಳ ಆಡಳಿತ ವರ್ಗದಲ್ಲಿ ಎದ್ದು ಕಾಣುತ್ತದೆ. ಇದು ಸುಧಾರಿಸಬೇಕಿದೆ.

ಸಮೂಹ ಶಿಲ್ಪಕಲಾ ಚಟುವಟಿಕೆಗಳು: ಸಮಕಾಲೀನ ಶಿಲ್ಪಕಲೆಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಸಮೂಹ ಚಟುವಟಿಕೆಗಳು ಅಂದರೆ ಸಮೂಹ ಶಿಲ್ಪಗಳ ರಚನೆ, ಕಾರ್ಯಾಗಾರ, ಶಿಲ್ಪಕಲಾ ಶಿಬಿರಗಳು, ಪ್ರದರ್ಶನಗಳು ಅಪರೂಪವೆಂಬಂತೆ ನೆಡೆದಿರುತ್ತವೆ. ಸಮಕಾಲೀನ ಚಿತ್ರಕಲಾ ಚಟುವಟಿಕೆಗಳಿಗೆ ಹೋಲಿಸಿದರೆ ಸಮೂಹ ಶಿಲ್ಪಕಲಾ ಚಟುವಟಿಕೆಗಳು ಜರುಗಿದುದು ತುಂಬಾ ವಿರಳ. ಕೆಲಸವನ್ನು ಇಲ್ಲಿ ಪ್ರಸ್ತಾಪಿಸಬಹುದು. 1982ರಲ್ಲಿ ಬೆಂಗಳೂರಿನ ವಿಶ್ವೇಶ್ವರಯ್ಯ ಮ್ಯೂಸಿಯಂ ವತಿಯಿಂದ ಆಯೋಜನೆಗೊಂಡಿದ್ದ 'ಟೆಕ್ನೋ ಆರ್ಟ ಕ್ಯಾಂಪ್' ಕರ್ನಾಟಕದಲ್ಲಿ ಸಮಕಾಲೀನ ಶಿಲ್ಪಕಲಾ ಬೆಳವಣಿಗೆಯ ದೃಷ್ಟಿಯಿಂದ ಒಂದು ಮೈಲಿಗಲ್ಲು ಎನ್ನಬಹುದು. ಈ ಶಿಬಿರದಲ್ಲಿ ನಮ್ಮ ಅಂದಿನ ಹಲವು ಯುವ ಶಿಲ್ಪಕಲಾವಿದರು ಸಾಕಷ್ಟು ತಾಂತ್ರಿಕ ಅಂಶಗಳನ್ನು ತಿಳಿದುಕೊಳ್ಳುವುದರೊಂದಿಗೆ ಹಲವು ಆಯಾಮಗಳಲ್ಲಿ ಬೆಳವಣಿಗೆಯನ್ನು ಹೊಂದಿದರು. ಮತ್ತು ಬದಲಾವಣೆಯನ್ನು ಕಂಡರು. ನಂತರ ಕರ್ನಾಟಕ ಚಿತ್ರಕಲಾ ಪರಿಷತ್ತು ಏರ್ಪಡಿಸಿದ್ದ ಅಖಿಲ ಭಾರತ ಮಟ್ಟದ ಶಿಲ್ಪಕಲಾ ಶಿಬಿರಗಳೂ ಗಮನಾರ್ಹವೆನಿಸಿದವು. ಕರ್ನಾಟಕ ಲಲಿತಕಲಾ ಅಕಾಡೆಮಿಯು ತನ್ನ ಬೆಳ್ಳಿಹಬ್ಬದ ನಿಮಿತ್ತ ನಿರ್ಮಿಸಿದ ಸಮೂಹ ಶಿಲ್ಪ ಅತ್ಯಂತ ಗಮನಾರ್ಹವಾದುದು, ಈ ಸಮೂಹ ಶಿಲ್ಪಕಲಾಕೃತಿ ಬೆಂಗಳೂರಿನ ರವೀಂದ್ರಕಲಾಕ್ಷೇತ್ರದ ಶಿಲ್ಪವನದಲ್ಲಿ ಅನಾವರಣಗೊಂಡಿರುವುದನ್ನು ಕಾಣುವುದು. ಮೈಸೂರಿನ ಕಾವಾದವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವಿನೊಂದಿಗೆ ಏರ್ಪಡಿಸಿದ್ದ ರಾಜ್ಯಮಟ್ಟದ ಹಾಗು ರಾಷ್ಟ್ರಮಟ್ಟದ ಹಲವು(ಬಾದಾಮಿ, ಧಾರವಾಡ) ಶಿಲ್ಪಕಲಾ ಶಿಬಿರಗಳು ಉಲ್ಲೇಖಾರ್ಹವಾದವುಗಳಾಗಿವೆ.

ಕಲಬುರ್ಗಿಯಲ್ಲಿ ಸಮಕಾಲೀನ ಶಿಲ್ಪಕಲೆಗೆ ಸಂಭಂದಿಸಿದಂತೆ ಮೂರು ಅಂತರ್‌ರಾಷ್ಟ್ರೀಯ ಶಿಬಿರಗಳು ನೆಡೆದಿವೆ. ಒಂದು ದಿ ಐಡಿಯಲ್ ಫೈನ್ ಆರ್ಟ ಸಂಸಂಸ್ಥೆಯಲ್ಲಿ ವಿ. ಜಿ. ಅಂದಾನಿಯವರ ನೇತೃತ್ವದಲ್ಲಿ ನೆಡೆದ ಸಿಂಪೋಷಿಯಂ, ಇನ್ನೊಂದು ಎಸ್. ಬಿ. ಉಪ್ಪಿನ್‌ರ ಸಂಚಾಲಕತ್ವದಲ್ಲಿ ಅವರ ತೋಟದ ಮನೆಯಲ್ಲಿ ನೆಡೆದುದು, ಮತ್ತೊಂದು ಶ್ರೀಗುರು ವಿದ್ಯಾಪೀಠ ಶಿಕ್ಷಣ ಸಂಸ್ಥೆಯವರು ಏರ್ಪಡಿಸಿದುದು. ಸರ್ಕಾರ ಮಾಡದಿರುವ ಇಂತಹ ಕೆಲಸಗಳನ್ನು ಖಾಸಗಿಯಾಗಿ ಇವರುಗಳು ಮಾಡಿದ್ದು ಪ್ರಶಂಶನೀಯ, ದಾಖಲಾರ್ಹ ಸಾಧನೆಯಾಗಿದೆಯೆಂದರೆ ತಪ್ಪಲ್ಲ.

1998ರಲ್ಲಿ ಕನ್ನಡ ಭವನದ ಶಿಲ್ಪವನದಲ್ಲಿ(ಬೆಂಗಳೂರು) ಸ್ಥಾಪನೆಗೊಂಡಿರುವ ಸಮಕಾಲೀನ ಶಿಲ್ಪಕಲಾಕೃತಿಗಳೂ ಗಮನಸೆಳೆಯುತ್ತವೆ. ಹಾಗೇ 2006ರ ಆಗಸ್ಟ್ ತಿಂಗಳಲ್ಲಿ ಸುವರ್ಣ ಕರ್ನಾಟಕ ಮಹೋತ್ಸವ ನಿಮಿತ್ತ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ನೆಡೆದ ಸಮಕಾಲೀನ ಶಿಲ್ಪಕಲಾ ಶಿಬಿರ ದಾಖಲಾರ್ಹವಾದುದಾಗಿದೆ. ಇಲ್ಲಿ ಸೃಷ್ಟಿಗೊಂಡಿರುವ ಶಿಲ್ಪಗಳನ್ನೆಲ್ಲ ರವೀಂದ್ರ ಕಲಾಕ್ಷೇತ್ರದ ಶಿಲ್ಪವನದಲ್ಲಿ ಸ್ಥಾಪಿಸಲಾಗಿದೆ. 2007 ಮತ್ತು 2008 ರಲ್ಲಿ ಕ್ರಮವಾಗಿ ಕಲಾಗ್ರಾಮ ಹಾಗೂ ವೆಂಕಟಪ್ಪ ಆರ್ಟಗ್ಯಾಲರಿಗಳಲ್ಲಿ

ಏರ್ಪಡಿಸಿದ್ದ ಶಿಲಾಶಿಲ್ಪ ಕಲಾಶಿಬಿರಗಳು ಅತ್ಯಂತ ಗಮನಾರ್ಹವಾದವುಗಳು. ಈ ಎರಡೂ ಶಿಬಿರಗಳಲ್ಲಿ ಸೃಷ್ಟಿಗೊಂಡಿರುವ ಶಿಲ್ಪಗಳನ್ನು ಬೆಂಗಳೂರಿನ ಕಲಾಗ್ರಾಮದಲ್ಲಿ ಪ್ರದರ್ಶನಕ್ಕೆ ವ್ಯವಸ್ಥೆಗೊಳಿಸಲಾಗಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯವು ಒಂದು ಅಂತರಾಷ್ಟ್ರೀಯ, ಎರಡು ರಾಷ್ಟ್ರೀಯ ಸಮಾಲೀನ ಶಿಲ್ಪಕಲಾ ಶಿಬಿರಗಳನ್ನು ಏರ್ಪಡಿಸಿದುದು ದಾಖಲಾರ್ಹವಾದುದು. ಈ ಶಿಬಿರಗಳಲ್ಲಿ ರಾಷ್ಟ್ರದ ಮತ್ತು ನಾಡಿನ ಹಲವು ಮುಖ್ಯ ಶಿಲ್ಪಿಗಳು ಇದ್ದರು. ಚೆನ್ನೈನ ರಾಜಶೇಖರನ್ ನಾಯರ್, ಬರೋಡದ ಬ್ರಿಜೇಶ್‌ಕುಮಾರ ಸಿಂಗ್, ಭುವನೇಶ್ವರದ ಎಸ್.ಡಿ. ಹರಿಪ್ರಸಾದ, ದೆಹಲಿಯ ಅಜುರ್ವೇದ, ಅಲ್ಲದೆ ನಮ್ಮವರಾದ ಕೆ. ವೆಂಕಟಾಚಲಪತಿ, ಎಂ.ಸಿ.ರಮೇಶ್, ಶಿವಾನಂದ ಬಂಟನೂರ, ಮೋಹನರಾವ್ ಪಂಚಾಳ್ ಮೊದಲಾದವರಿಂದ ಶಿಲಾಶಿಲ್ಪಗಳು ಸೃಷ್ಟಿಗೊಂಡಿರುವವು. ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಸಮಕಾಲೀನ ಶಿಲ್ಪಕಲಾ ಶಿಬಿರಗಳನ್ನು ಅತ್ಯಂತ ಕಡಿಮೆ ಪ್ರಮಾಣದಲ್ಲಿ ನೆಡೆಸಿದೆ, ಅದರ ಹರವು ಇನ್ನೂ ವಿಸ್ತಾರಗೊಳ್ಳಬೇಕಿದೆ. ಆದರೆ ಇದು ನಡೆಸುವ ವಾರ್ಷಿಕ ಶಿಲ್ಪಕಲಾ ಪ್ರದರ್ಶನ ಮತ್ತು ಪ್ರಶಸ್ತಿಗಳು ಸಮಕಾಲೀನ ಶಿಲ್ಪವನ್ನು ಬೆಳೆಸುವ ನಿಟ್ಟಿನಲ್ಲಿ ಸಹಾಯಕವಾಗಿವೆ.

ಈ ನಡುವೆ ಆಧುನಿಕ ಸಮಕಾಲೀನ ಶಿಲ್ಪಕಲೆಯ ಪ್ರಭಾವದಿಂದಾಗಿ ಸಂಪ್ರದಾಯಿಕ ಶಿಲ್ಪಕಲೆಯ ಬೆಳವಣಿಗೆ ಕುಗ್ಗಿದೆಯೆಂಬುದು ಹಲವು ಸಂಪ್ರದಾಯ ಕಲಾವಿದರ, ಶಿಲ್ಪಿಗಳ ವಾದ. ಅದರೆ ಇದೊಂದು ಮಿಥ್ಯಾವಾದ ಎನ್ನಬೇಕು. ಸಾಂಪ್ರದಾಯಿಕ ಶಿಲ್ಪಕಲೆ ಬಹುವಾಗಿ ಧಾರ್ಮಿಕ ಹಿನ್ನೆಲೆಯುಳ್ಳದ್ದು. ಧಾರ್ಮಿಕಾಚರಣೆಗಳ ಅಗತ್ಯಗಳನ್ನು ಪೂರೈಸುವ ದೃಷ್ಟಿಯಿಂದ ಬೇಡಿಕೆಯ ಹಿನ್ನೆಲೆಯಲ್ಲಿ ಹಲವಾರು ಶಿಲ್ಪಗಳು ಶಿಲ್ಪಿಗಳಿಂದ ರೂಪ ತಳೆಯುತ್ತವೆ. ಈಗಲೂ ಸಾಂಪ್ರದಾಯಿಕ ಶಿಲ್ಪಕಲಾಕೃತಿಗಳು ಅಗಾಧ ಪ್ರಮಾಣದಲ್ಲಿ ಸೃಷ್ಟಿಗೊಳ್ಳುತ್ತಲೇ ಇವೆ. ಹೊರದೇಶಗಳಲ್ಲೂ ಇವುಗಳಿಗೆ ಸಾಕಷ್ಟು ಬೇಡಿಕೆ ಇದೆ. ಮತ್ತು ಸಾಂಪ್ರದಾಯಿಕ ಶಿಲ್ಪಕಲೆ ಪಾರಂಪರಿಕ ವೃತ್ತಿಯಾಗಿದ್ದು, ಇದು ಇಂದು ಕುಲಕಲೆಯಾಗಿ ಉಳಿದಿದೆಯೇ ಹೊರತು ಸೃಜನಶೀಲ ಶಿಲ್ಪಕಲೆಯ ಮಟ್ಟಕ್ಕೆ ಬರುವುದಿಲ್ಲ. ಆಧುನಿಕತೆಯನ್ನು ಮೈಗೂಡಿಸಿಕೊಂಡಿರವ ಚಿತ್ರಕಲೆ, ಸಾಹಿತ್ಯ, ನಾಟಕ ಮೊದಲಾದ ಲಲಿತಕಲೆಗಳಿಗೆ ಅಕಾಡೆಮಿಗಳಂತಹ ಸರಕಾರದ ಸ್ವಾಯುತ್ತ ಸಂಸ್ಥೆಗಳು ಪ್ರೋತ್ಸಾಹಿಸುತ್ತಲಿವೆ, ಆದರೆ ಶಿಲ್ಪಕಲಾ ಅಕಾಡೆಮಿ ಮಾತ್ರ ಆಧುನಿಕ ಶಿಲ್ಪಕಲೆಯನ್ನು ದೂರವೇ ಉಳಿಸಿದೆ. ಈ ಸ್ಥಿತಿ ಬದಲಾಗಬೇಕಿದೆ. ಆಧುನಿಕ ಸಮಕಾಲೀನ ಶಿಲ್ಪಸೃಷ್ಟಿಯ ಹಿಂದಿರುವ ಆಶಯ, ಕಾಳಜಿ ಮತ್ತು ಅಗತ್ಯಗಳೇ ಬೇರೆಯಾಗಿದ್ದು, ಅದು ನಿತ್ಯ ಪರಿವರ್ತನಶೀಲವಾಗಿದೆ, ಮತ್ತು ಸಮಾಜಮುಖಿಯಾಗಿದೆ.

ಒಟ್ಟಾರೆ ವಿಭಿನ್ನ ಸಂಸ್ಕೃತಿಗಳು ಮತ್ತು ಸವಾಲುಗಳ ನಡುವೆಯೂ ನಮ್ಮ ಹಲವು ಹಿರಿ-ಕಿರಿಯ ಶಿಲ್ಪಿಗಳು ಎಲ್ಲವನ್ನು ಅರಗಿಸಿಕೊಂಡು ಸ್ವಂತಿಕೆಯನ್ನು ಮೆರೆಯುವುದರೊಂದಿಗೆ ಇಂದು ಅಂತರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯಬಲ್ಲ ಸಾಮರ್ಥ್ಯವನ್ನು ಶಿಲ್ಪಗಳ ಮೂಲಕ ತೋರ್ಪಡಿಸಿರುವರು. ಸಾರ್ವಜನಿಕ ಸ್ಥಳಗಳು ಮತ್ತು ಉದ್ಯಾನಗಳಲ್ಲಿ ಆಧುನಿಕ ದೃಷ್ಟಿಯ ಶಿಲ್ಪಕಲಾಕೃತಿಗಳನ್ನು ಹೆಚ್ಚುಹೆಚ್ಚಾಗಿ ಪ್ರತಿಷ್ಠಾಪಿಸುವ ಪ್ರಯತ್ನಗಳು ತೀವ್ರಗೊಳ್ಳಬೇಕಿದೆ. ಅಲ್ಲದೆ ಕಲಾ ಸಂಗ್ರಹಕಾರರು ಸಮಕಾಲೀನ ಶಿಲ್ಪಕಲಾಕೃತಿಗಳನ್ನು ಕೊಂಡು ಸಂಗ್ರಹಿಸುವ, ಆರಾಧಿಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕಾದ ಅಗತ್ಯವೂ ಇದೆ.

ಟಿಪ್ಪಣಿಗಳು

1. ಕೆ. ವಿ. ಸುಬ್ರಹ್ಮಣ್ಯಂ: ಕರ್ನಾಟಕದ ಆಧುನಿಕ ಶಿಲ್ಪಕಲೆ, ಪುಟ–5
2. ಕೆ. ವಿ. ಸುಬ್ರಹ್ಮಣ್ಯಂ: ಕನ್ನಡ ಶಿಲ್ಪಕಲೆಯ ಸಮಾಲೀನ ದೃಶ್ಯ, ಪುಟ 5–6
3. ರೂಢಿಗತ ಸಂಪ್ರದಾಯಗಳನ್ನು ಮರಿಯುವ ಶೈಲಿಗಳನ್ನು ಹಾಗು ಹೊಸ ಯುಗದ ಪ್ರಜ್ಞೆ ಮತ್ತು ಸಂವೇದನೆಗಳಿಗೆ ಸೂಕ್ತವೆನಿಸುವ ಆಕಾರಗಳ ಸೃಷ್ಟಿಯನ್ನು ಆಧುನಿಕ ಎಂದೇ ಕರೆಯಬಹುದು.
4. ಪಿ. ಆರ್. ತಿಪ್ಪೇಸ್ವಾಮಿ(ಸಂ): ಶಿಲ್ಪಕಲಾ ಪ್ರಪಂಚ: ಪುಟ–515
5. ಚಿತ್ರಕಲೆಯಲ್ಲಿ ರವಿವರ್ಮನು ತಂದುಕೊಂಡದ್ದು ಇಂಥದೇ ಆಧುನಿಕತೆ.
6. ಬ್ರಿಟೀಷರ ಬೀಳುಗಾಲದ ಕಲಾಶೈಲಿ ಎಂದೂ ಇದನ್ನು ಕರೆಯುವರು.
7. ವೆಂಕಟಪ್ಪನವರಿಗಿಂತಲೂ ಮುಂಚೆ ಮುಂಬೈನ ಜೆ.ಜೆ.ಸ್ಕೂಲ್ ಆಫ್ ಆರ್ಟ್‌ನಲ್ಲಿ ಅಕಾಡೆಮಿಕ್ ಶೈಲಿಯ ಶಿಲ್ಪಕಲೆಯನ್ನು ಕಲಿತ ಪುಣೆಯ ಗಣಪತಿರಾವ್ ಮಾತ್ರೆ ಪ್ರಸಿದ್ಧಿಯಲ್ಲಿದ್ದರು. ಇವರ ಖ್ಯಾತಿ ಮೈಸೂರಿನ ಕೃಷ್ಣರಾಜ ಒಡೆಯರಿಗೂ ತಲುಪಿತ್ತು. ಅವರ ಆಹ್ವಾನದ ಮೇರೆಗೆ ಮೈಸೂರಿಗೆ ಬಂದು 1913ರಲ್ಲಿ ದಿವಾನ್ ಶೇಷಾದ್ರಿ ಅಯ್ಯರ್ ಅವರ ಮೂರ್ತಿಶಿಲ್ಪ ಹಾಗೂ 1916 ರಲ್ಲಿ ಚಾಮರಾಜೇಂದ್ರ ಒಡೆಯರ್ ಅವರ ಭಾವಶಿಲ್ಪಗಳನ್ನು ರಚಿಸಿದ್ದರು. ಕೆ.ವೆಂಕಟಪ್ಪ ಈ ಶಿಲ್ಪಗಳಿಂದ ಪ್ರಭಾವಿತರಾಗಿದ್ದರು.
8. 1961–62 ರಲ್ಲಿ ಕಲಾವಿಮರ್ಶಕ ಜಿ. ವೆಂಕಟಾಚಲಂ ಅವರ ಪ್ರಯತ್ನದಿಂದ ಲಲಿತಕಲಾ ಅಕಾಡೆಮಿ ಪ್ರಾರಂಭಗೊಂಡಿತು ಇದರಿಂದ ಕಲಾ ಚಟುವಟಿಕೆಗಳಿಗೆ ಹೊಸ ಜೀವ ಬಂದಂತಾಯಿತು, ಚಿತ್ರಕಲೆಯಲ್ಲಿ ಹೊಸತನಕ್ಕೆ ಮೊದಲು ಕಾರಣವಾದದ್ದು 1964ರ 'ವಿ ಫೋರ್' ಕಲಾಪ್ರದರ್ಶನ. ಈ ಪ್ರದರ್ಶನವು ಶಿಲ್ಪಕಲೆಯ ಮೇಲೂ ಪರೋಕ್ಷವಾಗಿ ಪ್ರಾಭಾವ ಬೀರಿತು.
9. ರಾಜಾರಾಮರ ಕೆಲವು ಮರಶಿಲ್ಪಗಳನ್ನು ಬೆಂಗಳೂರಿನ ವೆಂಕಟಪ್ಪ ಆರ್ಟ್‌ಗ್ಯಾಲರಿಯಲ್ಲಿ ಶಾಶ್ವತ ಪ್ರದರ್ಶನಕ್ಕೆ ಇಡಲಾಗಿರುವುದನ್ನು ಗಮನಿಸಬಹುದು.
10. ಕಲಾವಿದ ಎಂ.ಬಿ. ಪಾಟೀಲರು ಕುಲಕರ್ಣಿಯವರ ಕೆಲವು ಶಿಲ್ಪಗಳ ಛಾಯಾಚಿತ್ರಗಳನ್ನು ನನಗೆ ತೋರಿಸಿದ್ದರು. ಅವುಗಳಲ್ಲಿ ಬಹುಪಾಲು ಬೃಹತ್ ಶಿಲ್ಪಕಲಾಕೃತಿಗಳ ನಿರ್ಮಾಣಕ್ಕಾಗಿ ರಚಿಸಿದ ಚಿಕ್ಕಳತೆಯ ಶಿಲ್ಪಗಳಾಗಿದ್ದವು. ಕುಲಕರ್ಣಿ ಕನ್ನಡಿಗರೆಂಬುದು ಹೆಮ್ಮೆಯ ಸಂಗತಿ.
11. ಬರೋಡದಲ್ಲಿ ಶಿಲ್ಪಕಲೆಯನ್ನು ಕಲಿತ ಎನ್. ಪುಷ್ಪಮಾಲಾ ಆರಂಭದಲ್ಲಿ ಬಾಲನ್ ನಂಬಿಯಾರ್ ಅವರಿಂದ ಚಿತ್ರಕಲೆಯ ಮೂಲ ಪಾಠಗಳನ್ನು ಕಲಿತವರು. ಕೆ. ಜಿ. ಸುಬ್ರಮಣಿಯನ್ ಮತ್ತು ಭೂಪೇನ್ ಖಾಖರ್ ಅವರುಗಳ ಪ್ರಭಾವಕ್ಕೆ ಒಳಗಾದವರು.
12. ಕೆ.ವಿ.ಸುಬ್ರಹ್ಮಣ್ಯಂ; ಕರ್ನಾಟಕದ ಆಧುನಿಕ ಶಿಲ್ಪಕಲೆ ಪುಟ–68
13. ಪಿ.ಆರ್. ತಿಪ್ಪೇಸ್ವಾಮಿ(ಸಂ.): ಶಿಲ್ಪಕಲಾ ಪ್ರಪಂಚ ಪುಟ–532
14. ವೆಂಕಟಾಚಲಪತಿ, ವಿ.ಎ.ದೇಶಪಾಂಡೆ, ಜಾನ್ ದೇವರಾಜ, ಶಿವಾನಂದ ಬಂಟನೂರ, ಯು. ಭಾಸ್ಕರರಾವ್, ನಾರಾಯಣ ಸೂತ್ರದಾರ್, ಎಂ. ಸಿ. ರಮೇಶ್, ನಾಗಪ್ಪ ಪ್ರಧಾನಿ, ಸುರೇಶ್ ಮೊದಲಾದವರಿಂದ ಮೇಲಿನ ಎರಡೂ ಶಿಬಿರಗಳಲ್ಲಿನ ಶಿಲ್ಪಗಳು ರಚನೆಗೊಂಡಿವೆ.

ಅಧ್ಯಾಯ : ನಾಲ್ಕು

ಸಮಕಾಲೀನ ಶಿಲ್ಪಕಲೆಯ ಮೊದಲ ಘಟ್ಟ:

ಪ್ರಭಾವಗಳ ನೆರಳಲ್ಲಿ

ಸಮಕಾಲೀನ ಜೀವಧ್ವನಿಗೆ ಪೂರಕವಾಗಿ ಹೊಸ ಹೊಸ ಸೃಷ್ಟಿಗಳು, ಹೊಸಹೊಸ ಶೈಲಿಗಳು ಪಲ್ಲಟಗಳು ಕಾಲಕಾಲಕ್ಕೆ ಕಾಣಿಸಿ ಆವೀರ್ಭವಿಸುತ್ತಲೇ ಇರುತ್ತವೆ. ಇದು ಸಹಜ ಪ್ರಕ್ರಿಯೆ. ಮಾಧ್ಯಮ– ರೂಪಗಳು ಎಷ್ಟೇ ಬದಲಾದರೂ ಆಂತರಿಕ ಸತ್ವ ಸ್ಥಳೀಯ ಜೀವಧ್ವನಿಯನ್ನು ಮೈಗೂಡಿಸಿಕೊಂಡೇ ಆಗಿರುತ್ತದೆ. ಯಾವುದೇ ಶಿಲ್ಪಿಯು ತನ್ನ ಸಮಕಾಲೀನ ಸಂದರ್ಭದ ವಿಶಿಷ್ಟ ಜೀವಧ್ವನಿಗಳು ದೃಷ್ಟಿ – ಧೋರಣೆಗಳು, ಸವಾಲು– ಸಾಧ್ಯತೆಗಳಿಗೆ ತನ್ನನ್ನು ಒಡ್ಡಿಕೊಂಡು ಪ್ರಭಾವಗಳನ್ನು ಅರಗಿಸಿಕೊಂಡು ಕಲಾಕೃತಿಗಳನ್ನು ಸೃಷ್ಟಿಸುತ್ತಾನೆ. ಇಂತಹ ಶಿಲ್ಪಕಲಾಕೃತಿಗಳನ್ನು ಆ ಶಿಲ್ಪಿಯ ಸಮಕಾಲೀನ ಸಂದರ್ಭವನ್ನು ಕುರಿತ ಪ್ರತಿಕ್ರಿಯಾತ್ಮಕ ಧೋರಣೆ ಇಲ್ಲವೆ ಒಂದು ನಿರ್ದಿಷ್ಟ ನಿಲುವು ಅಥವಾ ಒಂದು ಖಚಿತವಾದ ಅಭಿಪ್ರಾಯ ಹರಳುಗೊಂಡಿರುತ್ತದೆ. ತತ್ಕಾರಣವಾಗಿ ದೃಶ್ಯಕಲೆಯಲ್ಲಿ ಅಥವಾ ಶಿಲ್ಪಕಲೆಯಲ್ಲಿ ಹಲವು ಪಲ್ಲಟಗಳು ಸಹಜವಾಗಿ ಘಟಿಸುತ್ತವೆ. ಅನುಭವ– ವಿಚಾರಗಳ ಅಭಿವ್ಯಕ್ತಿಯಲ್ಲಿ ಸಮಕಾಲೀನತೆಯೆಂಬುದು ಅಥವಾ ಸಮಕಾಲೀನ ಪ್ರಸ್ತುತತೆಯೆಂಬುದು ಅಗತ್ಯವಾಗಿ ಇರಲೇಬೇಕಾದ ಒಂದು ಮೌಲ್ಯ. ಪಿಕಾಸೋ ಹೇಳಿರುವಂತೆ ಯಾವುದೇ ಒಂದು ಕಲಾಕೃತಿ ಸಮಕಾಲೀನವಾಗಿ ಪ್ರಸ್ತುತವಾಗದೆ ಇದ್ದರೆ, ಅದನ್ನು ಪರಿಗಣಿಸಲೇ ಬಾರದು.[1] ಯಾವುದೇ ಕಾಲಕ್ಕೆ ಸಿಲುಕದ, ಸುತ್ತಲೂ ಯಾವುದೇ ರೀತಿಯಲ್ಲೂ ಆಸ್ವಾದಕನು ಶಿಲ್ಪಕೃತಿಯ ಮುಂದೆ –ಹಿಂದೆ ಸುತ್ತಲೂ ನಡೆದಾಡುತ್ತಾ ನಿಂತು ಅನುಭವಿಸುತ್ತ ಅಂದಿನ ಸಂದರ್ಭದ ಅನಿರ್ವಚನೀಯವಾದ ಯಾವುದೋ ಜೀವಧ್ವನಿಯ ಆಲಾಪನೆಯನ್ನು ಕೇಳುವ ಸ್ಥಿತಿ. ಹಾಗೆಯೆ ಪಿಕಾಸೋ ಮತ್ತು ಇವನಂತಹ ಹಲವು ಕಲಾವಿದರು ಹೇಳುವ ಶೈಲಿಯ ನಿರಾಕರಣೆ, ಅಂದರೆ ಶೈಲಿಗಳನ್ನು ಮೀರಿದ, ಬದಲಾಗುವ ಶೈಲಿಗಳ ಅಭಿವ್ಯಕ್ತಿ ದೃಶ್ಯಕಲೆಯದು. ಅದು ಹರಿಯುವ ನೀರಿನಂತೆ ಸದಾ ಬದಲಾಗುವ ಮತ್ತು ಎಲ್ಲ ರೀತಿಯಿಂದಲೂ ಯೋಗ್ಯವಾಗುವ ಸ್ಥಿತಿ. ಈ ಸ್ಥಿತಿಗತಿಯಲ್ಲಿ ಹೊಮ್ಮಿ ಬರುವ ಹೊಸ ಸಂವೇದನೆಯ ಗ್ರಹಿಕೆಗಳ ಅಭಿವ್ಯಕ್ತಿಗೆ ಅನಿರ್ದಿಷ್ಟ ಕಾಲ ಮತ್ತು ಸಂದರ್ಭವೂ ಹೇಗೆ ಪೂರಕವಾಗುತ್ತದೆ ಅಥವಾ ಕಾರಣವಾಗುತ್ತದೆ ಎಂದರೆ ತನ್ನ ಕಾಲದ ಪರಿಸ್ಥಿತಿ ಹಾಗೂ ಶೈಲಿಗಳಿಗೆ ಹೊಂದುವ ಹೊಸ ಮಾಧ್ಯಮವನ್ನು

ಹೊಂದಿಸಿಕೊಡುತ್ತದೆ. ಸಾಮಗ್ರಿಗಳನ್ನು ರೂಪಿಸಿಕೊಡುತ್ತದೆ. ಮತ್ತು ಯಾವುದೇ ಒಂದು ಶೈಲಿ, ತಂತ್ರ, ಮಾಧ್ಯಮ ಅಗತ್ಯವೆನಿಸಿದರೆ ಪರಂಪರೆಗಳು ಸಶಕ್ತವಾಗಿದ್ದರೆ ಸಮಾಜಕ್ಕೆ, ಕ್ಷೇತ್ರಕ್ಕೆ ಅವು ಉಳಿಯತ್ತವೆ ಮತ್ತು ಬೆಳೆಯುತ್ತವೆ. ಅಲ್ಲದೆ ಹೊಸ ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತವೆ. ಅಷ್ಟೆ! ಸಶಕ್ತವಾಗಿರದಿದ್ದಲ್ಲಿ ಹಿನ್ನೆಲೆಗೆ ದೂಡಲ್ಪಡುತ್ತವೆ. ಕ್ರಮೇಣ ನಾಶಹೊಂದುತ್ತವೆ. ಇಲ್ಲವೆ ವಸ್ತುರೂಪದಲ್ಲಿರುವ ಕೆಲವು ಸಂಗ್ರಹಾಲಯಗಳಲ್ಲಿ ಕೊಳೆಯುತ್ತವೆ.

ಮೂರು ಆಯಾಮದ ಶಿಲ್ಪ ಕಲಾಕೃತಿಗಳು ಶಿಲ್ಪಿಯೊಬ್ಬನಿಂದ ಸೃಷ್ಟಿಗೊಂಡ ಬಹುತೇಕ ಸಂದರ್ಭದಲ್ಲಿ ಅವು ಅವನ ತೀರ ವೈಯಕ್ತಿಕ ನೆಲೆಯ ಅಭಿವ್ಯಕ್ತಿಗಳಾಗಿರುವುದು ಸಹಜ. ಮತ್ತು ಆ ಕಲಾವಿದನದೇ ಆದ ಹೊಸ ಶೈಲಿ ಭಾವ– ವೈಭವಗಳು ಅನ್ವೇಷಣೆಗೊಂಡಿರುತ್ತವೆ. ಹಾಗಾಗಿ ಪ್ರತಿಯೊಂದು ಸೃಷ್ಟಿಯೂ ಅಂದರೆ ಅದು ಶಿಲ್ಪವಿರಲಿ ಅಥವಾ ಚಿತ್ರವಿರಲಿ ಇವುಗಳು ಸೃಷ್ಟಿಗೊಂಡ ಕಾಲ ಮತ್ತು ಸಂದರ್ಭಕ್ಕೆ ವಿನೂತನವೇ ಆಗಿರುತ್ತವೆ. ಆದರ ಈ ವಿನೂತನತೆ ಅಥವಾ ಹೊಸಹುಟ್ಟು ಯಾರೋ ಒಬ್ಬರಿಂದ ಯಾವುದೋ ಒಂದು ಸಂದರ್ಭದಲ್ಲಿ ದಿಢೀರನೆ ಆವಿರ್ಭಸುವುದಿಲ್ಲ. ಎಲ್ಲಿಯೇ ಆಗಲಿ ಆಧುನಿಕತೆ ಅಥವಾ ಹೊಸತು ಎಂಬುದು ಒಂದೇ ಸಲ ಹುಟ್ಟಿಬಂದುದಲ್ಲ. ಪಶ್ಚಿಮ ಹಾಗೂ ಯುರೋಪ್ ಕೇಂದ್ರಿತವಾಗಿ ಬಂದ ಆಧುನಿಕತೆ ಅದರಲ್ಲೂ ದೃಶ್ಯಕಲೆಯಲ್ಲಿ ೧೮೮೦ರ ಪೋಸ್ಟ್ ಇಂಪ್ರೆಶಿಯನಿಸಂನಿಂದ ಆರಂಭಗೊಂಡು ಕ್ಯುಬಿಸಂನಲ್ಲಿ ತನ್ನ ಶಿಖರ ಮುಟ್ಟಿದುದು ಕಲಾ ಚರಿತ್ರೆಯ ಅದ್ಭುತವೇ ಸರಿ. ಈ ಒಂದು ಕಾಲಘಟ್ಟದಲ್ಲಿ ಅಂದರೆ ೧೮೮೦ ರಿಂದ ೧೯೩೫ರ ನಡುವೆ ಅಂದರೆ, 'ಇಂಪ್ರೆಶಿಯನಿಸಂ' ನಿಂದ ಹಿಡಿದು ಎಲ್ಲ ಪಂಥಗಳಲ್ಲಿ ಹಲವಾರು ಕಲಾವಿದರು ತಮ್ಮ ಹೊಸ ನಡೆಗಳನ್ನು ಢಾಳವಾಗಿಯೇ ದಾಖಲಿಸಿದರು.

ಪಾಶ್ಚಿಮಾತ್ಯರಲ್ಲಿ ನಡೆದಂತಹ ಚಳುವಳಿ ರೂಪದ ಆಧುನಿಕತೆ ನಮ್ಮಲ್ಲಿ ನಡೆಯಲಿಲ್ಲ. ಅವರಿಗಿರುವ ಕಾರಣ ತುರ್ತು ನಮಗಿರಲಿಲ್ಲವೇನೊ. ಅವರ ಹೊಸತನದ ಸಿದ್ಧಮಾದರಿಗಳನ್ನು ಬ್ರಿಟೀಷರ ಮೂಲಕ ಹಸಿಹಸಿಯಾಗಿ ನಮ್ಮವರು ಸ್ವೀಕಿಸಿದರು. ವಿಮರ್ಶಕ ಕೆ.ವಿ.ಸು. ಹೇಳುವಂತೆ 'ಒಳ್ಳೆಯದು, ಕೆಟ್ಟದ್ದು ಎಲ್ಲವನ್ನು ಸ್ವೀಕರಿಸಿ ಅನುಸರಿಸಿದರು.

ಬ್ರಿಟೀಷರು ಭಾರತದಲ್ಲಿ ಕಲಾಶಾಲೆಗಳನ್ನು ಸ್ಥಾಪಿಸುವ ಮೂಲಕ ನಮ್ಮವರಿಗೆ ಆಧುನಿಕ ದೃಶ್ಯಕಲೆ ಕಲಿಸಲು ಆರಂಭಮಾಡಿದರು. ಈ ಮತ್ತು ಇನ್ನೂ ಕೆಲವು ಕಾರಣಗಳಿಂದಾಗಿ ನಮ್ಮ ಗುರುಕುಲ ಕಲಾ ಶಿಕ್ಷಣ ಪದ್ಧತಿ ಮಂದವಾಗುತ್ತಾ ಹೋಗಿ ಇಲ್ಲವಾಯ್ತು. ಆಧುನಿಕ ಕಲೆ ಮತ್ತು ಕಲಾ ಶಿಕ್ಷಣ ಮುನ್ನೆಲೆಗೆ ಬಂದಿತು. ಆದರೆ ಪಾಶ್ಚಾತ್ಯರಲ್ಲಿ ಹೇಗೆ ದೃಶ್ಯಕಲೆಯು ಕಾವ್ಯ ಅಥವಾ ಸಾಹಿತ್ಯದ ಮೇಲೆ ಪ್ರಭಾವ ಬೀರಿತೋ ಮತ್ತು ದೃಶ್ಯಕಲಾವಿದರು, ಕವಿಗಳು, ನಾಟಕಕಾರರ ನಡುವೆ ಪರಸ್ಪರ ಕೊಡು ಕೊಳ್ಳುವಿಕೆ ಪ್ರಭಾವಗಳು ಹೇಗೆ ನಡೆದವೋ ಹಾಗೆ ನಮ್ಮಲ್ಲಿ ಆಗಲಿಲ್ಲ. ಅಪರೂಪಕ್ಕೆ ಕಲಾವಿದರು ಕರೆದಾಗ ಜಿ. ಎಸ್. ಶಿವರುದ್ರಪ್ಪ, ಕಿ. ರಂ. ನಾಗರಾಜ, ವಿ. ಸೀತಾರಾಮಯ್ಯ, ಅನಂತಮೂರ್ತಿ, ಎಂ. ಎಚ್. ಕೃಷ್ಣಯ್ಯರಂತಹವರು ಕಲೆಯ ಕುರಿತು ಮಾತಾಡಿದ್ದಾರೆ.

ತೀರ ಅಪರೂಪಕ್ಕೆ ಕೆಲ ಸಾಹಿತಿಗಳು ಕಲಾವಿದರ ಚಿತ್ರಗಳನ್ನು ನೋಡಿ ಕಾವ್ಯಗಳನ್ನು ಬರೆದುದ್ದುಂಟು, ಅದೂ ಚಿತ್ರ- ಶಿಲ್ಪ ಕಲಾವಿದರ ಸೃಷ್ಟಿ ಪ್ರಕ್ರಿಯೆ ಸಂದರ್ಭಗಳೊಂದಿಗೆ ಜೊತೆಯಾಗಿ ಘಟಿಸುದವುಗಳಲ್ಲ. ಕ್ವಚಿತ್ತಾಗಿ ತೀರ ಈಚೆಗೆ ಕೆಲವು ಗ್ಯಾಲರಿಗಳವರ ಒತ್ತಾಸೆಯ ಮೇರೆಗೆ ಹಾಗೆ ನಡೆದಿರುವುದಿದೆ.

ದೃಶ್ಯಕಲೆಯಲ್ಲಿ ಆಧುನಿಕತೆಯ ಕ್ರಾಂತಿಕಾರಿ ಸಾಧ್ಯತೆಗಳನ್ನು ಚಿತ್ರ- ಶಿಲ್ಪಕಾರರು ಆ ಸಂದರ್ಭದಲ್ಲಿ ಹೇಗೆ ಅನ್ವೇಷಿಸಿಕೊಂಡರೆಂಬುದು ಕುತೂಹಲಕರವಾದ ಚರಿತ್ರೆಯೆ ಸರಿ. ಸಾಂಪ್ರದಾಯಿಕ ಮನಸ್ಸುಗಳ ಅಡ್ಡಿ ಆತಂಕಗಳನ್ನು ಎದುರಿಸಿಯೂ ಆಧುನಿಕತೆಯನ್ನು ಕಲಾವಿದರು ತಂದರು. ವಿಶ್ವದ ಗಮನಕ್ಕೂ ತಂದರು. ಮಾರ್ಟಿನ್ ಅವರು 'ಮಾಡರ್ನಿಸಂ' ವ್ಯಾಖ್ಯೆಯನ್ನು 'ಮಾಡರ್ನ್ ಏಜ್' ಎಂದು ದಾಖಲಿಸಿದರು. ಹಾಗಾಗಿಯೇ ಅಮೆರಿಕದ ಹೇರಾಲ್ಡ್ ರೋಷನ್ ಬರ್ಗ್ 'The tradition of the new' ಎಂದಿರುವುದು ಭಾರತೀಯವಾಗಿದೆ. ಸಹಜತೆ ಅಥವಾ ಪ್ರಕೃತಿಗೆ ಹಾಗೂ ಮೂಲಭೂತ ವ್ಯವಸ್ಥೆಗಳಿಗೆ ತಿರುಗೇಟು ನೀಡುವಂತಹ ಸಂದರ್ಭ ಸೃಷ್ಟಿ ಒಂದೆಡೆಯಾದರೆ ತಮ್ಮದೇ ರೀತಿಯಲ್ಲಿ ಭಾವಚಿತ್ರ, ಭೂದೃಶ್ಯ ಚಿತ್ರಗಳನ್ನು ರಚಿಸುತ್ತಿದ್ದ ಕಲಾವಿದರಿಗೆ ಕ್ಯಾಮರಾ ನೀಡಿದ ಹೊಡೆತ ಅನಿವಾರ್ಯತೆಯನ್ನು ಸೃಷ್ಟಿಸಿತ್ತು. 'ಇಂದು ಆ ವಿಚಿತ್ರ ಸನ್ನಿವೇಷ ಸಂದರ್ಭಗಳ ಹಿನ್ನಲೆಯಲ್ಲಿ modernism ಪದಕ್ಕಿಂತಲೂ ಬೇರೆಯಾದ ಇನ್ನೊಂದು ತೀವ್ರತೆಯಿಂದ ಕೂಡಿದ ಪದದಿಂದ ಹಿಡಿದಿಡಬಹುದಾಗಿತ್ತು.[೬] ಎಂಬ ಅಭಿಪ್ರಾಯ ಕೆ.ವಿ.ಸು. ಅವರು ವ್ಯಕ್ತ ಮಾಡುತ್ತಾರೆ. ಪಾಶ್ಚಾತ್ಯದಲ್ಲಿ ೧೯೦೭ ರ ಹೊತ್ತಿಗಾಗಲೇ ಆಧುನಿಕ ಅಥವಾ modern ಎಂಬ ಪದ ಪ್ರಚಾರಕ್ಕೆ ಬಂದಿದ್ದಿತು. ಆ ಸಂದರ್ಭದಲ್ಲಿ ಪಿಕಾಸೋನ 'ಕ್ಯೂಬಿಸಂ', ಶಿಲ್ಪಗಳೂ ಮೂಡಿಬಂದಿದ್ದವು. ನಮ್ಮಲ್ಲಿ ತನ್ನ ನವ್ಯ ಕಲಾಕೃತಿಗಳಿಂದ ಕ್ರಾಂತಿ ಮಾಡಿ ಜನಪ್ರಿಯತೆ ಪಡೆದಿದ್ದ ರವಿವರ್ಮ (೧೯೦೬) ಕಾಲವಾದ ನಂತರದ ದಶಕಗಳಲ್ಲಷ್ಟೆ ದೃಶ್ಯಕಲೆಯಲ್ಲಿ ಈ ಪದ ಕಾಣಿಸಿಕೊಂಡಿತು.

ಆಧುನಿಕ ಎಂಬ ಪದ ೧೯ನೆಯ ಶತಮಾನದ ಕೊನೆಯ ದಶಕದ ಸಾಂಸ್ಕೃತಿಕ ಕ್ಷೇತ್ರದಲ್ಲಿ ಅದರಲ್ಲೂ ಶಿಲ್ಪ-ಚಿತ್ರ ಕಲೆಗಳನ್ನು ಸೇರಿಸಿದ ದೃಶ್ಯಕಲೆಯ ಕುರಿತು ಬಳಸಲಾರಂಭಿಸಿದ್ದು ನಂತರ ೨೦ನೇಯ ಶತಮಾನದ ಒಟ್ಟಾರೆ ಪ್ರಯೋಗಾತ್ಮಕ ದೃಶ್ಯಕಲಾ ಸೃಷ್ಟಿಗೆ ಪ್ರಮುಖ ಶೀರ್ಷಿಕೆಯಾಗಿ ಬಳಸಲ್ಪಟ್ಟುದು ಜನಜನಿತ. ಆಧುನಿಕ ಎಂಬ ಪದದ ಅರ್ಥ ಈಗಿನ, ಇತ್ತೀಚಿನ, ನವೀನ ಎಂದಿದೆ. ಆದರ ದೃಶ್ಯಕಲೆಗೆ ಅನ್ವಯಿಸಿದಂತೆ ಈಗಾಗಲೇ ಒಪ್ಪಿಕೊಂಡಿರುವ ಸಂಪ್ರದಾಗಳನ್ನು ದಿಕ್ಕರಿಸಿದ' ಒಂದು ಶೈಲಿಯಾಗಿ ಗುರುತಿಸಲ್ಪಟ್ಟುದು. ಈ ಹಾದಿ ಹೊಸ ಕಾಲದ ಮತ್ತು ಹೊಸ ಸಂದರ್ಭ ಮತ್ತು ಸಂವೇದನೆಗಳಿಗೆ ಸೂಕ್ತವಾದ ಆಕಾರ ಕಲ್ಪನೆಗಳನ್ನು ಅನ್ವೇಷಿಸುವ ಸೃಜನಶೀಲ ಮನೋಭಾವದ ದೃಷ್ಟಿ- ಸೃಷ್ಟಿಗಳಿಗೆ ಅನ್ವಯಿಸಿ ಈ ಆಧುನಿಕ ಸಮಕಾಲೀನ ಎಂಬ ಪದವನ್ನು ಹೆಚ್ಚಾಗಿ ಬಳಸಲಾಗುತ್ತಿರುವುದು ವಿಶೇಷ. ಪಶ್ಚಿಮ ದೇಶಗಳಲ್ಲಿನ ದೃಶ್ಯಕಲೆಯಲ್ಲಿ ಉಂಟಾದ ಬದಲಾವಣೆ ಇತರ ದೇಶಗಳ ಮೇಲೂ ಪ್ರಭಾವ ಬೀರಿವೆ. ಭಾರತವೂ ಇದಕ್ಕೆ ಹೊರತಾಗಲಿಲ್ಲ. ಭಾರತದಲ್ಲಿನ ಮುಖ್ಯ ದೃಶ್ಯಕಲೆಯ ಆಧುನಿಕ ಸಮಕಾಲೀನತೆಗೆ ಪಶ್ಚಿಮ

ಹಾಗೂ ಯುರೋಪಿನ ದೃಶ್ಯಕಲೆಯ ಸಂಪರ್ಕವೇ ಪ್ರಮುಖ ಕಾರಣವಾಯಿತು. ೧೯೩೦ ರಲ್ಲಿ ಯುರೋಪಿನಲ್ಲಿ ರವೀಂದ್ರನಾಥ ಟ್ಯಾಗೋರರ ಚಿತ್ರಲಿಪಿಯ ಕಲಾಕೃತಿಗಳು ಪ್ರದರ್ಶಿಸಲ್ಪಟ್ಟವು. ಪಶ್ಚಿಮ ಹಾಗೂ ಯುರೋಪುಗಳ ಆಧುನಿಕ ಕಲಾ ಚಳುವಳಿಗಳ ಬಗ್ಗೆ ರವೀಂದ್ರರಿಗೆ ಪರಿಚಯವಾಗಿದ್ದಿತು. ಕವಿಯಾಗಿದ್ದು ಚಿತ್ರ ಕಲೆಯಲ್ಲಿ ಹೊಸತನ ತಂದರು. ಆದರೆ ಅದು ಆಗ ಅಷ್ಟೊಂದು ಪ್ರಚಾರ ತರಲಿಲ್ಲ. ಆದರೆ ಬ್ರಿಟೀಷರು ಸ್ಥಾಪಿಸಿದ್ದ ಕಲಾಶಾಲೆಗಳ ಮೂಲಕ ಬಂದ ಬದಲಾವಣೆಯೇ ಹೆಚ್ಚು ಸಂಚಲನವುಂಟು ಮಾಡಿತು. ಬ್ರಿಟೀಷ್ ವಸಾಹಾತು ಕಾಲದಲ್ಲಿ ಆದ ಬದಲಾವಣೆಗಳು ಹಲವು ಅದರಲ್ಲೂ ದೃಶ್ಯಕಲೆಗಳಲ್ಲಿ ಬಂದ ಬದಲಾವಣೆ ರೋಚಕ. ಸಾವಿರಾರು ವರ್ಷಗಳ ಸಂಪ್ರದಾಯ ನಂಬಿಕೆ ಕಳೆದು ಕೊಂಡಿತು. ಆ ಹೊತ್ತಿಗಾಗಲೇ ಪಟ್ಟನ ಹಳ್ಳಿಗಳಲ್ಲಿ ಅವರವರ ಅಭಿರುಚಿಗೆ ತಕ್ಕ ಲಲಿತಕಲೆಗಳು ಬೆಳೆಯತೊಡಗಿದವು.

ಬ್ರಿಟೀಷ್ ಕಲಾಶಾಲೆಗಳಲ್ಲಿ ನಮ್ಮವರು ಕಲಿತು ಬಂದ ಸಂದರ್ಭ ಕಲಾವಿದರು ಕೊಲ್ಕತ್ತೆಯ ಶಾಂತಿನಿಕೇತನದಲ್ಲಿಯೂ ಹಲವರು ಕಲಿತು ಬಂದರು. ಚಿತ್ರ-ಶಿಲ್ಪಕಲೆಗಳೆರಡೂ ಕಲಿಸಲ್ಪಡುತ್ತಿದ್ದ ದಿನಗಳವು. ೧೭೬೦ ಲ್ಲಿಯೇ ಮೋಘಲ್ ಸಾಮ್ರಾಜ್ಯದ ಅಳಿವಿನೊಂದಿಗೆ ಭಾರತೀಯ ಸಂಪ್ರದಾಯ ಬದ್ಧ ಚಿತ್ರ- ಶಿಲ್ಪಕಲೆಗಳು ಕಾರಣದಾದವು. ಬ್ರಿಟೀಷ್ ವಸಾಹತುಶಾಹಿ ಅವಧಿಯಲ್ಲಿ ದೇಶೀ ಕಲಾವಿದರು ವಿದೇಶಿ ಚಿತ್ರ, ಶಿಲ್ಪಗಳ ಅನುಕರಣೆ ಮಾಡಬೇಕಾಯಿತು. ನಕಲು ಮಾಡುವಿಕೆ ಬೆಳೆಯಿತು. ದಕ್ಷಿಣ ಭಾರತದಲ್ಲಿ ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ರವಿವರ್ಮನ ಕಲಾಕೃತಿಗಳ ಭಾವ ವೈಭವ ಬ್ರಿಟೀಷ್ ವಿಕ್ಟೋರಿಯನ್ ಶೈಲಿಯ ದಟ್ಟ ನೆರಳು, ಯುರೋಪಿನ ಚಿತ್ರಕಾರರ ಮತ್ತು ಭಾರತೀಯತೆ ವಾಸ್ತು ರವಿವರ್ಮನ ಅದ್ಭುತ ಜನಪ್ರಿಯತೆಗೆ ಕಾರಣವಾಯಿತು. ಬ್ರಿಟೀಷರಿಂದ ಸ್ಥಾಪಿತಗೊಂಡ ಮುಂಬೈನ ಜೆ. ಜೆ. ಕಲಾಶಾಲೆ ನಮ್ಮ ಕಲಾವಿದರಿಗೆ ಹೊಸತನದ ಬೆಡಗು ಕಲಿಸಿತು. ಅಲ್ಲಿಂದ ಕಲಿತು ಬಂದವರು ಇಲ್ಲಿ ಹಲವು ರೀತಿಗಳಲ್ಲಿ ದೃಶ್ಯಕಲೆಯ ಹೊಸತನಕ್ಕೆ ಕಾರಣರಾದರು ಕೆಲವರು ಅಲ್ಲಿಯೇ ಉಳಿದರೂ ತಮ್ಮ ಅಭಿವ್ಯಕ್ತಿಗಳಿಂದ ನಮ್ಮವರಿಗೆ ಸ್ಫೂರ್ತಿಯಾದರು.

ಹೊಸ ಬಗೆಯ ಕಲೆಯ- ಕಲಿಕೆಯ ಅನುಭವ ಹಿಂದಿಗಿಂತಲೂ ವಿಭಿನ್ನವಾಗಿ ಸೃಷ್ಟಿಸಬೇಕೆಂಬ ಮನಸ್ಸು ಯಾರಿಗೆ ಯಾವ ಸಂದರ್ಭಗಳಲ್ಲಿ ಯಾವ ಯಾವ ರೀತಿಯಲ್ಲಿ ಉಂಟಾಯಿತೆಂಬುದು ಕುತೂಹಲಕಾರಿ ಸಂಗತಿಯೇ ಆಗಿದೆ. ಕೆಲವರಿಗೆ ಜೆ.ಜೆ. ಕಲಾಶಾಲೆಯ ಪಠ್ಯಕ್ರಮದಂತೆ ಕಲಿಕೆ ಅನಿವಾರ್ಯ ಮತ್ತು ಕೆಲವರಿಗೆ ಹೊಸದರ ನಿರೀಕ್ಷೆ. ಕಲಿಕೆಯ ಹೊಸಹಾದಿಗಳಲ್ಲಿ ಸೃಷ್ಟಿಸುವಿಕೆಗೆ ಹಾತೊರೆದರೆ ಇನ್ನೂ ಕೆಲವರಿಗೆ ಕೇವಲ ದೃಶ್ಯಕಲೆ ಕಲಿಯುವ ಅವಕಾಶ ದಕ್ಕಿದ ಕಾರಣವಾಗಿ ಅಕಾಡೆಮಿಕ್ ಪಠ್ಯಕ್ರಮದಂತೆ ಕಲಿತು ಬಂದವರುಂಟು.

ಹೀಗೆ ಮುಂಬೈ ಕಲಾ ಶಾಲೆಯಲ್ಲಿ ಕಲಿತುಬಂದ ನಂತರವೂ ಕಲೆಯಲ್ಲಿನ ಹೊಸತನ ಎಷ್ಟು ಮಂದಿಯಲ್ಲಿ ಜೀವಂತಿಕೆಯಿಂದ ಮುಂದುವರಿಯಿತೆಂಬುದು ಬೇರೆ ಪ್ರಶ್ನೆ. ಆದರೆ ಬ್ರಿಟೀಷ್ ಶೈಲಿಯ ಕಲಾಶಿಕ್ಷಣ ಪಡೆದು ಹೊರಬಂದ ಉತ್ತರ ಕರ್ನಾಟಕ ಭಾಗದ ಹಲವು

ಕಲಾವಿದರು ತಮ್ಮ ಕಲೆಯಿಂದ ಬದುಕು ಸಾಗಿಸಲಾಗದೆ ಅನೇಕರು ಕಷ್ಟ ಅನುಭವಿಸಿದರು. ಆದರೆ ಮಠ ಮಾನ್ಯಗಳು ಶ್ರೀಮಂತರ ಆಶ್ರಯ ದೊರೆತ ಕೆಲವರು ಭಾವಚಿತ್ರ ಶಿಲ್ಪಕಲೆಯ ಮೂಲಕಉಳಿದುಕೊಂಡು ಬಂದುದುಂಟು. ಈ ಸಾಲಿನಲ್ಲಿ ೧೯೩೫ ರಲ್ಲಿ ಡಾ. ಡಿ. ವಿ. ಹಾಲಭಾವಿಯವರು[೮] ಧಾರವಾಡದಲ್ಲಿ ಕಲಾಶಾಲೆಯನ್ನು ಪ್ರಾರಂಭಿಸಿದಾಗ ಕನ್ನಡಿಗರಲ್ಲಿ ದೃಶ್ಯಕಲೆಯ ಹೊಸ ಶಕೆ ಪ್ರಾರಂಭವಾದಂತಾಯಿತು. ಬಳಿಕ ಬೆಳಗಾಂ, ವಿಜಯಪುರ, ಕಲಬುರ್ಗಿ, ಹುಬ್ಬಳ್ಳಿ, ದಾವಣಗೆರೆ ಮೊದಲದೆಡೆಗಳಲ್ಲಿ ಕಲಾಶಾಲೆಗಳು ಪ್ರಾರಂಭವಾದವು ಅಷ್ಟೊತ್ತಿಗೆ ಮೈಸೂರಲ್ಲಿ (೧೯೪೭ರಲ್ಲಿ) ಚಾಮರಾಜೇಂದ್ರ 'ಟೆಕ್ನಿಕಲ್ ಇನ್‌ಸ್ಟಿಟ್ಯೂಟ್' ನಲ್ಲಿ ಚಿತ್ರಕಲೆಯ ಒಂದು ವಿಷಯ ಇದ್ದರೂ ಬಹುತೇಕ ಕಲಿಯುವ ಕಲಿಸುವ ಪ್ರಕ್ರಿಯೆ ಕರಕುಶಲ ಕಲೆಗಳಿಗೆ ಸೀಮಿತವಾಯಿತು. ಅದೂ ಕೆಳಮಟ್ಟಕ್ಕೆ ಹೋಗಿದ್ದಿತು. ಸರಕಾರದಿಂದಲೂ ನಿರ್ಲಕ್ಷಕ್ಕೆ ಒಳಗಾಗಿತ್ತಲ್ಲದೆ ಅ.ನ.ಕೃ ರಂತಹವರಿಂದ ಮತ್ತು ಜನರಿಂದಲೂ ಟೀಕೆಗೆ ಒಳಗಾಗಿದ್ದಿತು.

ಮುಂಬೈನ ಜೆ.ಜೆ. ಕಲಾಶಾಲೆಯ ಬ್ರಿಟೀಷ್ ವಿಕ್ಟೋರಿಯನ್ ಕಲಾ ಶೈಲಿಯಲ್ಲಿ ಕಲಿತು ಬಂದರೂ ಆ ಸಂದರ್ಭಕ್ಕೆ ಬಹುತೇಕ ಕಲಾವಿದರು ಭಾವಚಿತ್ರ, ಭಾವಶಿಲ್ಪ ಪ್ರಕಾರದ ರಚನೆಯೆಡೆಗೆ ಹೊರಳಿದರು. ಎಸ್. ಎಂ. ಪಂಡಿತ್‌ರು 'ಅಪ್ಲೈಡ್ ಆರ್ಟಿಸ್ಟ ಗೀಲ್ಡ್' ನ ಸಂಸ್ಥಾಪಕರೂ ಆಗಿದ್ದರು.[೧೦] ಅಂದು ದೃಶ್ಯಕಲೆ ಬದುಕಿಗೆ ಉಪಯುಕ್ತವಾಗುವ ಅಂಶವನ್ನು ಒಳಗೊಂಡು ಮೂಡಿಬರಲು ಪ್ರಾರಂಭವಾಗಿತ್ತು. ಜೆ. ಜೆ. ಕಲಾಶಾಲೆಯಲ್ಲಿ ಕಲಿತು ಬಂದು ರೂಪಶಿಲ್ಪಿಯೆಂದು ಪ್ರಸಿದ್ಧರಾದ 'ಬಸವಯ್ಯ' ೧೯೧೯ ರಲ್ಲಿ ಮುಂಬೈಗೆ ತೆರಳಿ ಚಿತ್ರ ರಚನೆಯ ಜೊತೆಗೆ ಜೆ. ಕೆ. ಮ್ಹಾತ್ರೆಯವರ ಸ್ಟುಡಿಯೋದಲ್ಲಿ ಶಿಲ್ಪಕಲೆಯ ಬಗ್ಗೆಯೂ ಕಲಿತರು.[೧೧] ಮಹಾತ್ಮಾ ಗಾಂಧೀಜಿಯಂಥಹವರ ಭಾವಶಿಲ್ಪಗಳನ್ನೂ ರೂಪಿಸಿದ ಹೆಗ್ಗಳಿಕೆ ಇವರದು. ಹೀಗೆ ಜೀವಂತ ವ್ಯಕ್ತಿಗಳನ್ನು ಮುಂದೆ ಕೂರಿಸಿಕೊಂಡು (ಮಾಡಲ್) ಭಾವಶಿಲ್ಪ ರಚನೆಯಲ್ಲಿ ತೊಡಗುವುದೇ ನಮ್ಮ ಕಲಾವಿದರಿಗೆ ಹೊಚ್ಚ ಹೊಸ ಅನುಭವ ಆದರೂ ಇದೊಂದು ಅಕಾಡೆಮಿಕ್, ವ್ಯಾಕರಣ ಬದ್ಧ ಸೃಷ್ಟಿಕ್ರಮದ್ದು. ಆದರೆ ಆ ಕಾಲಕ್ಕೆ ಮೈಸೂರು ಅರಮನೆಯಲ್ಲಿ ಉಂಟು ಮಾಡಿದ ಭಾವಶಿಲ್ಪ ರಚನೆಯ ಕ್ರಾಂತಿಕಾರಿ ಹೆಜ್ಜೆ ಗಣನೀಯವೇ. ಕೆಂಪೇಗೌಡ, ವಿಶ್ವೇಶ್ವರಯ್ಯರ ಶಿಲ್ಪಗಳೂ ಅವರಿಂದ (೧೯೬೦) ಮೂಡಿ ಬಂದವು. ಸಾರ್ವಜನಿಕ ಶಿಲ್ಪಗಳ ಈ ಪ್ರತಿಷ್ಠಾಪನೆಯ ಉದ್ಘಾಟನೆ ಜನಸಾಮಾನ್ಯರಿಗೆ ಹೊಸ ಅನುಭವ ನೀಡಿತು. ಹಾಗೆಯೇ ಹಲವು ಖ್ಯಾತ ನಾಮರ ಭಾವಶಿಲ್ಪಗಳೂ ಆ ಕಾಲಕ್ಕೆ ಹೆಚ್ಚು ಕೌತುಕದಿಂದ ನೋಡಿಸಿಕೊಂಡ ರಚನೆಗಳು.

ಹೈದ್ರಾಬಾದ್ ಕರ್ನಾಟಕದ ಶಂಕರ್‌ರಾವ್ ಆಳಂದಕರ್ ಅವರು ಜೆ. ಜೆ. ಕಲಾಶಾಲೆಯಲ್ಲಿ ಕಲಿತು ಬಂದವರಾಗಿದ್ದು ೧೯೩೦ ರಲ್ಲಿ ಕಲಬುರ್ಗಿಯಲ್ಲಿ ಚಿತ್ರಕಲಾ ಪ್ರದರ್ಶನವೊಂದನ್ನು ಏರ್ಪಡಿಸಿದರು. ಈ ಪ್ರದರ್ಶನ ಹೊಸ ಅನುಭವವನ್ನು ನೀಡುವಲ್ಲಿ ಯಶಸ್ವಿಯಾಯಿತು. ಎಸ್. ಎಂ. ಪಂಡಿತ್, ಚಂದ್ರಶೇಖರ್, ಎಂ.ಟಿ ಭೋಪಲೆ, ಕುಲಕರ್ಣಿ, ವಿದ್ಯಾಭೂಷಣ ಮೊದಲಾದವರೂ ಪ್ರದರ್ಶನ ಮಾಡಿದರು. ಮುಂಬೈ ಕರ್ನಾಟಕ ಭಾಗದಲ್ಲಿ ವಿಶೇಷವಾಗಿ ಡಿ. ವಿ. ಹಾಲಭಾವಿಯವರು ಮಾಡಿದ ಕಲಾಪ್ರದರ್ಶನವೊಂದು

ಇಂಗ್ಲೀಷ್‌ನಲ್ಲಿ ಕರ್ನಾಟಕದ ಮೊದಲ ಕ್ಯಾಟಲಾಗ್ ಬರಹದೊಂದಿಗೆ ಮೂಡಿಬಂದಿತ್ತು. ಚಿತ್ರಗಳೂ ಬಣ್ಣಗಳಲ್ಲಿದ್ದವು. ಅವರ 'ಆರ್ಟ್ ಗೀಲ್ಡ್' ಪತ್ರಿಕೆ ಅಂದಿನ ದಿನಗಳಲ್ಲಿ ಜನರಲ್ಲಿ ದೃಶ್ಯಕಲೆಯ ಸಾಕ್ಷರತೆಯ ಬಗೆಗಿನ ಹೊಸ ಪ್ರಜ್ಞೆಯನ್ನು ಮೂಡಿಸುವ ಕೆಲಸ ಮಾಡಲಾರಂಭಿಸಿತು.

ಭಾರತದ ಬಗ್ಗೆ ಭಾರತೀಯ ಕುಶಲಿಗಳ ಬಗ್ಗೆ, ಸಂಸ್ಕೃತಿಯ ಬಗ್ಗೆ ಅಪಾರ ಪ್ರೀತಿಯನ್ನು ಇಟ್ಟುಕೊಂಡಿದ್ದ ಆನಂದ ಕುಮಾರಸ್ವಾಮಿ ಅಂದಿನ ಸಂದರ್ಭದ (೧೯೦೯) ಭಾರತದ ಕಲಾ ಶಾಲೆಗಳ ಬಗ್ಗೆ ಬೇಸರ ವ್ಯಕ್ತಪಡಿಸಿದ್ದರು. ವಿದೇಶಿ ಕಲೆ ಮತ್ತು ಸಂಸ್ಕೃತಿಯ ಹೇರಿಕೆಯ ಬಗ್ಗೆ ಸಿಡಿಮಿಡಿಗೊಂಡಿದ್ದರು. ಅಂತೆಯೇ[೧] ರವಿವರ್ಮನ ಆಧುನಿಕತೆಯನ್ನು ಪ್ರಶ್ನೆ ಮಾಡಿದ್ದರು. ವಿದೇಶೀ ಕಲಾವಿದರೊಂದಿಗೆ ವಾದಕ್ಕೆ ಇಳಿದದ್ದೂ ಇದೆ. ಆದರೂ ಬಂಗಾಳದ ಕೆಲವು ಹೊಸ ಪ್ರತಿಭೆಗಳು ಹೊಸ ಮಾಧ್ಯಮ ಸಾಮಗ್ರಿ ದೃಶ್ಯಭಾಷೆಯಲ್ಲಿ ಅಭಿವ್ಯಕ್ತಿಸಲು ತೊಡಗಿದರು. ನಮ್ಮ ಹತ್ತಿರದ ಮುಂಬೈಯಲ್ಲಿ 'ಪ್ರಗತಿಪರ ಕಲಾವಿದರ ಒಕ್ಕೂಟವು' ಹೊಸ ದೃಷ್ಟಿ ಸೃಷ್ಟಿಗಳನ್ನು ತೋರ್ಪಡಿಸಿತು. ಬ್ರಿಟೀಷರ ವಸಾಹಾತು ಕಾಲ (ಸು.೧೫೦ ವರ್ಷಗಳ) ಭಾರತೀಯ ಕಲೆ ಮತ್ತು ಸಾಂಸ್ಕೃತಿಕ ಕ್ಷೇತ್ರಗಳನ್ನು ತಲ್ಲಣಿಸುವಂತೆ ಮಾಡಿತು. ಶತಶತಮಾನಗಳಿಂದ ಬೆಳೆದು ವಿಕಾಸ ಕಂಡಿರುವ ದೇಶೀ ಸಂಪ್ರದಾಯ ಕಲೆ ಒಂದು ಕಡೆಯಾದರೆ, ಹೊಚ್ಚ ಹೊಸ ಪಾಶ್ಚಾತ್ಯ ಕಲೆ ಮತ್ತೊಂದೆಡೆ. ಈ ದ್ವಂದ್ವದಲ್ಲಿದ್ದವರನ್ನು ಕರೆದುಕೊಂಡು 'ದೇಶೀಯ ಬೇರುಗಳನ್ನು ಉಳಿಸಿಕೊಂಡು ಅವುಗಳ ಸತ್ವ ಹೀರಿ ಆಧುನಿಕ ಕಲಾಕೃತಿಗಳನ್ನು ಸೃಷ್ಟಿಸುವ ಗುಂಪನ್ನು ಅವನೀಂದ್ರನಾಥ ಠಾಕೂರರು ಹುಟ್ಟು ಹಾಕಿ ಸ್ಪೂರ್ತಿ ತುಂಬಿದರು. ಈ ಸಂದರ್ಭದಲ್ಲಿ ಪ್ರದೋಸ್ ದಾಸ್ ಗುಪ್ತಾ, ಚಿಂತಾಮಣಿಕರ್, ಶಂಖು ಚೌದುರಿಯವರು ಹೊಸಹಾದಿಯ ಶಿಲ್ಪಗಳನ್ನು ಸೃಷ್ಟಿಸಿದರು. ಚಿಂತಾಮಣಿಕರ್ ಶಂಖು ಚೌದುರಿಯವರು ಲಂಡನ್, ಪ್ಯಾರಿಸ್‌ಗಳಿಗೆ ಹೋಗಿ ಕಲೆಯಲ್ಲಿನ ಹೊಸತನಗಳನ್ನು ಅರಿತು ಬಂದವರೇ ಆಗಿದ್ದರು. ಶಂಖುಚೌದುರಿಯವರು ಬೆಂಗಳೂರಿಗೂ ಬಂದು ಶಿಲ್ಪ ಸೃಷ್ಟಿಸಿ ಹೋದವರು. ಅವರು ಒಳ್ಳೆಯ ಶಿಲ್ಪಿ ಮತ್ತು ಶಿಕ್ಷಕರಾಗಿದ್ದರು. ನಮ್ಮ ಶಿಲ್ಪಿ ಎನ್. ಎಚ್. ಕುಲಕರ್ಣಿಯವರು ಇವರಲ್ಲಿಯೇ ಕಲಿತವರಾಗಿರುವರು.

ಪ್ರಾಯಶಃ ಇದೇ ಸಂದರ್ಭದಲ್ಲಿ ಅಂದರೆ ೧೯೪೯ರ ಆಸುಪಾಸಿನಲ್ಲಿ ಮುಂಬೈನ ಕಲಾವಲಯದಲ್ಲಿ ಉಂಟಾಗಿದ್ದ ಹೊಸತನದ ಪ್ರಜ್ಞೆ 'ಪ್ರಗತಿಪರ ಕಲಾವಿದರ ಒಕ್ಕೂಟ' ದಿಂದ ದೊಡ್ಡದಾಗಿ ಬಿಂಬಿತವಾಯಿತು. ಮುಂಬೈ ಉತ್ತರ ಕರ್ನಾಟಕ ಭಾಗಕ್ಕೆ ಹತ್ತಿರದ ಬಹುವರ್ಣರಂಜಿತ ಮಹಾನಗರ, ಅಂತೆಯೆ ಪ್ರಗತಿಪರ ಕಲಾವಿದರ ಗುಂಪು ಅವರ ಸೃಷ್ಟಿಗಳು ನಮ್ಮವರನ್ನು (ಕನ್ನಡಿಗರನ್ನು) ಸಹಜವಾಗಿಯೇ ಆವರಿಸಿಕೊಂಡಿತೆನ್ನಬೇಕು. ಅನೇಕ ಕಲಾವಿದರು ಆಧುನಿಕವಾಗಿ ಸೃಷ್ಟಿಸಲು ತೊಡಗಿದರು. ಅಂತಹವರಲ್ಲಿ ಕಲಬುರ್ಗಿಯ ಧನಂಜಯ ಶಿಲ್ಪಿ ಒಬ್ಬರು.

ಭಾವಶಿಲ್ಪ, ವ್ಯಕ್ತಿ ಶಿಲ್ಪಗಳಿಗೆ ವಿಶಿಷ್ಟವಾಗಿ ಪ್ರಸಿದ್ಧವಾದ ಹೆಸರು ಧನಂಜಯ ಶಿಲ್ಪಿಯವರದು. ಅವರ ಹಲವು ಭಾವಶಿಲ್ಪಗಳು ಪುರಾಣಗಳನ್ನು ಮೀರಿ ಶಿಲ್ಪರೂಪ ಕಲ್ಪನೆಯಲ್ಲಿ ಆಡಿದ ಆಟದಂತಹ ಸೃಷ್ಟಿಗಳು, ಕಂಚಿನಲ್ಲಿರುವ ಕಲಬುರ್ಗಿಯ ಮಹಾದೇವಪ್ಪ

ರಾಂಪುರೆ, ತಾಜ್ ಸುಲ್ತಾನಪೂರ, ಮೈಸೂರಿನವರಾದ ಮಂಡಿ ಚೌಡಯ್ಯನವರ ಶಿಲ್ಪಗಳು ಅವರ ಕುಶಲತೆಯನ್ನು ನೆನಪಿಸುತ್ತವೆ. ತಾಯಿ ಮತ್ತು ಮಗು ಶಿಲ್ಪ ಅವರ ಶಿಲ್ಪ ಸಾಮರ್ಥ್ಯದ ಅತ್ಯುತ್ತಮ ಉದಾಹಣೆಯಾಗಿದೆ[೧೨] ಕಲೆಯನ್ನಾಗಲಿ ಅಥವಾ ಶಿಲ್ಪ ಚಿತ್ರಕಲೆಯನ್ನಾಗಲಿ ಸೀಮಿತವಾಗಿಡಲು ಸಾಧ್ಯವಿಲ್ಲ. ಅದು ಹರಿಯುವ ನೀರಿನ ಹಾಗೆ ಎಂದಿರುವ ಧನಂಜಯ ಶಿಲ್ಪಿ ಜೀವನ ಸೌಂದರ್ಯದ ಅನ್ವೇಷಕ ಮತ್ತು ಆರಾಧಕರು. ಕಲಬುರ್ಗಿಯವರಾದ ಚಿತ್ರಕಲಾವಿದ ಶಾಂತಲಿಂಗಪ್ಪ ಪಾಟೀಲರ ಹಲವು ಭಾವಶಿಲ್ಪಗಳೂ ಜನರ ಹೃದಯಗಳನ್ನು ತಟ್ಟಿವೆ. ಶರಣಪ್ಪ ಎಂಬ ಶಿಲ್ಪಿಯೂ ಗಮನಾರ್ಹ. ವಿಜಯಪುರ ಜಿಲ್ಲೆಯ ನಗರಾಳದ ಶಿಲ್ಪಿ ವೀರಪ್ಪ ಕುಂಬಾರ ಕೋಟ್ಯಾಳಕರ್[೧೩] ಅಮೃತ ಶಿಲೆಯಲ್ಲಿ ಹಲವಾರು ಭಾವಶಿಲ್ಪಗಳನ್ನು ಸೃಷ್ಟಿಸಿದ್ದಾರೆ. ಮಹಾಂತೇಶ ಪಟ್ಟದಕಂಥಿ ಹಿರಮಠ, ಸಂಗನಬಸವ ಶಿವಾಚಾರ್ಯ, ಹಾಗೆಯೇ ಮಹಾರಾಷ್ಟ್ರದ ಕಿರ್ಲೋಸ್ಕರ್ ವಾಡೆಯಲ್ಲಿನ ಶ್ರೀಮತಿ ಕಿರ್ಲೋಸ್ಕರ ಅವರ ಭಾವಶಿಲ್ಪಗಳು ಈ ದೃಷ್ಟಿಯಿಂದ ಮಹತ್ವದವು. ಇವರ ಬಹುಪಾಲು ಶಿಲ್ಪಗಳು ಮುಂಬಯಿಯ ಹತ್ತಿರದ ಔಂದ್ ಮ್ಯೂಜಿಯಂನ ಸಂಗ್ರಹದಲ್ಲಿವೆ. ಈ ಕಲಾವಿದರೆಲ್ಲರೂ ಬಹುವಾಗಿ ಸುತ್ತಲಿನ ಸಮಾಜದ/ ಸ್ಥಳೀಯ ಸಾಂಸ್ಕೃತಿಕ ಅಗತ್ಯ ಮತ್ತು ಉದ್ದೇಶಗಳಿಗೆ ಪೂರಕವಾಗುವಂತಹ ರೀತಿಯಲ್ಲಿಯೇ ಶಿಲ್ಪಗಳನ್ನು ಸೃಷ್ಟಿಸುವಲ್ಲಿ ತೊಡಗಿಕೊಂಡಿದ್ದವರು.

ವೈಯಕ್ತಿಕ ಬದುಕಿನ ವಿಕ್ಷಿಪ್ತತೆಯನ್ನೇ ಶಿಲ್ಪ ಸೃಷ್ಟಿಗಳ ಮೂಲಕ ಹರಳುಗೊಳಿಸಿಕೊಳ್ಳಲೆತ್ನಿಸಿ ವಿಶಿಷ್ಟರೆನಿಸಿದವರು; ಆರ್. ಎಸ್. ನಾಯ್ಡು ಅಸಾಮಾನ್ಯ ಸಂವೇದನಾಶೀಲರಾಗಿದ್ದ ಅವರು ಸದಾ ಚಡಪಡಿಸುತ್ತ ಪಾದರಸದಂತಿದ್ದರು. ಅವರೊಳಗಿನ ಅತೃಪ್ತಿ, ಅಸಹನೆಗಳು ಅವರ ಪರಿಚಿತರಿಗೆ ಅನುಭವಕ್ಕೆ ಬರುತ್ತಿತ್ತು. ಮೈಸೂರು ಬೆಂಗಳೂರಿನ ಬುದ್ಧಿ ಜೀವಿಗಳನಿಸಿಕೊಂಡವರಿಗೆಲ್ಲ ಪರಿಚಿತರಾಗಿದ್ದರು. ಮಾರ್ಕ್ಸವಾದಿ ದೃಷ್ಟಿ ಅವರ ಶಿಲ್ಪ –ಚಿತ್ರ ಸೃಷ್ಟಿಗಳ ಆತ್ಮವೇ ಆಗಿದ್ದಿತೆಂದರೆ ತಪ್ಪಲ್ಲ. ಅವರ ರೇಖಾಚಿತ್ರಗಳು, ಪುಟ್ಟ ಪುಟ್ಟ ಪ್ಲಾಸ್ಟರ್‌ನ ಶಿಲ್ಪಗಳು ಅವರನ್ನು ದಂತಕಥೆಯಾಗಿಸಿಬಿಟ್ಟಿದೆ.

ಕಾಲೇಜಿನ ಶಿಕ್ಷಣದ ಸಂದರ್ಭದಲ್ಲಿಯೇ ರಾಜಕೀಯದ ಸುಳಿಗೆ ಸಿಲುಕಿದವರಿವರು. ಇದಕ್ಕೆ ಗಾಂಧೀಜಿಯ ಆಕರ್ಷಣೆಯೂ ಇರಬಹುದು, ಎನ್ನುತ್ತಾರೆ ಕೆ. ವಿ. ಸುಬ್ರಹ್ಮಣ್ಯಂ ಅವರು. ಸೆರಮನೆ ವಾಸವನ್ನೂ ಅನುಭವಿಸಿದರು. ಅನ್ಯಾಯ ಮತ್ತು ಬ್ರಿಟೀಷರ ವಿರುದ್ಧ ಬಂಡಾಯ, ಆತ್ಮಹತ್ಯೆಗಳಯತ್ನಗಳೂ ನಡೆದವು. ಮನಸ್ಸಿನಾಳದ ಆಕ್ರೋಶ ಸೋಷಿಯಲಿಸ್ಟ್ ಪತ್ರಿಕೆಯಲ್ಲಿ ವ್ಯಂಗ್ಯಚಿತ್ರ ಮೂಲಕ ಸಿಡಿಯಲಾರಂಭಿಸಿತು. ಆಡಳಿತದ ಡೊಂಕುಗಳನ್ನು ಅಣಕಿಸಿದರು. ಮಾರ್ಕ್ಸ್‌ವಾದಿ ನೆಲೆಯ[೧೭] ಕೆಲವರಲ್ಲಿ ಜೀವಂತಿಕೆಯನ್ನು ಪಡೆಯಿತು. ಸಾಮಾಜಿಕ ಮತ್ತು ರಾಜಕೀಯ ಕಾರಣಗಳಿಗಾಗಿ 'ಕಲೆ ಜನರಿಗಾಗಿ' ಎಂಬಂತಹ ಆರ್. ಎಸ್. ಎನ್. ದುಡಿಸಿಕೊಂಡ ರೀತಿಯ ಅಂದಿನ ಆ ಸಂದರ್ಭವು; ಭಾರತೀಯ ಅಚ್ಚರಿಯಂತಿದೆ. ೧೯೫೭ ರ ಮೊದಲು ಬೆಂಗಳೂರಲ್ಲಿದ್ದವರು ಬಳಿಕ ಮೈಸೂರಲ್ಲಿ ನೆಲೆನಿಂತರು. ಹಿಂದೆ ನಾಸಿಕ್ ಜೈಲಿನಲ್ಲಿದ್ದಾಗ ನಾಲ್ಕು ಅಡಿಗಳ ಎತ್ತರದ ಲೆನಿನ್‌ರ ಶಿಲ್ಪವನ್ನು ರಚಿಸಿದ್ದರು. ಒಂದೇ ರಾತ್ರಿಯಲ್ಲಿ ಮೈಸೂರಲ್ಲಿಯೂ ಸಾಂಸ್ಕೃತಿಕ ರಂಗದ ಖ್ಯಾತನಾಮರ

ಶಿಲ್ಪಗಳನ್ನು ಸೃಷ್ಟಿಸಿದ್ದರು.[೧೮] ರಷ್ಯಾದ ಹಲವು ಕ್ರಾಂತಿಕಾರಿಗಳೂ ಅಲ್ಲದೆ ಕನ್ನಡದ ಕುವೆಂಪು, ಬೇಂದ್ರೆ, ಕೈಲಾಸಂ, ಬಿಎಂಶ್ರೀ ಮೊದಲಾದವರು ಈ ಪಟ್ಟಿಯಲ್ಲಿ ನೆನಪಾಗುತ್ತಾರೆ.

ಇದೇ ಕಾಲಘಟ್ಟದಲ್ಲಿ ಬೆಂಗಳೂರಿನಲ್ಲಿ ಜೆ. ಜೆ. ಕಲಾಶಾಲೆಯಲ್ಲಿ ಕಲಿತು ಬಂದಿದ್ದ ಆರ್. ಎಂ. ಹಡಪದರು ಸ್ನೇಹಿತರೊಡಗೂಡಿ 'ವಿ ಫೋರ್' ಗುಂಪು[೧೯] ಕಟ್ಟಿಕೊಂಡು ಹೊಸ ದೃಷ್ಟಿಕೋನದ ಕಲಾಕೃತಿಗಳನ್ನು ಪ್ರದರ್ಶನ ಮಾಡಿದರು. ಈ ಪ್ರದರ್ಶನ ಅಂದಿನ ಕನ್ನಡ ದೃಶ್ಯಕಲಾವಲಯದಲ್ಲಿ ಕುತೂಹಲವನ್ನು ಮೂಡಿಸಿತು. ಇದೊಂದು ಮಹತ್ವದ ಮಜಲು. ಈ ಗುಂಪಿನ ಆರ್. ಎಂ. ಹಡಪದ ಅಸಾಮಾನ್ಯ ಮಾನವೀಯ ದೃಷ್ಟಿಕೋನವನ್ನು ಹೊಂದಿದ್ದವರು. ಅವರ ವ್ಯಕ್ತಿತ್ವವೂ ಹಾಗಿತ್ತು. ತಮ್ಮ ಬಳಿಗೆ ಬಂದವರಿಗೆ ದೃಶ್ಯ ಸಂಸ್ಕೃತಿಯ ಮಾಂತ್ರಿಕ ಸ್ಪರ್ಶ ನೀಡುತ್ತಿದ್ದವರು. ತಾವು ಹುಟ್ಟಿ ಬೆಳೆದ ಬಾದಾಮಿಯ ಪಾರಂಪರಿಕ ಚಿತ್ರ– ಶಿಲ್ಪಗಳನ್ನು ಆಧುನಿಕ ದೃಷ್ಟಿ– ಸೃಷ್ಟಿಗಳನ್ನು ಅರಗಿಸಿಕೊಂಡಿದ್ದ ಅವರು ಶಕ್ತಿಯುತಾವಾಗಿ ಹೊರ ಹೊಮ್ಮಿದರು. ಹಪದರು ಹಲವು ಶಿಲ್ಪಗಳನ್ನೂ ಸೃಷ್ಟಿಸಿದರು. ಇವರ ಊರಿನವರೇ ಆದ ನಾರಾಯಣ ಎಚ್. ಕುಲಕರ್ಣಿಯವರಿಗೆ[೨೦] ದೃಶ್ಯಕಲೆಯ ಸ್ಫೂರ್ತಿಯುತವಾದ ತಳಪಾಯವನ್ನು ಹಾಕಿಕೊಟ್ಟರು. ಅಂತೆಯೇ ಕುಲಕರ್ಣಿಯವರು ಮುಂದೆ ಇತರೆಲ್ಲರಿಗಿಂತಲೂ ವಿಭಿನ್ನವಾಗಿ ಜೆ. ಜೆ. ಕಲಾಶಾಲೆಯಲ್ಲದೆ ಬರೋಡಾದ ಕಲಾಶಾಲೆಗೂ ಹೋಗಿ ಶಿಲ್ಪಕಲೆಯನ್ನು ಕಲಿತರು. ಭಾರತೀಯ ಶಿಲ್ಪಕಲೆಯ ಹೊಸ ಯುಗ ಪ್ರವರ್ತರೆನ್ನಬಹುದಾದ ಶಂಖೊ ಚೌಧರಿ, ಮಹೇಂದ್ರ ಪಾಂಡೆ ಅವರು ಆಗ ಬರೋಡಾದಲ್ಲಿದ್ದರು. ಇವರಿಬ್ಬರ ಗಾಢ ಪ್ರಭಾವದಲ್ಲಿ ಶಿಲ್ಪ ಸೃಷ್ಟಿಯ ಪ್ರಾಥಮಿಕವಾದ ಹಲವು ಆಯಾಮಗಳನ್ನು ಕಲಿತುಕೊಂಡರು. ವಿಶಿಷ್ಟವಾದ ಶಿಲ್ಪಕಲಾಕೃತಿಗಳನ್ನು ಆಗಲೇ ರೂಪಿಸಿದರೂ ಕೂಡ. ಆದರೆ ಶಿಲ್ಪದ ಸಾಂಪ್ರದಾಯಿಕ ಮಾಧ್ಯಮಗಳನ್ನು ಮೀರಿ ತಮ್ಮ ಸಂದರ್ಭ ಸಂವೇದನೆಗಳಿಗೆ ಪೂರಕವಾಗುವ ಹೊಸ ಮಾಧ್ಯಮ ಸಾಮಾಗ್ರಿಗಳನ್ನು ಹುಡುಕಿಕೊಂಡು ಅಸಾಮಾನ್ಯ ಸೃಷ್ಟಿಗಳಿಗೆ ಕಾರಣರಾದರು. ದಕ್ಷಿಣ ಭಾರತದಲ್ಲಿ ಹುಟ್ಟಿ ಬೆಳೆದ ಅಂದರೆ ಕರ್ನಾಟಕದ ಕನ್ನಡ ನೆಲದ ಬಾದಾಮಿಯ ಶಿಲ್ಪಿ ಕುಲಕರ್ಣಿಯವರು ಉತ್ತರಭಾರತದಲಿರುವ ಮುಖ್ಯ ಶಿಲ್ಪಿಯಾಗಿದ್ದರು ಎಂದರೆ ಯಾರಿಗೆ ತಾನೆ ಆಶ್ಚರ್ಯವಾಗುವುದಿಲ್ಲ! ಅಂತೆಯೇ ಅವರು ಭಾರತೀಯ ಸಮಕಾಲೀನ ಶಿಲ್ಪಕಲೆಯ ವಲಯದಲ್ಲಿ ಪ್ರಮುಖವಾಗಿ ಪರಿಗಣಿಲೇಬೇಕಾದ ಅಸಾಮಾನ್ಯ ಶಿಲ್ಪಿಯಾಗಿ ಬೆಳೆದರು. 'ಅವರ ಶಿಲ್ಪ' ಸಾಧ್ಯತೆಯ ಆಟಗಳಿಗೆ ಉಯ್ಯಾಲೆ, ಗೂಳಿಯಂತಹ ಶಿಲ್ಪಗಳು ಉದಾಹರಣೆಗಳಾದರೆ, ಶಿಲ್ಪ ಸೌಂದರ್ಯದ ಪ್ರಯೋಗಶೀಲತೆಗೆ ಅಚ್ಚು ಮೊಳೆಗಳಿಂದ ಸಂಯೋಜಿಸಿರುವ ವಿಶಿಷ್ಟ ಅಭಿವ್ಯಕ್ತಿಗಳೇ ಅಲ್ಲದೆ ನವದೆಹಲಿಯ ಕರ್ನಾಟಕ ಸರ್ಕಲ್‌ನಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ಫೈಬರ್ ಮಾಧ್ಯಮದ ಕಾರಂಜಿ ಶಿಲ್ಪ ನೆನಪಾಗುತ್ತದೆ. ಹಲವು ಖ್ಯಾತ ಶಿಲಿಗಳು ಪ್ರಯತ್ನಿಸಿ ವಿಫಲರಾದ ನಂತರ ಕುಲಕರ್ಣಿಯವರ ದೃಷ್ಟಿ– ಸೃಷ್ಟಿಗಳ ಅನುಭವದ ಹಿನ್ನೆಲೆಯಲ್ಲಿ ಇದರ ರಚನೆಯಾಯಿತಂತೆ.[೨೧] ಅಶ್ವ ಸರಣಿಯ ಲೋಹಶಿಲ್ಪಗಳಂತೂ ಕುಲಕರ್ಣಿಯವರಿಗೆ ಜಗದ್ವಿಖ್ಯಾತಿಯನ್ನೇ ತಂದುಕೊಟ್ಟವು.

ಸಾರ್ವಜನಿಕ ಶಿಲ್ಪದ ಅಮೋಘ ಕಲ್ಪನೆ ಮತ್ತು ಸಮಕಾಲೀನವಾಗಿ ರೂಪಿಸುವುದರಲ್ಲಿ ಆ ಸಂದರ್ಭದಲ್ಲಿ ತುಂಬ ಮುಂಚೂಣಿಯಲ್ಲಿದ್ದವರು ಇವರು.

ಹಳ್ಳಿಗಾಡಿನಲ್ಲಿ ಹುಟ್ಟಿ ಬೆಳೆದು ದೆಹಲಿಯಂತಹ (ದೇಶದ ರಾಜಧಾನಿ) ಮಹಾನಗರದಲ್ಲಿ ಕಲೆಯ ರಾಜಕಾರಣದ ಕೇಂದ್ರ ಲಲಿತಕಲಾ ಅಕಾಡೆಮಿ ನೆಲಗೊಂಡಿರುವಲ್ಲೂ ಎತ್ತರದಲ್ಲಿ ಕಾಣಿಸಿಕೊಳ್ಳುವುದೆಂದರೆ ಅದು ಸಾಮಾನ್ಯವಾದ ಸಾಧನೆಯೇ? ಕುಲಕರ್ಣಿಯವರು ಹಾಗೆ ಕಾಣಿಸಿಕೊಂಡರು. ಸರಳ, ಸಜ್ಜನ, ಅಸಾಮಾನ್ಯ ಶಿಲ್ಪಿ. ಬೆಂಗಳೂರಿನಲ್ಲಿ ಹಲವು ಬಾರಿ ಸಂದರ್ಶನಗಳಿಗೆ ಕುಳಿತಾಗಲೂ ಬಾದಾಮಿಯನ್ನು, ಅಲ್ಲಿನ ಸಂಸ್ಕೃತಿಯನ್ನು, ಊಟೋಪಚಾರಗಳನ್ನು ಮರೆಯದೇ ಬಡಿಸಿದವರು" ಎಂದು ಕಲಾ ವಿಮರ್ಶಕ ಕೆ.ವಿ. ಸುಬ್ರಹ್ಮಣ್ಯಂ ನೆನಪಿಸಿಕೊಳ್ಳುತ್ತಾರೆ. ಕುಲಕರ್ಣಿಯವರು ಬೃಹತ್ ಶಿಲ್ಪಗಳಿಗಾಗಿ ರಚಿಸಿಕೊಂಡ ಹಲವು ಸಣ್ಣಸಣ್ಣ ಥರ್ಮಾಕೋಲ್, ವ್ಯಾಕ್ಸ್, ಕ್ಲೇ, ಮೊದಲಾದ ಮಾಧ್ಯಮಗಳ ಶಿಲ್ಪಗಳ ಛಾಯಾಚಿತ್ರಗಳನ್ನು ದೆಹಲಿಯಲ್ಲಿನ ಅವರ ಮನೆಗೆ ಹೋಗಿ ಬಂದಿದ್ದ ಕರ್ನಾಟಕದ ಖ್ಯಾತ ಕಲಾವಿದ ಎಂ.ಬಿ. ಪಾಟೀಲರು ನನಗೆ ತೋರಿಸಿದ್ದರು. ನನಗೂ ಅವು ಸ್ಫೂರ್ತಿ ನೀಡಿದ್ದುಂಟು.

ಕನ್ನಡದ ಈ ಹೆಮ್ಮೆಯ ಶಿಲ್ಪಿ ತಮ್ಮ ಜೀವನದ ಬಹುಪಾಲು ಅವಧಿಯನ್ನು ದೆಹಲಿಯಲ್ಲೇ ಕಳೆದರು. ಚಿತ್ರಕಲೆಯಲ್ಲಿ ಅಸಾಮಾನ್ಯ ಸಾಧನೆ ಮಾಡಿರುವ ಮತ್ತೊಬ್ಬ ಹೆಮ್ಮೆಯ ಕನ್ನಡ ಕಲಾವಿದ ಜಿ. ಆರ್. ಈರಣ್ಣ ಅವರೂ ಈಗ ದೆಹಲಿಯಲ್ಲಿಯೇ ನೆಲಸಿರುವರು. ಈಚೆಗೆ ಈರಣ್ಣ ಅವರೂ ಹಲವು ಪರಿಣಾಮಕಾರಿ ಶಿಲ್ಪಗಳನ್ನು ರಚಿಸಿ ಪ್ರದರ್ಶಿಸಿರುವರು.

ಶಾಂತಿನಿಕೇತನದ ಶಿಲ್ಪಿ ರಾಂಕಿಂಕರ್ ಬೈಜ್ ೧೯೪೭ಕ್ಕೂ ಮೊದಲು 'ಪರಿಸರ ಶಿಲ್ಪ' ಅಥವಾ 'ಸಾರ್ವಜನಿಕ ಶಿಲ್ಪ' ಕಲ್ಪನೆಗೆ ದೃಷ್ಟಿ ಹರಿಸಿದವರು. ಬಂಗಾಳದ ಪುನರುಜ್ಜೀವನ 'ಸಂದರ್ಭದಲ್ಲಿ ಅವರೊಳಗೊಬ್ಬರಾಗಿಯೂ ಮತ್ತು ಸುತ್ತಲಿನ ಬದುಕಿಗೆ ಸ್ಪಂದಿಸಿ ಕಲಾಕೃತಿಗಳನ್ನು ಸೃಷ್ಟಿಸಿದರು. ಇದೆಲ್ಲ ಸಾಧ್ಯವಾಗಿದ್ದು ಪಾಶ್ಚಾತ್ಯ ದೃಶ್ಯಸಂಸ್ಕೃತಿಯ ಪ್ರಭಾವದಿಂದಲೇ, ಆದರೂ ಅಲ್ಲಿ ಭಾರತೀಯ ಮಣ್ಣಿನ ವಾಸನೆ ಇದ್ದಿತು. ಈ ನಿಟ್ಟಿನಲ್ಲಿ ದಿಟ್ಟ ಹಜ್ಜೆಗಳನ್ನಿಟ್ಟ ಶಂಖು ಚೌದುರಿಯವರ ಸಾಲಿನ ಅಮರನಾಥ್ ಸೆಹಗಲ್, ಪ್ರದೋಷ್‌ದಾಸ್ ಗುಪ್ತ, ಸರ್ಬರಿರಾಯ್ ಚೌದರಿ, ಪಿಲ್ಲೂ ಪೂಕನ್ವಾಲಾ ಮೊದಲಾದವರು ಪ್ರಮುಖರಾಗುತ್ತಾರೆ.

ಶಂಖೂ ಚೌದುರಿಯವರಿಂದ ಪ್ರಭಾವಿತರಾದ ಕನ್ನಡ ನಾಡಿನ ಎನ್. ಎಚ್. ಕುಲಕರ್ಣಿಯವರಂತೆ, ಮಹೇಂದ್ರ ಪಾಂಡೆ, ರಮೇಶ ಪಟೇರಿಯಾ, ರಾಘವ ಕನೇರಿಯಾ ಅವರೂ ಮುಖ್ಯರಾಗುತ್ತಾರೆ. ಇವರೆಲ್ಲರಿಂದ ಶಿಲ್ಪಕಲೆಯಲ್ಲಿ ಹೊಸ ರೂಪಗಳು ಕಾಣಿಸಿಕೊಂಡು ವಿಶಿಷ್ಟ ಅನುಭವ ನೀಡಿದವು. ಚೆನ್ನೈ ಕಲಾಶಾಲೆಯಲ್ಲಿ (೧೯೨೯) ದೇವಿಪ್ರಸಾದ್‌ರಾಯ್ ಚೌದುರಿಯ ಹೊಸ ಅಲೆಯಲ್ಲಿ ಪಿ.ವಿ. ಜಾನಕಿ ಕಾಣಿಸಿಕೊಂಡರು. ಕೆ.ಜಿ. ಸುಬ್ರಹ್ಮಣ್ಯಂರ ಟೆರಾಕೊಟ್ಟಾ ಉಬ್ಬು ಶಿಲ್ಪಗಳು ಕನ್ನಡದ ಶಿಲ್ಪಿಗಳನೇಕರ ಮೇಲೂ ಪ್ರಭಾವ ಬೀರಿದ್ದುಂಟು[೨೨] ಸೋಮನಾಥ ಹೋರ್ ೧೯೬೦ ರ ಬಂಗಾಳದ ರೈತ ಚಳುವಳಿಯಲ್ಲಿ ಪಾಲ್ಗೊಂಡವರು ಮಾನವನ ಯಾತನೆಯ ಹಲವು ಮುಖಗಳನ್ನು ಶಿಲ್ಪಗಳಲ್ಲಿ ಬಿಂಬಿಸಿದವರಿವರು.

ಚಿತ್ರಕಲೆಯಲ್ಲಿ ಆಧುನಿಕತೆಯನ್ನು ತಂದುಕೊಂಡ ರಾಜಾ ರವಿವರ್ಮನ ಹಾಗೆ ಶಿಲ್ಪಕಲೆಯಲ್ಲಿ ನಮ್ಮ ನಾಡಿನ ಶಿಲ್ಪಿಗಳು ಹೊಸತನವನ್ನು ತಂದುಕೊಂಡುದರ ಹಿಂದೆ ಅಂತಹ ಘನವಾದ ಮಹತ್ವಾಕಾಂಕ್ಷೆಯೇನೂ ಕಾಣುವುದಿಲ್ಲ ಅಂದು ಕೊಲ್ಕತ್ತೆಯನ್ನು ಒಳಗೊಂಡಂತೆ ಮುಂಬಯಿ, ಮದ್ರಾಸು ಹಾಗೂ ಲಾಹೋರ್‌ಗಳಲ್ಲಿ ಸ್ಥಾಪಿಲ್ಪಟ್ಟ ಕಲಾ ಶಾಲೆಗಳಲ್ಲಿ 'ವಿಕ್ಟೋರಿಯನ್' ವಾಸ್ತವ ಶೈಲಿಯನ್ನ ಕಲಿಸಲಾಗುತ್ತಿತ್ತು. ಅಲ್ಲದೆ ೧೮೫೦ರ ಹೊತ್ತಿಗೆ ಭಾರತದ ಬಹುತೇಕ ಕಲಾಶಾಲೆಗಳನ್ನು ಇಂಗ್ಲೀಷ್ ಕಲಾವಿದರೇ ಆಕ್ರಮಿಸಿದ್ದರೂ ಅನೇಕರು ದೇಶೀ ಕಲಾ ಚಳುವಳಿಯ ಕಡೆಗೆ ಒಲವು ತೊರಿದ್ದರು.

ಈ ಸಂದರ್ಭದಲ್ಲೇ ಮುಂಬಯಿಯ ಶಿಲ್ಪಿ ಗಣಪತಿರಾವ್ ಕಾಶೀನಾಥ ಮ್ಹಾತ್ರೆ ಬಹಳ ಮುಖ್ಯರೆನಿಸುತ್ತಾರೆ. ಕರ್ನಾಟಕದಲ್ಲಿ 'ವಿಕ್ಟೋರಿಯನ್ ವಾಸ್ತವ' ಶೈಲಿಯ ಭಾವಶಿಲ್ಪಗಳನ್ನು ೧೯೧೩ ರಲ್ಲಿ ಪರಿಚಯಿಸಿದ್ದವರು. ಅಂದರೆ ಜೆ. ಜೆ. ಕಲಾಶಾಲೆಯಲ್ಲಿ ಕಲಿತುಬಂದ ನಮ್ಮ ಶಿಲ್ಪಿಗಳಿಗಿಂತಲೂ ಮೊದಲು ಅವರು ಮೈಸೂರದ ಅರಮನೆಯಲ್ಲಿ ಶಿಲ್ಪ ರಚಿಸಿದ್ದರು. ಜೆ. ಜೆ. ಕಲಾಶಾಲೆಯಲ್ಲಿ ಶಿಲ್ಪಕಲೆ ಕಲಿತು ೧೮೯೫ರ ಹೊತ್ತಿಗೆ ಸಾಕಷ್ಟು ಯಶಸ್ಸುಗಳಿಸಿದ್ದರು. ಅವರ 'ಮಂದಿರಾ ಕಡೆ' ಪ್ಲಾಸ್ಟರ್ ಆಫ್ ಪ್ಯಾರಿಸ್[೨೩] ಮಾಧ್ಯಮದ ಶಿಲ್ಪ ಎಲ್ಲರನ್ನೂ ಆಕರ್ಷಿಸಿತ್ತು. ಪ್ಯಾರೀಸಿನ ಕಲಾಪ್ರದರ್ಶನಕ್ಕೂ ಮ್ಹಾತ್ರೆ ತಮ್ಮ ಕೆಲವು ಭಾವಶಿಲ್ಪಗಳನ್ನು ಕಳಿಸಿದ್ದರು. ೧೯೧೩ ರಲ್ಲಿ ದಿವಾನ್ ಶೇಷಾದ್ರಿ ಅಯ್ಯರ್‌ರವರ ಜ್ಞಾಪಕಾರ್ಥವಾಗಿ ಅವರ ಭಾವಶಿಲ್ಪ ರಚಿಸಲು ಕೃಷ್ಣರಾಜ್ ಒಡೆಯರ್‌ರವರಿಂದ ಮ್ಹಾತ್ರೆಯವರಿಗೆ ಕರೆಬಂತು. ಅದು ಪೂರ್ಣಗೊಂಡ ಬಳಿಕ ೧೯೧೬ ರಲ್ಲಿ ಚಾಮರಾಜೇಂದ್ರ ಒಡೆಯರ್‌ರವರ ಭಾವಶಿಲ್ಪವನ್ನೂ ಸೃಷ್ಟಿಸಿದರು.

ಚಾಮರಾಜೇಂದ್ರ ತಾಂತ್ರಿಕ (ಮೈಸೂರು) ಸಂಸ್ಥೆಯಲ್ಲಿ ಚಿತ್ರಕಲೆಯ ಮೂಲ ಪಾಠಗಳನ್ನು ಕಲಿತು ಕೋಲ್ಕತ್ತೆಯ ಕಲಾಶಾಲೆಯಲ್ಲಿ ಉನ್ನತ ಚಿತ್ರಕಲೆಯನ್ನು ವ್ಯಾಸಂಗ ಮಾಡಿದವರು ಕೆ. ವಂಕಟಪ್ಪನವರು. ಬಂಗಾಳದ ಪುನರುಜ್ಜೀವನ ಕಾಲದ ಬದಲಾವಣೆಗಳನ್ನು ಚೆನ್ನಾಗಿಯೇ ಗ್ರಹಿಸಿದವರು. ದೃಶ್ಯಕಲೆಯ ಹೊಸ ಮಜಲುಗಳನ್ನು ತುಳಿಯಲು ಬೇಕಾದ ಸಿದ್ಧತೆಗಳನ್ನು ಹೊಂದಿದವರಾಗಿದ್ದರು. ೧೯೧೬ರಲ್ಲಿ ಮೈಸೂರಿಗೆ ಮರಳಿ ಅರಸರ ಆಶ್ರಯದಲ್ಲಿ ಸೃಷ್ಟಿಕಾರ್ಯದಲ್ಲಿ ತೊಡಗಿದರು. ಇದು ಅತ್ಯಂತ ಮಹತ್ವದ ಸಂಗತಿಯಾಯಿತು. ಚಿತ್ರಕಲೆಯೊಂದಿಗೆ ವೆಂಕಟಪ್ಪನವರಲ್ಲಿನ ಸಂಗೀತದ ಆಸಕ್ತಿ, ವೀಣೆಯ ಹುಚ್ಚು ಅವರನ್ನು ಮೈಸೂರಿನಲ್ಲಿಯೇ ಉಳಿಸಿತು. ಶಿಲ್ಪಕಲೆಯನ್ನು ಕಲಿಯಲು ದೇಶದ ಹೊರಗೆ ಅವರಿಗೆ ಹೋಗಲು ಆಗಲಿಲ್ಲ. ಮೈಸೂರಿನಲ್ಲಿರುವಾಗ ಸುಂದರವಾದ ಪ್ಲಾಸ್ಟರ್ ಆಫ್ ಪ್ಯಾರಿಸ್‌ನ್ ಉಬ್ಬು ಶಿಲ್ಪಗಳನ್ನು ರಚಿಸಿದರು. ಕಾರಣಾಂತರಗಳಿಂದ ಮೈಸೂರನ್ನು ತೊರೆದು ಬೆಂಗಳೂರಿನ ಮಲ್ಲೇಶ್ವರಂದಲ್ಲಿ ನೆಲೆಸಿದ ನಂತರವೂ ಉಬ್ಬು ಶಿಲ್ಪಗಳ ರಚನೆ ಮುಂದುವರೆಸಿದರು. ಯುರೋಪಿನ ಭೂದೃಶ್ಯ ಕಲಾ ಪ್ರಕಾರವನ್ನು ಅರಗಿಸಿಕೊಂಡು ಚಿತ್ರಿಸಿದ ವರ್ಣ ಚಿತ್ರಗಳಂತೆಯೇ ಸಂಪ್ರದಾಯಬದ್ಧ ಉಬ್ಬು ಶಿಲ್ಪವನ್ನು ಮೀರಿ ಸುತ್ತಲಿನ ಪ್ರೀತಿಪಾತ್ರರ ಭಾವಶಿಲ್ಪಗಳನ್ನು ಸೃಷ್ಟಿಸುವ ಆಶಯ ತೋರ್ಪಡಿಸಿದರು. ಹೊಟೇಲ್ ಒಂದರ ಮಾಣಿಯ ಪುಟ್ಟ ಶಿಲ್ಪ ಸೃಷ್ಟಿಸಿದುದು ಬೆಂಗಳೂರು ಕಲಾವಲಯಕ್ಕೆ ಅಂದು ದೊಡ್ಡ ಅಚ್ಚರಿಯೇ ಆಗಿದ್ದಿತು. ಮಾಣಿಯನ್ನು ರೂಪದರ್ಶಿಯಾಗಿ (model) ವೆಂಕಟಪ್ಪ ಶಿಲ್ಪವನ್ನು

ರಚಿಸಿದ್ದರು. ರವೀಂದ್ರರ ಭಾವಶಿಲ್ಪವನ್ನೂ ೧೯೪೯ ರಲ್ಲಿ ಸೃಷ್ಟಿಸಿದರು. ವೆಂಕಟಪ್ಪ ತಮ್ಮ ಚಿತ್ರ – ಶಿಲ್ಪಗಳಿಂದ ಅಂದಿನ ದಿನಗಳಲ್ಲಿ ಮೈಸೂರು, ಬೆಂಗಳೂರಿನ ಸಾಂಸ್ಕೃತಿಕ ರಂಗದಲ್ಲಿ ಹೊಸ ಅನುಭವ ಉಣಬಡಿಸಿದರು. ಹೀಗೆ ನಮ್ಮ ರಾಜ್ಯದ ಶಿಲ್ಪಕಲೆಯಲ್ಲಿನ ಸಮಕಾಲೀನತೆಯ ಬೀಜಾಂಕುರ ಮಾತ್ರ, ವೆಂಕಟಪ್ಪನವರ ಸಂದರ್ಭದಲ್ಲಿಯೇ ಆಗುತ್ತದೆ. ಆದರೆ ನಿಜವಾದ ಆಧುನಿಕ ಶಿಲ್ಪಕಲೆಯು ಸಸ್ಯವಾಗಿ ಪಲ್ಲವಿಸಿದುದು ಸಿ.ಪಿ. ರಾಜಾರಾಮ್ ಅವರಿಂದ ಎಂಬುದು ಕಲಾ ಇತಿಹಾಸಕಾರರ ಅಭಿಪ್ರಾಯ.

ಟಿಪ್ಪಣಿ

೧. ಡಾ. ಶಿವಾನಂದ ಎಚ್. ಬಂಟನೂರ: ದೃಶ್ಯ ಪದದೃಶ್ಯ: ಪುಟ ೨೬

೨. ಕೆ.ವಿ.ಸು.: ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ : ಪುಟ ೩

೩. ಪಶ್ಚಿಮದಲ್ಲಿ ಆಧುನಿಕ ದೃಶ್ಯಕಲೆಯ ಪ್ರಭಾವ ಕಾವ್ಯದ ಮೇಲೆ ಗಂಭೀರರೀತಿಯಲ್ಲಿ ಆಯಿತು. ೧೮೮೪ ರಲ್ಲಿ (societe des Artistes Independents) ಉದ್ಘಾಟನೆಗೊಂಡಾಗ ಅದೊಂದು(anti academic tradition) ಹುಟ್ಟುಹಾಕಿತು. ಅಂದರೆ ಈ ಪ್ರದರ್ಶನಗಳಿಗೆ ಕಲಾಕೃತಿಗಳನ್ನು ಯಾರು ಬೇಕಾದರೂ ಕಳಿಸಬಹುದಿತ್ತು. jury ಇರುತ್ತಿರಲಿಲ್ಲ! ಎಲ್ಲವೂ ಪ್ರದರ್ಶನಗೊಳ್ಳುತಿದ್ದವು.

೪. Modernisme ditd by Michel levenson combridge Univrsity, pres, sixth edition, 2006 page-196

೫. ಹೆಸರಾಂತ ರೋಡಿನ್ ತನ್ನ ವಿಶಿಷ್ಟ ಶೈಲಿಯಿಂದ ಆಧುನಿಕ ಶಿಲ್ಪಕ್ಕೆ ನಾಂದಿ ಹಾಡಿದ. ಪಿಕಾಸೋ, ಬ್ರಾಂಕುಇ, ಹೆನ್ರಿ ಮಾಟಿಸ್, ಆರ್ಚಿಪೆಂಗೊ ಮತ್ತು ಡೆಗಾ ಮುಂತಾದವರೂ ಹೊಸ ಬಗೆಯ ಶಿಲ್ಪರಚನೆಯಲ್ಲಿ ತೊಡಗಿದರು. ನವ್ಯ ಶಿಲ್ಪದ ಉಗಮವಾಯಿತು, ಬೆಳೆಯಿತು.

೬. ಡಾ. ಶಿವಾನಂದ ಎಚ್. ಬಂಟನೂರ: ಸಮಕಾಲೀನ ಶಿಲ್ಪಕಲೆ ಪುಟ ೧೮

೭. ಡಾ. ಶಿವಾನಂದ ಎಚ್. ಬಂಟನೂರ : ದೃಷ್ಟಿ ಸೃಷ್ಟಿ : ಪುಟ ೨೬

೮. ಜೆ. ಜೆ. ಕಲಾಶಾಲೆಯಲ್ಲಿ ಕಲಿತು ಬಂದ ಡಿ.ವಿ. ಹಾಲಬಾವಿಯವರ ಪೂರ್ವಜರು ವಿಜಯಪುರ ಜಿಲ್ಲೆಯ ಗೋಟೆ ಗ್ರಾಮದವರು ಆಗಲೂ ಅವರ ಮನೆತನ ಬಣ್ಣಗಾರಿಕೆಯಲ್ಲಿ ಪ್ರಸಿದ್ಧಿಯಲ್ಲಿದ್ದಿತು.

೯. ಅ.ನ.ಕೃ.: ಕರ್ನಾಟಕದ ಹಿತಚಿಂತನ, ೨ ನೆಯ ಮುದ್ರಣ ಸಾಗರ ಪ್ರಕಾಶನ, ಬೆಂಗಳೂರು, ೨೦೦೬ ಪುಟ ೫೬

೧೦. ಪ್ರೊ. ಎಂ. ಎಚ್. ಕೃಷ್ಣಯ್ಯ, ಡಾ ವಿಜಯಾ, ಶ್ರೀ ಸಿ. ಆರ್ ಕೃಷ್ಣರಾವ್: (ಸಂ): ಕರ್ನಾಟಕ ಕಲಾದರ್ಶನ ಸಂಪುಟ–೧ ಪುಟ, ೨೫೬

೧೧. ಪಿ.ಆರ್. ತಿಪ್ಪೇಸ್ವಾಮಿ: ಚಿತ್ರಕಲಾ ಪ್ರಪಂಚ; ಪುಟ ೨೦೬

೧೨ ಕೆ.ವಿ.ಸು: ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ, ಪುಟ ೪೩

೧೩. ಡಾ.ಜಿ.ಎಸ್. ಭೂಸಗೊಂಡ : ಬಿ. ಆರ್. ಕೊಟ್ಯಾಳಕರ: ಅಪ್ರಕಟಿತ ಡಿ.ಲಿಟ್. ಪ್ರಬಂಧ, ಪುಟ ೩೮

೧೪. ಪ್ರೊ. ಎಮ್.ಎಚ್. ಕೃಷ್ಣಯ್ಯ, ಡಾ.ವಿಜಯಾ, ಕೃಷ್ಣರಾವ್(ಸಂ): ಕರ್ನಾಟಕ ಕಲಾದರ್ಶನ,

ಸಂಪುಟ– ೧, ಪುಟ ೨೯೨

೧೫. ಅದೇ....

೧೬. ಪಿ. ಆರ್. ತಿಪ್ಪೇಸ್ವಾಮಿ: ಕಲಾ ಪ್ರಪಂಚ ಪುಟ ೧೭೭

೧೭. ಕೆ.ವಿ.ಸು.: ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ, ಪುಟ ೪೮

೧೮. ಅದೇ... ಪುಟ ೧೮

೧೯. ಕೆ.ವಿ.ಸು.: ಕರ್ನಾಟಕದ ಆಧುನಿಕ ಶಿಲ್ಪಕಲೆ, ಪುಟ–೭

೨೦. ಅದೇ... ಪುಟ–೯

೨೧. ಅದೇ... ಪುಟ ೧೮

೨೨. ಅದೇ... ಪುಟ ೧೯

ಅಧ್ಯಾಯ: ಐದು

ಸಮಕಾಲೀನ ಶಿಲ್ಪಕಲೆಯ ಎಡನೆಯ ಘಟ್ಟ:

ಸ್ವಾತಂತ್ರ್ಯದ ಸಂಭ್ರಮದಲ್ಲಿ

ಯಾವುದೇ ರಂಗ ಅಥವಾ ಕ್ಷೇತ್ರವಿರಲಿ ಅದರಲ್ಲಿ ಹೊಸತನ ಕಾಣಿಸಿಕೊಂಡಾಗ ಸಾಂಪ್ರದಾಯಿಕ ಮನಸ್ಸುಗಳು ಹಲವು ಬಾರಿ ಪ್ರತಿರೋಧ ಒಡ್ಡಿರುವುದು ಸಾಮಾನ್ಯ ಸಂಗತಿಯೇ. ಈಗಲೂ ಅಂಥದ್ದನ್ನು ಕಾಣುತ್ತೇವೆ. ದೃಶ್ಯಕಲೆಯಲ್ಲೂ ಅಷ್ಟೆ. ಆದರೆ ಶ್ರೀಸಾಮಾನ್ಯರು ಕಲಾವಿದರ ಸೃಷ್ಟಿಗಳಲ್ಲಿನ ತೀವ್ರತರಹದ ಬದಲಾವಣೆ, ತಲ್ಲಣಗಳಿಗೆ ಗಾಬರಿ ಅಚ್ಚರಿಗಳನ್ನು ತೋರ್ಪಡಿಸಿದ್ದುಂಟು. ಕಾಲಕ್ರಮೇಣ ಆ ಬದಲಾವಣೆ ಅಥವಾ ಪ್ರಯೋಗಗಳು ಜನರ ಮನಸ್ಸು – ಕಣ್ಣುಗಳಿಗೆ ಒಗ್ಗಿರುವುದುಂಟು. ಇಂತಹ ಪರ್ವಕಾಲದಲ್ಲಿ ಚಪ್ಪುಡಿರ ಪೊನ್ನಪ್ಪ, ರಾಜಾರಾಮ್ ಕರ್ನಾಟಕದ ಶಿಲ್ಪಕಲೆಯಲ್ಲಿ ಹೊಸತನ ಸೃಷ್ಟಿಸಿದರು. ರಾಜಾರಾಮ್ ೧೯೨೭ ರಲ್ಲಿ ಕೊಡಗಿನಲ್ಲಿ ಜನಿಸಿದರು. ಸ್ವಯಂ ಕಲಿಕೆಯ ಈ ಶಿಲ್ಪಿ ೧೦ನೆಯ ವಯಸ್ಸಿನಲ್ಲಿ ಹೈಸ್ಕೂಲಿನಲ್ಲಿದ್ದಾಗ ಕ್ರೀಡೆಯ ಜೊತೆ ಮರಗೆತ್ತನೆಯಲ್ಲೂ ಆಸಕ್ತರಾಗಿದ್ದರು.

ಮರದ ತುಂಡುಗಳಲ್ಲಿ ಕೆತ್ತುತ್ತಲೇ ವಿಶಿಷ್ಠ ಹೊಸ ರೂಪಕಲ್ಪನೆಗಳನ್ನು ಸೃಷ್ಟಿಸುತ್ತ ಆನಂದಿಸುತ್ತಿದ್ದರು. ೧೯೪೮ ರಲ್ಲಿ ಮಿಲಿಟರಿ ಅಕಾಡೆಮಿಯನ್ನು ಸೇರಿದ ಮೇಲೆಯೂ ತಮ್ಮ ಶಿಲ್ಪಸೃಷ್ಟಿ ಪ್ರಕ್ರಿಯೆಯನ್ನು ಮುಂದುವರಿಸಿಯೇ ಇದ್ದರು. ಕೊಡಗಿನ ಬೆಟ್ಟ ಗುಡ್ಡಗಳ ಕಾಡಿನ ಗಿಡಮರಗಳ ಬೊಡ್ಡೆಗಳ ವಿವಿಧ ರೂಪ, ಆಕಾರಗಳಲ್ಲಿ ಪ್ರಾಣಿ, ಪಕ್ಷಿ ಮನುಷ್ಯರ ವಿಶಿಷ್ಟ ರೂಪಗಳನ್ನು ಕಣ್‌ತುಂಬಿಕೊಂಡಿದ್ದ ಅವರು ಮರಗೆತ್ತನೆಯ ಪ್ರಕ್ರಿಯೆಯನ್ನು ಅಲ್ಲಿಯೂ ಮುಂದುವರೆಸಿದುದು ಸಹಜವಾಗಿತ್ತು. ಗಣನೀಯ ಸಂಖ್ಯೆಯಲ್ಲಿ ಶಿಲ್ಪಗಳನ್ನು ಸೃಷ್ಟಿಸಿದರು. ಮುಂಬೈ ಆರ್ಟ್ ಸೊಸೈಟಿಯ ಬಹುಮಾನವೂ ದಕ್ಕಿತು. ಹಲವು ಒತ್ತಡಗಳ ಮಧ್ಯೆಯೂ ೧೯೫೬ ರ ಸಂದರ್ಭದಲ್ಲಿ ಶಿಲ್ಪಸೃಷ್ಟಿಯ ವೇಗ ಹೆಚ್ಚಿಸಿಕೊಂಡರು. ಪುಣೆಯ ಸೈನಿಕ ಶಾಲೆಯಲ್ಲಿ ಕಲಿಸುವ ವೃತ್ತಿಯೊಂದಿಗೆ ಹೊಸ ದೃಷ್ಟಿಯ ಗಮನಾರ್ಹ ಶಿಲ್ಪಗಳನ್ನು ಸೃಷ್ಟಿಸಿದರು. ಅಂದಿನ ಆ ಶಿಲ್ಪಗಳು ವಿಮರ್ಶಕರಿಂದಲೂ ಪ್ರಶಂಸಿಸಲ್ಪಟ್ಟವು. ೧೯೫೭ರಲ್ಲಿ

ಯುರೋಪ್ ದೇಶಗಳ ಪ್ರವಾಸ ಕೈಕೊಂಡು ಅಲ್ಲಿನ ಶಿಲ್ಪಕಲೆಯ ಸೌಂದರ್ಯ, ಅಭಿವ್ಯಕ್ತಿ ಸಾಧ್ಯತೆಗಳನ್ನು ಕಣ್ತುಂಬಿಕೊಂಡು ಬಂದರು. ಮತ್ತಷ್ಟು ಹೊಸ ಉತ್ಸಾಹ ಅದಮ್ಯ ಚೈತನ್ಯ ಮತ್ತು ಅವಿರತ ಪರಿಶ್ರಮಗಳಿಂದ ಹಲವು ಶಿಲ್ಪಗಳನ್ನವರು ಸೃಷ್ಟಿಸಿದರು. ಮತ್ತು ಅವುಗಳನ್ನು ೧೯೫೮ ರಲ್ಲಿ ದೆಹಲಿಯಲ್ಲಿ ಪ್ರದರ್ಶಿಸಿದರು. ಇದು ಅವರ ಶಿಲ್ಪಕಲಾಕೃತಿಗಳ ಮೊದಲ ಪ್ರದರ್ಶನವಾಗಿತ್ತು. ಬಳಿಕ ೧೯೫೯ ರಲ್ಲಿ ಮುಂಬೈಯಲ್ಲೂ ಒಂದು ಪ್ರದರ್ಶನ ಮಾಡಿದರು. ಇದರಿಂದ ರಾಜಾರಾಮ್ ಅಂದಿನ ಭಾರತೀಯ ಆಧುನಿಕ ಸಮಕಾಲೀನ ಶಿಲ್ಪಕಲೆಯ ಬಹುಮುಖ್ಯ ಶಿಲ್ಪಿಗಳಲ್ಲಿ[೧] ಒಬ್ಬರಾಗಿ ಗುರುತಿಸಲ್ಪಟ್ಟರು. ಮುಂದೆ ಜಪಾನ್‌ನಲ್ಲೂ ಒಂದೆರಡು ಪ್ರದರ್ಶನಗಳನ್ನು ಏರ್ಪಡಿಸಿದ್ದರು. ೧೯೬೧ರಲ್ಲಿ ಅವರು ಸಾವನ್ನಪ್ಪಿದರು.

ರಾಜಾರಾಮ್‌ರ ಶಿಲ್ಪಗಳು ನೈಜ ರೂಪಗಳಿಂದಲೂ ವಿಭಿನ್ನವಾಗಿ ಸರಳೀಕೃತ ಮತ್ತು ವಿಕೃತಿ ಸೌಂದರ್ಯವನ್ನು ಬಿಂಬಿಸುವಂತಹವು ಮತ್ತು ವಿಶಿಷ್ಟ ನುಣಪಾದ ಮೈವಳಿಕೆಯನ್ನು ಮೈಗೂಡಿಸಿಕೊಂಡಿರುವಂತಹವು. ಕೆಲವೊಮ್ಮೆ ಮರದ ಪ್ರಕೃತಿ ಸಹಜ ಆಕಾರ ಮತ್ತು ಮೈವಳಿಕೆಗಳನ್ನೆಲ್ಲ ಉಳಿಸಿಕೊಂಡಂತಹವುಗಳಿವೆ. ‘My sculpture is more for feeling of th twist and turn found inform, grain,or textur, in other words modifying nature to my purposes.” ಎಂದು ತಮ್ಮ ಶಿಲ್ಪಗಳ ಮ್ಯವಳಿಕೆಗಳ ನಿರ್ವಹಣೆಯ ಕುರಿತು ರಾಜಾರಾಮ್ ಹೇಳಿಕೊಂಡಿದ್ದಾರೆ. ‘The beauty of wood is in its shape, its irregular grain, colour and texture. In the grains of wood on can imagine a picture and in its shape a movement common in every day life’ [೨] ಎಂದೂ ವಿವರಿಸಿರುವರು. ೧೯೫೭ ರಲ್ಲಿ ‘mothr and child’ ಶಿಲ್ಪದಲ್ಲಿ ಒಣ ಮರದ ತುಂಡನ್ನು ಅದರ ಪ್ರಕೃತಿ ಸಹಜ ಮೇಲ್ಮೈ ಹಾಗೂ ಮೈವಳಿಕೆಗಳನ್ನು ತಮ್ಮ ಆಶಯ ಅಭಿವ್ಯಕ್ತಿಗಳಿಗೆ ಪೂರಕವಾಗಿ ನಿರ್ವಹಿಸಿಕೊಂಡಿರುವುದು ಗಮನಾರ್ಹ ಅಂಕುಡೊಂಕಾದ ಮೇಲ್ಮೈನ ರೂಪ– ಆಕಾರಗಳ ಲಯಕ್ಕೆ ಪೂರಕವಾಗಿ ಶಿಲ್ಪವನ್ನು ದುಡಿಸಿಕೊಂಡಿದ್ದಾರೆ. ಜಪಾನಿ ನರ್ತಕಿ, ಹೆಡ್, ಅಜ್ಞಾತ, ಸೀಕ್ರೆಟ್, ಡ್ರಮ್ಮರ್, ಟ್ರೈಬಲ್, ನೆಗೆತ, ವುಮೆನ್, ಮ್ಯಾನ್ ವಿತ್ ಲೋಡ್, ಶೀರ್ಷಿಕೆಗಳಿರುವ ಶಿಲ್ಪಗಳು ರಾಜಾರಾಮ್‌ರ ಶಿಲ್ಪಸೃಷ್ಟಿ ಪ್ರಕ್ರಿಯೆಯ ಹಲವು ಮಜಲುಗಳನ್ನು ಬಿಂಬಿಸುವಂತಿವೆ.[೩] ಅಂದಿನ ಹೊಚ್ಚ ಹೊಸ, ತಾಜಾ ಆಗಿರುವ ಆಧುನಿಕ ಪ್ರಜ್ಞೆ ಮತ್ತು ಪರಿಸರಗಳ ನಡುವೆ ಅರಳಿದ ಅವರ ಶಿಲ್ಪಗಳು ಸಹಜವೇ ಆಗಿದ್ದರೂ ನಮ್ಮ ಸಂಪ್ರದಾಯದ ಜಗ್ಗುವಿಕೆಯನ್ನು ಮೀರಿ ಆಧುನಿಕ ಸಮಕಾಲೀನತೆಯನ್ನು ಅರಗಿಸಿಕೊಂಡ ರೀತಿಯೇ ಬೆರಗನ್ನುಂಟುಮಾಡುವಂಥದು. ಇವರ ಕೆಲವು ಶಿಲ್ಪಗಳು ಬೆಂಗಳೂರಿನ ವೆಂಕಟಪ್ಪ ಕಲಾಗ್ಯಾಲರಿಯಲ್ಲಿ ಒಂದೆಡೆ ಶಾಶ್ವತವಾಗಿ ಪ್ರದರ್ಶನಕ್ಕಿಡಲಾಗಿರುವುದನ್ನು ಗಮನಿಸಬಹುದು.

ಈ ನಡುವೆ ದೇವನಹಳ್ಳಿಯ ಸಂಪ್ರದಾಯ ಶೈಲಿಯ ಶಿಲ್ಪಿ ಎ. ಸಿ. ಎಚ್. ಆಚಾರ್ಯರು ಘನಾಕೃತಿ ಶೈಲಿಯಲ್ಲಿ ರವೀಂದ್ರನಾಥ್ ಟ್ಯಾಗೋರ್ ಹಾಗೂ ನೆಹರೂರವರ ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮದ ಭಾವಶಿಲ್ಪಗಳನ್ನು ಸೃಷ್ಟಿಸಿ ಹಲವರು ಹುಬ್ಬೇರಿಸುವಂತೆ ಮಾಡಿದ್ದುಂಟು. ಶಿಲ್ಪಗಳಲ್ಲಿನ ತ್ರಿಕೋನಗಳು, ಚೌಕ, ಆಯತಾಕಾರ

ಕೃತಿಗಳು ಸಂಲಗ್ನಗೊಂಡು ಸುಂದರ ಅನುಭವವನ್ನೇ ನೀಡಿದವು. ಮೂಲತಃ ಆಚಾರ್ಯರು ಸಂಪ್ರದಾಯ ಶೈಲಿಯವರೇ ಆದರೂ ಅವರ ದೃಷ್ಟಿ ಮಾತುಗಳು ಇತರೆಲ್ಲ ಕೆಲಸಗಳೂ ಸಮಕಾಲೀನವಾಗಿರುತ್ತಿದ್ದುದರಿಂದ ಅವರ ಬಗ್ಗೆ ಅನೇಕರಲ್ಲಿ ಆಕರ್ಷಣೆ ಬೆಳೆದಿತ್ತು. ೧೯೭೧ ರ ಸಂದರ್ಭಕ್ಕೆ ಕೇರಳದ ನಾಲನ್ ನಂಬಿಯಾರ್ ಬೆಂಗಳೂರಿಗೆ ಬಂದರು. ತಮ್ಮ ಅಭಿವ್ಯಕ್ತಿಗೆ ಬಾಲನ್ ಚಿತ್ರ, ಛಾಯಾಚಿತ್ರಗಳನ್ನೇ ದುಡಿಸಿಕೊಳ್ಳುತ್ತಿದ್ದವರು (ನಂತರದ ದಿನಗಳಲ್ಲಿ) ಮದರಾಸ್ ಕಲಾ ಶಾಲೆಯಿಂದ ಶಿಲ್ಪಕಲೆ ವ್ಯಾಸಂಗ ಮಾಡಿ ಬಂದರು. ಬಾಲ್ಯದಲ್ಲಿನ ಮಣ್ಣಿನ ಗೊಂಬೆಗಳ ಆಟವೂ ಸಾಕಷ್ಟು ಕಾಡಿದ್ದಾಗಿ ಹೇಳಿಕೊಂಡಿರುವರು. ಯುರೋಪ್ ಪ್ರವಾಸ್ ಮಾಡಿ (೧೯೭೭) ಶಿಲ್ಪಸೃಷ್ಟಿ ಪ್ರಕ್ರಿಯೆಗೆ ಹಲವು ಮಾಧ್ಯಮಗಳು ಹೇಗೆ ನೆರವಾಗಬಲ್ಲವು ಎಂಬ ಸಾಧ್ಯತೆಗಳನ್ನು ತಿಳಿದುಕೊಂಡು ಬಂದವರು. ಅಲ್ಲಿನ ಸಮಕಾಲೀನ ಶಿಲ್ಪಗಳನ್ನು ನೋಡಿ ಸ್ಫೂರ್ತಿಗೊಂಡರು. ಅಂದಿನ ಹೊಸ ಮಾಧ್ಯಮಗಳಾದ ಫೈಬರ್, ಗಾಜು, ಸಿಮೆಂಟ್ ಮಾಧ್ಯಮಗಳಲ್ಲಿ ಶಿಲ್ಪಗಳನ್ನು ಸೃಷ್ಟಿ ಮಾಡಿದರು. ಈ ಶಿಲ್ಪಗಳ ರಚನೆಯ ಹಿಂದೆ ಕೇರಳ ಮತ್ತು ದಕ್ಷಿಣ ಕನ್ನಡಗಳ ಧಾರ್ಮಿಕ ಆಚರಣೆ, ನೃತ್ಯಗಳು ಹಾಗೂ ಅವುಗಳ ಕುರಿತು ಇವರು ಮಾಡಿದ ಅಧ್ಯಯನಗಳು ಸಾಕಷ್ಟು ಪ್ರಭಾವ ಬೀರಿದವು[೪] ಸಿಮೆಂಟ್, ಉಕ್ಕು, ಫೈಬರ್‌ಗಾಜು ಮೊದಲಾದ ಮಾಧ್ಯಮಗಳಲ್ಲಿ ಅವರಿಂದ ಆಧುನಿಕವಾದ ಧ್ವನಿಪೂರ್ಣ ಶಿಲ್ಪಗಳು ರಚನೆಗೊಂಡವು.

ವೆನಿಸ್ ಬೈನಾಲೆ, ಕಾಸೆಲ್ ಡಾಕ್ಯುಮೆಂಟಾ, ಬಾಸೆಲ್‌ನ ಕಲಾ ಮಾರುಕಟ್ಟೆ ಹಾಗು ಯುರೋಪಿನ ಹಲವು ಮ್ಯೂಸಿಯಂಗಳ ಭೇಟಿ ಅವರಲ್ಲಿ ಸಮಕಾಲೀನ ಶಿಲ್ಪಕಲೆಯ ದೃಷ್ಟಿ ಧೋರಣೆಗಳನ್ನು ಗಟ್ಟಿಗೊಳಿಸಿದವು. ಅಂತೆಯೇ ನಮ್ಮ ನೆಲದ ಸೊಗಡಿನ 'ಭಗವತಿ'ಯಂತಹ ಶಿಲ್ಪ (ಕಂಚಿನಲ್ಲಿ ೧೯೭೬-೮೦ ನಡುವೆ) ಸಮಕಾಲೀನವಾಗಿ ಮೂಡಿ ಬರಲು ಸಾಧ್ಯವಾಯಿತು. ಅವರ ದೃಷ್ಟಿಯು ಸಂಪ್ರದಾಯಗಳನ್ನು ಅರಗಿಸಿಕೊಂಡು ಅದನ್ನೂ ಮೀರಿದ ಸಮಕಾಲೀನ ಸಂವೇದನೆಗಳ ಅಭಿವ್ಯಕ್ತಿಗೆ ತೊಡಗಿಕೊಂಡಿತು. ೨೦೦೩-೦೫ ರ ಶಿಲ್ಪಗಳು ಲೋಹ ಮಾಧ್ಯಮವನ್ನು ಬಳಸಿಕೊಂಡು ಆಧುನಿಕ ಜಗತ್ತಿನ ವಾಸ್ತುಶಿಲ್ಪ ಪ್ರಪಂಚದಲ್ಲಿ ಆಗಿರುವ ಬೆಳವಣಿಗೆಗಳನ್ನು ಗ್ರಹಿಸಿದ ಅಭಿವ್ಯಕ್ತಿಗಳಾಗಿವೆ. ೨೦೦೫ ರ 'valampiri shankha' ಈ ದೃಷ್ಟಿಗೆ ಉದಾಹರಣೆಯಾಗಿದ್ದರೆ, ' Dorbha grass knot' ವೀಕ್ಷಕರ ಕೋಮಲ, ಕಲ್ಪನಾ ಲಹರಿಗೆ ಪೂರಕವಾಗಿದ್ದು ಖುಷಿ ನೀಡುವಂತಹುದಾಗಿದೆ.

ಜೇಡಿ ಮಣ್ಣು, ಸಿಮೆಂಟ್ ಮಾಧ್ಯಮಗಳಿಂದ ಮುಂದಕ್ಕೆ ಸರಿದು ಒರಟುಮಯ ಉಕ್ಕು ಹಾಗೂ ಕಂಚಿನ ಮಾಧ್ಯಮಗಳಿಗೆ ಕೈ ಚಾಚಿದ ಬಾಲನ್ ನಂಬಿಯಾರ್ ಪ್ರಮುಖ ಸಮಕಾಲೀನ ಶಿಲ್ಪಿಯಾಗಿ ಗುರುತಿಸಲ್ಪಟ್ಟವರು. ನಮ್ಮ ಪಶ್ಚಿಮದ ಕಡಲ ತೀರದ ಹಲವು ಆಚರಣೆಗಳು, ಸಂಪ್ರದಾಯಿಕ ಅಭಿನಯ ಕಲೆಗಳಾದ ತೈಯ್ಯಂ, ಭೂತ, ನಾಗಮಂಡಲ ಇತ್ಯಾದಿಗಳ ಅನುಭವಗಳು ಅವರ ಶಿಲ್ಪಗಳನ್ನು ಪ್ರಭಾವಿಸಿವೆ. ಬಹುಪಾಲು ಶಿಲ್ಪಗಳು ವಿಕೃತಿ ಸೌಂದರ್ಯದ ಚೌಕಟ್ಟಿನಲ್ಲಿಯೇ ಅನನ್ಯವೆನಿಸಿವೆ. ಆದರೆ ಸಮಕಾಲೀನ ಪ್ರಪಂಚಕ್ಕೆ ಹೊಂದುವಂತಹ ಹಲವು ಅಂಶಗಳನ್ನು ಅಳವಡಿಸಿಕೊಂಡಿವೆ.

ಕರ್ನಾಟಕದಲ್ಲಿ ದೃಶ್ಯಕಲೆ ಆಧುನಿಕ ಚಹರೆಯನ್ನು ಮೈಗೂಡಿಸಿಕೊಂಡು ಬೆಳೆಯುತ್ತಿದ್ದಾಗ ಕೆ. ವೆಂಕಟಪ್ಪನವರು ಮೈಸೂರು ತೊರೆದು ಬೆಂಗಳೂರಲ್ಲಿದ್ದು ಸೃಷ್ಟಿಕಾರ್ಯ ಮುಂದುವರೆಸಿದ್ದರು. ಅರವತ್ತರ ದಶಕವದು : ಈ ಕಾಲದಲ್ಲಿ ಕಲಾ ವಿಮರ್ಶಕ ಜಿ. ವೆಂಕಟಾಚಲಂ ಹಾಗೂ ಸಾಂಸ್ಕೃತಿಕ ಲೋಕದ ಇತರರ ಪ್ರಯತ್ನಗಳ ಫಲವಾಗಿ ರಾಜ್ಯದಲ್ಲಿ ಲಲಿತಕಲಾ ಅಕಾಡೆಮಿ ಆರಂಭವಾಯಿತು. ಅದರ ಚಟುವಟಿಕೆಗಳು ಕ್ರಮೇಣ ದೃಶ್ಯಕಲೆಯ ಬೆಳವಣಿಗೆ ಮತ್ತು ಬದಲಾವಣೆಯ ಮೇಲೆ ಪ್ರಭಾವ ಬಿರಿದ್ದು ಸಹಜ. ಹೆಬ್ಬಾರ್ ಮತ್ತಿತರ ಕಲಾವಿದರ ಸ್ಫೂರ್ತಿ ಮತ್ತು ಪ್ರೇರಣೆಗಳೂ ಇದ್ದೇ ಇದ್ದವು. ಚಿತ್ರಕಲೆಯಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿದ್ದವರಲ್ಲಿ ಹಲವರು ಶಿಲ್ಪಕಲಾಕೃತಿಗಳ ರಚನೆಗೂ ಒಲವು ತೊರಿದ್ದು ಕುತೂಹಲಕರವಾಗಿತ್ತು. ಎರಡು ಆಯಾಮವಾದ ಚಿತ್ರಕಲೆಯನ್ನು ಮೀರಿದ ಮೂರು ಆಯಾಮದ ಶಿಲ್ಪಕಲೆಯನ್ನು ಅಭಿವ್ಯಕ್ತಿಗೆ ದುಡಿಸಿಕೊಂಡಿರುವರು. ನಮ್ಮಲ್ಲಿ ಕೆ. ಕೆ. ಹೆಬ್ಬಾರ್, ಆರ್. ಎಮ್. ಹಡಪದ್, ಜಿ. ಎಸ್. ಶೆಣೈ, ವಾಸುದೇವ ಮೊದಲಾದವರೆಲ್ಲ ಅಭಿವ್ಯಕ್ತಿಸಲು ಪ್ರಯತ್ನಿಸಿದವರು. ಶಿಲ್ಪಿ ಸಿದ್ಧಲಿಂಗಸ್ವಾಮಿ, ಕೆ. ವೆಂಕಟಪ್ಪ, ಆರ್. ಎಸ್. ನಾಯ್ಡು, ಯುಸೂಫ್ ಅರಕ್ಕಲ್, ಯು. ಭಾಸ್ಕರ್ ರಾವ್, ಎಸ್. ಶ್ಯಾಮಸುಂದರ್, ಪ್ರದೀಪ ಕುಮಾರ್, ನಟರಾಜ ಶರ್ಮಾ, ಎನ್. ಮರಿಶಾಮಾಚಾರ್[೫], ರಮೇಶ್ಚಂದ್ರ, ಶಿವಾನಂದ ಬಂಟನೂರ ಮೊದಲಾದವರು ಚಿತ್ರ ಶಿಲ್ಪಕಲಾ ಮಾಧ್ಯಮಗಳೆರಡನ್ನೂ ಅಭಿವ್ಯಕ್ತಿಗೆ ದುಡಿಸಿಕೊಂಡು ಬಂದವರೇ ಆಗಿದ್ದಾರೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಸ್ಥಾಪನೆಯು ಕನ್ನಡ ದೃಶ್ಯಕಲಾ ವಲಯದ ಇತಿಹಾಸದ ದಾರಿಯಲ್ಲಿ ಒಂದು ಮೈಲಿಗಲ್ಲು ಎಂದರೆ ತಪ್ಪಲ್ಲ. ಅನೇಕ ಚಿತ್ರ ಶಿಲ್ಪಕಲಾವಿದರು ಅಕಾಡೆಮಿಯ ಸಂಪರ್ಕಹೊಂದಿದರು. ಅಕಾಡೆಮಿಯು ಕಲೆ ಮತ್ತು ಕಲಾವಿದರ ಬೆಳವಣಿಗೆಗಾಗಿ ಅನೇಕ ಕಾರ್ಯಕ್ರಮಗಳನ್ನು ಆರಂಭಿಸಿತು. ಕಲಾಪ್ರದರ್ಶನ ಕಲಾ ಶಿಬಿರಗಳು ಪ್ರಾಮುಖ್ಯತೆ ಪಡೆದವು. ಲಲಿತಕಲಾ ಅಕಾಡೆಮಿಯ ಆರಂಭದ ಪ್ರದರ್ಶನಗಳಲ್ಲಿ ಅಪ್ಪು ಕುಟ್ಟನ್ಆಚಾರಿ ಆಗಾಗ, ಅಲ್ಲಲ್ಲಿ ವಿ. ಗೋಪಾಲ್ ಅವರು ತಮ್ಮ ಹೊಸ ದೃಷ್ಟಿಯ ಸೃಷ್ಟಿಗಳಿಂದ ಹಲವರನ್ನು ತಮ್ಮತ್ತ ನೊಡುವಂತೆ ಮಾಡಿದರು. ಮರದ ಮಾಧ್ಯಮದಲ್ಲಿ ಆಚಾರಿಯವರು ರಚಿಸಿದ ಸುಂದರ ಶಿಲ್ಪಗಳು ಗಮನಸೆಳೆದವು.[೬] ಅದೇ ವೇಳೆಗೆ ಎಲ್.ಪಿ. ಅಂಚನ್‌ರವರು ಜನಪದೀಯ ಸತ್ವಗಳನ್ನು ಅರಗಿಸಿಕೊಂಡ ಲೋಹದ ಹಾಳೆಗಳ ಅತ್ಯಾಕರ್ಷಕ ಶಿಲ್ಪಗಳನ್ನು ರಚಿಸಿದರು. ಅವೆಲ್ಲ ಜನಸಾಮಾನ್ಯರನ್ನೇ ಅಲ್ಲದೆ ಶಿಲ್ಪ-ಚಿತ್ರಕಲಾ ವಲಯದ ಗಂಭೀರ ದೃಷ್ಟಿಗಳನ್ನು ಸೆಳೆಯುವಲ್ಲಿ ಯಶಸ್ಸು ಕಂಡವು. ತುಳು ಸಾಂಸ್ಕೃತಿಕ ಪರಂಪರೆಯ ಪ್ರಭಾವದಿಂದ ಕಾಪರ್ ಮತ್ತು ಬ್ರಾಸ್ ಫಾಯಿಲ್‌ಗಳಲ್ಲಿ ಹೊಸ ದೃಷ್ಟಿಯ ಮುಖವಾಡಗಳು, ಗ್ರಾಮೀಣ- ಜನಪದ ಬದುಕನ್ನು ಬಿಂಬಿಸುವ ಸುಂದರ ಶಿಲ್ಪಗಳನ್ನು ಸೃಜಿಸಿದರು.

ಶಿವಮೊಗ್ಗಾದ ತೀರ್ಥಹಳ್ಳಿಯವರಾದ ಹೆಚ್.ಎನ್. ಕೃಷ್ಣಮೂರ್ತಿಯವರು ಶಾಂತಿನಿಕೇತನದಲ್ಲಿ ಶಿಲ್ಪಕಲೆಯನ್ನೇ ಪ್ರಮುಖ ವಿಷಯವಾಗಿ ಕಲಿತುಬಂದವರು ವಿಶೇಷವಾಗಿ ರಾಮಕಿಂಕರ್ ಬೈಜ್ ಅವರ ಬಳಿ ಶಿಲ್ಪಕಲೆಯ ಹೊಸ ಹೊಳಹುಗಳನ್ನು, ಹೊರಳುಗಳನ್ನು ಕಲಿತವರು. ಸುತ್ತಲಿನ ಬದುಕಿನಲ್ಲಿ ತಲ್ಲೀನರಾದ ಜನ- ಅವರ ವಿವಿಧ

ಸಂದರ್ಭಗಳನ್ನು ಬೈಜ್ ಸಿಮೆಂಟ್, ಪ್ಲಾಸ್ಟರ್ ಕೆಲವೊಮ್ಮೆ ಕಲ್ಲಿನಲ್ಲಿಯೂ ಮೂಡಿಸಿರುವರು. ೧೯೩೦– ೪೦ರ ನಡುವೆ ಸ್ಮಾರಕದಂತಹ ಮಹಾತ್ಮಾಕಾಂಕ್ಷೆಯ ಶಿಲ್ಪಗಳನ್ನು ಸೃಜಿಸಿದರು. 'ಸಂತಾಲರ ಕುಟುಂಬ' ಅಂತಹವುಗಳಲ್ಲಿ ಒಂದು. ಅಂತಹ ಬಹುಮುಖ್ಯ ಶಿಲ್ಪಿಯ ಬಳಿ ಕಲಿತ ಕೃಷ್ಣಮೂರ್ತಿಯವರ ಶಿಲ್ಪಗಳೂ ಆಕಾರದಲ್ಲಿ ಸಣ್ಣವೇನಲ್ಲ! ಬೃಹತ್ ಆದವುಗಳೇ ಆಗಿವೆ. ಸಿಮಂಟ್ ಮಾಧ್ಯಮವನ್ನು ಬಹುವಾಗಿ ದುಡಿಸಿಕೊಳ್ಳುವ ಈ ಶಿಲ್ಪಿ ಮಲೆನಾಡಿನ ಬದುಕಿನ ಒಳನೋಟಗಳನ್ನು ಶಿಲ್ಪಗಳಲ್ಲಿ ಹಿಡಿದಿರಿಸುವ ರೀತಿ, ಜೀವನ ಪ್ರೀತಿ ಎಲ್ಲವೂ ಅಪೂರ್ವ. ವಿಭಿನ್ನ ಒರಟು ಮೈವಳಿಕೆಯ ವಿಕೃತಿ ಸೌಂದರ್ಯದ ಉತ್ತಮ ಉದಾಹರಣೆಗಳು ಇವರ ಶಿಲ್ಪಗಳು ಕೆಲಸ ನಿರತ ಹಳ್ಳಿಯ ಮಹಿಳೆಯರು, ರೈತರ ಬದುಕಿನ ಹಲವು ಮುಖಗಳನ್ನು ಗ್ರಹಿಸಿ ಅಭಿವ್ಯಕ್ತಿಸಿದ ಶಿಲ್ಪಗಳು ಆ ಭಾಗದ ಮಣ್ಣಿನ ಸೊಗಡನ್ನು ಬಿಂಬಿಸಿವೆ. ದೇಹಗಳ ಆಕಾರದಲ್ಲಿ ಸಂಪ್ರದಾಯಕ್ಕೆ ತಿರುಗೇಟು ನೀಡುವಂತೆ ವಿಕೃತಿಯನ್ನು ಬಹಳ ಪ್ರಭಾವಶಾಲಿಯಾಗಿ ದುಡಿಸಿಕೊಂಡಿರುವರು.

ನಮ್ಮ ಸಂದರ್ಭದ ಬಹುಮುಖ್ಯ ಸಮಕಾಲೀನ ಶಿಲ್ಪಿಯಾಗಿರುವ ಶ್ರೀ ವೆಂಕಟಾಚಲಪತಿಯವರು ೧೯೭೯ರ ಹೊತ್ತಿಗೆ ತಮ್ಮ ಶಿಲ್ಪಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸಿದಾಗ ನೋಡುಗರಲ್ಲಿ ಅಚ್ಚರಿ. ಏಕೆಂದರೆ ಅಲ್ಲಿಯವರೆಗೆ ಅವರ ಸಂಪ್ರದಾಯ ಶಿಲ್ಪಗಳನ್ನು ನೋಡಿದ್ದವರಿಗೆ ಇದೀಗ ಹೊಸ ದೃಷ್ಟಿಯ ಶಿಲ್ಪಗಳು ಬೇರೊಂದು ಬಗೆಯ ಅನುಭವ ನೀಡಿದ್ದವು. ಮಾನವೀಯ ದೃಷ್ಟಿ, ಜೀವನ ಪ್ರೀತಿಯ ಶಿಲ್ಪಿ ವೆಂಕಟಾಚಲಪತಿ ಮಹಾನಗರದಲ್ಲಿದ್ದು ಮಣ್ಣಿಗೆ ಹತ್ತಿರವಾಗಿ ಬದುಕಿದವರು. ದೇವನಹಳ್ಳಿಯ ಸಂಪ್ರದಾಯ ಶಿಲ್ಪಿ ಎ.ಸಿ. ಎಚ್. ಆಚಾರ್ಯರ ಆಕರ್ಷಣೆಯಿಂದ ಶಿಲ್ಪಕಲೆಯತ್ತ ಸೆಳೆಯಲ್ಪಟ್ಟವರು. ಸಂಪ್ರದಾಯಕ್ಕೆ ಸಮಕಾಲೀನತೆಯನ್ನು ಕಸಿಮಾಡಿಕೊಂಡದ್ದು ಬೆಂಗಳೂರಿನ ಅ. ನ. ಸುಬ್ಬರಾವ್ ಕಲಾಮಂದಿರದಲ್ಲಿ ಅವರು ಕಂಡ ಸಮಕಾಲೀನ, ಸಂಪ್ರದಾಯ, ಜಾನಪದ ಶಿಲ್ಪಗಳೆಲ್ಲವುಗಳ ಅಧ್ಯಯನ ಪುನರ್ ಅಧ್ಯಯನಗಳ ಫಲವಾಗಿ ಗ್ರಹಿಸಲ್ಪಟ್ಟ ಹೊಸ ನೊಟಗಳು ಅವರ ಶಿಲ್ಪಗಳಲ್ಲಿ ಕಾಣಿಸಿಕೊಂಡವು. ಹಲವು ಮಾಧ್ಯಮಗಳ ಅಧ್ಯಯನದ ಫಲವಾಗಿ ವೈವಿಧ್ಯಮಯ ಶಿಲ್ಪಗಳ ಸೃಷ್ಟಿರೂಪಗಳ ಹೊಯ್ದಾಟ, ದುಂಡು ಶಿಲ್ಪಗಳ ಸೃಷ್ಟಿ ಸಾಧ್ಯತೆಗಳನ್ನು ಸುತ್ತಲಿನ ಅವಕಾಶ ತೆರಪಿನಲ್ಲಿ ವಿಸ್ತರಿಸಿಕೊಂಡು ಸೃಷ್ಟಿಸಿದ ಶಿಲ್ಪಗಳು ಹಲವಾರು ಬಗೆಯವು. ಮರ, ಸಿಮೆಂಟ್, ಶಿಲೆ, ಟೆರಾಕೋಟಾ, ಫೈಬರ್, ಕಂಚು ಹೀಗೆ ಹಲವು ಮಾಧ್ಯಮಗಳಲ್ಲಿ ಮೈದಳೆದವು. ೧೯೭೯–೮೦ರಲ್ಲಿ ರಚನೆಗೊಂಡ ಚಲಪತಿಯವರ ಬಹುಪಾಲು ಶಿಲ್ಪಕೃತಿಗಳಲ್ಲಿ ಜಾನಪದದ ಸತ್ವಗಳ ಸೊಗಡು ದಟ್ಟವಾಗಿದೆ. 'ರಾಹುಕೇತು' ಶಿಲ್ಪ ಸುತ್ತಲೂ ನೋಡುಗರನ್ನು ಸುತ್ತಿಸಿ ನೋಡಿಸಿಕೊಂಡ ರೀತಿ ೧೯೮೦ ರ ಸಂದರ್ಭದ ದೃಶ್ಯಕಲಾವಲಯದಲ್ಲಿ ದೊಡ್ಡ ಸುದ್ದಿಯೇ ಆಯಿತು. ಇದಕ್ಕೆ ವೈರುಧ್ಯವೆಂಬಂತಹ ಮಾಧ್ಯಮ ನಿರ್ವಹಣೆ ಹಾಗೂ ಶೈಲಿಯ (ಪೇನ್) ಪರಂಪರೆ ಹಾಗೂ ಸಮಕಾಲೀನತೆಗಳನ್ನು ಕಸಿ ಮಾಡಿದಂತಹ ಶಿಲ್ಪ. ಅವರ ಶೀರ್ಷಿಕೆಯ ಕಲಾಕೃತಿ ಸನ್ ಗಾಡ್ ಶಿಲ್ಪ ಪಶ್ಚಿಮದ ಆಧುನಿಕ ಶಿಲ್ಪಗಳನ್ನು ಅರಗಿಸಿಕೊಂಡಂತೆ ಕಾಣಿಸಿಕೊಂಡ ವಿನೂತನ ಶಿಲ್ಪವಾಗಿ ಮೂಡಿಬಂದಿತು.

ಬೆಂಗಳೂರಿನ ವಿಶ್ವೇಶ್ವರಯ್ಯ ತಾಂತ್ರಿಕ ಮ್ಯೂಸಿಯಂನಲ್ಲಿ ಕಲಾವಿದರಾಗಿದ್ದ ಸಂದರ್ಭದಲ್ಲಿ ಅನೇಕ ಸಮಕಾಲೀನ ಮತ್ತು ಅಕಾಡೆಮಿಕ್ ಶಿಲ್ಪಗಳನ್ನು ಸೃಷ್ಟಿಸಿದರು. ಆ

ಸಂದರ್ಭದಲ್ಲಿ ಅಲ್ಲಿನ ತಾಂತ್ರಿಕ ಸಾಧ್ಯತೆಗಳನ್ನು ಸಮಕಾಲೀನ ಶೈಲಿಯ ಶಿಲ್ಪಸೃಷ್ಟಿಯಲ್ಲಿ ತಂದುಕೊಳ್ಳುವ ತವಕ ಚಲಪತಿಯವರದು. ಮ್ಯೂಸಿಯಂನ ಅಗತ್ಯ ಮತ್ತು ಅಲ್ಲಿನ ಅಧಿಕಾರಿ ವರ್ಗ ಹಾಗೂ ಚಲಪತಿಯವರ ದೃಷ್ಟಿ- ಸೃಷ್ಟಿ ಅಪೇಕ್ಷೆಗಳಿಗನುಸಾರವಾಗಿ ೧೯೮೦ರಲ್ಲಿ ಟೆಕ್ನೊ ಆರ್ಟ್ ಕ್ಯಾಂಪ್‌ನ್ನು[೮] ವಿಶಿಷ್ಟ ರೀತಿಯಲ್ಲಿ ಜರುಗಿಸಿತು.

ಅತ್ಯಂತ ಕ್ರಿಯಾಶೀಲವಾದ ತಾದಾತ್ಮತೆ ಹೊಂದಿದ್ದ ಚಲಪತಿಯವರ ಕಲ್ಪನೆಗಳಿಗೆ ಜೀವ ತುಂಬಿ, ರೆಕ್ಕೆ ಪುಕ್ಕಗಳು ಬೆಳೆದು ಹಾರಾಡುವ ಸಂದರ್ಭ ಅದಾಗಿತ್ತು. ಎಲ್. ಪಿ. ಅಂಚನ್‌ರು ಇದರಲ್ಲಿದ್ದರಲ್ಲದೆ ದೇಶದ ಅಂದಿನ ವಿಖ್ಯಾತ ಶಿಲ್ಪಿಗಳನೇಕರು ಪಾಲ್ಗೊಂಡಿದ್ದರು,[೯] ಶಿಬಿರದಲ್ಲಿ ಪಾಲ್ಗೊಂಡ ಶಿಲ್ಪಿಗಳು ತಂತ್ರಜ್ಞಾನದ ನೆರವಿನಿಂದ ವೀಕ್ಷಕರಿಗೆ ದೃಶ್ಯ- ಕುತೂಹಲ ಉಂಟುಮಾಡಿದರು. ಹಾಗೆ ನೋಡಿದರೆ ೬೦- ೮೦ರ ದಶಕಗಳ ಬಹುತೇಕ ಶಿಲ್ಪಿಗಳು ಪಶ್ಚಿಮ ಹಾಗೂ ಯುರೋಪಿನ ಪ್ರಭಾವಗಳಿಗೆ ಒಳಗಾದವರೇ ಬಹಳವೆನ್ನಬಹುದು. ಈ ಶಿಬಿರದ ನಂತರದ ವರ್ಷಗಳಲ್ಲಿ ವೆಂಕಟಾಚಲಪತಿಯವರ ಶಿಲ್ಪಕಲಾ ಸೃಷ್ಟಿ ಪ್ರಕ್ರಿಯೆ ವೈವಿಧ್ಯಮಯವಾದುದು. ಮೂವಿಂಗ್ ಫಾರ್ಮ, ಸೀಟೆಡ್ ಫಿಗರ್, ಬ್ಲೋಮ್, ಥಿಂಕರ್‌ನಂತಹ ಶಿಲ್ಪಗಳು ಅವರಿಂದ ಮೂಡಿಬಂದವು. ೧೯೮೭ ರಲ್ಲಿ ಯುವ ಬರಹಗಾರರು ಮತ್ತು ಕಲಾವಿದರ ಗಿಲ್ಡ್‌ನ ವತಿಯಿಂದ ಪ್ರತಿ ಸೋಮವಾರ ಉದ್ಘಾಟನೆಗೊಳ್ಳುತ್ತಿದ್ದ ಪ್ರದರ್ಶನವೊಂದರಲ್ಲಿ ವೆಂಕಟಾಚಲಪತಿಯವರ ವಿಶಿಷ್ಟ ಹಾಗೂ ವೈವಿಧ್ಯಮಯ ಮಾಧ್ಯಮಗಳ ಶಿಲ್ಪಗಳು ಪ್ರದರ್ಶನಗೊಂಡವು.

ಮೂರ್‍ನಾಲ್ಕು ದಶಕಗಳ ಹಿಂದೆ ಈ ರೀತಿ ಶಿಲ್ಪ ಕಲಾವಿದರೊಬ್ಬರು ಏಕ ವ್ಯಕ್ತಿ ಶಿಲ್ಪಕಲಾ ಪ್ರದರ್ಶನ ಮಾಡುವುದೆಂದರೆ ಅಸಾಮಾನ್ಯ ಪ್ರಯೋಗವೇ ಸರಿ. ಬಹಳಷ್ಟು ಶ್ರಮವಹಿಸಿ ಚಲಪತಿಯವರು ತಮ್ಮ ಶಿಲ್ಪಗಳನ್ನು ಪ್ರದರ್ಶನ ಮಾಡಿದ್ದರು. ಅವರ ಶ್ರಮ ಮತ್ತು ಶಿಲ್ಪಕಲೆಯ ಬಗೆಗಿನ ಅವರ ಮಹತ್ವಾಕಾಂಕ್ಷೆ, ಪ್ರೀತಿ, ಬದ್ಧತೆಗಳು ಯಾರಿಗಾದರೂ ಮನವರಿಕೆಯಾಗುವಂಥದು ೧೯೭೨ರ ಅವಧಿಯ ನೆರಳು- ಬೆಳಕುಗಳನ್ನು ದುಡಿಸಿಕೊಂಡ ಚೌಕ, ಆಯತ, ಆಳಗಳ ಆಟಗಳಂತಹ ಶಿಲ್ಪಗಳೂ ಪ್ರಭಾವಗಳ ನಡುವೆಯೂ ಶಿಲ್ಪಿಯ ಸ್ವಂತಿಕೆ ಹಾಗೂ ಸಮಕಾಲೀನತೆಗಳನ್ನು ಹೊಂದಿದ್ದವು.[೧೦] ೧೯೯೦ ರ ಹೊತ್ತಿಗಾಗಲೇ ಚಲಪತಿ ಒಬ್ಬ ಬಹುಮುಖ್ಯ ಸಮಕಾಲೀನ ಶಿಲ್ಪಿಯಾಗಿ ಮೂಡಿಬಂದರು. ಕೇಂದ್ರ ಲಲಿತಕಲಾ ಅಕಾಡೆಮಿಯ ೧೯೯೬ನೇ ಸಾಲಿಗೆ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆಯಾದ ಶಿಲ್ಪಕಲಾಕೃತಿ ಕುತೂಹಲಕರ ಒಳನೋಟಗಳನ್ನು ಹೊಂದಿ ಗಮನ ಸೆಳೆಯಿತು.'ಆದಿಮ ಸತ್ವಗಳು ಸೃಜನಶೀಲ ಶಿಲ್ಪಿಯಿಂದ ಹೇಗೆ ಸಮಕಾಲೀನವಾಗಿ ಮೈದಳೆಯ ಬಲ್ಲವು! ಎಂಬುದಕ್ಕೆ ದೃಷ್ಟಾಂತವಾಗಿ ಈ ಶಿಲ್ಪ ಮೂಡಿಬಂದಿದೆ. ವಿಕೃತಿ ಸೌಂದರ್ಯವನ್ನು ವೆಂಕಟಾಚಲಪತಿ ಈ ಶಿಲ್ಪಕೃತಿಯಲ್ಲಿ ಸಾಧಿಸಿ ತೋರಿಸಿದ್ದಾರೆ. ವಿಶಿಷ್ಟ ರೂಪದ ಈ ಕಂಚು ಶಿಲ್ಪ ವಿಕೃತಿಯ ನಡುವೆಯೂ ಸೌಂದರ್ಯ ಸಾಧಿಸಿದ್ದು ಸುತ್ತಲೂ ತನ್ನನ್ನು ನೊಡಿ ಅನುಭವಿಸಲು ಪ್ರೇರೆಪಿಸುತ್ತದೆ.

ಭಾವಶಿಲ್ಪ ರಚನೆಯಲ್ಲೂ ಅಪೂರ್ವ ಕೌಶಲ ಮೆರೆದಿರುವ ಇವರಿಂದ ಬುದ್ಧ ಬಸವರಂತಹ ದಾರ್ಶನಿಕರಿಂದ ಹಿಡಿದು: ಕವಿಗಳು, ಕಲಿಗಳು ನೇತಾರರು, ಸ್ವಾಮಿಜಿಗಳ

ಎದೆಮಟ್ಟದ ಆಳೆತ್ತರದ ಪ್ರತಿಮೆಗಳು ರಚನೆಗೊಂಡಿವೆ. ವ್ಯಕ್ತಿಗಳ ಸಾಮಾನ್ಯವಾದ ಭಂಗಿಗಳನ್ನು ಗಮನಿಸಿ ಅದಕ್ಕೆ ನನ್ನ ಕಲ್ಪನೆಯನ್ನು ಸೇರಿಸುತ್ತೇನೆ. ಕೇವಲ ಚಹರೆ ಚನ್ನಾಗಿದ್ದರೆ ಸಾಲದು, ಪ್ರತಿಮೆ ವ್ಯಕ್ತಿತ್ವನ್ನು ಬಿಂಬಿಸಬೇಕು ಈ ನಿಟ್ಟಿನಲ್ಲಿ ನಾನು ಬಹಳ ಶ್ರಮವಹಿಸುತ್ತೇನೆ[೧೧] ಎನ್ನುತ್ತಾರೆ. ಅಂತೆಯೆ ಅವರ ಶಿಲ್ಪಗಳು ಆಕರ್ಷಕವಾದ ಜೀವಕಳೆಯಿಂದ ಕಂಗೊಳಿಸುತ್ತವೆ. ಅ. ನ. ಸುಬ್ಬರಾವ್, ಬಿ. ಎಂ. ಶ್ರೀ, ಕಿಟ್ಟೆಲ್, ತಿ. ನಂ. ಶ್ರೀ, ರಾಜಕುಮಾರ್ ಮೊದಲಾದವರ ಭಾವಶಿಲ್ಪಗಳೂ ಗಣನೀಯವೇ.

ಇದೇ ಸಂದರ್ಭದಲ್ಲಿ ೧೯೮೫ರ ಸುಮಾರಿಗೆ ಯುವ ಶಿಲ್ಪಿಗಳು ಸಮಕಾಲೀನವಾಗಿ ಚಿಂತಿಸುವ ಸೃಷ್ಟಿಸುವ ಸಂದರ್ಭ ನಿರ್ಮಾಣವಾಯಿತು. ಅನೇಕರು ಹಿರಿಯ ಶಿಲ್ಪಗಳೊಡನೆ ಹಜ್ಜೆಹಾಕಿರುವುದು ಕಂಡುಬಂತು. ಚಿತ್ರಕಲಾವಿದರೊಂದಿಗೆ ಶಿಲ್ಪಿಗಳೂ ಕಲಾಶಿಬಿರ, ಕಲಾಮೇಳ ಇತ್ಯಾದಿಗಳಲ್ಲಿ ಕಾಣಿಸಿಕೊಳ್ಳಲಾರಂಭಿಸಿದರು. ಚಿತ್ರಕಲೆಯ ಜೊತೆ ಜೊತೆಗೆ ಶಿಲ್ಪಗಳನ್ನು ಆಗೊಮ್ಮೆ ಈಗೊಮ್ಮೆ ಸೃಷ್ಟಿಸುತ್ತಿದ್ದವರು ಕೆಲವರಾದರೆ ಶಿಲ್ಪರಚನೆಯನ್ನೇ ಪೂರ್ಣವಾಗಿ ತಮ್ಮ ಅಭಿವ್ಯಕ್ತಿ ಮಾಧ್ಯಮವನ್ನಾಗಿ ದುಡಿಸಿಕೊಳ್ಳುತ್ತಿದ್ದವರು. ಕೆಲವರು ಹೊರಗಿನಿಂದ ಬಂದ ಕೆಲವರಲ್ಲಿ ಆಧುನಿಕ ಸಮಕಾಲೀನ ಪ್ರಭಾವಗಳನ್ನು ಅರಗಿಸಿಕೊಂಡೇ ಹೊಸ ಬಗೆಯ ಸಂವೇದನೆಗಳನ್ನು ಶಿಲ್ಪಗಳಲ್ಲಿ ದುಡಿಸಿಕೊಂಡಿರುವವರು. ಅಂಥವರಲ್ಲಿ ಯುಸೂಫ್ ಅರಕ್ಕಲ್, ಶ್ಯಾಂಸುಂದರ್, ಯು. ಭಾಸ್ಕರರಾವ್, ನಟರಾಜ ಶರ್ಮಾ, ಸಿ. ಕೆ. ಜನಾರ್ಧನ, ರಾಮದಾಸ, ಜಾನ್ ದೇವರಾಜ್, ಕೃಷ್ಣ ದೇವಾಡಿಗ, ವಿ. ಆರ್. ಸಿ. ಶೇಖರ್ ಮೊದಲಾದವರೊಂದಿಗೆ ಎನ್. ಮರಿಶಾಮಾಚಾರ್ ಅವರನ್ನು ಸೇರಿಸಬಹುದು. ಆದರೆ ಶಿಲ್ಪವನ್ನು ಮಾತ್ರವೇ ಸಂಪೂರ್ಣವಾಗಿ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಅಪ್ಪಿಕೊಂಡವರೆಂದರೆ ವಿ. ಎ. ದೇಶಪಾಂಡೆ, ಎಂ. ರಾಮಮೂತಿಯವರು. ಆಗಾಗ ಸೃಷ್ಟಿಸುವ ಲಲಿತಾಶಂಕರ್ ಅವರೂ ಈ ಪಟ್ಟಿಗೆ ಸೇರುವರು.

ಮೈಸೂರಿನ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ (ಕಾವಾ)ಯಲ್ಲಿ ಅಧ್ಯಾಪಕರಾಗಿ ಬಳಿಕ ಡೀನ್‌ರಾಗಿ ನಿವೃತ್ತರಾಗಿರುವ ಬಾದಾಮಿ ಮೂಲದ ವ್ಯಾಸ ದೇಶಪಾಂಡೆಯವರು ಶಿಲ್ಪಕಲೆಯನ್ನೇ ತಮ್ಮ ಅಭಿವ್ಯಕ್ತಿಯ ಮುಖ್ಯ ಮಾಧ್ಯಮವನ್ನಾಗಿ ಉಳಿಸಿಕೊಂಡು ಬಂದವರಾಗಿದ್ದಾರೆ. ಇವರು ಬರೋಡಾದ ವಿಶ್ವವಿದ್ಯಾಲಯದಲ್ಲಿ ಶಿಲ್ಪಕಲಾಭ್ಯಾಸ ಮಾಡಿ ಬಂದಿರುವರು. ವಿವಿಧ ಮಾಧ್ಯಮಗಳಲ್ಲಿ ಶಿಲ್ಪಕಲೆಯ ಅಭ್ಯಾಸ ಮಾಡಿರುವರಾದರೂ ಹೆಚ್ಚಾಗಿ ಒಲಿದಿರುವುದು ಲೋಹ ಮಾಧ್ಯಮವನ್ನೇ. ವಿಶೇಷವಾಗಿ ಇವರ ಶಿಲ್ಪಕೃತಿಗಳಲ್ಲಿ ಜೈವಿಕ ರೂಪಗಳು ಅಂದರೆ ದ್ರವವೊಂದು ಹರಿಯುತ್ತ, ಸೋರುತ್ತ ಆ ಸ್ಥಿತಿಯಲ್ಲೇ ತಕ್ಷಣಕ್ಕೆ ಘನೀಕೃತಗೊಂಡಾಗ ಕಾಣುವಂತೆ ರೂಪಿತವಾಗಿರುತ್ತವೆ.[೧೨] ಹಲವು ವರ್ಷ ಈ ರೀತಿಯ ಸೃಷ್ಟಿಗಳನ್ನು ಮಾಡಿದ ಇವರು ಮಾನವ ದೇಹದ ಭಂಗಿಗಳನ್ನು, ಮೈಥುನದಂತಹ ವಸ್ತುವಿಗೆ ಆಕರ್ಷಿತರಾಗಿ ಸರಳೀಕೃತ ರೂಪಗಳಾಗಿಸಿಯೂ ಅಭಿವ್ಯಕ್ತಿಸಿರುವರು. ದೇಶಪಾಂಡೆಯವರು ೧೯೮೦ ರ ಟೆಕ್ನೋ ಆರ್ಟ್ ಕ್ಯಾಂಪ್‌ನಲ್ಲಿ ಕಾಣಿಸಿಕೊಂಡವರು. ಅವರ ಹೊಳೆವ ಎದೆಮಟ್ಟದ ಶಿಲ್ಪಗಳು ಆಕರ್ಷಕ. ೧೯೮೨ರಲ್ಲಿ ಬೆಂಗಳೂರಿನ ರಾಜ್ಯ ಯುವಕ ಕೇಂದ್ರದಲ್ಲಿ ಏರ್ಪಡಿಸಿದ್ದ ಅವರ ಶಿಲ್ಪಗಳ ಪ್ರದರ್ಶನ ಸಂಪ್ರದಾಯ, ಜಾನಪದ ಶಿಲ್ಪಗಳನ್ನು ನೋಡಿ ಹೊಂದಿಕೊಂಡಿದ್ದ ಕಣ್ಣುಗಳಿಗೆ ಹೊಸ ಅನುಭವ ನೀಡಿತು. ಲೋಹ, ಗಾಜು, ಮಿಶ್ರ

ಮಾಧ್ಯಮಗಳಲ್ಲಿ ಶಿಲ್ಪಗಳು ಅರಳಿದ್ದವು. ಅವರ ಬುಲ್, ಬುಲ್ ಹೆಡ್‌ನಂತಹ ಶಿಲ್ಪಸರಣಿ, ದೇಶಪಾಂಡೆಯವರು ಕಾಲಕಾಲಕ್ಕೆ ಹೊಸ ದೃಷ್ಟಿಗಳಿಂದ ಸೃಜಿಸುತ್ತಾರೆಂಬುದು ಅವರ ಶಿಲ್ಪಗಳನ್ನು ನೋಡಿದವರಿಗೆ ಗಮನಕ್ಕೆ ಬರದೇ ಇರಲಾರದು.

ಜಾಗತಿಕ ಅನುಭವಗಳ ಜತೆಜತೆಗೆ ಖಾಸಗೀ ಅನುಭವಗಳನ್ನು ಅಭಿವ್ಯಕ್ತಿಸುತ್ತ ಹೆಸರಾಗಿರುವವರು ಯುಸೂಫ್ ಅರಕ್ಕಲ್ ಅವರು. ೬೦ರ ದಶಕದಲ್ಲಿ ಅವರು ಶಿಲ್ಪಸೃಷ್ಟಿಗೆ ಹೆಚ್ಚಿನ ಒತ್ತು ನೀಡಿದರು. ನಂತರದ ದಿನಗಳಲ್ಲೂ ಅವರು ಅಗತ್ಯವಾದಾಗ ಶಿಲ್ಪಸೃಷ್ಟಿ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುವುದು ನಿರಂತರತೆಯನ್ನು ಪಡೆಯಿತು. ೧೯೮೬ ರಲ್ಲಿ ಅರಕ್ಕಲ್ ಅವರು ಮೂರನೇ ವಿಶ್ವದ ದೇಶಗಳ ಹಸಿವಿನ ಅನುಭವಗಳನ್ನು ಅಭಿವ್ಯಕ್ತಿಸಿದರು. ಭಾರತದಂತಹ ದೇಶಗಳಲ್ಲಿ ಹಸಿವಿಗೆ ಬಲಿಯಾಗುವವರ ಕರುಣಾಜನಕ ಸ್ಥಿತಿಯನ್ನು ಅವರ ಈ ಸಂದರ್ಭದ ಶಿಲ್ಪಗಳು ಹಿಡಿದಿರಿಸಿದವು. ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಏರ್ಪಡಿಸಿದ್ದ ಈ ಸರಣಿಯ ಶಿಲ್ಪಗಳು ಹಲವು ಮಾಧ್ಯಮಗಳಲ್ಲಿ ಸೃಷ್ಟಿಯಾಗಿದ್ದವು ಮತ್ತು ಸಮಕಾಲೀನತೆಯನ್ನು ಬಿಂಬಿಸುತ್ತಿದ್ದವು.

ಕಬ್ಬಿಣ, ಕಂಚು, ಅಲ್ಯೂಮಿನಿಯಂ ಮಾಧ್ಯಮಗಳೂ ಸಹ ಪಾತ್ರವಹಿಸಿದವು. ವಿಕೃತಿ ಸೌಂದರ್ಯ ಮೀಮಾಂಸೆಯ ವಕ್ತಾರರಂತೆ ಯುಸೂಫ್ ಕಾಣುತ್ತಾರೆ. ಫೇಸಸ್ ಆಫ್ ಹಂಗರ್ಸ್ ಶೀರ್ಷಿಕೆಯ ಆ ಶಿಲ್ಪ ಸಮೂಹ ವಿಶಿಷ್ಟ ರೀತಿಯಲ್ಲಿ ಸ್ವಾಗತಾರ್ಹವಾದವು. ಅವುಗಳು ಕಟ್ಟಿಕೊಟ್ಟ ಒಳನೋಟಗಳು ಹೃದಯಗಳನ್ನು ನಾಟುವಂತಿದ್ದವು. ನೋವಿನಿಂದ ಬೆಂದ, ಮಾಂಸ ಮತ್ತು ರಕ್ತಗಳ ವಿರೂಪಗೊಂಡ ಮಾನವಾಕಾರಗಳು ಆಗಿದ್ದವು.[೧೩] ಪಾರ್ಕಿನ ಕುರ್ಚಿಗಳ ಮೇಲೆ ಬಿಕಾರಿಗಳಂತೆ, ಅಲಮಾರಿಗಳಂತೆ, ನಿಸ್ತೇಜಗೊಂಡಂತಿರುವ ರೂಪಗಳ ಕಬ್ಬಿಣ– ಕಂಚು ಮಾಧ್ಯಮಗಳ ಶಿಲ್ಪಗಳೂ ಅವರಿಂದ ಪ್ರದರ್ಶನಗೊಂಡವು. ೧೯೮೬ ರಲ್ಲಿ ಚಪ್ಪಡಿ ಕಲ್ಲುಗಳನ್ನು ನೆನಪಿಸುವ ಹೊಸ ರೂಪ ಕಲ್ಪನೆಯ ಶಿಲ್ಪಗಳು ಅವರಿಂದ ಮೂಡಿಬಂದಿವೆ. 'ವಿಂಡ್ಸರ್ ಮ್ಯಾನರ್ ಹೊಟೆಲಿನ ಆವರಣದಲ್ಲಿ ಅಮೂರ್ತ ಶಿಲ್ಪಗಳು ಅವರಿಂದ ಪ್ರದರ್ಶನಗೊಂಡಿವೆ. ಇನ್ ಕನ್ವರ್‌ಸೇಷನ್ ಜೋಡಿ ಶಿಲ್ಪಗಳು ಇಂದಿಗೂ ನೋಡುಗರನ್ನು ತಮ್ಮತ್ತ ಸೆಳೆಯುತ್ತವೆ. ಶಿಲೆಯ ಸಹಜ ಒರಟು ಮೈವಳಿಕೆಗಳ ಜತೆ ಜತೆಗೆ ಹೊಳಪನ್ನು ದುಡಿಸಿಕೊಂಡ ಈ ಶಿಲ್ಪ ಆದಿಮ ಅಂಶಗಳ ಸತ್ವಗಳೊಂದಿಗೆ ಸಮಕಾಲೀನತೆಯನ್ನು ಲೇಪಿಸಿಕೊಂಡಿರುವ ವಿಕೃತಿ ಸೌಂದರ್ಯದ ಅನುಭವ ನೀಡುವಂತಹುದಾಗಿದೆ.

ಯುಸೂಫ್ ಪ್ರಿಂಟ್, ರೇಖಾಚಿತ್ರ, ವರ್ಣಚಿತ್ರ, ಶಿಲ್ಪ, ಇನ್‌ಸ್ಟಾಲೇಷನ್ ಅಭಿವ್ಯಕ್ತಿ ಹೀಗೆ ಹಲವು ಮಾಧ್ಯಮಗಳಲ್ಲಿ ಕಲಾಕೃತಿಗಳನ್ನು ರಚಿಸುತ್ತಾ ಬಂದವರು. ಒಂದು ಮಾಧ್ಯಮದಿಂದ ಇನ್ನೊಂದು[೧೪] ಮಾಧ್ಯಮಕ್ಕೆ ಸರಳವಾಗಿ ಜಿಗಿಯುವುದರಲ್ಲಿ ನಿಸ್ಸೀಮರೆಂದರೆ ತಪ್ಪಲ್ಲ. ಮರದ ಮಾಧ್ಯಮದ ವಿಕೃತಿ ರೂಪದ ಮುಖಗಳೂ ಅವರಿಂದ ರಚನೆಗೊಂಡು ಗಮನ ಸೆಳದಿವೆ. ಪ್ರತಿಷ್ಠಾಪನ ಅಭಿವ್ಯಕ್ತಿಗಳೂ ಅವರಿಂದ ಮೂಡಿಬಂದಿವೆ. ೨೦೦೧ ಕೈರೋ ಅಂತರ್‌ರಾಷ್ಟ್ರೀಯ ಬೈನಾಲೆಯಲ್ಲಿ ಪ್ರದರ್ಶಿತಗೊಂಡ ಅವರ ಸೃಷ್ಟಿ ಈ ದೃಷ್ಟಿಯಿಂದ ಗಣನೀಯವಾದುದು. ಮರದ ಉಬ್ಬು, ರಚನೆಗಳ ಮೇಲೆ ಆಕ್ರಲಿಕ್ ಬಣ್ಣಗಳು, ಕೊಲಾಜ್

ಹಾಗೂ ಮರಳಿನ ಮೇಲೆ ತಾಮ್ರದ ಉಬ್ಬು ರೂಪುಗಳು ಇಲ್ಲಿದ್ದವು. ಗ್ಯಾಲರಿಯ ಗೋಡೆ ಹಾಗೂ ನೆಲಗಳ ಅವಕಾಶದಲ್ಲಿ ಈ ಪ್ರತಿಷ್ಠಾಪನ ಆವರಸಿಕೊಂಡಿದ್ದಿತು. ಸಾರ್ವಜನಿಕ ಶಿಲ್ಪಗಳನ್ನು ಯುಸೂಫ್ ರಚಿಸಿರುವರು. ಬೆಂಗಳೂರಿನ ಹಲವೆಡೆ ಇಂಥ ಶಿಲ್ಪಗಳು ಕಾಣಬಹುದು. ಭಿತ್ತಿ ಶಿಲ್ಪಗಳೂ ರಚನೆಗೊಂಡಿವೆ. ಹೊಸೂರು ರಸ್ತೆಯ 'ಬಯೋಕಾನ್' ನಲ್ಲಿನ 'ಅಪ್ಲೈಡ್ ಡಿ.ಎನ್.ಎ. ಶಿಲ್ಪ ಹಾಗೂ ಹೆಚ್ಚೂ ಕಡಿಮೆ ಇದೇ ದೃಷ್ಟಿಯ ಎಂ.ಜಿ. ರಸ್ತೆಯಲ್ಲಿ ಮತ್ತೊಂದು ಶಿಲ್ಪ ಗಮನಾರ್ಹವಾಗಿವೆ.

ಹೊಸೂರು ರಸ್ತೆಯಲ್ಲಿನ ಶಿಲ್ಪ ಬೌದ್ಧಿಕ ಕಸರತ್ತಿಗೆ ಗ್ರಾಸವಾದರೆ ಎಂ. ಜಿ. ರಸ್ತೆಯಲ್ಲಿನ ಶಿಲ್ಪ ಹೃದಯಗಳನ್ನು ತಣಿಸುವಂಥದಾಗಿದ್ದು, ಎರಡೂ ಯುಸೂಫ್‌ರ ಮಹತ್ವಾಕಾಂಕ್ಷೆಗೆ ಸಾಕ್ಷಿಯಾಗಿವೆ.

ಸಾಮಾಜಿಕ ವ್ಯವಸ್ಥೆಯ ಬಗೆಗೆ ತೀವ್ರವಾಗಿ ಸ್ಪಂದಿಸಿ, ಎಡಪಂಥೀಯ ಧೋರಣೆಯನ್ನು ಮುಖ್ಯವಾಗಿ ಹೊಂದಿ ದೊಡ್ಡ ಅಳತೆಯ ಶಿಲ್ಪಗಳನ್ನು ರಚಿಸಿದವರು ಜಾನ್ ದೇವರಾಜ್ ಅವರು. ವ್ಯವಸ್ಥೆಯಲ್ಲಿನ ಸಂಕಟ, ತಳಮಳ, ನೋವು– ನಲಿವುಗಳನ್ನು ಬಂಡಾಯದ ನೆಲೆಯಲ್ಲಿ ಅದರಲ್ಲೂ ವಿಕೃತ ರೂಪದಲ್ಲಿ ಅಭಿವ್ಯಕ್ತಿಸುವ ಮೂಲಕ ತಮ್ಮ ಛಾಪು ಮೂಡಿಸಿದವರು. ತಮ್ಮ ವಿಶಿಷ್ಟ ರೀತಿಯ ಅಭಿವ್ಯಕ್ತಿಗೆ ಮರ, ಶಿಲೆ, ಗಾಜು, ಟೆರಾಕೊಟ, ಸಿರಾಮಿಕ್ಸ್ ಮೊದಲಾದ ಮಾಧ್ಯಮಗಳನ್ನು ದೇವರಾಜ ದುಡಿಸಿಕೊಂಡಿರುವರು.[೧೫] ಸಾಮಾಜಿಕ ಬದಲಾವಣೆ ಎಂಬುದು ದೃಶ್ಯಕಲೆಯಿಂದ ಸಾಧ್ಯವೆ? ಅದರಲ್ಲೂ ಶಿಲ್ಪಕಲೆಯಿಂದ! ಎಂಬುದು ಜಿಜ್ಞಾಸೆಯ ವಿಷಯ; ಆದರೂ ಅಂಥ ಉದ್ದೇಶವನ್ನಿಟ್ಟುಕೊಂಡು ಶಿಲ್ಪಗಳನ್ನು ರಚಿಸಲಾರಂಭಿಸಿದವರು. ಜಾನ್ ದೇವರಾಜ್‌ರು. ೧೯೭೭ ರ ಆಂಧ್ರದ ಚಂಡಮಾರುತ ನಂತರ ಹೆಚ್ಚಾಗಿ ಸುದ್ದಿಗೆ ಗ್ರಾಸವಾದವರು. ಮಾನವೀಯ ಕಾಳಜಿಯನ್ನು ತುಂಬಿಕೊಂಡಿರುವ ಅವರ ಅಭಿವ್ಯಕ್ತಿಗಳ ಜೀವಧ್ವನಿಗೆ ಶೋಷಣೆಗೆ ಒಳಗಾದವರ ಸಂಕಟ, ತಳಮಳ ಅವರ ಹಲವು ಅಭಿವ್ಯಕ್ತಿಗಳಲ್ಲಿವೆ. ಸೋದರನಾಳೆಗಳಿಗಾಗಿ ನಿರೀಕ್ಷೆಯೂ ಇದೆ. ೧೯೮೨ರ 'ಎಲ್ ಸಾಲ್ವೆಡಾರ್', ೧೯೮೯ರ 'ಟು ಸೀ ಆರ್ ನಾಟ್ ಟು ಸೀ' ಕ್ರಮವಾಗಿ ಮರ ಹಾಗೂ ಮೃದು ಶಿಲೆಯ ಶಿಲ್ಪಗಳು. ೧೯೯೩ರ 'ಸನ್ ಶೈನ್ ಆನ್ ದಿ ಅರ್ಥ್' ಪ್ರದರ್ಶನದಲ್ಲಿದ್ದ ಹಲವು ಶಿಲ್ಪಗಳು ಗಂಭೀರವಾದ ಅನುಭವ ನೀಡುವಂಥವು. ಗಾಜಿನ ಮಾಧ್ಯಮದ ಶಿಲ್ಪಗಳೂ ಗಮನಿಸುವಂತಿವೆ.

'ಆನ್ ಫೈರ್' ಶಿಲ್ಪ ಇಲ್ಲಿ ಉಲ್ಲೇಖಾರ್ಹ. ಸಿರಾಮಿಕ್ ಮಾಧ್ಯಮವನ್ನು ಅವರು ದುಡಿಸಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ಸುವರ್ಣ ಕರ್ನಾಟಕ ಶಿಲ್ಪವನದಲ್ಲಿರುವ ಅವರ ಶಿಲ್ಪ ಹಲವು ಭಾಗಗಳ ಶಿಲ್ಪಸಮೂಹ. ಸಮಕಾಲೀನ, ಜಾಗತೀಕ ಆರ್ಥಿಕ ಅಬ್ಬರದ ಪರಿಣಾಮಗಳ ಫಲವೇ ಅಲ್ಲದೆ ಸಾಮಾನ್ಯರ ನೋವು ನಲಿವುಗಳನ್ನು ಬಿಂಬಿಸುತ್ತದೆ. ದೇವರಾಜರ ಒರಟು ಶೈಲಿಯ ನಿರ್ವಹಣೆಯನ್ನು ನೆನಪಿಸುವಂತ ಶಿಲ್ಪವಿದು. ಜಾನ್ ದೇವರಾಜ್ ಟೆರಾಕೊಟ್ಟ ಮಾಧ್ಯಮದಲ್ಲಿ ಎತ್ತರದ ಮತ್ತು ಮಹತ್ವಾಕಾಂಕ್ಷೆಯ ಶಿಲ್ಪವೊಂದನ್ನು

ರಚಿಸಿ ಗಮನ ಸೆಳೆದಿರುವುದೂ ಇದೆ. ಕನ್ನಡದ ವಿಶಿಷ್ಟ ಸಮಕಾಲೀನ ಶಿಲ್ಪಿಗಳಲ್ಲಿ ಬಹಳ ಪ್ರಮುಖವಾಗಿ ಕಾಣುತ್ತಾರೆ ದೇವರಾಜ್.

ಶ್ಯಾಂಸುಂದರ ಅಭಿವ್ಯಕ್ತಿಗೆ ಹಲವು ಮಾಧ್ಯಮಗಳನ್ನು ಅರಸಿಹೊರಟವರು. ಪ್ರಿಂಟ್, ವರ್ಣಚಿತ್ರ ಹಾಗೂ ಶಿಲ್ಪ ಹೀಗೆ ದೃಶ್ಯಕಲೆಯ ಹಲವು ಪ್ರಕಾರಗಳು. ಇವರ ಬಹುಪಾಲು ರಚನೆಗಳಲ್ಲಿ ಬದುಕಿನ ವಿರೂಪಗೊಂಡ ಮುಖಗಳು ವಿಕೃತಸೌಂದರ್ಯವನ್ನು ಚೆನ್ನಾಗಿ ದುಡಿಸಿಕೊಳ್ಳಲ್ಪಟ್ಟವುಗಳಾಗಿವೆ.[೧೬]

'ಹಸಿವಿನ ಮುಖಗಳು' ಪರಿಣಾಮಕಾರಿ ಸೃಷ್ಟಿಗಳು. ಈ ಮುಖಗಳ ಸರಣಿ ಕಲಾಕೃತಿಗಳು ಅಲ್ಯೂಮಿನಿಯಂ ಹಾಗೂ ಮರದ ಮಾಧ್ಯಮಗಳಲ್ಲಿ ಅರಳಿವೆ.[೧೭] 'ಕಬಾಬ್' ಶೀರ್ಷಿಕೆಯ ಶಿಲ್ಪ ಕೃತಿಗಳಲ್ಲಿ ಬದುಕಿನ ಕ್ರೂರ ಕಟು ಅನುಭವಗಳ ಹಲವು ಪದರುಗಳನ್ನು ಕಾಣಬಹುದು. ಕೆಲವು ಶಿಲ್ಪಗಳ ಅಭಿವ್ಯಕ್ತಿ ಕ್ರಮ, ಮೈವಳಿಕೆ ನಿರ್ವಹಣೆ ಅತ್ಯಂತ ಒರಟು ಎನಿಸಿದರೂ ವಸ್ತುವಿಗೆ ಪೂರಕವಾಗಿಯೇ ಇದ್ದು ಮಾನಸಿಕ ದೂರವನ್ನು ಕಾಯ್ದುಕೊಂಡಿವೆ. ಪರಿಣಾಮಕಾರಿಯಾಗಿವೆ. ಈ ಬಗೆಯ ಹಲವು ಶಿಲ್ಪಗಳನ್ನು 'ಕಲಾಯಾತ್ರಾ' ಗ್ಯಾಲರಿಯಲ್ಲಿ ಪ್ರದರ್ಶನಗೊಂಡಿದ್ದವು. ಮರದ ಮಾಧ್ಯಮವನ್ನೇ ದುಡಿಸಿಕೊಂಡಿದ್ದ ಹಲವು ಶಿಲ್ಪಗಳನ್ನು ನವದೆಹಲಿಯಲ್ಲಿ ಪ್ರದರ್ಶಿಸಿದರು.[೧೯] ನಗರೀಕರಣದ ಬದುಕಿನ ಹಲವು ಮುಖಗಳನ್ನು ಪರಿಣಾಮಕಾರಿಯಾಗಿ ಶಿಲ್ಪಿಸಿದ ಅಭಿವ್ಯಕ್ತಿಗಳಾಗಿದ್ದವು. ಬೆಂಗಳೂರಲ್ಲಿ ಪ್ರದರ್ಶನಗೊಂಡ ಶಿಲ್ಪಗಳೂ ಮರದವೇ ಆಗಿದ್ದರೂ ಜನಪದ ಮತ್ತು ಧಾರ್ಮಿಕ ಸತ್ವಗಳನ್ನು ತುಂಬಿಕೊಂಡ ರಚನೆಗಳಾಗಿದ್ದವು. ಜಾನ್ ದೇವರಾಜ್‌ರನ್ನು ಬಿಟ್ಟರೆ ಸುತ್ತಲಿನ ಬದುಕಿಗೆ ತೀವ್ರವಾಗಿ ಸ್ಪಂದಿಸುವ ಶಿಲ್ಪಗಳು ಶ್ಯಾಂ ಅವರವು ಎಂದರೆ ತಪ್ಪಲ್ಲ.

ಟೆರಾಕೊಟ್ಟ ಮಾಧ್ಯಮದ ಶಿಲ್ಪವೊಂದಕ್ಕೆ (ಹಂದಿಗಳು) ಟ್ರಿನಾಲೆ ಪ್ರಶಸ್ತಿ ಪಡೆದಿರುವ ಎನ್. ಪುಷ್ಪಮಾಲಾ ಹಲವಾರು ಪರಿಣಾಮಕಾರಿ ಶಿಲ್ಪಕಲಾಕೃತಿಗಳನ್ನು ರಚಿಸಿ ರಾಷ್ಟ್ರದ ದೃಶ್ಯಕಲಾವಲಯದ ಗಮನ ಸೆಳೆದ ಮಹಿಳಾ ಕಲಾವಿದೆ.[೫೫] ಈಕೆ ೧೯೭೭- ೮೫ ರ ನಡುವೆ ಬರೋಡದಲ್ಲಿ ಶಿಲ್ಪಕಲೆಯ ಮೂಲ ಪಾಠಗಳನ್ನು ಸರಿಯಾಗಿ ಕಲಿತವರು. ಆದರೆ ಅದಕ್ಕೂ ಮೊದಲು ಬೆಂಗಳೂರಲ್ಲಿ ಬಾಲನ್ ನಂಬಿಯಾರ್ ಅವರಲ್ಲಿ ಚಿತ್ರಕಲೆಯ ಆರಂಭಿಕ ಪಾಠಗಳನ್ನು ಕೇಳಿಸಿಕೊಂಡಿರುವರು. ಶಿಲ್ಪಿಗಳಾದ ರವೀಂದ್ರ ರೆಡ್ಡಿ, ಅಲೆಕ್ಸ್ ಮ್ಯಾಥ್ಯೂ, ತೃಪ್ತಿ ಪಟೇಲ್ ಅವರುಗಳ ಜೊತೆಜೊತೆಯಲ್ಲೇ ಕಲಾಕೃತಿಗಳನ್ನು ಸೃಷ್ಟಿಸಿ ಸಾಕಷ್ಟು ಅನುಭವ ಪಡೆದವರು. ಕೆ. ಜಿ. ಸುಬ್ರಮಣೀಯನ್, ಭೂಫನ್ ಖಾಖರ್ ಅವರುಗಳ ಪ್ರಭಾವವೂ ಇವರ ಕಲಾದೃಷ್ಟಿಯನ್ನು ಸ್ಪಷ್ಟಗೊಳಿಸಿತ್ತು. ಅಂತೆಯೇ ಪುಷ್ಪಮಾಲಾ ಸುತ್ತಲಿನ ಎಲ್ಲವನ್ನೂ ವಿಭಿನ್ನ ದೃಷ್ಟಿಕೋನದಿಂದ ಕಾಣುವ, ಗ್ರಹಿಸುವ ಮತ್ತು ತಕ್ಕ ಮಾಧ್ಯಮಗಳಲ್ಲಿ ಅಭಿವ್ಯಕ್ತಿಸುವ ಪ್ರತಿಭೆಯನ್ನು ಹೊಂದಿರುವರು. ಹಾಗಾಗಿಯೆ ಅವರ ಕೃತಿಗಳು ಅಪೂರ್ವ ಹೊಳಹುಗಳನ್ನು ಅನುಭವಗಳನ್ನು ನೀಡುವಂತಹವುಗಳಾಗಿ ಗಮನಾರ್ಹವಾಗಿವೆ. ೧೯೮೩- ೮೫ರ ನಡುವಿನ ಅವರ ಟೆರಾಕೊಟ್ಟ ರಚನೆಗಳು ಭಾರತೀಯ ಪರಂಪರೆ ಹಾಗೂ ಜೀವಧ್ವನಿಗಳನ್ನು ಅರಗಿಸಿಕೊಂಡು ಮೈದಳೆದಿವೆ. ಇಲ್ಲದಿದ್ದಲ್ಲಿ ಅವು ತಮ್ಮ ಸಮಕಾಲೀನ ಸಂದರ್ಭ ಮತ್ತು ಕಲಾವಿದೆಯ ವಿಶಿಷ್ಟ ದೃಷ್ಟಿ ಹಾಗೂ ತಾಂತ್ರಿಕ ನಾವಿನ್ಯತೆಯಿಂದ ವೀಕ್ಷಕರನ್ನು

ಬೆರಗುಗೊಳಿಸುವಲ್ಲಿ ಯಶಸ್ಸು ಕಾಣುತ್ತಿರಲಿಲ್ಲ. ಟೆರಾಕೊಟ್ಟ ಮಾಧ್ಯಮದ 'ಪಿಗ್', ಅಡೊಲೆಸೆಂಟ್, ಶಿಲ್ಪ ಸರಣಿಗಳು, 'ಗರ್ಲ್ ವಿತ್ ಸೆಲ್', 'ವುಮನ್ ಅಡ್ಜೆಸ್ಟಿಂಗ್ ಬ್ರಾ', 'ದಿ ಲಾಸ್ಟ್ ಗೇಮ್', ಹಾಗೂ ಫೈಬರ್ ಮಾಧ್ಯಮದ ಹಲವಾರು ವಿಶಿಷ್ಟ ಶಿಲ್ಪಗಳು ಹೊಸ ರೀತಿಯ 'ಅನುಭವ' ನೀಡುವಂತಹ ಸೃಷ್ಟಿಗಳಾಗಿವೆ. ಹಾಸ್ಯ, ವಿಡಂಬನೆ, ವ್ಯಂಗ್ಯ ಭಾವಗಳನ್ನು ತುಂಬಾ ಪರಿಣಾಮಕಾರಿಯಾಗಿ ಈ ಶಿಲ್ಪಿ ದುಡಿಸಿಕೊಂಡಿರುವರು. ಪ್ರದರ್ಶನವನ್ನೊಳಗೊಂಡಂತೆ ಎಲ್ಲವನ್ನು ನೋಡುವ, ಗ್ರಹಿಸುವ ಅಭಿವ್ಯಕ್ತಿಸುವ ರೀತಿಗಳ ಸಾಧ್ಯತೆಗಳನ್ನೂ ಮೀರುವ ಮತ್ತು ಕೆಲವೊಮ್ಮೆ ಧಿಕ್ಕರಿಸುವ ಈ ಕಲಾವಿದೆ ಕೆಲವೊಮ್ಮೆ ವಿಲಕ್ಷಣ ಎನ್ನಿಸುವರು.[೨೦]

ಹೊರರಾಜ್ಯದಿಂದ ಬಂದು ಬೆಂಗಳೂರಿನಲ್ಲಿ ನೆಲಸಿರುವ ಬೌನಿ ಮತ್ತು ನಾರಾಯಣ ಸೂತ್ರದಾರ ಅವರು ಶಿಲ್ಪಕಲಾ ಪ್ರಕಾರವನ್ನೇ ಅಭಿವ್ಯಕ್ತಿಗೆ ದುಡಿಸಿಕೊಳ್ಳುತ್ತಿರುವ ನವ್ಯಶಿಲ್ಪಿಗಳು, ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ[೨೧] ಶಿಲ್ಪಕಲೆಯನ್ನು ಕಲಿಸುತ್ತಲೇ ಇಲ್ಲಿನವರೇ ಆಗಿರುವರು.

ಈ ಇಬ್ಬರೂ ಶಾಂತಿನಿಕೇತನದಲ್ಲಿ ಶಿಲ್ಪಕಲೆಯನ್ನು ಕಲಿತು ಬಂದವರು. ಶಿಲ್ಪಕಲೆಗೆ ತಮ್ಮನ್ನು ಒಪ್ಪಿಸಿಕೊಂಡಿರುವ ಬೌನಿ ಚಿಕ್ಕವಯಸ್ಸಲ್ಲಿ ಗಮನಾರ್ಹ ಶಿಲ್ಪಗಳನ್ನು ಸೃಷ್ಟಿಸಿರುವರು. ಬೃಹತ್ ಆಕಾರದ ವ್ಯಕ್ತಿ ಶಿಲ್ಪಗಳ ರಚನೆಗೆ ಬೌನಿ ಕರ್ನಾಟಕದಲ್ಲಿ ಮುಂಚೂಣೀಯಲ್ಲಿರುವರು. ಮಧ್ಯ ಪ್ರದೇಶದ ರೇವಾದ ಅರಮನೆಯ ಆಸ್ಥಾನ ಶಿಲ್ಪಿ-ತಂದೆಯ ಪ್ರಭಾವ ಹಾಗೂ ಜೆ.ಕೆ. ಮ್ಹಾತ್ರೆಯವರ ಶಿಲ್ಪಗಳ ಸಾಮಿಪ್ಯದಿಂದ ಶಿಲ್ಪಕಲೆಯ ಎಲ್ಲ ಸಾಧ್ಯತೆಗಳನ್ನು ಕಲಿತವರು ಬಳಿಕ ಶಾಂತಿನಿಕೇತನದಲ್ಲಿ ಪಶ್ಚಿಮದವರ ಸತ್ವಗಳನ್ನು ಅರಗಿಸಿಕೊಂಡು ದೇಶೀ ಸತ್ವಗಳೊಂದಿಗೆ ಶಿಲ್ಪಿಸಿದವರು ಬೌನಿ. ಡಾನ್ಸರ್ಸ್, ಬರ್ಡ್ಸ್ ಥ್ರೂ ವಿಂಡೋ ಶಿಲ್ಪ, ಕಿಟಕಿಯ ಮೂಲಕ ಒಳ-ಹೊರ ಹಾರಾಡುವ ಮತ್ತು ಕುಳಿತು ವಿಶ್ರಮಿಸುತ್ತಿರುವ ಹಕ್ಕಿಗಳ ಕಲ್ಪನೆ ಶ್ಲಾಘನೀಯ ರಚನೆಗಳು, ಡಾನ್ಸರ್ಸ್ ಶಿಲ್ಪ, ಬಸ್ತಾರ್‌ನ ಆದಿವಾಸಿಗಳ ನೃತ್ಯದ ಲಯಬದ್ಧತೆಯನ್ನು ಸಮಕಾಲೀನವಾಗಿ ಅಭಿವ್ಯಕ್ತಿಸಿದ ಸೃಷ್ಟಿ, ಕಂಚಿನ ಬೃಹತ್ ಶಿಲ್ಪಗಳೂ ಸಮಕಾಲೀನವಾಗಿಯೂ ಭವ್ಯವೆನಿಸುತ್ತವೆ.

ನಾರಾಯಣ ಸೂತ್ರದಾರರ ಶಿಲ್ಪಗಳೂ ಹಲವು ಮಾಧ್ಯಗಳಲ್ಲಿ ಮೂಡಿಬಂದಿದೆ. ಕೌಶಲ ಪ್ರದಾನವಾಗಿದ್ದು ರಮ್ಯತೆಯಿಂದ ಕೂಡಿರುವ ಇವರ ಬಹುಪಾಲು ಶಿಲ್ಪಗಳು ಹೃದಯ ಗಮ್ಯ, ಪಶ್ಚಿಮದ ಎಲ್ಲ ಪ್ರಭಾವಗಳನ್ನು, ಆಗುಹೋಗುಗಳನ್ನು ಅರಗಿಸಿಕೊಂಡು ಆ ಪ್ರಭಾವಗಳ ಸೂತ್ರಗಳನ್ನು ಮುಂದುವರಿಸಲು ಯತ್ನಿಸಿದ್ದವರಂತೆ ಅಭಿವ್ಯಕ್ತಿಸಿರುವರು. ಕಪ್ಪು ಶಿಲೆ, (ಮೃದು ಶಿಲೆ)ಯಲ್ಲಿ ಜೀವನ ಸೌಂದರ್ಯದ ಪಯಣದ ಹಲವು ಮಗ್ಗಲುಗಳನ್ನು ಮೋಹಕವಾಗಿ ಶಿಲ್ಪಗಳಲ್ಲಿ ಬಿಂಬಿಸಿರುವರು. 'ಗ್ರೋವಿಂಗ್' ಶೀರ್ಷಿಕೆಯ ಶಿಲ್ಪಗಳು ಆಕರ್ಷಕ- ರಮ್ಯ ಅನುಭವವನ್ನು ನೀಡುವಂಥವು, ಒರಟು ಶಿಲೆಯಲ್ಲಿ ಮೂಡಿದ ಕೋಮಲ ಮತ್ತು ಮಾನವೀಯ ಭಾವನೆಗಳ ಶಿಲ್ಪಗಳೂ ಕೆಲವು ವಿಶಿಷ್ಟ ಅನುಭವ ನೀಡುತ್ತವೆ. ಶಿಲ್ಪ ಸೃಷ್ಟಿ ಪ್ರಕ್ರಿಯೆಯನ್ನು ಸಂಗೀತದ ಮೂಲದ ಧ್ಯಾನದಂತೆ ಬಳಸಿಕೊಳ್ಳುತ್ತಿರುವ ಇವರು 'ಫಾರ್ಮ್ ಆಂಡ್ ಫೀಲಿಂಗ್' ವ್ಯಕ್ತಿಶಿಲ್ಪಗಳ ಮೂಲಕ ಜೀವನ ಸಂಪತ್ತನ್ನು ತೆರೆದು ತೋರುವ ಪ್ರಯತ್ನ ಮಾಡುತ್ತಾರೆ. ಕೈಗೆ ಸಿಕ್ಕ ಶಿಲಾರೂಪಗಳನ್ನು

ಅವುಗಳ ಸಹ ಒರಟುತನವನ್ನು ಹಾಗೆಯೇ ಉಳಿಸಿಕೊಂಡೇ ದುಡಿಸಿಕೊಂಡಿರುವುದು ಅಪರೂಪ. ದೂರದ ನೋಟಕ್ಕೆ ನವಿರು ಲಾಸ್ಯದ ನುಣುಪಾದ ಶಿಲ್ಪಗಳಾಗಿ ಕಂಡರೂ ಹತ್ತಿರದಿಂದ ನೋಡಿ– ಸ್ಪರ್ಶಿಸಿ ಅನುಭವಿಸಿದಂತೆಲ್ಲ ಶಿಲೆಯ ಸಹಜ ಒರಟು, ಉಳಿಯಿಂದ ನಿರ್ಮಿಸಿದ ದೊಗರು ಹಾಗೂ ರೇಖಾತ್ಮಕ ಮೈವಳಿಕೆಗಳು ಆಸ್ವಾದಕರನ್ನು ಸಂತೋಷ ಪಡಿಸುವಲ್ಲಿ ಯಶಸ್ಸು ಕಾಣುತ್ತವೆ. 'ಕಪಲ್ ಇನ್ ಟೆನ್ಸನ್, ಗ್ರೋವಿಂಗ್ ರೊಮ್ಯಾಂಟಿಕಲಿ' ಯಂತಹ ಶಿಲ್ಪಗಳನ್ನು ನೋಡಬಹುದು. ವೀಕ್ಷಕರನ್ನು ಸೆಳೆದು ಸುತ್ತಲೂ ನೋಡುಗನಂತ, ಸ್ಪರ್ಶಿಸುವಂತೆ ಪೇರಪಿಸುವಂಥವು ರಮ್ಯ ಕಾವ್ಯ ಭಾವಗಳಂತೆ ಈ ಕೆಲ ಶಿಲ್ಪಗಳು೨೦೦೭ ರ ಅವರ 'ಸ್ಕಲ್ಪಚರ್ ಆಫ್ ಬೈಡಿಂಗ್' ಶಿಲ್ಪ ಸಮೂಹ ಚಿಕ್ಕದವುಗಳಾಗಿದ್ದರೂ ಮಹತ್ವಾಕಾಂಕ್ಷೆಯ ಗುಣಗಳನ್ನು ಹೊಂದಿರುವಂಥವು. ಶಿಲ್ಪಗಳಲ್ಲಿ ಅದರಲ್ಲೂ ಶಿಲಾಶಿಲ್ಪಗಳಲ್ಲಿ ರೇಖಾತ್ಮಕ ಮೈವಳಿಕೆಯನ್ನು ದುಡಿಸಿಕೊಂಡಿರುವುದು ಇವರ ವಿಶೇಷತೆ. ಲೋಹದ ತಂತಿಗಳನ್ನು ರೇಖಾರೂಪದಲ್ಲಿ ಮೂರು ಆಯಾಮಗಳ ಶಿಲ್ಪರೂಪಗಳ ಕಲ್ಪನೆಗೆ ಪೂರಕವಾಗುವಂತೆ ಸಮಕಾಲೀನ ತಾಂತ್ರಿಕ ಸಾಧ್ಯತೆಗಳ ನೆರವಿನೊಂದಿಗೆ ರಚಿಸಿರುವುದು ಗಣನೀಯವಾದುದು.

ಬರೋಡದಲ್ಲಿ ದೃಶ್ಯಕಲೆಯನ್ನು ಕಲಿತ ನಟರಾಜ ಶರ್ಮಾ ಹಲವು ಮಾಧ್ಯಮಗಳಲ್ಲಿ ಕಲಾಕೃತಿಗಳನ್ನು ಸೃಷ್ಟಿಸಿದವರು.[೨೨] ತಮ್ಮ ಸ್ವಭಾವ, ವ್ಯಕ್ತಿತ್ವ ಹಾಗೂ 'ಅಹಂ' (ಇಗೋ) ಗಳನ್ನು ತಾವೇ ಕೆಣಕಿ ಅಣುಕು ಮಾಡುವ ವಿಲಕ್ಷಣ ಸ್ವಬಾವದವರು. ಚಿತ್ರಕಲೆಯೊಂದಿಗೆ ವಿಶಿಷ್ಟ ಶಿಲ್ಪಗಳನ್ನು ಸೃಷ್ಟಿಸಿರುವ ನಟರಾಜ ಶರ್ಮ 'ಮಿಶ್ರಮಾಧ್ಯಮದ ಕೆಲವು ಶಿಲ್ಪಗಳ ಸರಣಿಯಿಂದಾಗಿ ಆಸ್ವಾದಕರನ್ನು ಕಾಣುತ್ತಾರೆ. ೨೦೦೭ರ ಸಂದರ್ಭದಲ್ಲಿ ಉಸಿರುಗಟ್ಟಿಸುವ ನಮ್ಮ ಸಂದರ್ಭದ ಇನ್‌ಸ್ಟಾಲೇಷನ್ ಅಭಿವ್ಯಕ್ತಿಗೂ ಇವರ ಕೊಡುಗೆ ಸಂದಿದೆ.

ಬಾಬು ಈಶ್ವರ ಪ್ರಸಾದ್ ಚಿತ್ರಕಲೆಯಲ್ಲಿ ಮಿಂಚುತ್ತಿರುವ ಹೆಸರು, ಆದರೂ ವಿಶಿಷ್ಟ ಚಿಂತನೆಗಳಿಂದ ಕೂಡಿದ ಶಿಲ್ಪಗಳೂ ಇವರಿಂದ ರಚನೆಯಾಗಿವೆ. ಮನುಷ್ಯನ ಅಸಹಾಯಕತೆ, ಸಾವು. ನೋವಿನ ಅನುಭವಗಳು ದಟ್ಟವಾಗಿ ಗರ್ಭೀಕರಿಸಿಕೊಂಡಿರುವ ಶಿಲ್ಪಗಳು ಅನೇಕ ಶಿಲ್ಪಗಳಲ್ಲಿ ಅವರ ಸ್ಯಾಕರೇಸ್, ಪಾಮೆಸ್ಟರ್, ರೇಸಿನ್ ನಂತಹ ಶೀರ್ಷಿಕೆಯ ಶಿಲ್ಪಗಳು ಗಮನಾರ್ಹ. ಆರ್. ರಾಜು ಪಶ್ಚಿಮದ ಪ್ರಭಾವವನ್ನು ಅರಗಿಸಿಕೊಂಡು ಪ್ರಯೋಗಾತ್ಮಕವಾಗಿ ಕೃತಿಗಳನ್ನು ರಚಿಸಿರುವರು. ಕೆ. ಜಿ. ಅರುಣ್‌ರಂತ ಶಿಲ್ಪಿಗಳು ೧೯೮೮ರ ಸಂದರ್ಭದಲ್ಲಿ ಗಮನಾರ್ಹವಾದ ರೀತಿಯಲ್ಲಿ ಬಿಂಬಿತವಾದರು. ಕೊಡಗಿನ ಮೂಲದ ಅನುಭವಗಳು ಮಾನವೀಯ ಭಾವಗಳನ್ನು ಹೊತ್ತು ಅವರ ಶಿಲ್ಪಗಳಲ್ಲಿ ಹರಿದುಬಂದವು. ಅಭಿವ್ಯಕ್ತಿಯ ವಸ್ತುವಿಗೆ ಪೂರಕವಾಗಿ ನಿರ್ವಹಿಲ್ಪಟ್ಟವು. ಮೈವಳಿಕೆಗಳಿಂದಾಗಿ ಶಿಲ್ಪಗಳು ಅರ್ಥಪೂರ್ಣವನಿಸುತ್ತವೆ.

ಉಮೇಶ್ ಮದ್ದನಹಳ್ಳಿ ಮಲ್ಟಿಮಿಡಿಯಾ ಮೂಲಕ ಅಭಿವ್ಯಕ್ತಿಸುತ್ತ ತಮ್ಮ ಶಿಲ್ಪಕಲಾಕೃತಿಗಳು ಹಾಗೂ ಇನ್‌ಸ್ಟಾಲೇಷನ್‌ಗಳಲ್ಲಿ ತಮ್ಮನ್ನೇ ತಾವು ನೋಡಿಕೊಳ್ಳುತ್ತಿರುವರೆನಿಸುತ್ತದೆ. ಅವರದೇ ಆದ ದೃಷ್ಟಿ– ಧೋರಣೆಗಳು ಅವರ ಅಭಿವ್ಯಕ್ತಿಗಳಲ್ಲಿ ಕಾಣಿಸಿಕೊಳ್ಳುವ ಕ್ರಮದಲ್ಲಿ ಸಮಕಾಲೀನ ಜೀವದ್ಧ್ವನಿಯ ಮಹತ್ವಾಕಾಂಕ್ಷೆಯ

ಹಾಜರಿಯಿದೆ. ಬಹುಪಾಲು ಗ್ಯಾಲರಿಗಳಾಚೆ, ಸ್ಥಳ ನಿರ್ದಿಷ್ಟ ಕಾಲ ನಿರ್ದಿಷ್ಟ' ಅಭಿವ್ಯಕ್ತಿಗೆ ತಮ್ಮನ್ನು ಒಗ್ಗಿಕೊಂಡಿದ್ದಾರೆ ಮತ್ತು ಆಳವಾದ ಚಿಂತನೆಗೆ ಇಳಿದಿದ್ದಾರೆ. ತೀರ ಈಚೆಗೆ ಹಂಪಿಯಲ್ಲಿ 'ಹಂಪಿ ಉತ್ಸವ-೨೦೧೩' ಸಂದರ್ಭದಲ್ಲಿ ಅಭಿವ್ಯಕ್ತಿಸಿದ್ದ ಇನ್‌ಸ್ಟಾಲೇಷನ್ ಕಲಾಕೃತಿ ಅವರ ಪ್ರಯೋಗಶೀಲತೆ, ಪರಂಪರೆಗಳ ಗ್ರಹಿಕೆ ಪಾಶ್ಚಾತ್ಯ ದೃಷ್ಟಿ- ಸೃಷ್ಟಿಗಳನ್ನು ಅರಗಿಸಿಕೊಂಡಿರುವಿಕೆ, ಆಳವಾದ ಚಿಂತನೆ ಎಲ್ಲವುಗಳಿಗೂ ಜನರನ್ನು ಆಕರ್ಷಿಸಿತು. ಆ ಕಲಾಕೃತಿಯಲ್ಲಿನ ಕಲಾಕೃತಿಗಳು ಆರಾಧಕರೆಲ್ಲರ ಮನವನಲ್ಲದೆ ಮನೆಯನ್ನೂ ಸೇರಿದವು. 'ಕೆಟ್ಟದ್ದನ್ನು ನೋಡಬೇಡ, ಮಾತಾಡಬೇಡ, ಕೇಳಬೇಡ' ಎಂಬುದನ್ನು: ಸಂಕೇತಿಸುವ ಮೂರು ಮಂಗಗಳ ಪ್ರತ್ಯೇಕವಾದ ಟೆರಾಕೋಟಾ ಶಿಲ್ಪಗಳನ್ನು ಸಾವಿರಕ್ಕೂ ಮಿಕ್ಕಿ ತಯಾರಿಸಿಕೊಂಡು ಬಂದು ಹಂಪಿಯಲ್ಲಿ ಅಭಿವ್ಯಕ್ತಿಸಿದ ರೀತಿ ನೋಡುಗರನ್ನು ಕಲಾಕೃತಿಯ ಭಾಗವಾಗಿಸಿದ್ದಲ್ಲದೆ, ಕೈಯಿಂದ ಒಂದೊಂದು ಶಿಲ್ಪಗಳನ್ನು ಹಿಡಿದು ಗಾಂಧೀಜಿಯ ಸಂದೇಶ ಹೊತ್ತು ಮನೆಯ ದಾರಿಹಿಡಿಯುವಂತೆ ಮಾಡಿದ್ದು ಅದ್ಭುತ ಪ್ರಯೋಗವೇ ಆಗಿದ್ದಿತು.

ಶಿಲ್ಪಿನಿ ಲಲಿತಾಶಂಕರ್ ೧೯೯೭ ರಲ್ಲಿನ ತಮ್ಮ ಅಭಿವ್ಯಕ್ತಿಗಳಲ್ಲಿ ಭಾರತೀಯ ಸಂಸ್ಕೃತಿಯ ಧ್ಯಾನದಲ್ಲಿ ನಿರತರಾಗಿದ್ದರೆನ್ನಬೇಕು, ಏಕೆಂದರೆ ಅವರು ಈ ಸಂದರ್ಭದಲ್ಲಿ ಶಿಲ್ಪಕಲೆ ಹಾಗೂ ಇನ್‌ಸ್ಟಾಲೇಷನ್ ಕಲಾಪ್ರಕಾರಗಳೆರೆಡರಲ್ಲೂ ಸ್ಪಷ್ಟವಾಗಿ ಕಾಣಿಸಿಕೊಂಡರು. ಅನಂತರವೂ (೨೦೦೭) ಅವರ ಭಾರತೀಯ ಸಂಸ್ಕೃತಿಯ ದರ್ಶನದ ಧ್ಯಾನ ಹೆಚ್ಚು – ಗಾಢವಾಗಿ ಅವರ ಶಿಲ್ಪಗಳು ಹಾಗೂ ಇನ್ಸ್ಟಾಲೇಷನ್‌ಗಳಲ್ಲಿ ಮೈದಳೆಯುತ್ತಿರುವುದು. ಅಂದಿನ ಅವರ 'ಪುರಾಣ' ಶೀರ್ಷಿಕೆಯ ಶಿಲ್ಪ ಸಮೂಹ, ಸಪ್ತಪದಿ ಇತ್ಯಾದಿ ಸೃಷ್ಟಿಗಳು ಭಾರತೀಯ ಆತ್ಮ ಪದಾರ್ಥಗಳನ್ನು ಪಶ್ಚಿಮದ ಸಮಕಾಲೀನ ಶಿಲ್ಪ- ಅಭಿವ್ಯಕ್ತಿ, ಮಾಧ್ಯಮ ಪದಾರ್ಥಗಳ ನಿರ್ವಹಣೆಯ ಹಾದಿಯನ್ನು ಅನುಸರಿಸಿದ 'ಪ್ರಭಾವದ ಆತಂಕ' ವೇ ದುಡಿಸಿಕೊಂಡಿದ್ದವು. ಒಟ್ಟಾರೆ ಲಲಿತಾ ಶಂಕರ್‌ರವರ ಈ ಅಭಿವ್ಯಕ್ತಿಗಳ ಆತ್ಮ ಭಾರತೀಯವೆಂಬುದೇ ಇಲ್ಲಿ ಹೆಚ್ಚು ಪ್ರಸ್ತುತ ಎಂಬುದು ಕಲಾವಿಮರ್ಶಕ ಕೆ. ವಿ. ಸುಬ್ರಹ್ಮಣ್ಯಂರ[೨೩] ವಿಶ್ಲೇಷಣೆಯಾಗಿದೆ. ಇತ್ತೀಚೆಗೆ ಭಾರತದಲ್ಲಿ ಯೋಗದ ಬಗ್ಗೆ ಅವರ ಪಾಮುಖ್ಯತೆ- ಪ್ರಯೋಜನಗಳ ಜೊತೆಗೆ ಯಜಮಾನ್ಯತೆಗಳ ಕುರಿತು ಚರ್ಚೆಗಳು ವಾದವಿವಾದಗಳು ನಡೆಯುತ್ತಿವೆ. 'ಯೌಗಿಕ ರಾಜಕಾರಣವೂ ಇಲ್ಲದಿಲ್ಲ. ಲಲಿತಾ ಶಂಕರಂತಹ ಸಂವೇದನಾಶೀಲ ಕಲಾವಿದೆ ಜಾಗತೀಕವಾಗಿ ನಮ್ಮ ಧ್ಯಾನ-ಯೋಗಗಳ ತಿರುಳನ್ನು ಪಶ್ಚಿಮದ ಮನಸ್ಸಿನ ಅಧ್ಯಯನಗಳ ಹೊಸ ಬೆಳವಣಿಗೆ ಯೋಗ ಸಾಧನೆಯಿಂದ ಮನುಷ್ಯನ ಮನಸ್ಸಿನಲ್ಲಿ ಆಗುವ ಬದಲಾವಣೆಗಳ ಕುರಿತು ಭಾರತೀಯ ಹಾಗೂ ಪಾಶ್ಚಾತ್ಯ ದೃಷ್ಟಿಗಳೆರಡನ್ನೂ ಅಧ್ಯಯನ ಮಾಡಿರುವ ಲಲಿತಾ ಶಂಕರ್‌ರ ವಿಶಿಷ್ಟ ಫಲವೆಂಬಂತೆ 'ಇನ್ ಸರ್ಚ್ ಆಫ್ ಕಾನ್ಸಿಯಸ್‌ನೆಸ್' ಕಲಾಭಿವ್ಯಕ್ತಿ ೨೦೦೭ ರಲ್ಲಿ ಬೆಂಗಳೂರಿನ 'ಸುಮುಖ' ಕಲಾಗ್ಯಾಲರಿ ವೀಕ್ಷಕರಿಗಾಗಿ ಮೈದಳೆದಿತ್ತು.

ರಾಯಚೂರು ಜಿಲ್ಲೆಯ ಮಾನವಿಯವರಾದ ನಾಗಪ್ಪ ಪ್ರಧಾನಿ ಸಮಕಾಲೀನ ಶಿಲ್ಪಿಯಾಗಿ ಅರಳಿ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಶಿಲ್ಪಕಲೆ ಕಲಿಸುತ್ತಿರುವರು. ಹುಟ್ಟಿ ಬೆಳೆದ ಆದಿಮ ಚಿತ್ರ- ಶಿಲ್ಪಗಳಿರುವ ರಾಯಚೂರು ಪ್ರದೇಶದ ಸುಪ್ತ ಅನುಭವಗಳ ಜೊತೆಗೆ ಬೆಂಗಳೂರು ಬಳಿಕ ಶಾಂತಿನಿಕೇತನ ಕಲಾಶಾಲೆಗಳಲ್ಲಿ ಕಲಿತರು. ಹೀಗೆ ಕಲಾಶಾಲೆಗಳಲ್ಲಿ

ಕಲಿತುಕೊಂಡ ಶಿಲ್ಪಕಲೆಯ ವ್ಯಾಕರಣ ಮೀರಿ ಸಮಕಾಲೀನ ಹಾಗೂ ಸತ್ವಗಳ ಶಿಲ್ಪಗಳನ್ನು ನಾಗಪ್ಪ ರಚಿಸಿರುವರು. ಸ್ವದೇಶಿ ಚಳುವಳಿಯ ಬೇರುಗಳಿಂದಲೇ ಮೂಡಿಬಂದ ಶಾಂತಿನೀಕೇತನದ ಪರಂಪರೆಗೆ ವಿಭಿನ್ನವಾದ ಶಿಲ್ಪ ಸೃಷ್ಟಿಯಲ್ಲಿ, ಸ್ವಂತಿಕೆಯ ಲೇಪ ಹೊಂದಿದ ಗ್ರಹಿಕೆ- ರೂಪಗಳಲ್ಲಿ ಅವರು ತೀವ್ರತೆಯಿಂದ ತೊಡಗಿರುವುದರ ಪ್ರತೀಕದಂತಹ ಅವರ ಹಲವು ಶಿಲ್ಪಗಳೇ ಇವೆ. 'ಹೆಡ್' ಮಾಲೆಯ ಶಿಲ್ಪಗಳನ್ನು ಇಲ್ಲಿ ಉದಾಹರಿಸಬಹುದು. ನಮ್ಮ ಸಂಪ್ರದಾಯ ಮತ್ತು ಸಮಕಾಲೀನ ಶಿಲ್ಪ ಸೃಷ್ಟಿ ಸಂದರ್ಭಗಳೆಲ್ಲದರಲ್ಲೂ ಭಾವಶಿಲ್ಪ ಪರಂಪರೆ ನಡೆದು ಬಂದಿರುವುದು. ಸಾಮಾಜಿಕ ಅಗತ್ಯದ ಹಿನ್ನೆಲೆಯಲ್ಲಿ ನಾಗಪ್ಪರ ಭಾವಶಿಲ್ಪಗಳು ರೂಪದರ್ಶಿಯ ಹೊರನೋಟವನ್ನೇ ಅಲ್ಲದೆ ಒಳನೋಟಗಳನ್ನು ಬಿಂಬಿಸುತ್ತವೆ. ಪಶ್ಚಿಮದ ಪ್ರಭಾವಗಳನ್ನು ಅರಗಿಸಿಕೊಂಡ ನವ್ಯ ಶಿಲ್ಪಗಳು 'ಲೇಬರ್' ಹಾಗೂ 'ತಾಯಿ ಮತ್ತು ಮಗು' ಗಣನೀಯ. ಟೆರಾಕೊಟ್ಟ ಮಾಧ್ಯಮದ ಈ ಶಿಲ್ಪಗಳಲ್ಲೂ ನಾಗಪ್ಪರ ವಿಶಿಷ್ಟ ಕೌಶಲ ಮತ್ತು ಸಂವೇದನೆ ಕಾಣುತ್ತದೆ. ಮುಂಬೈನ ಶಿಬಿರವೊಂದರಲ್ಲಿ ನಾಗಪ್ಪ ಪ್ರದಾನಿಯವರು ಆ ನಗರದ ಬೆಳವಣಿಗೆಯನ್ನು ಗ್ರಹಿಸಿ ಶಿಲ್ಪದಲ್ಲಿ ಅಭಿವ್ಯಕ್ತಿಸಿರುವರು. ಅನಿವಾರ್ಯ ಮತ್ತು ಅಗತ್ಯಗಳಿಗೆ ಸ್ಪಂದಿಸಿ ಈ ಶಿಲ್ಪ ಸೃಷ್ಟಿಸಿದುದು ಅಸಾಧಾರಣವೆನಿಸುತ್ತದೆ.

ಸಿರಾಮಿಕ್, ಫೈಬರ್‌ಗಳಲ್ಲೂ ನಾಗಪ್ಪರು ವಿಶೇಷವೆನಿಸುವ ಶಿಲ್ಪಗಳನ್ನು ರಚಿಸಿರುವರು. ಫೈಬರ್ ಗಾಜಿನ 'ತಾಯಿ ಮಗು' ತೀರ ಸರಳೀಕರಣಗೊಳಿಸಿದ ಶಿಲ್ಪವಾಗಿ ಗಣನೀಯ. ಸಿರಾಮಿಕ್‌ನಲ್ಲಿ 'ಫ್ಯಾಟ್ ವುಮೆನ್' ಶಿಲ್ಪಗಳೂ ಅಷ್ಟೆ, ನುಣುಪಾದ ಮೈವಳಿಕೆ ಆಕರ್ಷಕವೆನಿಸುತ್ತದೆ. ವಿವಿಧ ರೀತಿಯ ಮೈವಳಿಕೆಗಳನ್ನು ಶಿಲಾಶಿಲ್ಪವೊಂದರಲ್ಲೇ ತುರುವ ಮೂಲಕ ಕೃತಿಯ ಅರ್ಥವಂತಿಕೆಯನ್ನು ಹೆಚ್ಚಿಸುವುದು ನಾಗಪ್ಪರ ವಿಶೇಷತೆಯಲ್ಲದೆ ಸಂದರ್ಭಕ್ಕೆ ತೀಕ್ಷ್ಣವಾಗಿ ಸ್ಪಂದಿಸಿ ಶಿಲ್ಪ ಸೃಷ್ಟಿಸುವುದು ಅವರ ಮತ್ತೊಂದು ವಿಶೇಷತೆ.

ನಮ್ಮ ಸಮಕಾಲೀನ ಶಿಲ್ಪಕಲೆಯಲ್ಲಿ ಕಾಣಿಸಿಕೊಂಡ ಹಲವು ಶಿಲ್ಪಿಗಳಲ್ಲಿ ಎನ್.ಎಸ್. ಪ್ರದೀಪ್‌ಕುಮಾರ್ ಕೂಡ ಒಬ್ಬರು. ಚಿತ್ರಕಲೆಯೊಂದಿಗೆ ಶಿಲ್ಪಸೃಷ್ಟಿಯನ್ನು ನಿರ್ವಹಿಸಿಕೊಂಡು ಬಂದಿರುವರು. ಸಾಮಾಜಿಕ ಬದುಕಿನ ನಿತ್ಯ ಅನುಭವಗಳನ್ನು ಗ್ರಹಿಕೆಗಳನ್ನು ಹಲವು ರೀತಿಯಲ್ಲಿ ಅಭಿವ್ಯಕ್ತಿಸಿದವರು, ಶಿಲಾ ಮಾಧ್ಯಮದಲ್ಲಿ ಅತ್ಯಂತ ಸರಳ ಸುಂದರವಾದ ಶಿಲ್ಪಗಳನ್ನು ರಚಿಸಿರುವುದು, ನುಣುಪು ನಯವಾದ ಮೈವಳಿಕೆಗಳನ್ನು ತರುವುದು ಇವರ ಶಿಲ್ಪ ದೃಶ್ಯಗಳಲ್ಲಿ ವಿಶೇಷವಾದುದು.

ಮೈಸೂರಿನ ಕಾವಾದಲ್ಲಿ ಕಲಾ ಇತಿಹಾಸ ಕಲಿಸುವ ವಿಜಯ ರಾವ್ ಮೂಲತಹ ರಾಯಚೂರು ಜಿಲ್ಲೆಯವರು. ಐತಿಹಾಸಿಕ ಹಿನ್ನೆಲೆಯಿರುವ ಅಲ್ಲಿನ ಆದಿಮ ಸತ್ವಗಳನ್ನು ಹೀರಿಕೊಂಡೂ ಆಧುನಿಕವಾಗಿ ಶಿಲ್ಪಗಳನ್ನು ಆಗಾಗ ಸೃಷ್ಟಿಸುತ್ತ ಬಂದಿರುವರು. ಮೂರು ಆಯಾಮಗಳೊಂದಿಗೆ ಶಿಲ್ಪದಲ್ಲಿ ಆಡಿದ ಆಟದ ಅನುಭವ ನೋಡುಗರಲ್ಲಿ ಉಂಟುಮಾಡುತ್ತವೆ. ಸುತ್ತಲಿನ ಪ್ರಕೃತಿಯ ಕೌತುಕಮಯ ಸಂದರ್ಭಗಳ ರೂಪ, ಸನ್ನಿವೇಷಗಳ ಅಭಿವ್ಯಕ್ತಿಗಳೂ ಅವರ ಶಿಲ್ಪಗಳಲ್ಲಿ ಹಲವು ಬಾರಿ ಮೂಡಿಬಂದಿವೆ. ಮೊಳಕೆ ಗೊಬ್ಬು, ಪ್ರಕೃತಿ, ಸೃಷ್ಟಿಸೌಂದರ್ಯದಂತಹ ಶೀರ್ಷಿಕೆಗಳ ಶಿಲ್ಪಗಳು ಸುಂದರ ಅನುಭವ ನೀಡುವಂತಹವು, ಕಲ್ಲಿನ ಆಕಾರಕ್ಕೆ ತಕ್ಕಂತಹ ಭಾವಲಹರಿಯನ್ನು ಹರಿಯಬಿಟ್ಟು ಶಿಲ್ಪಿಸುವ

ಸಹಜ ಪ್ರತಿಭೆಯೂ ಅವರಲ್ಲಿದೆ. ಅಂತೆಯೇ ಬೆಂಗಳೂರು, ಬಾದಾಮಿ, ಬೆಳಗಾವಿ (ವಿಶ್ವ ಕನ್ನಡ ಸಮ್ಮೇಳನ) ಗಳ ಶಿಬಿರದಲ್ಲಿ ಅವರು ರಚಿಸಿದ ಶಿಲ್ಪಗಳನ್ನು ಗಮನಿಸಿದರೆ ಈ ಅನುಭವವಾಗುತ್ತದೆ. ದಿನನಿತ್ಯದ ಸಾಮಾನ್ಯ ಸಂಗತಿಗಳು, ಬಳಕೆಯ ಅಪರೂಪದ ವಸ್ತುಗಳು ಇವರ ಶಿಲಾ ಮಾಧ್ಯಮದ ಅಭಿವ್ಯಕ್ತಿಗಳಲ್ಲಿ ಸಹಜವಾಗಿ ಮೂಡಿಬಂದಿರುತ್ತವೆ. ಬಾದಾಮಿಯಲ್ಲಿ ಜರುಗಿದ ರಾಷ್ಟ್ರೀಯ ಶಿಲ್ಪಕಲಾ ಶಿಬಿರದಲ್ಲಿ ವಿಜಯರಾವ್ ಅಭಿವ್ಯಕ್ತಿಸಿದ ಶಿಲ್ಪ' ಮುದನೀಡುವಂತಿತ್ತು.[೨೪]

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರಿನ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿಯ(ಕಾವಾ)ವರು ಆಯೋಜಿಸಿದ್ದ ಈ ರಾಷ್ಟ್ರೀಯ ಶಿಲ್ಪಕಲಾ ಶಿಬಿರದಲ್ಲಿ ಬನಾರಸ್‌ನ ಸಂಜಯ್ ಸಿಂಗ್, ಪುಣೆಯ ಅನುಪ್ ಕುಮಾರ, ಬರೋಡದ ಮಹೇಂದ್ರ ಪಾಂಡೆ, ಹೇಮಂತ್ ಜೋಷಿ ಉದಯಪುರ, ವಿಫುಲ್ ಕುಮಾರ್ ಜೈಪುರ, ರಾಜಶೇಖರನ್ ನಾಯರ್ ಚೆನ್ನೈ, ಅಲ್ಲದೆ ನಮ್ಮವರೇ ಆದ ವೆಂಕಟಾಚಲಪತಿ, ಶಿವಾನಂದ ಬಂಟನೂರ, ಗುರುರಾಜ್ ನಾಯಕ್, ಕೆ. ರಾಘವೇಂದ್ರ ಮೊದಲಾದವರಿದ್ದರು.

ಶಿಲ್ಪಕಲಾವಿದರು, ಚಿತ್ರಕಲಾವಿದರುಗಳ ಕುರಿತು ಹಲವಾರು ಪುಸ್ತಕಗಳನ್ನು ನೂರಾರು ಲೇಖನಗಳನ್ನು ಬರೆದಿರುವ ಎಲ್. ಶಿವಲಿಂಗಪ್ಪ ಚಿತ್ರಕಲೆಯೊಂದಿಗೆ ಶಿಲ್ಪಗಳನ್ನು ರಚಿಸುತ್ತ ಬಂದಿರುವರು. ಮೂಲತಃ ಮೈಸೂರು ಸಂಪ್ರದಾಯ ಶೈಲಿಯ ಶಿಲ್ಪಿ ಸಿದ್ಧಾಂತಿ ಶ್ರೀ ಸಿದ್ಧಲಿಂಗ ಸ್ವಾಮೀಜಿಗಳ ಗುರುಕುಲದಲ್ಲಿ ಶಿಲ್ಪಕಲೆಯ ವ್ಯಾಕರಣ ಕಲಿತವರು. ಹಲವು ವ್ಯಾಕರಣಬದ್ಧ ಶಿಲ್ಪಗಳನ್ನು ರಚಿಸಿದವರು. ಆದರೂ ಸಮಕಾಲೀನವಾಗಿ ಕಂಚು, ಮರಳು, ಥರ್ಮಾಕೋಲ್, ಪ್ಲಾಸ್ಟಿಕ್ ಪೈಪ್ಸ್ ಇತ್ಯಾದಿ ಹಲವು ಮಾಧ್ಯಮಗಳಲ್ಲಿ ಬಹಳ ಮುಕ್ತವಾಗಿ ಅಭಿವ್ಯಕ್ತಿಸಿದ್ದಾರೆ. ೨೦೦೬ರ ಸಂದರ್ಭದ ಅವರ ವಿಶಿಷ್ಟ ಹಾಗೂ ಮಿಶ್ರ ಮಾಧ್ಯಮದ ಶಿಲ್ಪಗಳು ಗಣನೀಯವೆನಿಸಿವೆ. ಕೆಲವೊಮ್ಮೆ ಸಾಮಾಜಿಕ ದುರಂತಮಯ ಸನ್ನಿವೇಷಗಳು, ಮನುಷ್ಯನ ಅವಿವೇಕತನದ ಕೃತ್ಯಗಳನ್ನು ಕಂಡು ಅಭಿವ್ಯಕ್ತಿಸಿರುವರು. 'ಸಹಪಾಠಿಗಳು' ಶೀರ್ಷಿಕೆಯ ಶಿಲ್ಪಗಳೂ ಅಪರೂಪ.

ಬಿಸಿಲನಾಡಿನ ಕಲಬುರ್ಗಿಯಿಂದ ಬೆಂಗಳೂರಿಗೆ ಬಂದು ನಲೆಸಿರುವ ಜಗನ್ನಾಥ ಜಕ್ಕೇಪಳ್ಳಿ ಟೆರಾಕೊಟ್ಟ, ಕಲ್ಲು, ಸಿಮೆಂಟ್ ಹಾಗೂ ಹಲವು ಲೋಹ (ಗುಜರಿ) ಮಾಧ್ಯಮಗಳಲ್ಲಿ ಶಿಲ್ಪಗಳನ್ನು ಸಮಕಾಲೀನ ಸ್ಪಂದನೆಯಲ್ಲಿ ತೊಡಗಿಕೊಂಡಿರುವಂಥದು. ನಮ್ಮ ಆಧುನಿಕ ಸಮಕಾಲೀನ ಸಂದರ್ಭದ ಮೂಲ ಬೇರುಗಳನ್ನು ತಿಳಿದಿರುವ ಜಕ್ಕೆಪಳ್ಳಿಯವರು ಜೆ. ಜೆ. ಕಲಾಶಾಲೆಯಲ್ಲಿ ಕಲಿತು ಬಂದು ಕಲಬುರಗಿಯಲ್ಲಿ ಹೊಸತನ ಮೂಡಿಸಿದ ಧನಂಜಯ ಶಿಲ್ಪಿಯವರಲ್ಲಿ ಶಿಲ್ಪದ ಹಲವು ಒಳನೋಟಗಳನ್ನು, ಕೆತ್ತನೆಯ ದಾರಿಗಳನ್ನು ಗ್ರಹಿಸಿ ಕಲಿತುಕೊಂಡರು. ಹಳ್ಳಿಯ ಜಾನಪದ ಮೂಲದ ಸತ್ವಯತ ಕಲೆಗಳನ್ನು ಅರಗಿಸಿಕೊಂಡೇ ಸಮಕಾಲೀನ ಅನುಭವಗಳನ್ನು ಬಿಂಬಿಸಿದರು. ಟೆರಾಕೊಟ್ಟ ಮಾಧ್ಯಮದಲ್ಲಿ ಮೂಡಿಬಂದಿರುವ ಅಪಘಾತ ಶಿಲ್ಪಕೃತಿ 'ವಿಕೃತಿ ಸೌಂದರ್ಯ' ದ ಅನುಭವಕ್ಕೆ ಸಾಕ್ಷಿಯಾಗಿ ಗಮನಿಸುವಂಥದು. ಇದೇ ಮಾಧ್ಯಮದ ಚಿಂತಾಕ್ರಾಂತ ದಂಪತಿಗಳ ಕೃತಿ ಬಹುಕಾಲ ಕಾಡಿವೆ. ಇದು ಭಾವತೀವ್ರತೆಯನ್ನು ಹೊಂದಿದ ಸೃಷ್ಟಿಯಾಗಿದೆ.

ಜಕ್ಕೆಪಳ್ಳಿಯವರ ಟೆರಾಕೊಟ್ಟ ಶಿಲ್ಪಗಳಲ್ಲಿನ ಮೈವಳಿಕೆ ಮತ್ತು ಕಪ್ಪು- ಕಂದು ಬಣ್ಣಗಳೂ ಆಶಯಕ್ಕೆ ಪೂರಕವಾಗಿವೆಯಲ್ಲದೆ ಸಂಯೋಜನೆಗೂ ಹೊಂದಿಕೆಯಾಗಿವೆ.

ಅಕಾಡಮಿಕ್‌ನೆಲೆಯಲ್ಲಿ ಶಿಲ್ಪಕಲೆ ಕಲಿತ ಇವರ ಭಾವಶಿಲ್ಪ ಸೃಷ್ಟಿಯ ಪಟ್ಟಿ ಗಣನೀಯ ಪ್ರಮಾಣದಲ್ಲಿದೆ. ನಮ್ಮಲ್ಲಿ ಶ್ರೇಷ್ಠ ವ್ಯಕ್ತಿತ್ವದ ಗಣ್ಯರ ಬಾವಶಿಲ್ಪಗಳು ಒಟ್ಟೊಟ್ಟಾಗಿ ಮೂಡಿಬಂದ ಹಲವು ಕಲಾಶಿಬಿರ ಸಂದರ್ಭಗಳು ನಡದಿವೆ. ಅಂತಹ ಸಂದರ್ಭವೊಂದರಲ್ಲಿ ವರಕವಿ ದ. ರಾ. ಬೇಂದ್ರೆಯವರ ಭಾವಶಿಲ್ಪವೂ ಇವರಿಂದ ರಚನೆಯಾಗಿದೆ. ರಾಜಕುಮಾರರ ಭಾವಶಿಲ್ಪವೂ ಜಗನ್ನಾಥರಿಂದ ಮೂಡಿಬಂದಿದೆ. ನಮ್ಮ ಶಿಲ್ಪಕಲೆಯಲ್ಲಿನ ಹೊಸತನವೆಂಬುದು ಕೆಲವು ಅನಿವಾರ್ಯ ಕಾರಣಗಳಿಂದಾಗಿ ಭಾವಚಿತ್ರ- ಹಾಗೂ ಭಾವಶಿಲ್ಪಗಳಿಂದಾಯಿತು. ಆದರೆ ಅದನ್ನು ಮೀರಿ ನಮ್ಮ ದೃಶ್ಯಕಲಾವಿದರು ಮುನ್ನಡೆ ಪಡೆದಿದ್ದಾರೆ. ಅಂತೆಯೇ ಜಗನ್ನಾಥ ಜಕ್ಕೆಪಳ್ಳಿಯವರೂ ಹಲವು ಭಾವಶಿಲ್ಪ, ಪೂರ್ಣ ಶಿಲ್ಪಗಳನ್ನು ರಚಿಸಿದ್ದಾರೆ. ಆದರೆ ತಮ್ಮೊಳಗಿನ ವಿಶಿಷ್ಟ ಆಶಯ ತುಡಿತ- ಮಿಡಿತಗಳಿಗೆ ಪೂರಕವಾದ ಸಮಕಾಲೀನ ಗ್ರಹಿಕೆಗಳ ಶಿಲ್ಪಗಳನ್ನು ಸೃಷ್ಟಿಸಿದ್ದಾರೆಂಬುದರ ಕಡೆಗೇ ನಮ್ಮ ಗಮನ ಕೇಂದ್ರಿಕರಿಸಿರುವುದಾಗಿದೆ.

ಮಾಧ್ಯಮದ ವಿಶಿಷ್ಟ ಸಾಧ್ಯಾಸಾಧ್ಯತೆಗಳೊಂದಿಗೆ ಆಡಿದ ಸುಂದರ ಆಟ ಹಲವು ಕೃತಿಗಳಲ್ಲಿದ್ದರೆ ಮತ್ತೆ ಕೆಲವು ಕೃತಿಗಳಲ್ಲಿ ಬುದ್ಧಿ ಮತ್ತು ಭಾವಗಳು ಬೆರೆತ ಗ್ರಹಿಕೆಗಳಿವೆ.[೨೫] ಸ್ಪಿಂಗ್, ಸ್ಲೀಪಿಂಗ್, ಸೀ, ಇತ್ಯಾದಿಗಳು ಒಂದು ಗುಂಪಾದರೆ, ಮೈ ಕಂಪ್ಯೂಟರ್, ಥಿಂಕಿಂಗ್ ಶಿಲ್ಪಗಳು ಮಾಧ್ಯಮಗಳ ನಿರ್ವಹಣೆ ಹಾಗೂ ಸಮಕಾಲೀನ ಆಶಯಗಳಿಂದಾಗಿ ಗಮನ ಸಳೆಯುತ್ತವೆ.

ಬಿ. ಕೃಷ್ಣ ದೇವಾಡಿಗರ ಜನಪದೀಯ ಸತ್ವಗಳ ಟೆರಾಕೊಟ್ಟಾ ಶಿಲ್ಪಗಳೂ ಅವರದೇ ಆದ ಛಾಪನ್ನು ಮೂಡಿಸಿವೆ. ಮಾನವಾಕಾರಗಳನ್ನು ದೃಷ್ಠಿಸಿಕೊಂಡು ಅವುಗಳಲ್ಲಿ ವಿಶಿಷ್ಟ ಮೈವಳಿಕೆಗಳನ್ನು ಸೃಷ್ಟಿಸಿ ವಿವಿಧ ಭಾವ- ಭಂಗಿಗಳಲ್ಲಿ ರೂಪ ತಳೆದಿರುವ ಅವರ ಶಿಲ್ಪಗಳು ಮೋಹಕವಾಗಿವೆ. ಮೈಸೂರಲ್ಲಿ ಶ್ರೀ ಶೋಲಾಪರಕರ್ ಅವರು ಮೈಸೂರಿನ ವಿಶ್ವವಿಖ್ಯಾತ ಇನ್‌ಲೇ ಕರಕುಶಲ ಕಲೆಯನ್ನು ಮೂರು ಆಯಾಮಗಳಲ್ಲಿ ದುಡಿಸಿಕೊಂಡು ಸಮಕಾಲೀನವಾಗಿ ಅಭಿವ್ಯಕ್ತಿಸಿದುದು ಉಲ್ಲೇಖಾರ್ಹವಾದುದು.

ಸಿ. ಕೆ. ಜನಾರ್ಧನ, ರಾಮದಾಸ್ ಆಧ್ಯಂತಾಯ, ಜಿ. ಎಸ್. ಶೆಣೈ ಮೊದಲಾದ ಕಲಾವಿದರು ತಮ್ಮ ಇತರ ಮಾಧ್ಯಮಗಳಾದ ಚಿತ್ರ, ಗ್ರಾಫಿಕ್ ಮೊದಲಾದವುಗಳೊಂದಿಗೆ ಆಗಾಗ ಸೃಷ್ಟಿಸಿದ ಶಿಲ್ಪಗಳಲ್ಲಿ ಸಮಕಾಲೀನ ಸೆಳಕುಗಳಿವೆ. ಅಭಿವ್ಯಕ್ತಿಯ ತೀವ್ರತೆಗಳಿವೆ.

ವಿಕೃತ ಬದುಕಿನ, ಭಾವಶೂನ್ಯ ನೆಲೆಯ, ಉಸಿರುಗಟ್ಟಿಸುವ ಸಂದರ್ಭಗಳಿಂದ ತಳಮಳಗೊಂಡು ರೋಷಿ ಹೋಗಿ ಸೃಷ್ಟಿಸಿದ ಶಿಲ್ಪಗಳು ಎಂ. ಸಿ. ರಮೇಶ್ ಅವರವು.[೨೬] ಮರ, ಶಿಲೆ, ಮತ್ತು ಫೈಬರ್ ಮಾಧ್ಯಮಗಳಲ್ಲಿ ಗಂಭೀರ ನೆಲೆಯ ಶಿಲ್ಪಗಳನ್ನು ಬೃಹತ್ತಾಗಿಯೂ ರಚಿಸಿರುವರು. ತಮ್ಮ ಸೃಜನಶೀಲ, ಸಮಕಾಲೀನ ಶಿಲ್ಪಗಳಿಗಾಗಿಯೇ- ರಮಶ್ ೧೯೯೩ನ ಸಾಲಿನ ಬೇಂದ್ರೆ- ಹುಸೇನ್ ಶಿಷ್ಯವೇತನ ಪಡೆದಿರುವಂತಹವರು.

ರಾಜ್ಯದ ಹೊರಗೆ ಹೋಗಿ ಶಿಲ್ಪಕಲೆಯನ್ನು ಅಧ್ಯಯನ ಮಾಡಿಬಂದ ನಂತರವಂತೂ ವಿಶಿಷ್ಟ ಚಿಂತನೆಗಳ ಮೂಲದ ಆಶಯ ಮತ್ತು ನಿರ್ವಹಣೆಗಳಿಂದ ಹೊಸ ಹಾದಿಗಳನ್ನು ಮತ್ತು ಸ್ವಂತಿಕೆಯ ಉನ್ನತ ಸ್ಥಿತಿಯನ್ನು ಕಂಡುಕೊಂಡಿದ್ದಾರೆ. ಅಪರೂಪಕ್ಕೆ ಛಾಣದ ಕೆತ್ತನೆಯ ಬೀಸುಗಳನ್ನು ಉಳಿಸಿಕೊಂಡೂ ಆಕಾರದ ಮೇಲ್ಮೈಯನ್ನು ನಯವಾಗಿಸುವುದು ಬಹುಪಾಲು ಶಿಲ್ಪಗಳಲ್ಲಿ ಕಾಣಬಹುದು. ಶೋಷಣೆಗೊಳಗಾದವರ ನೋವಿನ ಅಭಿವ್ಯಕ್ತಿ ಅತ್ಯಂತ ಪರಿಣಾಮಕಾರಿಯಾಗಿ ಗರ್ಭೀಕರಿಸಿಕೊಂಡು ಮೂಡಿಬಂದಿರುವ ಶಿಲ್ಪಗಳು ಸಂವೇದನಾಶಿಲತೆಯಿಂದ ದೂರವಾಗಿ ಒರಟು ಎನ್ನಿಸಿದರೂ ಆಶಯದ ದೃಷ್ಟಿಯಿಂದ ಮನಮುಟ್ಟುವಂಥವು.

ಟೂಥ ಪೇಸ್ಟ್ ಟ್ಯೂಬಿನೊಳಗೆ ಪೇಸ್ಟಿಗೆ ಬದಲಾಗಿ ವ್ಯಕ್ತಿಯೊಬ್ಬನಿರುವ ಕಲ್ಪನೆ ನಾಟಕೀಯ ವಿಡಂಬನೆಯಂತೆ ಕಂಡರೂ ಆಳ ಅರ್ಥದಿಂದಾಗಿ ಅನನ್ಯವೆನಿಸುತ್ತದೆ. ರಮೇಶ್‌ರ ಕಲ್ಪನಾ ಸಾಮರ್ಥ್ಯ, ಚಿಂತನೆಯ ಹರಿವು ವಿಶಾಲವಾದುದು. ೨೦೧೦ ರಲ್ಲಿ ಕನ್ನಡ ವಿಶ್ವ ವಿದ್ಯಾಲಯದಲ್ಲಿ ರಾಷ್ಟ್ರೀಯ ಶಿಲ್ಪ ನಡೆದಾಗ ದೊಡ್ಡ ಶಿಲೆಯನ್ನೇ ಆರಿಸಿಕೊಂಡು ಸರಳವನ್ನಿಸಿದರೂ ಗಂಭೀರ ನೆಲೆಯ ಶಿಲ್ಪವನ್ನು ಸಾಕಷ್ಟು ಶ್ರಮವಹಿಸಿ ಖಂಡರಿಸಿದರು. ೨೦೦೭ ರಲ್ಲಿ ಬೆಂಗಳೂರಲ್ಲಿ ನಡೆದ ಶಿಬಿರದಲ್ಲೂ ಅಷ್ಟೆ ದೊಡ್ಡ ಶಿಲೆಯನ್ನೇ ಆರಿಸಿಕೊಂಡು ಪರಿಣಾಮಕಾರಿಯಾದ ಶಿಲ್ಪವನ್ನು ಸೃಷ್ಟಿಸಿದರು.

ಇವರಂತಯೇ ಹಲವು ಆಯಾಮಗಳಲ್ಲಿ ತತ್ಸಮಾನವಾಗಿ ಕಂಡು ಬರುವ ಶಿಲ್ಪಿ ಓಂ ಪ್ರಕಾಶ ಅವರು. ಬೃಹತ್ತಾದ ಗಂಭೀರ ನೆಲೆಯ ಶಿಲ್ಪಗಳನ್ನು ವಿವಿಧ ಮಾಧ್ಯಮಗಳಲ್ಲಿ ಸೃಷ್ಟಿಸುವವರಲ್ಲಿ ಪ್ರಮುಖರು. ಮನುಷ್ಯನಲ್ಲಿ ಆಳವಾಗಿ ಬೇರೂರಿರುವ ಮಹತ್ವಾಕಾಂಕ್ಷೆ, ಕಪಟ, ದುರಾಸೆ, ಸ್ವಾರ್ಥ, ಮನೋಭಾವಗಳನ್ನು ಪ್ರಶ್ನಿಸುವ ದೃಷ್ಟಿಯ ಇವರ ಶಿಲ್ಪಗಳು ಉತ್ತರಗಳನ್ನು ಅನ್ವೇಶಿಸುವ ಸೃಷ್ಟಿಗಳಾಗಿ ಗಮನ ಸೆಳೆಯುತ್ತವೆ. ಅಲ್ಲದೆ ಮರ, ಫೈಬರ್ ಗಾಜು ಮಾಧ್ಯಮಗಳನ್ನು ದುಡಿಸಿಕೊಂಡಿರುವುದು ವಿಶೇಷವಾಗಿದೆ.[೬೩] ಜಾನಪದ ಸಾಂಪ್ರದಾಯಿಕ ಮರಗೆತ್ತನೆ ಕಲೆಯ ಕುಟುಂಬದಿಂದ ಬಂದಿರುವ ಓಂಪ್ರಕಾಶ್ ಆ ಎಲ್ಲ ಕೌಶಲಗಳನ್ನು ಅರಗಿಸಿಕೊಂಡು ಸಮಕಾಲೀನವಾಗಿ ದಿಟ್ಟ ಹೆಜ್ಜೆಗಳನ್ನಿಟ್ಟು ಅಭಿವ್ಯಕ್ತಿಸಿದವರು. ಅವರ ಚಾರ್ಕೋಲ್ ರೇಖಾಚಿತ್ರಗಳು ಶಿಲ್ಪಗಳಾಗಿ ರೂಪುಗೊಂಡಾಗ ಕೊಡುವ ಅನುಭವವೇ ಬೇರೆ. ವಿಶಿಷ್ಟ ಜೀವಧ್ವನಿ ವಿವಿಧ ಸ್ವರಗಳನ್ನು ಪಡೆಯುತ್ತವೆ. ಡೆತ್ ಆಫ್ ನೇಟಿವ್, ವಿಕ್ಟಿಮ್ ಆಫ್ ಇನೊಷೆನ್ಸ್ ಹಾಗೂ ಶೀರ್ಷಿಕೆಗಳಿಲ್ಲದ ಹಲವು ಶಿಲ್ಪಗಳು (೧೯೯೨-೯೩) ಈ ಮಾತುಗಳಿಗೆ ದೃಷ್ಟಾಂತಗಳಾಗುತ್ತವೆ.

ರಾಜಕೀಯ ಬ್ರಷ್ಟಾಚಾರ, ಶೋಷಿತರ ನೋವು- ನಿರಾಶೆ, ಬರದ ಮುಖಗಳನ್ನು ಶಿಲ್ಪಗಳಲ್ಲಿ ಕೆತ್ತಿದವರು. ಎಂ. ರಾಮಮೂರ್ತಿಯವರು. ಈ ತರಹದ ಹಲವು ವಿಚಾರಗಳನ್ನು ಸಮಕಾಲೀನವಾಗಿ ಮರ, ಶಿಲೆ, ಟೆರಾಕೊಟ್ಟ ಮಾಧ್ಯಮಗಳಲ್ಲಿ ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿರುವರು. ಅಮೂರ್ತ ಆಕಾರಗಳನ್ನು ಈಚೆಗೆ ಮರದ ಮಾಧ್ಯಮದಲ್ಲಿ ರಚಿಸಿರುವರು. ಚಿಕ್ಕ ಆಕಾರದಿಂದ ದೊಡ್ಡ ಅಳತೆಯ ಶಿಲ್ಪಗಳನ್ನು ರಚಿಸಿರುವರು. ಅತ್ಯಂತ

ನಯವಾದ –ಹೊಳಪಿನಿಂದ ಕೂಡಿದ ಮೈವಳಿಕೆಗಳನ್ನು ಮರದ ಹಲವು ಶಿಲ್ಪಗಳಲ್ಲಿ ರಾಮಮೂರ್ತಿಯವರು ದುಡಿಸಿದ ರೀತಿ ಖುಷಿ ನೀಡುತ್ತದೆ.

ಮಹಿಳಾ ಶಿಲ್ಪಿನಿ ರೇಣುಕಾ ಕೇಸರಮಡು ಅವರ ಅಲ್ಯೂಮಿನಿಯಂ ಮಾಧ್ಯಮದ ಶಿಲ್ಪಗಳು ಆಕರ್ಷಕವಾದವುಗಳು. ಸಣ್ಣ ಸಣ್ಣ ಶಿಲ್ಪಗಳು ಸರಳೀಕೃತ ಆಕಾರಗಳಾಗಿ ನೀಡುವ ವಿವಿಧ ಭಾವ– ಭಂಗಿಗಳು, ಮನೋಹರವಾದುವು. ಚಿತ್ರ ಕಲೆಯನ್ನು ಶಿಲ್ಪದ ಸಮನಾಗಿ ರೂಢಿಸಿಕೊಂಡು ಬಂದ ಕಲಾವಿದೆ ಈಕೆ. ಮೈಸೂರಿನ ಕಾವಾದಲ್ಲಿ ಕೆಲಸಮಾಡುತ್ತಲೇ ಹಲವು ಸಮಕಾಲೀನ ಶಿಲ್ಪಗಳನ್ನು ಸೃಷ್ಟಿಸಿದರು. ಗುರುರಾಜ್ ಎಸ್. ನಾಯಕ್ ಅವರು. ಪ್ಲಾಸ್ಟಿಕ್‌ನ ಶಿಲ್ಪಗಳಲ್ಲದೆ ಶಿಲಾ ಮಾಧ್ಯಮದಲ್ಲಿ ಸುಂದರ– ಅರ್ಥಪೂರ್ಣ ಶಿಲ್ಪಗಳನ್ನು ರಚಿಸಿರುವರು. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿರುವ ಶಿವಾನಂದ ಎಚ್. ಬಂಟನೂರ ಮರ ಮತ್ತು ಶಿಲಾ ಮಾಧ್ಯಮಗಳಲ್ಲಿ ಬಹುಕಾಲ ಕಾಡುವಂತಹ ಹಲವು ಗಮನಾರ್ಹ ಶಿಲ್ಪಗಳನ್ನು ಸೃಷ್ಟಿಸಿರುವರು. ಪಶ್ಚಿಮದ ದಟ್ಟ ನೆರಳಿನಲ್ಲಿ ಹುಟ್ಟಿ ಬಂದ ಅವರ ಪ್ರಾರಂಭದ ಶಿಲ್ಪಗಳು ಅನಂತರ ಸುತ್ತಲಿನ ಪ್ರಭಾವಗಳನ್ನು ಅರಗಿಸಿಕೊಂಡು ಸ್ವಂತಿಕೆ ಮೆರೆದಿರುವುದನ್ನು ಗುರುತಿಸಿಬಹುದು. ಹಲವು ವಸ್ತುಗಳನ್ನು ಅಸೇಂಬಲ್ ಮಾಡಿ ಸಂಯೋಜಿಸಿ ರಚಿಸಿರುವ ಕೆಲವು ಶಿಲ್ಪಗಳು ವಸ್ತುವಿನ ಹೊಸತನ ಆಕರ್ಷಕ ನಿರ್ವಹಣೆಗಳಿಂದ ಗಮನಾರ್ಹವಾಗಿವೆ.[೨೮] ಬಂಟನೂರರ ಶೀರ್ಷಿಕ ರಹಿತ ಹಲವು ಶಿಲ್ಪಗಳು ಭಾವ ಪ್ರಚೋದಕವಾಗಿದ್ದರೆ, ಬುದ್ಧ ಮತ್ತು ಅವನ ತತ್ವಗಳು, ಇಂಡಿಯನ್ ಬ್ರಶ್ ಫಾರ್ ಮಲ್ಟಿನ್ಯಾಷನಲ್ ಕಂಪನಿ ಷೂ, ಗ್ಯಾಟ್, ಆಕಾಶದ ರೊಟ್ಟಿಯಂತಹ ಶೀರ್ಷಿಕೆಯ ಶಿಲ್ಪಗಳು ತೀವ್ರ ವೈಚಾರಿಕ ಸ್ಪಂದನೆ ಮತ್ತು ಪ್ರಶ್ನಿಸುವ ಗುಣಗಳಿಂದ ಕೂಡಿವೆ. 'ಸುತ್ತಲಿನ ಚಲನಶೀಲ ದೃಶ್ಯಲೋಕವನ್ನು ಸೃಷ್ಟಿಶೀಲತೆಯ ದರ್ಶನದಂತೆ ಅವರ ಶಿಲ್ಪಗಳು ಪರಂಪರೆ, ಜಾನಪದ ಕಲಾ ಪ್ರಕಾರಗಳ ಅಧ್ಯಯನಶೀಲರಾದ ಬಂಟನೂರ ಸಮಕಾಲೀನ ಶಿಲ್ಪ ಪ್ರಕಾರದಲ್ಲಿ ವ್ಯಾಕರಣವನ್ನು ಮೀರಿದ ಮತ್ತು ವಿಕೃತಿ ಸೌಂದರ್ಯಮೀಮಾಂಸೆಯ ಶಕ್ತಿಯುತ ಸೃಷ್ಟಿಗಳಿಂದಾಗಿ ಹೊಸಪೀಳಿಗೆಯ ಶಿಲ್ಪಿಗಳಲ್ಲಿ ವಿಶೇಷವಾಗಿ ಕಾಣುತ್ತಾರೆ. ನಮ್ಮ ಸಂದರ್ಭದ ಉಸಿರುಗಟ್ಟಿಸುವ ಜನಮಾನಸದ ಬದುಕಿನ ಆಳದ ನೋಟಗಳ ದರ್ಶನದಂತೆ ಇವರ ಗ್ರಹಿಕೆಗಳು ಅಭಿವ್ಯಕ್ತಿಗೊಂಡಿವೆ. ನಿನ್ನೆ, ಇಂದು, ನಾಳೆಗಳ ಪ್ರಜ್ಞೆಗಳು ಕಲ್ಲು, ಮರ ಮತ್ತು ಲೋಹಮಾಧ್ಯಮಗಳಲ್ಲಿ ಮೂಡಿಬಂದಿವೆ. ವಿಕೃತಿ ಸೌಂದರ್ಯ ಮೀಮಾಂಸಗೆ ಪೂರಕವಾಗಿ ಅವರ ಪಲ್ಲಟ ಅವಿವೇಕ, ಕಾಯದ ನೆಳಲು, ಉಯಿಲು ಶಿಲ್ಪಗಳೇ ಅಲ್ಲದೆ, ಹಂಪಿ ವಿಶ್ವವಿದ್ಯಾಲಯದಲ್ಲಿ ಇವರ ಹಲವು ಶಿಲ್ಪಗಳಿವೆ. ಹತ್ತಿರದಲ್ಲೇ ಲಭ್ಯ, ಸರಳ ಮಾಧ್ಯಮಗಳಿಂದಲೇ ಗಹನವಾದ ಅನುಭವ ಲೋಕವನ್ನು ನೋಡುಗರ ಮುಂದೆ ಸೃಷ್ಟಿಸುವ ಬಂಟನೂರ ಅವರ ಶಿಲ್ಪಕೃತಿಗಳಲ್ಲಿ ಸಾಮಾಜಿಕ ಬದ್ಧತೆಯಿದೆ. ವಿಕ್ಷಿಪ್ತ, ಆತಂಕಮಯ ಬದುಕನ್ನು ಅರಗಿಸಿಕೊಂಡು ಸಮಚಿತ್ತದಿಂದ ಅಭಿವ್ಯಕ್ತಿಸಿರುವ ಬಂಟನೂರರನ್ನೂ ಅವರ ಬಹುತೇಕ ಶಿಲ್ಪಗಳಲ್ಲಿ ನಾವು ಕಾಣಬಹುದು.

ಚಿತ್ರಕಲೆ, ಬರೆಹ ಮತ್ತು ಸಂಘಟನೆಗಳೊಂದಿಗೆ ಆಗಾಗ ಗಮನಾರ್ಹವಾದ ಶಿಲ್ಪಗಳನ್ನು ರಚಿಸಿದವರು ಎಂ. ಎಸ್. ಮೂರ್ತಿ. ತಮ್ಮ ಅಭಿವ್ಯಕ್ತಿಗೆ ಶಿಲೆ ಮತ್ತು ಕರಗಳನ್ನು ಬಳಿಕೊಂಡಿರುವರು. ಮನುಷ್ಯನ ಮಹತ್ವಾಕಾಂಕ್ಷೆ ಸ್ವಾರ್ಥಪರವಾದ ಆಲೋಚನೆ,

ಅಮಾನವೀಯ ಗುಣಗಳು ವೈರುಧ್ಯಗಳು, ಗ್ರಾಮೀಣ ಸೊಗಡಿನ ಮಹತ್ವ ಇಂತಹ ಹಲವಾರು ವಸ್ತುಗಳನ್ನು ತಮ್ಮ ರಚನೆಗಳ ಮೂಲಕ ಬಿಂಬಿಸಿದವರು ಮೂರ್ತಿ. ಕಲಾಮೇಳ ಶಿಬಿರಗಳನ್ನು ಸಂಘಟಿಸಿದವರು. ೨೦೧೫ರಿಂದ ಕರ್ನಾಟಕ ಲಲಿತಕಲಾ ಅಕಾಡಮಿಯ ಅಧ್ಯಕ್ಷರಾಗಿಯೂ ಕೆಲಸ ನಿರ್ವಹಿಸುತ್ತಿರುವ ಚಿಂತನಶೀಲ ಕಲಾವಿದರು.

ಫೈಬರ್ ಮಾಧ್ಯಮದಲ್ಲಿ ಕೆಲವೊಮ್ಮೆ ಮರ ಮಾಧ್ಯಮಗಳಲ್ಲಿ ಗಮನಾರ್ಹವಾದ ಸಮಕಾಲೀನ ಶಿಲ್ಪಗಳನ್ನು ರಘುರಾಮ್ ಎಂ. ರಚಿಸಿ ಗಮನ ಸೆಳೆದಿರುವರು. ಆಧುನಿಕ ಜಗತ್ತಿನ ಆಕರ್ಷಣೆ ಮಾನವನ ಜ್ಞಾನ, ವಿಜ್ಞಾನದ ದಾಹ, ನಾಗಾಲೋಟಗಳನ್ನು ಬಿಂಬಿಸುವಂತಹ ಶಿಲ್ಪಗಳು ಗಮನಾರ್ಹ ಕೆಲವೊಮ್ಮೆ 'ಆಮೆ', ಮತ್ತು 'ವಿಮಾನ' ಗಳೆರಡನ್ನೂ ಒಂದೇ ಶಿಲ್ಪದಲ್ಲಿ ಸಂಯೋಜಿಸುವ ಮೂಲಕ ಆಮೆಯನ್ನು ಸುತ್ತಿಕೊಂಡಿರುವ 'ಮಿಥ್' ಗಳನ್ನು ಹಾಗೂ 'ಆಧುನಿಕ ಜಗತ್ತಿನ ವೇಗ' ಮತ್ತು ' ಗರ್ವ' ದ ಸಂಕೇತವಾಗಿ ವಿಮಾನವನ್ನು ಕಂಡಂತೆ ಅಭಿವ್ಯಕ್ತಿಸಿರುವ ಇವರ ಕೃತಿಗಳಲ್ಲಿ ಸಮಕಾಲೀನ ಜಗತ್ತಿನ ಆಯ್ದ ನೋಟಗಳಿಗೆ ಕನ್ನಡಿ ಹಿಡಿಯುವ ಪ್ರಯತ್ನ ಕಾಣುತ್ತದೆ. ಫೈಬರ್, ಅಕ್ರಲಿಕ್ ಶೀಟ್ ಇನ್ನೂ ಹಲವು ಮಾಧ್ಯಮಗಳನ್ನು ಸಮೀಕರಿಸಿ 'ಇನ್‌ಸ್ಟಾಲೇಷನ್' ಮಾದರಿಯ ಶಿಲ್ಪಗಳನ್ನು ಆಧುನಿಕೋತ್ತರವಾಗಿ ಪ್ರಸ್ತುತವಾಗುವಂತೆ ರಚಿಸಿರುವುದು ವಿಶೇಷ.

ಟಿಪ್ಪಣಿಗಳು

೧. ಕೆ.ವಿ.ಸು. : ಸಿ.ಪಿ. ರಾಜಾರಾಮ್, ಪುಟ ೨೭

೨. ಡಾ. ಶಿವಾನಂದ ಎಚ್. ಬಂಟನೂರ : ಚಿತ್ರಾಕ್ಷರ ಪುಟ ೯

೩. ರಾಜಾರಾಮರ ಶಿಲ್ಪಗಳನ್ನು ಬಹುವಾಗಿ ಮೆಚ್ಚಿಕೊಂಡಿದ ಧನರಾಜ್ ಭಗತ್ ಹಲವನ್ನು ಕೊಂಡಿದ್ದರು ಕೂಡ. ಸತೀಶ ಗುಜ್ರಾಲರು ರಾಜಾರಾಮರ ಹೆಸರಲ್ಲಿ "ಆಧುನಿಕ ವಸ್ತು ಸಂಗ್ರಹಾಲಯ ಸ್ಥಾಪಿಸಲು ಉದ್ದೇಶಿಸಿ ರಾಜಾರಾಮರ ತಂದೆ ಬ್ರಿಗೇಡಿಯರ ಪೊನ್ನಪ್ಪ ಅವರಿಗೆ ಪತ್ರವನ್ನೂ ಬರೆದಿದ್ದರು.

೪. ಪ್ರೊ. ಎಂ. ಎಚ್. ಕೃಷ್ಣಯ್ಯ, ಡಾ ವಿಜಯಾ, ಶ್ರೀ, ಸಿ. ಆರ್. ಕೃಷ್ಣರಾವ್: ಕರ್ನಾಟಕ ಕಲಾದರ್ಶನ ಸಂಪುಟ–೧, ಪುಟ ೨೫೭

೫. ಕೆ. ವಿ. ಸು: ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ ಪುಟ ೩೮

೬. ಅಪ್ಪುಕುಟ್ಟನ್ ಆಚಾರಿಯವರು ಬೆಂಗಳೂರಿನ ಡಿಸೈನ್ ಸೆಂಟರ್‌ನಲ್ಲಿಮಾಸ್ಟರ್ ಶಿಲ್ಪಿಯಾಗಿದ್ದರು. ಆಗವರು ಅನೇಕ ಸಮಕಾಲೀನ ಶಿಲ್ಪಗಳನ್ನು ರಚಿಸಿದರು. ಅವರ ಕೊಡುಗೆಯೂ ಗಮನಾರ್ಹ ಎಲ್. ಪಿ. ಅಂಚನ್‌ರು ಬೆಂಗಳೂರಿನ ವಿಶ್ವೇಶ್ವರಯ್ಯ ಮ್ಯೂಸಿಯಂನಲ್ಲಿ ಕಲಾವಿದರಾಗಿ ಕೆಲಸಮಾಡಿದವರು.

೭. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿನ ಶಿಲ್ಪವನದಲ್ಲಿ ಕೃಷ್ಣಮೂರ್ತಿಯವರ ಸಿಮೆಂಟ್ ಮಾಧ್ಯಮದ ನೆಲ್ಲು ಕುಟ್ಟುವ ಮಹಿಳೆಯರ ಶಿಲ್ಪ ಜನಪದೀಯ ಹಾಗೂ ಸಮಕಾಲೀನ ಸತ್ವಗಳೆರಡನ್ನೂ ಅರಗಿಸಿಕೊಂಡಿದೆ.

೮. ಕೆ. ವಿ.ಸು: ಕರ್ನಾಟಕದ ಆಧುನಿಕ ಶಿಲ್ಪಕಲೆ, ಪುಟ ೨೨

೯. ಟೆಕ್ನೊ ಆರ್ಟ್ ಕ್ಯಾಂಪ್' ೧೯೮೨: ಬೆಂಗಳೂರಿನ ಇಂಡಸ್ಟ್ರಿಯಿಲ್ ಮತ್ತು ಟೆಕ್ನೋಲಾಜಿಕಲ್ ಮ್ಯೂಸಿಯಂನ ಆಶ್ರಯದಲ್ಲಿ ಅದರ ಆವರಣದಲ್ಲಿಯೇ ನಡೆಯಿತು. ಶಿವಶಂಗ್, ರಾಘವ ಕನೇರಿಯಾ, ವಾಸುದೇವ್ ಮೊದಲಾದವರಿದ್ದರು. ದೃಶ್ಯಕಲೆ ಮತ್ತು ತಾಂತ್ರಿಕತೆಗಳೆರಡನ್ನು ಬೆಸೆದು ಸೃಜಿಸಿದ ವಿಶಿಷ್ಟ

ಉದ್ದೇಶದ ಶಿಬಿರದಾಗಿತ್ತು. ಕನ್ನೈಯಿ ಕುನ್ಹಿರಾಮನ, ವಿದ್ಯಾಶಂಕರ ಸ್ತಪತಿ ಭಾಸ್ಕರ್‌ರಾವ್, ವಾಸುದವ್, ಜಿ.ಎಸ್. ಶೆಣ್ಯೆ ಸರ್ಬರಿರಾಯ್, ಚೌಧರಿ, ವಿ. ಎ. ದೇಶಪಾಂಡೆಯವರೂ ಶಿಲ್ಪ ರಚಿಸಿದರು.

೧೦. ಡಾ. ಶಿವಾನಂದ ಎಚ್. ಬಂಟನೂರ: ಕರ್ನಾಟಕ ಶಿಲ್ಪ ಸಂಚಲನ: ಪುಟ ೧೦

೧೧. ಅದೇ... ಪುಟ ೧೦

೧೨. ಡಾ. ಅ.ಲ. ನರಸಿಂಹನ್, ಡಾ. ಎನ್. ಮರಿಶಾಮಾಚಾರ್ (ಸಂ): ಶಿಲ್ಪಕಲಾ ಪ್ರಪಂಚ: ಪುಟ ೫೨೪.

೧೩. ಅದೇ....ಲೇ: ಚಿ.ಸು. ಕೃಷ್ಣ ಸೆಟ್ಟಿ, ಪುಟ ೫೦೮.

೧೪. ಅದೇ.... ಪುಟ ೫೦೯.

೧೫. ಚಿ. ಸು. ಕೃಷ್ಣ ಸೆಟ್ಟಿ: ಯುಸೂಫ್ ಅರಕ್ಕಲ್ : ಪುಟ ೫೨

೧೬. ಡಾ. ಶಿವಾನಂದ ಎಚ್. ಬಂಟನೂರ : ಮಾಟದೊಳಗಣ ನೋಟ : ಪುಟ ೮೭

೧೭. ಅದೇ....ಪುಟ ೮೬

೧೮. ಶ್ಯಾಂ ಸುಂದರ ಬೆಂಗಳೂರಿನ ಕೆನ್ ಕಲಾಶಾಲೆಯಲ್ಲಿ ಕಲಿತವರು, ಆರ್. ಎಂ. ಹಡಪದ ಗುರುಗಳ ಪ್ರಭಾವವೂ ಅವರ ಮೇಲಾಗಿದೆ. ಹೈದರಾಬಾದ್‌ನ ಕೇದ್ರೀಯ ವಿಶ್ವವಿದ್ಯಾಲಯದಲ್ಲಿ ಸೇವೆ ಮಾಡಿ ನಿವೃತ್ತರಾಗಿದ್ದಾರೆ.

೧೯. ಪುಷ್ಪಮಾಲಾರ ಇನ್‌ಸ್ಟಾಲೇಷನ್‌ಗಳು ಹಾಗೂ ಇತರ ರಚನೆಗಳು ಕೌತುಕಮಯವಾದವುಗಳು.

೨೦. ಡಾ. ಶಿವಾನಂದ ಎಚ್. ಬಂಟನೂರ: ಮಾಟದೊಳಗಣ ನೋಟ, ಪುಟ ೮೮

೨೧. ಡಾ. ಶಿವಾನಂದ ಎಚ್. ಬಂಟನೂರ (ಸಂ): ಕರ್ನಾಟಕ ಶಿಲ್ಪ ಸಂಚಲನ, ಪುಟ ೩೨

೨೨. ಕೆ.ವಿ. ಸುಬ್ರಹ್ಮಣ್ಯಂ: ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ, ಪುಟ ೬೩

೨೩. ಕೆ.ವಿ. ಸುಬ್ರಹ್ಮಣ್ಯಂ: ಲಲಿತಕಲೆಗಳು, ಪುಟ ೩೪೪.

೨೪. ಡಾ. ಕರೀಗೌಡ ಬೀಚನಹಳ್ಳಿ: ಸಾಹಿತ್ಯ ಸಂಸ್ಕೃತಿಪಥ ಸಂಪುಟ ೨, ಪುಟ ೬೮೬.

೨೫. ಡಾ. ಶಿವಾನಂದ ಎಚ್. ಬಂಟನೂರ (ಸಂ): ಕರ್ನಾಟಕ ಶಿಲ್ಪ ಸಂಚಲನ ಪುಟ ೩೩

೨೬. ಕೆ.ವಿ. ಸುಬ್ರಹ್ಮಣ್ಯಂ: ಕರ್ನಾಟಕದ ಆಧುನಿಕ ಶಿಲ್ಪಕಲೆ ; ಪುಟ ೩೧

೨೬. ಅದೇ .... ಪುಟ–೩೨

೨೭. ಅದೇ.... ಪುಟ–೩೮

೨೮. ಕೆ.ವಿ. ಸುಬ್ರಹ್ಮಣ್ಯಂ: ಹಿಂಡ್‌ಸೈಟ್, ಶಿವಾನಂದ ಎಚ್. ಬಂಟನೂರ ಅವರ ಕ್ಯಾಟಲಾಗ್ ಬರಹ ೨೦೧೬.

ಅಧ್ಯಾಯ: ಆರು

ಸಮಕಾಲೀನ ಶಿಲ್ಪಕಲೆಯ ಮೂರನೆಯ ಘಟ್ಟ:

ವೈಚಾರಿಕ ಸ್ಪಂದನೆ

ಪ್ರಪಂಚದ ಸಾಂಸ್ಕೃತಿಕ ರಂಗದಲ್ಲಿ ತೀವ್ರಗತಿಯಲ್ಲಿ ಉಂಟಾದ ವೈಚಾರಿಕ ಕ್ರಾಂತಿಯ ಬಿಸಿ ಆಧುನಿಕ ಶಿಲ್ಪಕಲೆಯ ಮೇಲೂ ಆಯಿತು. ಅಂತೆಯೇ ಆಧುನಿಕ ದೃಶ್ಯಕಲೆಯ ಆರಂಭದ ನಿಯಮ– ನಂಬಿಕೆಗಳು ಆಧುನಿಕೋತ್ತರ ಸಂದರ್ಭದಲ್ಲಿ ನಗಣ್ಯವೆನಿಸಿದವು. ಶೈಲಿ ಸಿದ್ಧಾಂತಗಳಿಂದ ಅತೀತವಾಗಿ ಕಲಾವಿದರು ಶಿಲ್ಪಗಳನ್ನು ರಚಿಸಿದರು. ಈ ನಿಟ್ಟಿನಲ್ಲಿ ಹಲವು ಹೊಸ ಪ್ರತಿಭೆಗಳನ್ನು ಅವರ ರಚನೆಗಳನ್ನು ನಾವು ಕಾಣಬಹುದು. ವೀರಣ್ಣ ಅರ್ಕಸಾಲಿ, ರಘುರಾಮ, ಬಿ. ಎಂ. ರವಿಕುಮಾರ್, ಶಶಿಧರ ಜಿ. ಪತ್ತಾರ, ರಮೇಶ್ಚಂದ್ರ, ಡಿ. ರಂಗಸ್ವಾಮಿ, ಬಿ. ಆರ್. ಗೀತಾಂಜಲಿ, ಆನಂದ ಬಾಬು, ರವಿ ಷಾ, ಗೌತಮ ಅಂದಾನಿ, ಹೆಚ್. ಎಸ್.ವಿನಯ್, ಶರತ್‌ಚಂದ್ರ, ಶಿವಕುಮಾರ ಕೇಸರಮಡು, ವಿಶ್ವಕರ್ಮಾಚಾರ್, ಡಾ. ಜಿ. ಲಕ್ಷ್ಮೀಪತಿ, ಗೋಪಾಲ ಕಮ್ಮಾರ, ಮಹಾಂತೇಶ ಫಲದಿನ್ನಿ, ಮಂಜುನಾಥ ಕಂಚಗಾರ, ಶರಣಕುಮಾರ ಹೆಡೆ, ಸುರೇಂದ್ರ ವಿಶ್ವಕರ್ಮ, ಚಲವಾದಿ, ಬಸಮ್ಮ ನರಗುಂದ, ವಿಶ್ವನಾಥ ಇನ್ನೂ ಅನೇಕ ಯುವ ಶಿಲ್ಪಿಗಳು ಸಮಕಾಲೀನ ಶಿಲ್ಪಗಳಿಗೆ ಹೆಚ್ಚಿನ ಗಮನ ನೀಡಿರುವುದು ಗಮನಾರ್ಹ ಸಂಗತಿಯಾಗಿದೆ

ಪ್ರಕೃತಿಯ ಸುಂದರ ರೂಪಗಳನ್ನು ಗಮನಿಸಿ, ಅನುಭವಿಸಿ ಕಲ್ಲು, ಮರ ಮಾಧ್ಯಮಗಳಲ್ಲಿ ಅಭಿವ್ಯಕ್ತಿಸಿದವರು ಶಶಿಧರ ಪತ್ತಾರರು, ಮೂಲತಃ ಉತ್ತರ ಕರ್ನಾಟಕದಿಂದ ಬೆಂಗಳೂರಿಗ ಕೆಲಸವನ್ನರಸಿ ಬಂದವರು, ನವ್ಯ ಶಿಲ್ಪಗಳಿಂದ ಆಕರ್ಷಿತರಾಗಿ ರಚಿಸಲು ತೊಡಗಿದವರು. ಮನುಷ್ಯನೊಳಗೆ ಬೇರೂರಿರುವ ಮಹತ್ವಾಕಾಂಕ್ಷೆ, ಸ್ಪರ್ಧಾತ್ಮಕ ಜಗತ್ತಿನಲ್ಲಿ ಸಂಭವಿಸುವ ಏಳು ಬೀಳುಗಳು ಮನುಷ್ಯನೊಳಗಿನ ಸೀಳು ವ್ಯಕ್ತಿತ್ವಗಳಂತಹ ವಸ್ತು-ವಿಷಯಗಳನ್ನು ತಮ್ಮ ಮನದ ಮಾಧ್ಯಮದ ಶಿಲ್ಪಗಳಲ್ಲಿ ಅಭಿವ್ಯಕ್ತಿಸಿದವರು ರಮೇಶ್ಚಂದ್ರ ಅವರು. ಬೆಂಗಳೂರಿನ ಕೆನ್ ಕಲಾಶಾಲೆಯಲ್ಲಿ ಹಡಪದವರ ಮಾರ್ಗದರ್ಶನದಲ್ಲಿ ಚಿತ್ರಕಲೆಯನ್ನು ಕಲಿಯುತ್ತಲೇ ಶಿಲ್ಪಕಲೆಯನ್ನು ಸ್ವಯಂಪ್ರೇರಿತವಾಗಿ ರಚಿಸಿದವರು. ಶಿಲಾ ಮಾಧ್ಯಮದಲ್ಲಿ ಹಲವು ಕೃತಿಗಳನ್ನು ಗಮನಾರ್ಹವಾಗಿ ರಚಿಸಿದವರು. ಮಾನವನ ಪ್ರಕೃತಿಯ ಒಳನೋಟಗಳ ವಿವಿಧ ಆಯಾಮಗಳನ್ನು ಒಳಹೊಕ್ಕು ನೋಡುವ ನಮ್ಮ ನಡುವಿನ ಹಲವಾರು ಯುವ ಪ್ರತಿಭೆಗಳ ಶಿಲ್ಪಸೃಷ್ಟಿಗಳಲ್ಲಿ ಹಲವು ಉನ್ನತ ಮಜಲುಗಳನ್ನು ಮುಟ್ಟುವ ಪ್ರಯತ್ನ ಮಾಡಿರುವುದು ಕಂಡು ಬರುತ್ತದೆ.

ಅಂಥವರಲ್ಲಿ ಬಿ. ಎಂ. ರವಿಕುಮಾರ್, ವೀರಣ್ಣ ಅರ್ಕಸಾಲಿ, ರಘುರಾಮ, ರಮೇಶ್ಚಂದ್ರ, ಡಿ. ರಂಗಸ್ವಾಮಿ, ಬಿ.ಆರ್. ಗೀತಾಂಜಲಿ, ಆನಂದ ಬಾಬು, ರವಿ ಷಾ, ಗೌತಮ ಅಂದಾನಿ, ಹೆಚ್.ಎಸ್.ವಿನಯ್, ಶರತ್ ಚಂದ್ರ, ವಿಶ್ವ ಕರ್ಮಾಚಾರ್, ಡಾ. ಜಿ.ಲಕ್ಷ್ಮೀಪತಿ, ಗೋಪಾಲ ಕಮ್ಮಾರ, ಈರಣ್ಣ ಕಂಬಾರ, ಮಹಾಂತೇಶ ಫಲದಿನ್ನಿ, ಮಂಜುನಾಥ ಕಂಚಗಾರ, ಶರಣಕುಮಾರ ಹೆಡೆ, ಸುರೇಂದ್ರ ವಿಶ್ವಕರ್ಮ, ಬಸಮ್ಮ ನರಗುಂದ, ವಿಶ್ವನಾಥ ಇನ್ನೂ ಅನೇಕ ಯುವ ಶಿಲ್ಪಿಗಳು ಶಿಲ್ಪಗಳಿಗೆ ಹೆಚ್ಚಿನ ಗಮನ ನೀಡಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಸಮಕಾಲೀನ ಮಾನವನ ಸಾಮಾಜಿಕ ಸ್ತರದ ಹಲವು ಆಯಾಮಗಳನ್ನು, ಆಧುನಿಕೋತ್ತರ ಬೆಳವಣಿಗೆಗಳನ್ನು ಬದಲಾವಣೆಗಳನ್ನು ಗಮನಿಸಿ, ಅನುಭವಿಸಿಕೊಂಡು ಕೇಳಿ, ನೋಡಿ ತಿಳಿದು ಚಿಂತನೆಯಿಂದ ಕೂಡಿದ ಹಲಗೆಯ ಮಾಧ್ಯಮಗಳಲ್ಲಿ ಈ ಶಿಲ್ಪಿಗಳು ಕಲಾಕೃತಿಗಳನ್ನು ರಚಿಸಿದವರಾಗಿದ್ದಾರೆ. ವಿಶೇಷವಾಗಿ ಹುಬ್ಬಳ್ಳಿ ಮೂಲದ ವೀರಣ್ಣ ಅರ್ಕಸಾಲಿಯವರು ಅಮೂರ್ತ ಶೈಲಿಯ ಶಿಲ್ಪಗಳನ್ನು ರಚಿಸಿ ಹೆಸರಾಗಿರುವರು. ಪ್ರಕೃತಿಯ ಅದೃಶ್ಯ ಲೋಕದ ಅದೇಷ್ಟೋ ದೃಶ್ಯಗಳು ಅವುಗಳಲ್ಲಡಗಿದ ಅಗೋಚರ ಜೀವಿಸಂಕುಲ, ವಿಚಿತ್ರಮಯ ಸುಳಿಗಳು ಏನೆಲ್ಲವನ್ನು ಕುರಿತು ಕಲ್ಪಿಸಿ ದೃಶ್ಯಾತ್ಮಕಗೊಳಿಸಿರುವರು. ವಿಶಿಷ್ಟ ರೂಪ, ಮೈವಳಿಕೆ ನಿಘೂಡತೆ ಇವರ ಶಿಲ್ಪಗಳ ವಿಶೇಷತೆ. ಮನುಷ್ಯನ ದುರಾಸೆ, ಕಪಟ, ಸಿನಿಕತನಗಳ ಕುರಿತೂ ಚಿಂತಿಸಿ ಹಲವು ಶಿಲ್ಪಗಳನ್ನು ಶಿಲ್ಪಿಸಿರುವರು. ಮೇಣದಲ್ಲಿ ಶಿಲ್ಪಗಳನ್ನು ರಚಿಸಿ ಲೋಹದಲ್ಲಿ ಎರಕಹೊಯ್ದು ಅನೇಕ ಶಿಲ್ಪಗಳನ್ನು ಈ ಕಲಾವಿದ ರಚಿಸಿರುವರು. ಬೆಂಗಳೂರಿನ ಕಲಾಗ್ರಾಮ, ಮೈಸೂರಿನ ಕಾವಾದಲ್ಲಿ ಇವರ ಕೆಲವು ಶಿಲ್ಪಗಳಿವೆ. ಶಿಬಿರಗಳಲ್ಲಿಯೂ ರಚಿಸಿರುವರು. ಪ್ರಕೃತಿಯ ನಿರಂತ ಜೀವ ಚೇತನಕ್ಕೆ ಸಂಬಂದಿಸಿದಂತೆ ಅದರ ಬೀಜವೊಂದು ಮೊಳೆತು ಸಸಿಯಾಗಿ, ಗಿಡವಾಗಿ, ಮರವಾಗಿ, ಮಾಗಿ ಮುಪ್ಪಾಗಿ ಅಸ್ತಿತ್ವವನ್ನು ಬೇರೊಂದು ಸ್ಥಿತಿಗೆ ಪರಿವರ್ತಿಸಿಕೊಂಡು ಮತ್ತೆ ಮರುಹುಟ್ಟು ಪಡೆಯುವ ಹಲವು ಸ್ಥಿತಿಗಳನ್ನು ಸ್ಥಿತ್ಯಂತರಗಳನ್ನು ಕೆ.ರಾಘವೇಂದ್ರ ಶಿಲ್ಪಿಸಿರುವರು. ವಿಶೇಷವಾಗಿ ಮೈಸೂರಿನ ಹೆಗ್ಗಡೆ ದೇವನಕೋಟೆ ಕಲ್ಲು ಇವರ ಪ್ರಿಯ ಮಾಧ್ಯಮ. ಶಿಲೆಯೊಂದಿಗ ಕಬ್ಬಿಣ- ಕಂಚುಗಳನ್ನು ಸರಳುಗಳನ್ನು ಸಂಯೋಜಿಸಿ

ವಿಶೇಷವೆನಿಸುವ ಶಿಲ್ಪಗಳನ್ನು ರಾಘವೇಂದ್ರ ರಚಿಸಿರುವರು. ಸಣ್ಣ ಅಳತೆಯಿಂದ ಆರಂಭಿಸಿ ೧೮-೨೦ ಅಡಿಗಳ ಬೃಹತ್‌ವರೆಗಿನ ಶಿಲ್ಪಗಳನ್ನು ಇವರು ರಚಿಸಿರುವರು. ಪ್ರಕೃತಿ ಜೀವಸಲಗ ಹಸಿರಿನ ಉಸಿರಿಗೆ ಸಂಬಂದಿಸಿ ಸಂಪೂರ್ಣ ಎಲೆಗಳಿಂದಲೇ ಆವರಿಸಿದಂತೆ ಕಾಣುವ ಶಿಲ್ಪಗಳನ್ನು ರಾಘವೇಂದ್ರ ರಚಿಸಿರುವುದು ವಿಶೇಷ. ಮೈಸೂರಿನ ಕಾವಾದಲ್ಲಿ ಶಿಲ್ಪಕಲೆಯನ್ನು ಕಲಿಸುತ್ತಿರುವವರಲ್ಲಿ ಇವರೂ ಒಬ್ಬರಾಗಿದ್ದಾರೆ. ಬಾದಾಮಿಯ ರಾಷ್ಟ್ರೀಯ ಶಿಲ್ಪದಲ್ಲಿ ಅಳತೆಯಲ್ಲಿ ಬೃಹತಾದದನ್ನೇ ಮರಳು ಶಿಲೆಯಲ್ಲಿ ರಚಿಸಿದರು. ಅದರ ಬೃಹದಾಕಾರವೇ ಭವ್ಯತೆಗೂ ಕಾರಣವಾಯಿತು.

ನಮ್ಮ ಪಾರಂಪಾರಿಕ ಅಥವಾ ಅಕಾಡೆಮಿಕ್ ಶಿಲ್ಪಕಲೆಯಲ್ಲಿ ಗುರುತಿಸಿಕೊಂಡಿರುವ ಕಲಾವಿದರು ಬಹಳ ಕಡಿಮೆ. ಇಲ್ಲವೇ ಇಲ್ಲವೆಂಬಷ್ಟು. ಒಬ್ಬ ಕನಕಾಮೂರ್ತಿಯವನ್ನು ಬಿಟ್ಟರೆ, ರೇಣೂಕಾ ಕಸರಮಡು, ಭಾರತಿ ಸರಗಣಾಚಾರಿ, ಬಸಮ್ಮ ನರಗುಂದ, ಡಾ. ಬಿ. ಆರ್. ಗೀತಾಂಜಲಿ ಇವರೆಲ್ಲ ಸಮಕಾಲೀನ ಶಿಲ್ಪಗಳನ್ನು ಸೃಷ್ಟಿಸಿರುವರು.

ಬಿ. ಆರ್. ಗೀತಾಂಜಲಿ ಆರಂಭದ ಶಿಲ್ಪಕಲೆಯ ಪಾಠಗಳನ್ನು ಮೈಸೂರಿನಲ್ಲಿ ಕಲಿತು ಬಳಿಕ ಶಾಂತಿನಿಕೇತನದಲ್ಲಿ ಕಲಿತುಬಂದವರು. ಸ್ತ್ರೀ ಕೇಂದ್ರಿತ ಕಾಳಜಿಗಳ ಅವರ ಬಹುಪಾಲು ಶಿಲ್ಪಕಲಾಕೃತಿಗಳು ಗಮನಾರ್ಹವಾಗಿವೆ. ಮಹಿಳೆಯ ಬದುಕಿನ ಪ್ರಸವ-ತಾಯ್ತನದಂತಹ ಹಲವು ಅವಸ್ಥೆಗಳನ್ನು ಕುರಿತು ಕಲ್ಲು, ಸಿಮೆಂಟನಂತಹ ಮಾಧ್ಯಮಗಳಲ್ಲಿ ಬಿಂಬಿಸಿರುವರು. ಕ್ವಚಿತ್ತಾಗಿ ಪರಂಪರೆ, ಜಾನಪದ, ಸಂಸ್ಕೃತಿ, ಧಾರ್ಮಿಕತೆಗಳ ಕುರಿತೂ ಶಿಲ್ಪಗಳನ್ನು ರಚಿಸಿರುವರು. ಬೆಂಗಳೂರು, ಬಾದಾಮಿ, ಮೈಸೂರು, ಕನ್ನಡ ವಿಶ್ವವಿದ್ಯಾಲಯಗಳಲ್ಲಿ ಅವರ ಶಿಲಾಶಿಲ್ಪಗಳನ್ನು ಕಾಣಬಹುದು. ದೀಪಸ್ತಂಬ, ತಾಯಿ ಶೀರ್ಷಿಕೆಯ ಹಲವು ಶಿಲ್ಪಗಳು ಗಮನಾರ್ಹ. ವಿಶಿಷ್ಟ ಮೈವಳಿಕೆ ರೂಪ ಆಕಾರಗಳ ಸೃಷ್ಟಿ ಆಕರ್ಷಕವಾದವುಗಳು.

ಕಲಬುರ್ಗಿ ಮೂಲದ ಆನಂದಬಾಬು ಅಂಬರಖಾನ ಮೈಸೂರಿನಲ್ಲಿ ನೆಲಸಿದ್ದು ವಿಶಿಷ್ಟ ಶಿಲ್ಪಗಳಿಗಾಗಿ ಹೆಸರಾಗಿದ್ದಾರೆ. ಶಿಲೆ, ಕಂಚು, ಲೋಹ, ಅಲ್ಲದೆ ಟೆರಾಕೊಟ್ಟ ಮಾಧ್ಯಮಗಳಲ್ಲಿ ತುಂಬಾ ಅರ್ಥ ಪೂರ್ಣ ಶಿಲ್ಪಗಳನ್ನು ಮಾಡಿರುವರು. ಟೆರಾಕೊಟ್ಟ ಶೂಗಳು ಇಸ್ತ್ರಿ ಮಾಡಿ ಷೇರಿಸಿಟ್ಟ ಬಟ್ಟೆಗಳು ಇಂತಹ ಶಿಲ್ಪಗಳಲ್ಲದೆ ಟೆರಾಕೊಟ್ಟ ಭಿತ್ತಿ ಶಿಲ್ಪಗಳೂ ಮುಖ್ಯವಾಗಿ ಗಮನ ಸೆಳಯುತ್ತವೆ. ಕಂಚು, ಗುಜರಿ ಲೋಹಗಳನ್ನು ಬಳಿ ಸುಂದರ ಶಿಲ್ಪಗಳನ್ನು ರಚಿಸಿರುವರು.

ಆಕಾಶಕ್ಕೇರಿದ ಮೇಲೆ ನೆಲದ ಮೇಲೆ ನಾವು ಕಲಿತ ಎಲ್ಲ ಸೂತ್ರಗಳೂ ನಿರುಪಯುಕ್ತ ಎನಿಸುವಂತಹ ಅನುಭವ ಮಾಡಿಸುವಂತ ಕಲಾವಿದನೊಬ್ಬ ಅತ್ಯುತ್ತಮ ಅಭಿವ್ಯಕ್ತಿಗಳ ಮೂಲಕ ವಿಶಿಷ್ಟ ಭಾವಗಳನ್ನು ನಮಗೆ ಕೊಡಲಾರಂಭಿಸಿದಾಗ ಹೇಗೆನಿಸುತ್ತದೆ? ತಾನು ಕಲಿತ ವ್ಯಾಕರಣವನ್ನು ಮೀರಿ ಮೇಲೇರುತ್ತಿದ್ದಾನೆ ಎನಿಸಬಹುದು! ಅಲ್ಲವೆ? ರವಿಷಾ 'ಟು ಸೀ' ಶಿಲ್ಪಗಳ ಪ್ರದರ್ಶನ (೨೦೦೫) ಈ ದೃಷ್ಟಿಯಿಂದ ಗಮನಾರ್ಹ. ಬಹುಪಾಲು ಶಿಲ್ಪಿಯ ಅಂತರಾಳ ಹೊಕ್ಕು ಅವರ ಗೆಳೆಯ/ ಗೆಳತಿಯರ ಸಮೂಹದಿಂದ ಮೂಡಿಬಂದ ಪೂರ್ಣ ಪ್ರಮಾಣದ ಭಾವಶಿಲ್ಪಗಳು ಇಲ್ಲಿದ್ದವು. ಗ್ಯಾಲರಿಯ ಒಳಹೊಕ್ಕಂತೆ ಆ ಶಿಲ್ಪಗಳೇ ತಮ್ಮನ್ನು

'ಹೀಗೆ ಹಾಗೆ ಹೋಗಿ, ನೋಡಿ ಎಂಬುದನ್ನು ಸೂಚಿಸುವಂತೆ ನಿಂತಿದ್ದವು. ಅತ್ಯಂತ ಕುಶಲತೆಯಿಂದ ಕೆತ್ತಲ್ಪಟ್ಟ ಮರದ ಮಾಧ್ಯಮದ ಗಂಡು-ಹೆಣ್ಣಿನ ಶಿಲ್ಪಗಳವು. ಪರಸ್ಪರ'ನೋಡುವ' ಪ್ರಕ್ರಿಯೆಯಲ್ಲಿ ತಲ್ಲಿನರಾದಂತಹ ಅನುಭವ. ಈ ನಿಂತ ಶಿಲ್ಪಗಳಲ್ಲಿ ಶಿಲ್ಪದ ವ್ಯಾಕರಣ ಅನುಸರಿಸಿದ, ಹೆಚ್ಚಿನ ಕುಶಲತೆ ನಯಗಾರಿಕೆಗಳ ಮೂಲಕ ನೈಜತೆಗೆ ಹತ್ತಿರವಾದ ದೃಷ್ಟಿ ಮೇಳೈಸಿತ್ತು. ಮರದ ಸಹಜ ಬಿರುಕುಗಳನ್ನು ಶಿಲ್ಪಿ ಬಳಸಿಕೊಂಡ ರೀತಿಯೂ ವಿಶಿಷ್ಟವಾಗಿತ್ತು. ಈ ಬಿರುಕುಗಳೇರುವ ಶಿಲ್ಪದ ಭಾಗಗಳು ಕುತೂಹಲ ಮೂಡಿಸಿದ್ದವು. ಶಿಲ್ಪಿಯ 'ಸ್ವಭಾವ' ರೂಪದಂತಿರುವ ೧೦ ಅಡಿ ಎತ್ತರದ ಶಿಲ್ಪವೊಂದು ಅಸಾಮಾನ್ಯವೆಂಬಂತಿದ್ದಿತು. ಬಳುಕಿನಲ್ಲಿ ಕೆತ್ತನೆಯ ಒರಟು, ಅಸಮ ಏರು ತಗ್ಗುಗಳ ಮೈವಳಿಕೆಯನ್ನು ಹೊಂದಿ ಆಸಕ್ತಿದಾಯಕವಾಗಿರುವುದಲ್ಲದೆ ಶಿಲ್ಪದ ಎತ್ತರ, ಚೆಲ್ಲಿರುವ ಮರದ ತುಣುಕು, ಹುಡಿ ಎಲ್ಲವೂ ಪೂರಕವಾಗಿದ್ದವು. ಕ್ರಿಸ್ತನ ಶಿಲ್ಪವೊಂದಿದ್ದು ದೈವಿಕ ಅನುಭವದ್ದಾಗಿತ್ತು. ನರ್ತಕಿಯೋರ್ವಳ ನಾಟ್ಯ ಭಂಗಿಯ ಶಿಲ್ಪ, ವಿಕೃತಿ ಸೌಂದರ್ಯದ ಸ್ಪರ್ಶವಿದ್ದು ಪಕ್ವತೆಯಿಂದ ಕೂಡಿದ್ದಾಗಿತ್ತು. ಒಟ್ಟಾರೆ ಷಾ ಅವರ ಬುದ್ಧಿ, ಪ್ರತಿಭೆ, ಪಕ್ವತೆಗಳು ಈ ಶಿಲ್ಪಗಳಲ್ಲಿ ಸಂಗಮಿಸಿದ್ದವು ಎಂದರೆ ಅತಿಶಯೋಕ್ತಿಯಾಗಲಾರದು. ಏಳೆಂಟು ವರ್ಷಗಳ ಹಿಂದೆ ಕಲಬುರ್ಗಿಯ 'ದಿ ಐಡಿಯಲ್ ಫೈನ್ ಆರ್ಟ್' ಕಾಲೇಜಿನಲ್ಲಿ ಗೌತಮ ಅಂದಾನಿಯವರ ವ್ಯಕ್ತಿ ಶಿಲ್ಪವನ್ನು ಅವರಳತೆಯಲ್ಲಿರುವಂತ- ಸಣ್ಣ ಕೊಡಲಿಯಿಂದ ಚಕಚಕನೆ ಕೆತ್ತಿ ಒಂದೆರಡು ದಿನಗಳಲ್ಲಿ ರವಿ ಷಾ ಪೂರ್ಣಗೊಳಿಸಿದರು. ತದ್ರೂಪ್ಯತೆ, ಒರಟು ನಿರ್ವಹಣೆ, ಎಲ್ಲವೂ ಗಮನಾರ್ಹ ಈ ಸಂದರ್ಭ ಅಪರೂಪವಾಗಿತ್ತು. ಈ ಶಿಲ್ಪವನ್ನು ಸಂಸ್ಥೆಯಲ್ಲಿ ಈಗಲೂ ನೋಡಬಹುದು .

ಬಾಬು ಈಶ್ವರ ಪ್ರಸಾದರು ಚಿತ್ರಕಲೆಯಲ್ಲಿ ಉನ್ನತ ಸಾಧನೆ ಮಾಡಿದವರು. ಅಪರೂಪಕ್ಕೆ ಕೆಲವು ಪ್ರಯೋಗಾತ್ಮಕ ಶಿಲ್ಪಗಳನ್ನು ರಚಿಸಿರುವರು. ಕೆಲವೊಮ್ಮ ದೃಶ್ಯಕಲಾ ಕೃತಿಯೊಂದರಲ್ಲಿ ಚಿತ್ರ ಯಾವುದು ಶಿಲ್ಪ ಯಾವುದೆಂದು ಬೇರ್ಪಡಿಸಿ ನೋಡಲಾಗದಂತಹ ಕೃತಿಗಳನ್ನು ರಚಿಸಿರುವರು. ಆದರೆ ಅವೆಲ್ಲ ಸಮಕಾಲೀನ ಶಿಲ್ಪಕಲೆಗೆ ಹತ್ತಿರವಾಗಿ ಪ್ರಸ್ತುತವಾಗುವಂತಹ ಪ್ರಯೋಗಗಳೆಂದು ಬೇರೆ ಹೇಳಬೆಕಿಲ್ಲ.

ಅತ್ಯಂತ ಸರಳೀಕರಿಸಿದ, ಅಮೂರ್ತ ರೀತಿಯ ಶಿಲ್ಪಗಳನ್ನು ರಚಿಸಿರುವವರು ಗೋಪಾಲ ಕಮ್ಮಾರ. ಮೂಲತಃ ಬೆಳಗಾವಿ ಜಿಲ್ಲೆಯವರಾದ ಇವರು ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಶಿಲ್ಪಕಲೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರುವವರು. ಮತ್ತು ಅಲ್ಲಿಯೇ ಕೆಲಕಾಲ ಅಧ್ಯಾಪಕರಾಗಿ ವಿದ್ಯಾರ್ಥಿಗಳಿಗೆ ಕಲಿಸಿದವರೂ ಹೌದು. ಸದ್ಯ ಸ್ವಂತ ಊರು ಯರಗಟ್ಟಿಯಲ್ಲಿಯೇ ಉಳಿದು ಶಿಲ್ಪರಚನೆ ಮುಂದುವಸಿರುವರು. ಜಾನಪದದ ಸತ್ವಗಳನ್ನು ಹೀರಿಕೊಂಡ ಇನ್‌ಸ್ಟಾಲೇಷನ್ ಕಲಾಕೃತಿಗಳೂ ಇವರಿಂದ ರೂಪಗೊಂಡದ್ದಿದೆ.

ಶಿಲಾಶಿಲ್ಪಗಳಲ್ಲಿ ಇವರ ತರುವ ನುಣುಪು ಮತ್ತು ಒರಟು ಮೈವಳಿಕೆಯ ಹಣಿ, ಲಯಬದ್ಧ ತಿರುವು ಹೊರಳುಗಳು ಮತ್ತು ಸರಳೀಕೃತ ರೂಪಗಳು ಗಮನಾರ್ಹ.

ರಂಗಸ್ವಾಮಿ ಪಿ.ಯವರು ಬದಲಾದ ಆಧುನಿಕ ಬದುಕಿನ ಸ್ಥಿತ್ಯಂತರಗಳು, ನಿತ್ಯಾನುಭವದ ನೋಟಗಳನ್ನು ಮನುಷ್ಯನ ಚಂಚಲತೆ, ಅತಿ ಭಾವುಕತೆ, ಸಿನಿಕತನಗಳನ್ನು

ವ್ಯಂಗ್ಯ–ವಿಡಂಬನೆಗಳಿಂದ ಕೂಡಿದ ಶಿಲ್ಪಗಳಾಗಿ ಅಭಿವ್ಯಕ್ತಿಸಿರುವರು. ಮಣ್ಣಿನಲ್ಲಿ ರಚಿಸಿ ಲೋಹಕ್ಕೆ ಮಾರ್ಪಡಿಸಿರುವ ಇವರ ಹಲವು ಶಿಲ್ಪಗಳು ಹೊರಹಾಕಲ್ಪಡುವ ವಸ್ತುವಿನಿಂದಾಗಿ ವಿಶೇಷವೆನಿಸುತ್ತದೆ. 'ಸಾರ್ವಜನಿಕ ಶೌಚಾಲಯ' ಶಿಲ್ಪ ಮೇಲಿನ ಅಭಿಪ್ರಾಯಗಳಿಗ ಒಂದು ಉತ್ತಮ ಉದಾಹರಣೆಯಾಗುತ್ತದೆ. ಅವಸರದ ಬದುಕಿನ ಧಾವಂತ, ಜನಸಂದಣಿಗಳಲ್ಲಿ ಬಾದೆ ತೀರಿಸಿಕೊಳ್ಳುವುದಕ್ಕೂ ಪರದಾಡುವ ಸ್ಥಿತಿ ಏಕಾಂತಗಳಲ್ಲಿ ನಿರ್ವಹಿಸುವ ಇಂತಹ ಹಲವು ಸಾಮೂಹಿಕವಾಗಿ ಒಪ್ಪಿಕೊಂಡ ಅನಿವಾರ್ಯತೆಗಳು, ಇವೆಲ್ಲ ಆಧುನಿಕತೆಯ ಕೊಡುಗೆಗಳೆಂಬುದನ್ನು ಮನೋಜ್ಞವಾಗಿ ಇಂತಹ ಶಿಲ್ಪಗಳಲ್ಲಿ ರಂಗಸ್ವಾಮಿ ಬಿಂಬಿಸಿರುವುದು ಆಸಕ್ತಿದಾಯಕವಾಗಿವೆ.

ಪ್ರಯೋಗಶೀಲ ಆರ್. ಜಗದೀಶರ ಮಿಶ್ರಮಾಧ್ಯಗಳ ಶಿಲ್ಪಗಳೂ ಗಮನಾರ್ಹ ಒಂದು ಮಾಧ್ಯಮದಲ್ಲಿ ಔಪಯೋಗಿಕ ದೃಷ್ಟಿಯಿಂದ ರೂಢಿಯಲ್ಲಿರುವ ವಸ್ತು–ಪದಾರ್ಥಗಳನ್ನು ಮತ್ತೊಂದು ಮಾಧ್ಯಮದಲ್ಲಿ ಕುತೂಹಲ ಮೂಡಿಸುವಂತೆ ರಚಿಸುವ ಸೃಜನ ಶೀಲತೆ ಇವರದು. ಲೋಹ ಮತ್ತು ಕಲ್ಲುಗಳಿಂದ ರಚಿಸಿದ 'ಆರ್ಮರ್' ನಂತಹ ಶಿಲ್ಪಗಳು ವಿಶೇಷವಾಗಿರುವವು.

ರೂಪ, ಶೈಲಿ, ವಸ್ತು ಎಲ್ಲವೂಗಳನ್ನು ಗಾಮೀಣ ಜನಪದದಿಂದ ಪಡೆದುಕೊಂಡು ಸಮಕಾಲೀನವಾಗಿ ಅಭಿವ್ಯಕ್ತಿಸುವ ಸಂಪ್ರದಾಯ ಮತ್ತು ಸಮಕಾಲೀನತೆಯನ್ನು ಕಸಿಮಾಡಿದಂತಿರುವ ಶಿಲ್ಪಗಳನ್ನು ರಚಿಸುವ ಶಿಲ್ಪಿ ಗೋಪಿನಾಥ. ವಿಶೇಷವಾಗಿ ಶಿಲಾ ಮಾಧ್ಯಮಗಳಲ್ಲಿ ಬೃಹತ್ತಾದ ಮತ್ತು ಅತ್ಯಂತ ಪರಿಪೂರ್ಣವಾಗಿ, ಕರಾರುವಕ್ಕಾಗಿ ರಚಿಸಿರುವಂತಹ ಶಿಲ್ಪಗಳು ಅವರವು. ಅಪರೂಪಕ್ಕೆ ಆಧುನಿಕ ಜಗತ್ತಿನ ಸೋಗಲಾಡಿತನದ ಮುಖವಾಡ ಹೊತ್ತು, ಕಪಟ ಬದುಕನ್ನು ವಸ್ತುವಾಗಿಸಿಕೊಂಡು ಶಿಲ್ಪಗಳನ್ನು ಸೃಷ್ಟಿಸಿರುವುದು ಗಮನೀಯ. ತಮಗಿರುವ ಸಾಧ್ಯತೆ ಮತ್ತು ಮಿತಿಗಳನ್ನು ಮೀರಿ ಬದುಕಲೆತ್ನಿಸಿ ಸೋಲುವ ಮೂರನೇ ಜಗತ್ತಿನ ಜನರ ಅತೃಪ್ತಿಯ ಭಾವಗಳನ್ನು ಸೂಕ್ಷ್ಮವಾಗಿ ಶಿಲ್ಪಗಳಲ್ಲಿ ಬಿಂಬಿಸಲು ಯತ್ನಿಸಿರುವ ಗೋಪಿನಾಥ್ ಆಧುನಿಕ ಮನುಷ್ಯನ ಹಪಾಹಪಿತನದಿಂದಾಗಿ ಜಗತ್ತು ತಂದುಕೊಂಡಿರುವ ಹಲವು ಅನಾಹುತಗಳನ್ನೂ, ಸವಾಲುಗಳನ್ನು 'ಗ್ಲೋಬಲ್ ವಾರ್ಮಿಂಗ್' ನಂತಹ ಶಿಲ್ಪಗಳ ಮೂಲಕ ಮೂಡಿಸಿರುವರು. ಶಿಲೆ ಮತ್ತು ಲೋಹಗಳಲ್ಲಿ ಅಭಿವ್ಯಕ್ತಿಸಿರುವರು.

ಸಮಕಾಲೀನ 'ಅಸೆಂಬಲ್' ರೀತಿಯಲ್ಲಿ ಶಿಲ್ಪಗಳನ್ನು ರಚಿಸಿರುವವರು ಕೆ. ವಿವೇಕರಾವ್ ಅವರು. ಕಲಬುರ್ಗಿ ಮೂಲದ ಇವರು ಬೆಂಗಳೂರಿನಲ್ಲಿ ನೆಲೆಸಿ ಇಂತಹ ನೂರಾರು ಶಿಲ್ಪಗಳನ್ನು ರಚಿಸಿ ಗಮನ ಸೆಳೆದಿರುವರು. ಮರ, ಲೋಹ, ಗಾಜು, ಪ್ಲಾಸ್ಟಿಕ್, ಸೆಲ್ ಮೊದಲಾದ ವಸ್ತುಗಳು ಇವರ ಕಲಾಕೃತಿಗಳ ಭಾಗಗಳಾಗಿ ದುಡಿಸಿಕೊಳ್ಳಲ್ಪಟ್ಟಿರುತ್ತವೆ. ಆ ಎಲ್ಲ ಶಿಲ್ಪಗಳು ವಿಶಿಷ್ಟ ರೀತಿಯ ಬಣ್ಣ ಲೇಪನ(ಸ್ಪ್ರೇ)ದಿಂದಾಗಿ ಗಮನ ಸೆಳೆಯುತ್ತವೆ.

ಇವರೆಲ್ಲರ ನಡುವೆ ತಮ್ಮದೇ ವಿಶಿಷ್ಟ ಛಾಪು ಮೂಡಿಸಿರುವ ಹಿರಿಯ ಕಲಾವಿದ ವಿ. ಆರ್. ಸಿ. ಶೇಖರ್ ಇಂದಿಗೂ ಕೂಡ ಶಿಲ್ಪಕಲಾಕೃತಿಗಳನ್ನು ತಮ್ಮದೇ ಆದ ರೀತಿಯಲ್ಲಿ ಸೃಷ್ಟಿಸುತ್ತಿದ್ದಾರೆ. ಹಿಂದೊಮ್ಮೆ ಚಿತ್ರದುರ್ಗದ ಭೂದೃಶ್ಯವನ್ನು ಕಾಣುವಂತೆ ಕಂಚಿನಲ್ಲಿ

ಸೃಷ್ಟಿಸಿದ್ದರು. ಈ ಕಲಾಕೃತಿಯಲ್ಲಿನ ಶಿಲ್ಪ ಲಕ್ಷಣಗಳು ಅನಾದೃಶ್ಯವಾಗಿದ್ದವು. ಮತ್ತು ಅಸಾಮಾನ್ಯವಾದವುಗಳಾಗಿದ್ದವು. ಭೂದೃಶ್ಯವನ್ನು ಶಿಲ್ಪಕಲೆಯ ಗುಣಗಳಿಗೆ ಆರೋಪಿಸಿ ಗ್ರಹಿಸಿ ರಚಿಸಿದುದು ಆಸಂದರ್ಭದ ಅಚ್ಚರಿಯ ಪ್ರಯೋಗವಾಗಿತ್ತು.

ಜಿ. ಸುರೇಶ್ ಕೂಡ ಒಬ್ಬ ಸಂವೇದನಾಶೀಲ ಶಿಲ್ಪಕಲಾವಿದ. ಸುತ್ತಲೂ ನಡೆದಾಡಿ, ನೋಡುವಂತಹ ಮತ್ತು ಸ್ಪರ್ಷಿಸಿಯೂ ಅನುಭವಿಸುವಂತೆ ಪ್ರೇರೇಪಿಸುವ ನಾವೀನ್ಯತೆಯಿಂದ ಕೂಡಿದವು ಇವರ ಶಿಲ್ಪಗಳು. ಈ ಶಿಲ್ಪಗಳು ಗಂಭೀಕರಿಸಿಕೊಂಡಿರುವ ವಸ್ತುಗಳು ರಾಜಕೀಯ ಬ್ರಷ್ಟಾಚಾರ, ಪೊಳ್ಳುತನ, ದುರಾಸೆಗಳನ್ನು ಬಯಲುಮಾಡುವ ಹಂಬಲವುಳ್ಳ ಪ್ರಯೋಗಾತ್ಮಕ ಸೃಷ್ಟಿಗಳು.

ನಿರುಪಯುಕ್ತ ಅಥವಾ ಬಿಸುವ ತ್ಯಾಜ್ಯ ವಸ್ತುಗಳನ್ನು ದುಡಿಸಿಕೊಂಡು ಕೆಲವು ಮಹತ್ವದ ಶಿಲ್ಪಗಳನ್ನು ರಚಿಸಿದವರು ಬಿ.ಸಿ. ಶಿವಕುಮಾರ. ಹಲವು ರೀತಿಯಲ್ಲಿ ಹಲವು ಮಗ್ಗಲುಗಳಿಂದ ಗ್ರಹಿಸಿಬಹುದಾದ ಇವರ ಶಿಲ್ಪಗಳು ಅಮೂರ್ತ ರಚನೆಗಳಿಗೆ ಹತ್ತಿರವಾದವುಗಳು. ವಲ್ಡ್ ಮಾಡಿದ ಕಬ್ಬಿಣದಲ್ಲಿ 'ಬರ್ಡ್' ಶೀರ್ಷಿಕೆಯ ಕೃತಿ ಗಮನಾರ್ಹ. ವಸ್ತುಗಳು ನಿರ್ಧಿಷ್ಟ ರೂಪ, ಆಕಾರಗಳಲ್ಲಿ ಇಲ್ಲದಿದ್ದರೂ ಉದ್ದೇಶಿತ ಕಾರಣಗಳಿಗಾಗಿ ಬಳಸಿ ಕಲಾಕೃತಿಗಳನ್ನಿವರು ಸೃಷ್ಟಿಸುವರು. ಅನೇಕ ನಿಗೂಢ ಸಂಗತಿಗಳನ್ನು ಗೌಪ್ಯ ವಿಚಾರಗಳನ್ನು ತಮ್ಮಲ್ಲಿ ಅಡಗಿಸಿಟ್ಟುಕೊಂಡಿರುವ ಈ ಶಿಲ್ಪಗಳು ಸುಲಭವಾಗಿ ಅರ್ಥಗಳನ್ನು ಬಿಟ್ಟು ಕೊಡಲಾರದಂಥಹವುಗಳಾಗಿವೆ. ಬಿ.ಸಿ. ಶಿವಕುಮಾರರ ಭಾವ ಶಿಲ್ಪಗಳೂ ಗಮನಾರ್ಹ ಕಲಾಕೃತಿಗಳಾಗಿವೆ. ವಿವಿಧ ಶೀರ್ಷಿಕೆಗಳ ಕ್ಲೇ, ಟೆರಾಕೊಟ್ಟ ಶಿಲ್ಪಗಳು ಕುತೂಹಲವನ್ನು ಉಂಟುಮಾಡುವಂತಹ ವಿಲಕ್ಷಣ ರಚನೆಗಳಾಗಿವೆ.

ಬಾದಾಮಿಯಲ್ಲಿರುವ ಡಾ. ಮಹಾಂತೇಶ ಫಲದಿನ್ನಿ ಅವರು ನಿಸರ್ಗಕ್ಕೆ ತೀರ ಹತ್ತಿರವಾಗಿರುವಂತಹ ಸಮಕಾಲೀನ ಶೈಲಿಯ ಶಿಲ್ಪಗಳನ್ನು ರಚಿಸಿರುವರು. ಕ್ಯಾಕ್ಟ್ಸ್, ಮೊಳಕೆಗಳು ಅವುಗಳ ಸೂಕ್ಷ್ಮಗಳನ್ನು ಅಲ್ಲದೆ ಅಲಂಕಾರಿಕ ಪುಷ್ಪಗಳನ್ನು ನೆನಪಿಸುವಂತಹ ಶಿಲ್ಪಗಳನ್ನು ಕಲ್ಲು ಮತ್ತಿತರ ಮಾಧ್ಯಮಗಳಲ್ಲಿ ರಚಿಸಿರುವರು.

ಅಪರೂಪಕ್ಕೆ ಮನುಷ್ಯನಲ್ಲಿ ಸ್ಥಾಯಿಯಾಗಿರುವ 'ರತಿ' ಭಾವವನ್ನು ಉದ್ದೀಪನಗೊಳಿಸುವ ವಿಭಾವಗಳಂತೆ ಕಾಣುವ ಹಲವು ಶಿಲ್ಪಗಳನ್ನು ಇವರು ರಚಿಸಿರುವರು. ಶಿಲ್ಪಕಲೆಯಲ್ಲಿ ಸ್ನಾತಕೋತ್ತರ ಹಾಗೂ ಪಿಎಚ್.ಡಿ. ಪದವಿಗಳನ್ನು ಇವರು ಹೊಂದಿರುವರು. ಶಿಲ್ಪಕಲೆಯನ್ನು ಕಲಿಸುವುದರಲ್ಲೂ ತಲ್ಲೀನರಾಗಿರುವರು. ಅಮೂರ್ತ ರಚನೆಗಳನ್ನು ಹೆಚ್ಚಾಗಿ ಶಿಲಾಮಾಧ್ಯಮದಲ್ಲಿ ಅರಳಿಸಿರುವರು. ಮಂಜುನಾಥ್ ಕಂಚಗಾರ ವಿಶೇಷವಾಗಿ ಮರಳು ಹಾಗೂ ಮೃದು ಶಿಲೆಗಳಲ್ಲಿನ ಅವರ ಶಿಲ್ಪಗಳು ಅತ್ಯಂತ ಸರಳ– ಸುಂದರ ರಚನೆಗಳಾಗಿ ಗಮನ ಸೆಳೆಯುತ್ತವೆ. ಶಿಲೆಯ ಸಹಜ ನೈಸರ್ಗಿಕ ಮೈವಳಿಕೆಯನ್ನು ಕೆಲವು ಭಾಗಗಳಲ್ಲಿ ಹಾಗೇ ಉಳಸಿಕೊಂಡು ಮತ್ತು ಕೆಲವು ಭಾಗಗಳಲ್ಲಿ ಬಹಳಷ್ಟು ಕೆತ್ತನೆಯ ಮೂಲಕ ಶಿಲ್ಪದ ಅರ್ಥವಂತಿಕೆಯನ್ನು ಹೆಚ್ಚಿಸುವುದು ಇವರ ವಿಶೇಶತೆಯಾಗಿದೆ. ಬಹುಪಾಲು ಶಿಲ್ಪಗಳು ಆಕಾಶಕ್ಕೆ ತೆರೆದುಕೊಂಡು ಅಲ್ಲಿಂದ ಬರುವುದೆಲ್ಲವನ್ನು ನವೀಕರಿಸಿ ಭೂಮಿಯ ಮೇಲಿನ ಜೀವರಾಶಿಗಳಿಗೆ ಹಂಚುವ ಅಕ್ಷಯಪಾತ್ರೆಯ ಸಂಕೇತದಂತಿರುವುದು ಕುತೂಹಲಕರ.

ಸಂವೇದನಾಶೀಲ ಶಿಲ್ಪಿ ಶರಣಕುಮಾರ ಹೆಡೆ ಮೂಲತಃ ಸಾಂಪ್ರದಾಯಿಕ ಶಿಲ್ಪಕಲೆಯನ್ನು ಕಲಿತರೂ ಸಮಕಾಲೀನವಾಗಿ ಅಭಿವ್ಯಕ್ತಿಸುವಲ್ಲೂ ನಿಸ್ಸೀಮ. ಪರಂಪರೆ ಮತ್ತು ಇತಿಹಾಸದ ಪುಟಗಳಲ್ಲಿನ ದುರಂತಮಯ ಸನ್ನಿವೇಷಗಳನ್ನು ನೆನಪಿಸುವಂತಹ ಶಿಲ್ಪಗಳು ಗಮನಾರ್ಹವೆನಿಸುತ್ತವೆ. ಹಿಂದೆ ತಾಲಿಬಾನಗಳು ಅಲ್ಲಿನ ಬೌದ್ಧ ಶಿಲ್ಪಗಳನ್ನು ಒಡೆದು ಹಾಕಿದಂತಹ 'ಕಪ್ಪು' ನೆನಪುಗಳನ್ನು ಶಿಲ್ಪಗಳಲ್ಲಿ ಖಂಡರಿಸಿರುವುದು ವಿಶೇಷ.

ದಾವಣಗೆರೆಯಲ್ಲಿ ಶಿಲ್ಪಕಲೆಯನ್ನು ಕಲಿಸುತ್ತಿರುವ ಎಸ್.ವೆಂಕಟೇಶ್‌ರ ಹಲವು ಶಿಲ್ಪಗಳು ಬುದ್ಧಿ ಮತ್ತು ಭಾವಗಳನ್ನು ಬೆರೆಸಿ ಅಭಿವ್ಯಕ್ತಿಸಲ್ಪಟ್ಟ ಸುಂದರ ರಚನೆಗಳಾಗಿವೆ. ಮೃದು ಶಿಲೆ ಮತ್ತು ಸಿಮೆಂಟ್ ಮಾಧ್ಯಮದಲ್ಲಿ ಅವರು ಹಲವಾರು ಶಿಲ್ಪಗಳನ್ನು ರಚಿಸಿರುವರು. ವಿಶೇಷವಾಗಿ ಬೌದ್ಧಿಕತೆ ಅಕ್ಷರ ಜಗತ್ತು, ವಂಚಿತ ಜಗತ್ತುಗಳ ಹಲವು ವಿಕ್ಷಿಪ್ತ ಮುಖಗಳನ್ನು ಬಹುಕಾಲ ಕಾಡುವಂತೆ ರಚಿಸಿರುವರು. ಸರಳ ಮತ್ತು ಆಕರ್ಷಕವಾದ ರಚನೆಗಳು ಜನಸಾಮಾನ್ಯರಿಗೂ ಅರ್ಥವಾಗುವಂತೆ ಅರ್ಥಪೂರ್ಣವಾದ ಕಲಾಕೃತಿಗಳನ್ನು ಸೃಷ್ಟಿಸುವಲ್ಲಿ ನಿರತರು.

ಸ್ವಯಂ ಕಲಿಕೆಯಿಂದ ಸಮಕಾಲೀನ ಶೈಲಿಯ ಶಿಲ್ಪಗಳನ್ನು ರಚಿಸುತ್ತಿರುವ ವಿಶಿಷ್ಟ ಶಿಲ್ಪಿ. ದೇವಿತೋ ನಾಗೇಶ ಅವರು. ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯ ಸಮೀಪವಿರುವ ಹೆದ್ದೂರಲ್ಲಿನ 'ವನಚೇತನದಲ್ಲಿ' ಇವರ ಶಿಲ್ಪಗಳನ್ನು ಕಾಣಬಹುದು. ಮರ ಮತ್ತು ಸಿಮೆಂಟ್ ಮಾಧ್ಯಮಗಳಲ್ಲಿ ವಿಶೇಷವಾಗಿ ಮಕ್ಕಳಿಗೆ ರಂಜನೆ ಮತ್ತು ಜ್ಞಾನ ನೀಡುವ ಎರಡೂ ದೃಷ್ಟಿಯಲ್ಲಿರಿಸಿಕೊಂಡು ಅವರು ಶಿಲ್ಪಗಳನ್ನು ರಚಿಸಿರುವರು. ಅವರ ಈ ಶಿಲ್ಪಗಳು ಯಾವ ವಯಸ್ಸಿನವರಾದರೂ ಸರಿಯೆ, ಮುದ ನೀಡುತ್ತವೆ.

ಬಹುಪಾಲು ಅಮೂರ್ತ ನೆಲೆಯಲ್ಲಿ ಶಿಲ್ಪಕಲಾಕೃತಿಗಳನ್ನು ರಚಿಸುವಲ್ಲಿ ಗಮನ ಸೆಳದವರಲ್ಲಿ ಯು. ಭಾಸ್ಕರ್ ರಾವ್ ಒಬ್ಬರು. ಶಿಲೆ ಮತ್ತು ಲೋಹ ಇವರ ನೆಚ್ಚಿನ ಮಾಧ್ಯಮಗಳು. ಈ ಮಾಧ್ಯಮಗಳಲ್ಲಿ ಹಲವಾರು ಗಮನಾರ್ಹ ಶಿಲ್ಪಗಳನ್ನು ರಚಿಸಿರುವರು. ಅವರ ಶಿಲಾಮಾಧ್ಯಮದ 'ಗೂಳಿ' ಶಿಲ್ಪ ಹಾಗೂ ಅಮೂರ್ತ ಶೈಲಿಯ ಸರಣಿ ಶಿಲ್ಪಗಳು ವಿಶಷವಾಗಿ ಆಧುನಿಕ ಶಿಲ್ಪಕಲಾವಲಯದಲ್ಲಿ ಗಮನ ಸೆಳದಿರುವವು. ಅವರು ಶಿಲ್ಪಗಳ ಮೈಗೆ ತರುವ ವಿಶಿಷ್ಟ' ನುಣುಪಾದ 'ಮೈವಳಿಕೆ ಆಸಕ್ತಿದಾಯಕವಾಗಿರುತ್ತದೆ.

ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ ಕಲಬುರಗಿಯ ನಿಂಗಪ್ಪ ಡಿ. ಕೇರಿ ತಮ್ಮ ವಿಶಿಷ್ಟ ಶಿಲ್ಪಕಲಾಕೃತಿಗಳಿಂದ ನಾಡಿನ ಕಲಾಭಿಜ್ಞರ ಗಮನ ಸೆಳದಿರುವರು. ಮರ, ಶಿಲೆ, ಸಿಮೆಂಟ್ ಮತ್ತು ಫೈಬರ್ ಮಾಧ್ಯಮಗಳಲ್ಲಿ ತಮ್ಮ ವಿಲಕ್ಷಣ ಅನುಭವ– ವಿಚಾರಗಳಿಗೆ ದೃಶ್ಯರೂಪ ನೀಡಿರುವರು. ಬೆಂಗಳೂರಿನ ಕೆ.ಪಿ.ಜೆ. ಪ್ರಭು ಕೇಂದ್ರದಲ್ಲಿ ಒಂದು ವರ್ಷಸಾಂಪ್ರದಾಯಿಕ ಶಿಲ್ಪಕಲೆಯಲ್ಲಿ ತರಬೇತಿ ಹೊಂದಿರುವ ಇವರು ಆಧುನಿಕ ಸಮಕಾಲೀನ ಶೈಲಿಯಲ್ಲಿಯ ಹೆಚ್ಚು ಸಂಖ್ಯೆಯಲ್ಲಿ ಶಿಲ್ಪಗಳನ್ನು ರಚಿಸುವಲ್ಲಿ ಸಿದ್ಧಿ ಪಡೆದಿರುವರು. ಮೃದು, ಮರಳು ಚಪ್ಪಡಿ ಕಲ್ಲುಗಳಲ್ಲಿ ಅಲ್ಲದೆ ಸಿಮಂಟ್, ಫೈಬರ್ ಹಾಗೂ ವಿವಿಧ ಮರಗಳ ಮಾಧ್ಯಮಗಳಲ್ಲಿ ವೈವಿಧ್ಯಮಯ ಶಿಲ್ಪಗಳನ್ನು ಸೃಷ್ಟಿಸಿರುವರು. ಆಧುನಿಕ ಜೀವನದ ಸಮಸ್ಯೆ ಮತ್ತು ಸವಾಲುಗಳಿಗೆ ಇವರ ಕೆಲವು ಶಿಲ್ಪಗಳು ಕನ್ನಡಿ

ಹಿಡಿದಂತಿರುವುದು ವಿಶೇಷ. ಕಲಬುರ್ಗಿ, ಕುಪ್ಪಳ್ಳಿ, ಕನ್ನಡ ವಿಶ್ವವಿದ್ಯಾಲಯ ಮೊದಲಾದೆಡೆಗಳಲ್ಲಿ ಇವರ ಶಿಲಾ ಶಿಲ್ಪಗಳಿರುವುದನ್ನು ಕಾಣಬಹುದು. ಕಲಬುರ್ಗಿಯಲ್ಲಿ ಶಿಲ್ಪಕಲೆಯ ಸ್ಟುಡಿಯೊ ಮಾಡಿಕೊಂಡು ವಿದ್ಯಾರ್ಥಿಗಳಿಗೆ ಶಿಲ್ಪಕಲೆಯನ್ನು ಕಲಿಸುವ ಕಾರ್ಯವನ್ನು ಮುಂದುವರಸಿರುವುದು ಅನುಕರಣೀಯವಾಗಿದೆ.

ಪ್ರಸಿದ್ಧ ಚಿತ್ರಕಲಾವಿದರಾದ ಎಸ್.ಜಿ. ವಾಸುದೇವ್ ಅವರೂ ಲೋಹದ ಫಲಕಗಳ ಉಬ್ಬು ಶಿಲ್ಪಗಳಲ್ಲಿ ಜನಪದ ಕಲೆಗಳ ಕಲ್ಪನೆಗಳಿಂದ ಸ್ಫೂರ್ತಿಗೊಂಡು ಅಭಿವ್ಯಕ್ತಿಸಿರುವರು. ಸಮಕಾಲೀನ ಸ್ಪಂದನೆಯ ಸೆಳಕುಗಳೂ ಅವರ ಇಂತಹ ಶಿಲ್ಪಗಳಲ್ಲಿ ತೂರಿಕೊಂಡಿವೆ. ಮೈಥುನ, ಅವನು– ಅವಳು ಇತ್ಯಾದಿಗಳಲ್ಲದೆ ವೃಕ್ಷ ಸರಣೀಯ ಉಬ್ಬು ಶಿಲ್ಪಗಳನ್ನು ಸ್ಮರಿಸಿಕೊಳ್ಳಬಹುದು.[೨]

ಸೂಕ್ಷ್ಮ ಸಂವೇದನೆಯ ಕಲಾವಿದ ಬೆಂಗಳೂರಿನ ಬಿ. ಎಂ. ರವಿಕುಮಾರ ಅವರು ಹಲವಾರು ಬುದ್ಧಿಗಮ್ಯ ವಿಚಾರಪೂರ್ಣವಾದ ಶಿಲ್ಪಗಳನ್ನು ಸೃಷ್ಟಿಸಿರುವರು. ಆಧುನಿಕ ಜಗತ್ತಿನ ಸಮಸ್ಯೆಗಳು ತಲ್ಲಣಗಳನ್ನು ಕುರಿತು ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ರೀತಿ ಮನೋಜ್ಞವಾದುದು. ೨೦೦೮–೦೯ ಇವರ 'ಫೈಬರ್ ಮಾಧ್ಯಮದ ಶಿಲ್ಪಗಳು ಅರ್ಬನ್ ಅನಿಮಲ್ ಶೀರ್ಷಿಕೆಯಲ್ಲಿ ಮೂಡಿಬಂದದ್ದು ಅತ್ಯಂತ ಗಮನ ಸಳೆದ ಕಲಾಕೃತಿಯಾಗಿದೆ. ಪ್ಲಾಸ್ಟಿಕ್ ಜಗತ್ತಿನ ಪ್ರಾಣಿ ಪ್ರಪಂಚದ ಅದರಲ್ಲೂ ಗೋವುಗಳಂತಹ ಹಾಲು ನೀಡುವ ಪ್ರಾಣಿಗಳ ಮೇಲೆ ಮಾಡಿದ ದುಷ್ಪರಿಣಾಮವನ್ನು ಅತ್ಯಂತ ಪರಿಣಾಮಕಾರಿಯಾಗಿ ಶಿಲ್ಪಿಸಿರುವರು. ಪ್ಲಾಸ್ಟಿಕ್ ಕೇವಲ ಪ್ರಾಣಿಗಳು ಮಾತ್ರವೇ ಅಲ್ಲದ ತನ್ಮೂಲಕ ಮನುಷ್ಯವರ್ಗದ ಮೆಲೂ ಉಂಟು ಮಾಡುವ ಕೆಟ್ಟ ಪರಿಣಾಮಗಳನ್ನು ಮನಸ್ಸಿಗೆ ನಾಟುವಂತೆ ಶಿಲ್ಪ ರಚಿಸಿ ಚಿತ್ರಕಲಾ ಪರಿಷತ್ತಿನಲ್ಲಿ ೨೦೦೮ ರಲ್ಲಿ 'ಕಾಂಟೆಪರರಿ ಸ್ಕಲ್ಪ್ಚರ್ಸ್ ಫೋರಂ' ಗುಂಪಿನಲ್ಲಿ ಅವರು ಒಬ್ಬರಾಗಿ ಪ್ರದರ್ಶಿಸಿದ್ದರು.

ಈ ನಿಟ್ಟಿನಲ್ಲಿ ಕಲಬುರ್ಗಿಯವರಾದ ಈರಣ್ಣ ಕಂಬಾರ, ಮಹಾಂತೇಶ ಗುತ್ತೇದಾರ, ಶಿವಕುಮಾರ ಮಡ್ನಾಳರಂತಹ ಯುವ ಶಿಲ್ಪಿಗಳೂ ಗಮನಾರ್ಹರಾಗುತ್ತಾರೆ. ಈರಣ್ಣ ಕಂಬಾರ ಮರ, ಶಿಲ ಮತ್ತು ಸಿಮಂಟ್ ಮಾಧ್ಯಮಗಳಲ್ಲಿ ಶಿಲ್ಪಗಳನ್ನು ರಚಿಸಿರುವರು. ತಾಯಿ ಮಗುವಿನಂತಹ ಶಿಲ್ಪಗಳು ಸಮಕಾಲೀನವಾಗಿ ಆಕರ್ಷಕವನಿಸಿವೆ. ಇನ್ನೋಬ್ಬ ಯುವ ಕಲಾವಿದ ಗೌತಮ ಅಂದಾನಿ ಮರ ಮತ್ತು ಲೋಹ ಮಾಧ್ಯಮಗಳಲ್ಲಿ ರಚಿಸಿರುವ ಶಿಲ್ಪಗಳು ಕುತೂಹಲಕರವಾಗಿವೆ. ಲೋಹ ಫಲಕಗಳಲ್ಲಿ ಆಕಾರಗಳನ್ನು ಕೊರೆದು ಒಂದನ್ನೊಂದು ಬೆಸೆದು ರಚಿಸಿರುವ ಕೆಲವು ಶಿಲ್ಪಗಳು ವಿಶೇಷವಾದವುಗಳಾಗಿವೆ.

ಗೌತಮ ಜನಪದ ದೃಶ್ಯಕಲೆಗಳಿಂದಲೂ ಸ್ಫೂರ್ತಿ ಪಡೆದ ಹಲವು ಗಮನಾರ್ಹವಾದ ಶಿಲ್ಪಗಳನ್ನು ಶಿಲೆ ಮತ್ತು ಶಿಲಾ ಫಲಕಗಳನ್ನು ರಚಿಸಿರುವರು. ಜಾನಪದದ ಬೇರುಗಳನ್ನು ಆಧುನಿಕ ಹೊಸ ಚಿಗುರುಗಳನ್ನು ಒಟ್ಟಾಗಿಯೇ ಅವರ ಶಿಲ್ಪ ಪ್ರಯೋಗಗಳಲ್ಲಿ ಕಾಣಬಹುದು. ಮತ್ತೊಬ್ಬ ಯುವ ಶಿಲ್ಪಿ ವಿಪಿನ್‌ಸಿಂಗ್ ಬದೂರಿಯ ಶಿಲಾ ಮಾಧ್ಯಮದಲ್ಲಿ ಹಲವು ಗಮನಾರ್ಹ ಶಿಲ್ಪಗಳನ್ನು ರಚಿಸಿರುವರು. ಮಾನವನ ಮಹತ್ವಾಕಾಂಕ್ಷೆ, ಧಾರ್ಮಿಕ ಚೌಕಟ್ಟು, ಸಾಮಾಜಿಕ ಕಟ್ಟಳೆ, ನೈತಿಕ ನಿಯಮಗಳನ್ನು ಕುರಿತ ಸ್ಪಂದನಗಳು ಇವರ ಶಿಲ್ಪಗಳ

ವಸ್ತುಗಳಾಗಿ ಗಮನ ಸೆಳಯುತ್ತವೆ. ವಿಶಿಷ್ಟ ಮೈವಳಿಕೆ ಇವರ ಶಿಲಾ ಶಿಲ್ಪಗಳ ವೈಶಿಷ್ಟ್ಯವೆಂದರೆ ತಪ್ಪಲ್ಲ. ಮಹೇಶ ಕುಮಾರ ತಳವಾರ ಅವರ ಶಿಲ್ಪಗಳೂ ಗಮನಾರ್ಹ. ಎಸ್. ಉಮಶ್ ಕೂಡ ಶಿಲೆ ಮತ್ತು ಗುಜರಿಯಿಂದ ಆಕರ್ಷಕವಾದ ಶಿಲ್ಪಕಲಾಕೃತಿಗಳನ್ನು ರಚಿಸಿರುವವರು. ತೀರ ಸರಳ ಹಾಗೂ ಅಭಿವ್ಯಕ್ತಿ ಸೂಕ್ಷ್ಮತೆಯಿಂದ ಶಿಲ್ಪಗಳು ಆಸಕ್ತಿದಾಯಕವೆನಿಸುತ್ತವೆ.

ಕಲಬುರ್ಗಿ ಮೂಲದವರಾದ ರಾಜೇಶ್ ದೇವಣಗಾಂವ ಬೆಂಗಳೂರಿನಲ್ಲಿ ನೆಲಸಿದ ಮೇಲೆ ಹಲವಾರು ಗಮನಾರ್ಹ ಶಿಲ್ಪಗಳನ್ನು ರಚಿಸಿರುವವರು. ವಿಶೇಷವಾಗಿ ಹಲವು ವಸ್ತುಗಳನ್ನು ಫೈಬರ್ ಮಾಧ್ಯಮದೊಂದಿಗೆ ಸಮೀಕರಿಸಿ ಶಿಲ್ಪಗಳನ್ನು ರಚಿಸಿರುವುದು ವಿಶೇಷವಾಗಿ ಗಮನಸಳೆಯುತ್ತವೆ.

ಇಂದಿನ ಸಂದರ್ಭದ ವಿಶಿಷ್ಟ ಗ್ರಹಿಕೆ ಹಾಗೂ ಶಿಲ್ಪದ ವ್ಯಾಕರಣದ ಮೂರು ಆಯಾಮಗಳನ್ನು ಮೀರಿದ ಅಭಿವ್ಯಕ್ತಿಗಳು ವಿಚಾರ ಪೂರ್ಣವನಿಸುತ್ತವೆ. 'ಹಾಟ್ ಗೋಲ್ಡ್'[೩] ಹಾಗೂ ಶೀರ್ಷಿಕೆ ರಹಿತ ಹಲವು ಶಿಲ್ಪಗಳು ನೋಡುಗರಲ್ಲಿ ಹೊಸ ಅನುಭವ ನೀಡುತ್ತವೆ. ಇವರ ಮಿಶ್ರ ಮಾಧ್ಯಮದ ಹಲವು ಶಿಲ್ಪಗಳು ಗಮನಾರ್ಹ. ಬರೋಡದಲ್ಲಿ 'ಮ್ಯೂರಲ್' ವಿಭಾಗದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಬಂದಿರುವ ರಾಜೇಶ ಬೆಂಗಳೂರಿನಲ್ಲಿ ಅದನ್ನು ಬಿಡದೇ ಮುಂದುವರಿಸಿಕೊಂಡು ಬಂದಿರುವರು. ಅವರ 'ಸ್ಯಾಂಡ್ ಕಾಸ್ಮಾಂಗ್' ಶಿಲ್ಪಗಳೂ ಗಮನಾರ್ಹ. ಈ ನಿಟ್ಟಿನಲ್ಲಿ ಶಿವಾನಂದ ಅವಟೆಯವರ ಫೈಬರ್ ಶಿಲ್ಪಗಳು ಭಿತ್ತಿ ಶಿಲ್ಪಗಳು ಗಮನಾರ್ಹವೆನಿಸುತ್ತವೆ. ಯುವ ಶಿಲ್ಪಿಗಳಾದ ಆರ್, ಜಗದೀಶ್, ಮಧುಸೂಧನ, ಪರಪ್ಪ ಪಾಂಚಾಳ್, ಭರತ್ ಧನಂಜಯ ಶಿಲ್ಪಿ, ಬಸವರಾಜ್ ಹಿರೇಗೌಡರ್ ಮೊದಲಾದವರ ಶಿಲ್ಪಿಗಳೂ ಸಮಕಾಲೀನ ತುಡಿತ- ಮಿಡಿತಗಳನ್ನೊಂಡ ಗಮನಾರ್ಹ ಶಿಲ್ಪಗಳನ್ನು ರಚಿಸಿ ಭರವಸೆ ಮೂಡಿಸಿರುವರು. ಧನಂಜಯ ಶಿಲ್ಪಿಯವರ ಮಗ ಭರತ್ ಶಿಲ್ಪಿಯವರ ಅಭಿವ್ಯಕ್ತಿಗಳು ಸಮಕಾಲೀನ ಬದುಕಿನ ಉಸಿರುಗಟ್ಟಿಸುವ ಸಂದರ್ಭಗಳ ವಿಕೃತಿಯನ್ನು ಬಿಂಬಿಸುವಂತಿವೆ. ಉಳಿದವರ ಅಭಿವ್ಯಕ್ತಿಗಳು ಅವರ ಈ ವರೆಗಿನ ಸೃಷ್ಟಿಗಳ ಮುಂದುವರೆದ ರೂಪ ಶೈಲಿಯವುಗಳೇ ಆಗಿವೆ.[೪]

ಮೈಸೂರಿನ ಮಂಜುನಾಥ ಎ. ಆರ್. ಸಮಕಾಲೀನ ಯುವ ಶಿಲ್ಪಿಗಳಲ್ಲಿ ಕೇಳಿ ಬರುವ ಮತ್ತೊಂದು ಹೆಸರು. ಸಮಕಾಲೀನ ಬದುಕಿನ ವಿಕೃತಿಗೆ ವಿಶಿಷ್ಟ ನೋಟಗಳಿಗೆ ಪೂರಕವಾಗಿರುವಂತಹ ದೃಷ್ಟಿಗೆ ಹತ್ತಿರವಾಗಿ ಇವರ ಬಹುಪಾಲು ಶಿಲ್ಪಕಲಾಕೃತಿಗಳು ಮೂಡಿಬಂದಿವೆ.[೫] ಹಲವು ಶಿಲಾ ಶಿಲ್ಪಗಳು ಫೈಬರ್ ಮಾಧ್ಯಮದ ಶಿಲ್ಪಗಳಾಗಿ ಗಮನ ಸೆಳೆಯುತ್ತವೆ. ಬೆಂಗಳೂರು, ಹಂಪಿ ವಿ. ವಿ. ಮೈಸೂರಿನ ಕಾವಾ ಮೊದಲಾದೆಡೆಗಳಲ್ಲಿ ಇವರ ವಿಶಿಷ್ಟ ಶಿಲ್ಪಗಳನ್ನು ಕಾಣಬಹುದು.

ಬಾದಾಮಿಯ ಬಸಮ್ಮ ನರಗುಂದ ಹಾಗೂ ಭಾರತಿ ಸರಗಣಾಚಾರಿಯವರೂ ಮಹಿಳಾ ಸಂವೇದನೆ ಕೇಂದ್ರಿತ ಶಿಲ್ಪಗಳನ್ನು ಕೆತ್ತಿರುವರು. ಮಹಿಳೆಯಾರಾಗಿದ್ದರು ಮರಳು ಶಿಲೆಯಂತಹ ಕಠಿಣ ಪದಾರ್ಥದಲ್ಲಿ ಕೆತ್ತುವ ಕೊರಯುವ ಮೂಲಕ ವಿಶಿಷ್ಟ ಜೀವಧ್ವನಿಗೆ ಪೂರಕವಾಗುವಂತಹ ಸಮಕಾಲೀನ ಶಿಲ್ಪಗಳನ್ನು ಸೃಷ್ಟಿಸಿರುವರು. ಈ ಇಬ್ಬರೂ

ಶಿಲ್ಪಕಲೆಯಲ್ಲಿ ಪದವಿಯನ್ನು ಹೊಂದಿದವರಾಗಿದ್ದಾರೆ. ಕಲಾಶಾಲೆಗಳಿಂದ ಹೊರಬಂದ ಮೇಲೂ ಶಿಲ್ಪರಚನೆಯನ್ನು ಮುಂದುವರೆಸಿಕೊಂಡುರುವುದು ಇವರ ಬದ್ಧತೆಯ ಸಂಕೇತವಾಗಿದೆ. ಆಶ್ಚರ್ಯವೆಂದರೆ 'ಕಿವುಡ ಮತ್ತು ಮೂಗ' ಳಾಗಿರುವ ಬಸಮ್ಮ ಕನ್ನಡ ವಿಶ್ವ ವಿದ್ಯಾಲಯದ 'ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ' ಬಾದಾಮಿ –ಬನಶಂಕರಿ ಶಾಖೆಯಲ್ಲಿ ಶಿಲ್ಪಕಲೆಯ ರಚನೆಯೊಂದಿಗೆ ಕಲಿಸುವ ಕಾಯಕದಲ್ಲಿ ನಿರತಳಾಗಿರುವುದು ಈ ಇಬ್ಬರೂ ಅನೇಕ ಶಿಲ್ಪ ಶಿಬಿರಗಳಲ್ಲಿ ಭಾಗವಹಿಸಿ ಅಭಿವ್ಯಕ್ತಿಸಿರುವರು.

ತಮ್ಮ ಪ್ರಿಂಟ್ಸ್‌ಗಳಿಂದ ಪ್ರಯೋಗಶೀಲ ಕಲಾವಿದರಾಗಿ ಗುರುತಿಸಿಕೊಂಡಿರುವ ಕಲಬುರಗಿಯ ಬಾಬುರಾವ್ ಎಚ್. ಸಿಮೆಂಟ್ ಮಾಧ್ಯಮದಲ್ಲಿ ಹಲವು ಸುಂದರ ಶಿಲ್ಪಗಳನ್ನು ರಚಿಸಿರುವರು. ರಾಜ್ಯದ ಅಲ್ಲಲ್ಲಿ ಇವರು ಶಿಲ್ಪಗಳನ್ನು ಕಾಣಬಹುದು. ಮೈಸೂರಿನ ಕಲಾವಿದ ರಮೇಶ ಸಂಸ್ಕೃತಿಯ ಹಲವು ಒಳನೋಟಗಳನ್ನು ಸಮಕಾಲೀನ ಶೈಲಿಯ ಶಿಲ್ಪಗಳ ರಚನೆಯ ಮೂಲಕ ಅನುಭವಕ್ಕೆ ತಂದುಕೊಡುವುದರಲ್ಲಿ ಪ್ರಯತ್ನ ಶೀಲರು. ಶಿಲ್ಪಕಲೆಯಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ ಇವರು ಶಿಲೆಯಲ್ಲದ ಫೈಬರ್, ಸಿಮಂಟ್ ಹಾಗೂ ಮಿಶ್ರಮಾಧ್ಯಮಗಳಲ್ಲೂ ಅಭಿವ್ಯಕ್ತಿಸಿರುವರು. ಕನ್ನಡ ವಿಶ್ವವಿದ್ಯಾಲಯ; ಕುಪ್ಪಳ್ಳಿ, ಮೈಸೂರಿನ ಕಾವಾಗಳಲ್ಲಿ ಇವರ ಶಿಲ್ಪಗಳನ್ನು ಕಾಣಬಹುದು. ಸ್ವಯಂ ಕಲಿಕೆಯ ಸಂದೇಶ ಶಿಲಾ ಮಾಧ್ಯಮದಲ್ಲಿ ತಾಯಿಮಗುವಿನಂತಹ ಕೆಲವು ಶಿಲ್ಪಗಳನ್ನು ರಚಿಸಿರುವರು. ಕನ್ನಡ ವಿಶ್ವವಿದ್ಯಾಲಯ, ಕುಪ್ಪಳ್ಳಿ ಮೈಸೂರಿನ ಕೇಂದ್ರಗಳಲ್ಲಿ ಇವರ ಕೆಲವು ಶಿಲ್ಪಗಳನ್ನು ಕಾಣಬಹುದು.

ಕಲಬುರಗಿಯ ಜಿಲ್ಲೆಯ ಚಿತ್ತಾಪುರದವರಾದ ನಟರಾಜ ಶಿಲ್ಪಿ ಶಿಲ್ಪಕಲೆಯಲ್ಲಿ ಸ್ನಾತಕೋತ್ತರ ಹಾಗೂ ಎಂ. ಫಿಲ್. ಪದವಿಯನ್ನು ಪಡೆದು ಕಲಬುರ್ಗಿ ವಿಶ್ವವಿದ್ಯಾಲಯದಲ್ಲಿ ಶಿಲ್ಪಕಲೆಯನ್ನು ಕಲಿಸುತ್ತಿರುವ ಶಿಲ್ಪಿ, ಶಿಲಾ ಮಾಧ್ಯಮ, ಮರ ಹಾಗೂ ಮಿಶ್ರಮಾಧ್ಯಮಗಳಲ್ಲಿ ಕೆಲವು ಆಕರ್ಷಕ ಶಿಲ್ಪಗಳನ್ನು ಸೃಷ್ಟಿಸಿರುವರು. ಸಾಂಪ್ರದಾಯಿಕ ಶಿಲ್ಪಿಯಾಗಿರುವ ತಂದೆ ಮಹಾದೇವಪ್ಪ ಶಿಲ್ಪಿಯವರಿಂದ ಸ್ಫೂರ್ತಿ ಪಡೆದರೂ ಸಮಕಾಲೀನ ಶಿಲ್ಪಗಳಿಂದ ಆಕರ್ಷಿತರಾಗಿ ದೃಢತೆ, ಘನತೆ ಮತ್ತು ಗಾಂಭಿರ್ಯಗಳಿಂದ ಕೂಡಿದ ಶಿಲಾ ಶಿಲ್ಪಗಳನ್ನು ರಚಿಸಿ ಗಮನ ಸೆಳೆದಿರುವರು.

ಕಲಬುರಗಿ ವಿಶ್ವವಿದ್ಯಾಲಯದಲ್ಲಿ ಶಿಲ್ಪಕಲೆಯನ್ನು ಕಲಿಸುತ್ತಿರುವ ಮತ್ತೊರ್ವ ಮೈಸೂರಿನ ಹರೀಶ ಯುವ ಶಿಲ್ಪಿಗಳಲ್ಲಿ ಬಹುಮುಖ್ಯರು. ಶಿಲೆ, ಸಿಮೆಂಟ್, ಫೈಬರ್ ಮಾಧ್ಯಮಗಳಲ್ಲಿ ಅತ್ಯಂತ ಗಮನಾರ್ಹ, ಗಂಭೀರ ದೃಷ್ಟಿಕೋನಗಳಿಂದ ಕೂಡಿದ ಶಿಲ್ಪಗಳನ್ನು ರಚಿಸಿರುವರು. ಶಿಲಾ ಮಾಧ್ಯಮದ ಶಿಲ್ಪಗಳಲ್ಲಿ ಅವು ತುಂಬುವ ವಿಚಾರಗಳು ಅದಕ್ಕೆ ಪೂರಕವಾಗಿ ಬೇಕಾಗುವ ವಿಶಿಷ್ಟ ಮೈವಳಿಕೆಗಳು ಹಾಗೂ ನಿರ್ವಹಣೆಗಳು ವಿಶೇಷವಾಗಿ ಗಮನಸೆಳಯುವಂತಹವು. ೨೦೧೫ ರಲ್ಲಿ ಗದಗ ಜಿಲ್ಲೆ ಹುಲಕೋಟಿಯಲ್ಲಿ ಜರುಗಿದ ಶಿಲ್ಪ ಶಿಬಿರದಲ್ಲಿ 'ಆಯುರ್ವೇದ ಮಹಾವಿದ್ಯಾಲಯಕ್ಕಾಗಿ' ಅವರು ರಚಿಸಿದ ಶಿಲ್ಪ ವೀಕ್ಷಕರ ಗಮನ ಸೆಳೆಯಿತು. ಕಲಬುರ್ಗಿ ಮೈಸೂರುಗಳಲ್ಲೂ ಅವರ ಶಿಲ್ಪಗಳನ್ನು ಕಾಣಬಹುದು.

ತಮ್ಮ ಟೆರಾಕೊಟ್ಟ ಮತ್ತು ಸಿರಾಮಿಕ್ ಶಿಲ್ಪ ಕಲಾಕೃತಿಗಳಿಂದ ಜನಜನಿತರಾಗಿರುವ ಸಮಕಾಲೀನ ಶಿಲ್ಪಿ ಉಲ್ಲಾಸ ಕರ್ ಡೇ ಅವರು. ಮಾನವೀಯ ಗುಣಗಳನ್ನು ಮೈಗೂಡಿಸಿಕೊಂಡು ಸೃಷ್ಟಿಯಾದಂತಿರುವ ಅವರ ಶಿಲ್ಪಗಳು, ಕಲೈನಿಕನಿಷ್ಠ ಎಲ್ಲ ಅಂಶಗಳನ್ನು ದಿಕ್ಕರಿಸುವಂತೆ ಕಾಣುತ್ತವೆ. ತನ್ಮೂಲಕ ವ್ಯವಸ್ಥೆಯಲ್ಲಿನ ಶೋಷಕ ವರ್ಗವನ್ನು ಚರ್ಚಿಸಿ ಶೋಷಿತ ವರ್ಗದ ಪರವಾದ ಧ್ವನಿಯನ್ನೆತ್ತಿದಂತೆ ಕಾಣುವ ಶಿಲ್ಪಗಳು ಗಮನಾರ್ಹ. ಉಳಿದಂತೆ ಬಹುತೇಕ ಶಿಲ್ಪಗಳು ಜನಪದ ಕಲೆ ಮತ್ತು ಆಚರಣೆಗಳಿಂದ ಪ್ರಭಾವಿತಗೊಂಡು ರಚನೆಗೊಂಡವುಗಳಾಗಿವೆ.[೬]

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಶಿಲ್ಪಕಲೆಯಲ್ಲಿ ಪದವಿ ಪಡೆದಿರುವ ವಿಶ್ವನಾಥ್ ಎಂ. ಮಾನವ ರೂಪಗಳನ್ನು ಬಳಸಿಕೊಂಡು ಆಕರ್ಷಕವಾದ ಶಿಲ್ಪಗಳನ್ನು ರಚಿಸಿರುವರು. ನೋವು, ದುಗುಡ ವೀಕ್ಷಿಪ್ತ ಮನೋಭಾವಗಳಿಂದ ಕೂಡಿದ ಫೈಬರ್ ಮಾಧ್ಯಮದ ಶಿಲ್ಪಗಳು ಆಕರ್ಷಕವಾಗಿವೆ. ಆರಂಭದಲ್ಲಿ ಇಡಿಯಾಗಿ ಮಾನವನ ದೇಹವನ್ನೇ ಅಥವಾ ಭಾವಶಿಲ್ಪದಂತೆಯೇ ಶಿಲ್ಪಿಸಿ ಗಮನ ಸೆಳೆದ ಇವರು ಬಳಿಕ ದೇಹದ ಅವಯವಗಳ ಆಯ್ದ ಭಾಗಗಳನ್ನು ಮಾತ್ರ ಶಿಲ್ಪವಾಗಿಸಿರುವುದು ವಿಶೇಷ. 'ಕಪಲ್' ಶೀರ್ಷಿಕೆಯ ಸರಣಿ ಶಿಲ್ಪಗಳು ಅಪರೂಪವೆನಿಸುತ್ತವೆ. ಬೆಂಗಳೂರಿನ 'ಕಾಂಟೆಂಪರರಿ ಪೋರಂನ ಕಲಾವಿದರಲ್ಲಿ ಒಬ್ಬರಾಗಿ ಕ್ರಮವಾಗಿ ೨೦೦೮ ಹಾಗೂ ೨೦೧೦ರಲ್ಲಿ ಹಮ್ಮಿಕೊಂಡ ಪ್ರದರ್ಶನಗಳಲ್ಲಿ ತಮ್ಮ ಕಲಾಕೃತಿಗಳನ್ನು ವಿಶ್ವನಾಥ ಪ್ರದರ್ಶನ ಮಾಡಿ ಸೈ ಎನಿಸಿಕೊಂಡಿರುವರು. ಹೆಚ್ಚಾಗಿ ನೋವು–ಹತಾಸೆಗಳನ್ನು ಬಿಂಬಿಸುವ ಶಿಲ್ಪಗಳನ್ನು ರಚಿಸಿದ್ದು ವಿಶೇಷವಾಗಿ ಕಾಣುತ್ತದೆ.

ದಾವಣಗೆರೆ ಲಲಿತಕಲಾ ಮಹಾವಿದ್ಯಾಲಯದಿಂದ ಶಿಲ್ಪಕಲೆಯಲ್ಲಿ ಪದವಿ ಪಡೆದಿರುವ ಓಂಕಾರ ಮೂರ್ತಿ ಜಿ. ಬಿ. ವಿವಿಧ ಮಾಧ್ಯಮಗಳಲ್ಲಿ ಶಿಲ್ಪಗಳನ್ನು ರಚಿಸಿರುವರು. ಆದರೂ ಅವರ ಚಿಕ್ಕ ಅಳತೆಯಲ್ಲಿರುವ 'ಅಲ್ಯೂಮಿನಿಯಂ' ಮಾಧ್ಯಮದ ಶಿಲ್ಪಗಳು ಗಮನಾರ್ಹವೆನಿಸುತ್ತವೆ. ಸರಳೀಕೃತ ಆಕಾರ, ವಿಶಿಷ್ಟ ಮೈವಳಿಕೆಯಿಂದ ಕೂಡಿದ 'ಥಿಂಕರ್– ಸಿಸ್ಟರ್ಸ್' ಸರಣೀ ಕೃತಿಗಳಂಥವು ಆಕರ್ಷಕವಾಗಿ ಕಾಣುತ್ತವೆ. ರಾಗ ದ್ವೇಷಗಳಿಂದ ಮುಕ್ತವಾದ 'ನಿಸ್ಸಂಘ ಪರಿಭಾವನೆಯಿಂದ' ಕೂಡಿದವುಗಳಾಗಿ ಆಸ್ವಾದಕರನ್ನು ತಲ್ಲೀನಗೊಳಿಸಿ ಸಮಾಧಿ ಸ್ಥಿತಿಗೆ ಕರೆದೊಯ್ಯುವ ಅನುಭವ ನೀಡುತ್ತವೆ. ಓಂಕಾರ ಮೂರ್ತಿಯವರ ಇತರ ಶಿಲ್ಪಗಳಲ್ಲಿನ ಸಾಂಸ್ಕೃತಿಕ ಒಳನೋಟಗಳೂ ಅನನ್ಯ.

ಬೆಂಗಳೂರು ವಿಶ್ವವಿದ್ಯಾಲಯದ ಸಿ. ಆಯ್.ಎ.ಎಸ್. ಚಿತ್ರಕಲಾ ಇನ್ಸಿಟ್ಯೂಟ್ ಆಫ್ ಅಡ್ವಾನ್ಸ್ ಸ್ಟಡಿಸ್‌ನಿಂದ ಶಿಲ್ಪಕಲೆಯಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ ಎಲ್. ನರಸಿಂಹ ಪ್ರಕಾಶ್ ಫೈಬರ್ ಮಾಧ್ಯಮದಲ್ಲಿ ಸರಳೀಕೃತ ಆಕಾರಗಳಿಂದ ಕೂಡಿದ ಕೌಶಲವನ್ನು ಸಂಪೂರ್ಣವಾಗಿ ನಿರಾಕರಿಸಿದಂತಿರುವ ಶಿಲ್ಪಗಳನ್ನು ರಚಿಸಿರುವರು. ಪುನರಾವರ್ತಿತ ಲಯಬದ್ಧ ಆಕಾರಗಳಿಂದ ಕೂಡಿದ 'ಭಾರತೀಯ ಕುಟುಂಬ' ಶೀರ್ಷಿಕೆಯಯಿರುವ ಮತ್ತು ಶೀರ್ಷಿಕೆ' ಬೆಡವೆಂದ ಹಲವು ಶಿಲ್ಪಗಳು ಆಧುನಿಕೊತ್ತರ ಜಗತ್ತಿನ ಹೊಸತನ ಮತ್ತು ವಿರೋದಾಭಾಸಗಳನ್ನು ಒಟ್ಟಾಗಿಯೇ ಅನುಭವಕ್ಕೆ ತರುವಂತಿದೆ.

ಬೆಂಗಳೂರಿನ 'ಕಾಂಟೆಪರರಿ ಸ್ಕಲ್ಪರ್ಸ್ ಫೋರಂ' ನ ೨೦೧೦ರ ಪ್ರದರ್ಶನದಲ್ಲಿ ಇವರ 'ಫೈಬರ್' ಮಾಧ್ಯಮದ ಶಿಲ್ಪಗಳು ಪ್ರದರ್ಶನಗೊಂಡು ನೋಡುಗರ ಗಮನ ಸೆಳೆದವು.[೭]

ದಾವಣಗೆರೆಯ ಮತ್ತೊಬ್ಬ ಕಲಾವಿದ ಮತ್ತು ವಿ. ವಿ.ಯ ಲಲಿತಕಲಾ ಮಹಾವಿದ್ಯಾಲಯದಲ್ಲಿ ಅಧ್ಯಾಪಕನಾಗಿ ಕೆಲಸ ಮಾಡುತ್ತಿರುವ ಡಾ. ಗಿರೀಶ ಕುಮಾರ ಎಚ್. ಸಮಕಾಲೀನ ಶೈಲಿಯ ಶಿಲ್ಪಿಗಳನ್ನು ರಚಿಸಿ ಕಲಾವಲಯದಲ್ಲಿ ಹೆಸರು ಮಾಡಿರುವರು. ಆಧುನಿಕ ಜೀವನ ಶೈಲಿ, ಆಹಾರಪದ್ಧತಿ, ವಿಜ್ಞಾನ ತಂತ್ರಜ್ಞಾನಗಳ ಕೊಡುಗೆಗಳಿಂದ ಪ್ರೇರಿತವಾದ ಮನುಷ್ಯನ ಬದುಕು ತಂದುಕೊಂಡಿರುವ ಅಪಾಯಗಳನ್ನು/ಸಮಸ್ಯೆ ಸವಾಲುಗಳನ್ನು ಕುರಿತು ಚಿಂತಿಸಿ ರೂಪಿಸಿರುವ ಹಲವು ಶಿಲ್ಪ ಕಲಾಕೃತಿಗಳು ಗಮನಾರ್ಹವಾಗಿ ಕಾಣುತ್ತವೆ.

ಶಿಲೆ, ಟೆರಾಕೊಟ್ಟ್, ಫೈಬರ್, ಪ್ಲೇವುಡ್ ಮೊದಲಾದ ಮಾಧ್ಯಮಗಳಲ್ಲಿ ಶಿಲ್ಪಗಳನ್ನು ರಚಿಸಿರುವ ಇವರು ವಿಶೇಷವಾಗಿ ಬುಡಕಟ್ಟು ಜನ ಕುರಿತಾಗಿಯೂ ಶಿಲ್ಪಗಳನ್ನು ರಚಿಸಿರವರಲ್ಲದೆ ಆ ಜನರ ದೃಶ್ಯಕಲೆಗಳ ಕುರಿತು ಪಿ. ಎಚ್. ಡಿ ಯನ್ನೂ ಮಾಡಿರುವರು. ತಾಯಿ ಮಗು ಬುಡಕಟ್ಟು ಕುಟುಂಬ, ಬುಡಕಟ್ಟು ಮಹಿಳೆಯಂತಹ ಶಿಲ್ಪಗಳು ಆಕರ್ಷಕ ಮಗುವಿಗೆ ಮೊಲೆಯುಣಿಸದ ತಾಯಿ ಶಿಲ್ಪ ಅತ್ಯಂತ ಪರಿಣಾಮಕಾರಿಯಾದುದ್ದಾಗಿದೆ.

ಸಮಕಾಲೀನ ಶಿಲ್ಪಕಲೆ: ಮೈವಳಿಕೆ

ಸಾಮಾನ್ಯವಾಗಿ ಚಿತ್ರ ಇಲ್ಲವೆ ಶಿಲ್ಪ ಎಂದಾಕ್ಷಣ ನಮ್ಮ ಮನೋಪಟಲದ ಮೇಲೆ ಮೂಡುವುದು ದೃಶ್ಯ ಕಲ್ಪನೆ; ಹೀಗಾಗಿ ಇವೆರಡೂ ಅಪ್ಪಟ ದೃಶ್ಯಕಲೆಗಳನಿಸಿವೆ. ದೃಶ್ಯ ಭಾಷೆಯ ಮೂಲಕವೇ ಇವುಗಳ ಸಂವಹನ ಕ್ರಿಯೆ ನಡೆಯುತ್ತದೆ.

ಪ್ರತಿಭಾವಂತನಾಗಿರುವ ಕಲಾವಿದನು ವಿಶೇಷ ಪರಿಶ್ರಮ ಮತ್ತು ಸಾಧನೆಗಳಿಂದ ಈ ಭಾಷೆಯ ಸಾಧ್ಯಾ ಸಾಧ್ಯತೆಗಳನ್ನು ಅರಿತುಕೊಂಡವನಾಗಿರುತ್ತಾನೆ. ಮತ್ತು ಆವಾಗಲೇ ಆತನಿಗೆ ತನ್ನ ಅನುಭವಗಳು ಹಾಗೂ ಸೃಜನಶೀಲ ವಿಚಾರಗಳನ್ನು ಅರ್ಥಪೂರ್ಣವಾಗಿ ಅಭಿವ್ಯಕ್ತಗೊಳಿಸಲು ಸಾಧ್ಯವಾಗುತ್ತದೆ.

ದೈನಂದಿನ ವ್ಯವಹಾರಕ್ಕೆ ಬಳಸುವ ಶಾಬ್ದಿಕ (verble) ಭಾಷೆಯೊಂದನ್ನು ಕವಿ ಅಥವಾ ಸಾಹಿತಿಯಾದವನು ಹಗ ಒಂದು ವಿಶಿಷ್ಟರೀತಿಯಲ್ಲಿ ದುಡಿಸಿಕೊಳ್ಳುವುದರ ಮೂಲಕ ವಿಶೇಷತೆಗೇರಿಸಿ ತನ್ನ ಅನುಭವ, ವಿಚಾರಗಳನ್ನು ಕಾವ್ಯ ಅಥವಾ ಸಾಹಿತ್ಯವಾಗಿಸುತ್ತಾನೋ ಹಾಗೆ ದೃಶ್ಯ ಕಲಾವಿದನಾದವನು ಸಾಮಾನ್ಯವೆನಿಸುವ ರೇಖೆ, ಬಣ್ಣ, ಅವಕಾಶ ಮೊದಲಾದ ಮೂಲಭೂತ ಅಂಶಗಳನ್ನು ಕಲ್ಲು, ಕೊರಡು, ಲೋಹ ಮೊದಲಾದ ಪರಿಕರಗಳನ್ನು ವಿಶೇಷ ರೀತಿಯಲ್ಲಿ ದುಡಿಸಿಕೊಂಡು ರೂಪ, ಆಕಾರಗಳನ್ನು ದ್ವಿ ಆಯಾಮಗಳಲ್ಲಿ ಸೃಷ್ಟಿಸಿ ಆ ಮೂಲಕ ತನ್ನ ಅನುಭವ, ವಿಚಾರಗಳನ್ನು ಸಂವಹನಗೊಳಿಸುತ್ತಾನೆ. ಈ ಪ್ರಕ್ರಿಯೆಯಲ್ಲಿ ಮಾಧ್ಯಮಗಳು ತಮ್ಮತನ ಕಳೆದುಕೊಂಡು (ಅಂದರೆ ಬಣ್ಣ, ಕಾಗದ, ಕ್ಯಾನ್ವಾಸ್, ಕಲ್ಲು, ಕೊರಡು ಮುಂತಾದವುಗಳು ತಮ್ಮ ಭೌತಿಕ ರೂಪ ಕಳೆದುಕೊಂಡು ಜಂಗಮವಾಗುತ್ತದೆ.) ವಿಶೇಷತೆಗೇರಿ ಕಲಾಕೃತಿಗಳಾಗುತ್ತವೆ. ಅರ್ಥಾತ್ ಚಿತ್ರಕಾರನ ಅನುಭವ, ವಿಚಾರಗಳು ಚಿತ್ರ

ಕಲಾಕೃತಿಗಳಾಗಿ ಶಿಲ್ಪಕಾರನ ಅನುಭವ, ವಿಚಾರಗಳು ಶಿಲ್ಪಕಲಾಕೃತಿಗಳಾಗಿ ರೂಪು ಗೊಳ್ಳುತ್ತವೆ.

ಪ್ರಾಚೀನದಲ್ಲಿ ಚಿತ್ರರಚನೆಗೆ ಅವಕಾಶಗಳನ್ನಾಗಿ ಶಿಲಾಶ್ರಯಗಳು, ನೈಸರ್ಗಿಕ ಹಾಗೂ ಮಾನವ ನಿರ್ಮಿತ ಗುಹೆಗಳು, ಮನೆ, ಮಠ, ದೇವಾಲಯಗಳ ಭಿತ್ತಿಗಳನ್ನು ಬಳಸಿಕೊಂಡು ಬರಲಾಗಿದೆ. ಅನಂತರ ಕಾಗದ, ಕ್ಯಾನ್‌ವಾಸ್‌ಗಳು ಮುಂತಾದ ಆಧುನಿಕ ಮಾಧ್ಯಮಗಳು ಅಸ್ತಿತ್ವಕ್ಕೆ ಬಂದಿವೆ. ಕಲ್ಲು, ಮಣ್ಣು, ಸಸ್ಯಗಳು ಮುಂತಾದ ನಿಸರ್ಗಮೂಲಗಳಿಂದ ಪಡೆದ ಬಣ್ಣಗಳನ್ನು ಚಿತ್ರ ರಚನೆಗೆ ಆಗಿನ ದಿನಗಳಲ್ಲಿ ಬಳಕೆ ಮಾಡುತ್ತಿದ್ದರೆ, ಆಧುನಿಕ ಕಾಲದಲ್ಲಿ ತೈಲ, ಪೋಸ್ಟರ್, ಅಕ್ರಲಿಕ್ ಮುಂತಾದ ರಾಸಾಯನಿಕ ಬಣ್ಣಗಳು ಅವುಗಳ ಸ್ಥಾನವನ್ನು ಆಕ್ರಮಿಸಿ ತನ್ಮೂಲಕ ವೈವಿಧ್ಯತೆಯನ್ನು ಮೆರೆದಿವೆ. ಹಾಗೆಯೇ ಹಿಂದಿನಿಂದ ಮಣ್ಣು, ಮರ, ಶಿಲೆ, ಲೋಹ, ಗಾರೆ ಇತ್ಯಾದಿ ಮಾಧ್ಯಮಗಳನ್ನು ಶಿಲ್ಪ, ಭಿತ್ತಿಶಿಲ್ಪಗಳ ರಚನೆಗೆ ಬಳಸುತ್ತ ಬರಲಾಗಿದ್ದು ಸಮಕಾಲೀನ ಸಂದರ್ಭದಲ್ಲಿ ಗಾಜು, ಫೈಬರ್, ಆಕ್ರಲಿಕ್‌ನಂತಹ ಹೊಸ ಮಾಧ್ಯಮಗಳೂ ಬಳಕೆಗೆ ಬಂದಿದೆ ಮತ್ತು ಶಿಲ್ಪ ಕೆತ್ತನೆಗೆ ಉಳಿ, ಛಾಣ, ಸ್ವಯಂಚಾಲಿತ ಯಂತ್ರಗಳು, ಬಗೆ ಬಗೆಯ ಉಪಕರಣಗಳೂ (Tools) ಅಸ್ತಿತ್ವಕ್ಕೆ ಬಂದಿವೆ. ಹೀಗಾಗಿ ಸಮಕಾಲೀನ ದೃಶ್ಯಕಲೆ ಬಳಸುವ ಹೊಸ ಮಾಧ್ಯಮಗಳೊಂದಿಗೆ ಅವುಗಳ ಸಂಯೋಜನೆ, ನಿರ್ವಹಣೆ, ಶೈಲಿ, ತಂತ್ರ, ಆಶಯ, ಪ್ರಸ್ತುತತೆ, ಮೈವಳಿಕೆ (Texture) ಹಲವಾರು ಅಂಶಗಳಿಂದ ವಿಶೇಷತೆ ಪಡೆಯುತ್ತ ತನ್ನ ಅಸ್ತಿತ್ವವನ್ನು ಸ್ಥಾಪಿಸುತ್ತ ಸಾಗಿದೆ.

ಕಲಾವಿದನಿಂದ ನಿರ್ಮಿತವಾದ ಕಲಾಕೃತಿಯೊಂದು ಅದು ಚಿತ್ರವ ಇರಲಿ, ಶಿಲ್ಪವೇ ಆಗಿರಲಿ ಅದರ ಬಾವ ಸಂವಹನಕ್ಕೆ ಸಹಾಯಕವಾದ ಈ ಬಗೆಯ ವಿವಿಧ ಆಯಾಮಗಳಲ್ಲಿ 'ಮೈವಳಿಕೆ' ಎಂಬುದೂ ಒಂದು ಪ್ರಮುಖ ಅಂಶವಾಗಿದೆ. ಮುಖ್ಯವಾಗಿ ಒಂದು ಕಲಾಕೃತಿ ಸಹಜವಾಗಿಯೇ ತನ್ನಲ್ಲಿ ಅಡಗಿಸಿಟ್ಟುಕೊಂಡ ಭಾವವನ್ನು ಹೊರಹಾಕುವುದು ನಿರ್ವಹಿಸಲ್ಪಟ್ಟ ಈ ಮೈವಳಿಕೆ ಎಂಬ ಸ್ಥಬ್ಧಾಭಿನಯದಿಂದಲೇ ಎನ್ನಬೇಕು.

ಮೈವಳಿಕೆ ಎಂಬ ಕನ್ನಡ ಪದವನ್ನು ಇಂಗ್ಲೀಷ್ ನ 'Texture' ಎಂಬುದಕ್ಕೆ ಸಂವಾದಿಯಾಗಿ ಬಳಸಲಾಗಿದೆ. 'Texture' ಎಂದರೆ 'The process of art of viewing' ಎಂದು ಆಕ್ಸಫರ್ಡ್ ಇಂಗ್ಲೀಷ್ ಡಿಕ್ಷನರಿಯಲ್ಲಿ ವಿವರಣೆಯಿದೆ. ಮುಂದುವರೆದು 'In the fine art; the representation of the structure and minute moulding of a surface as list from its colour' ಎಂದಿದೆ. ಒಟ್ಟಾರೆ 'ಮೈವಳಿಕೆ' ಎಂದರೆ 'ಕಲಾಕೃತಿಯೊಂದನ್ನು ಸೃಷ್ಟಿಸುವಾಗ ಕಲಾವಿದ ಅನುಸರಿಸುವ ಒಂದು ಕ್ರಮ ಅಥವಾ ವಿಧಾನ ಎನ್ನಬಹುದು. 'ಕೃತಿ ನಿರ್ಮಿಸುವಲ್ಲಿ ಕಲಾವಿದ ಅನುಸರಿಸುವ ಈ ಕ್ರಮವಿಶೇಷದಿಂದಲೇ ಒಂದು ಮಾಧ್ಯಮ ತನ್ನತನ ಕಳೆದುಕೊಂಡು ಕಲಾಕೃತಿಯಾಗುತ್ತದೆ. ಸಮಕಾಲೀನ ಸಂದರ್ಭದಲ್ಲಿ ಬಹುತೇಕ ಕಲಾವಿದರು ಮೈವಳಿಕೆಗೆ ವಿಶೇಷ ಮಹತ್ವ ನೀಡಿ ಕಲಾಕೃತಿಗಳನ್ನು ಸೃಷ್ಟಿಸುತ್ತಲಿದ್ದಾರೆ. ಇದು ದೃಶ್ಯಕಲಾ ನಿರ್ಮಿತಿಯಲ್ಲಿ ಬಹುಮುಖ್ಯ ಸಂಗತಿಯಾಗಿ ತೋರಿತ್ತಲಿದೆ. ಸೃಜನಶೀಲವಾದ ಸಮಕಾಲೀನ ಕಲಾಕೃತಿಯೊಂದು ಅದು

ಯಾವುದೇ ಶೈಲಿ ಅಥವಾ ಪಂಥಕ್ಕೆ ಸೇರಿರಲಿ ಇಲ್ಲವೆ ಇವೆಲ್ಲವನ್ನು ಮೀರಿ ರಚನೆಗೊಂಡಿರಲಿ, ಮತ್ತು ಯಾವುದೇ ಮಾಧ್ಯಮವನ್ನು ಆಶ್ರಯಿಸಿ ಅಭಿವ್ಯಕ್ತಿಗೊಂಡಿರಲಿ; ಕಲಾಕೃತಿ ದೃಶ್ಯಾನುಭವದ ಮೂಲಕ ತನ್ನ ಆಶಯವನ್ನು ಬಿತ್ತರಿಸಲು ಸಮರ್ಥವಾಗುವುದು ವಿಶೇಷವಾಗಿ ಅದರಲ್ಲಿ ನಿರ್ವಹಿಸಲ್ಪಟ್ಟ ಈ ಮೈವಳಿಕೆಯಿಂದಲೇ ಎನ್ನಬೇಕು. ಏಕೆಂದರೆ ಕಲಾವಿದ ಕಲಾಕೃತಿಯೊಂದರ ಮೂಲಕ ಸಂಹನಗೊಳಿಸುವ ಆಶಯಕ್ಕೂ ಮತ್ತು ಅದರಲ್ಲಿ ನಿರ್ವಹಿಸಲ್ಪಟ್ಟ ಮೈವಳಿಕೆಗೂ ಒಂದು ವಿಶಿಷ್ಟವಾದ ಅವಿನಾಭಾವ ಸಂಬಂಧ ಏರ್ಪಟ್ಟಿರುತ್ತದೆ. ಕಲಾವಿಧನಲ್ಲಿ ಅಂತರ್ಗತವಾಗಿರುವ ವಿವಿಧ ಬಗೆಯ ಅನುಭವಗಳು ದೃಶ್ಯಾತ್ಮಕವಾಗಿ ಅಭಿವ್ಯಕ್ತಗೊಂಡಾಗ ಆಯಾ ಭಾವಗಳು ಆಸ್ವಾದಕನನ್ನು ತಲುಪುವಲ್ಲಿ ಮೈವಳಿಕೆ ಪ್ರಮುಖ ಪಾತ್ರವಹಿಸುತ್ತದೆ.

ಮನುಷ್ಯನಿಗೇ ವಿಶಿಷ್ಟವಾಗಿರುವಂತಹ ಕೋಮಲ ಭಾವಗಳನ್ನು, ಸಾಧು ಸ್ವಭಾವಗಳನ್ನು ಅಭಿವ್ಯಕ್ತಪಡಿಸಲು ಕಲಾಕೃತಿಗಳಲ್ಲಿ ನುಣುಪಾದ ಅಥವಾ ನಯವಾದ ಮೈವಳಿಕೆಯನ್ನು ಹಾಗೂ ಶಕ್ತಿ, ಹಿಂಸೆ, ಕೌರ್ಯಗಳಂತಹ ಭಾವಗಳನ್ನು ಅನುಭವಕ್ಕೆ ತಂದುಕೊಡಲು ಒರಟು, ದೊಗರು ಮೈವಳಿಕೆಗಳು ನಿರ್ವಹಿಲ್ಪಟ್ಟಿದ್ದರೆ ಅವು ಹೆಚ್ಚು ಪರಿಣಾಮಕಾರಿಯಾಗುತ್ತವೆ. ಪಾಶ್ಚಾತ್ಯ ಪ್ರಖ್ಯಾತ ಶಿಲ್ಪಿ ಹೇನ್ರಿಮೂರ್ ನು ತಾಯಿ-ಮಗುವಿನಂತಹ ನೂರಾರು ಶಿಲ್ಪಗಳನ್ನು ನುಣುಪಾದ ನಿರ್ವಹಣೆಯಿಂದಲೇ ಪೂರ್ಣಗಿಳಿಸಿರುವುದುಂಟು. ರಾಂಕಿಕರ್ ಬೈಜ್, ಶಂಕೂ ಚೌಧರಿ, ರಾಘವ ಕನೇರಿಯಾ, ಸೋಮನಾಥ ಹೋರ್ ಮುಂತಾದವರು ರಚಿಸಿರುವ ಸಾಮಾಜಿಕ ಅಸಮತೆ, ನೋವು, ನಿರಾಶೆಗಳನ್ನು ಒಳಗೊಂಡ ಶಿಲ್ಪಗಳಲ್ಲಿ ಒರಟು, ನುಣುಪು, ಕ್ರಮಬದ್ಧ ಕ್ರಮಮುರಿದ ಅಥವಾ ಕ್ರಮವಲ್ಲದ ರೀತಿಯ ಮೈವಳಿಕೆಯ ನಿರ್ವಹಣೆಯನ್ನೇ ಹೆಚ್ಚಾಗಿ ಕಾಣಬಹುದು. ಪೊನ್ನಪ್ಪ ರಾಜಾರಾಮ್ ಅವರ ಬಹುತೇಕ ಶಿಲ್ಪಗಳು ಮೃದು, ಕೋಮಲ, ಶೃಂಗಾರ ಭಾವಗಳನ್ನೇ ಅಭಿವ್ಯಕ್ತಿಸುವ ಆಶಯದವುಗಳಾಗಿದ್ದು, ನುಣುಪಾದ ಮೈವಳಿಕೆಯಿಂದಲೇ ಪೂರ್ಣಗೊಳಿಸಲ್ಪಟ್ಟಿವೆ. ಇನ್ನೂ ಕೆಲವೊಮ್ಮೆ ಮರದ ಸಹಜ ಆಕಾರ ಮತ್ತು ಮೈವಳಿಕೆಗಳನ್ನೇ ಉಳಿಸಿಕೊಳ್ಳಲಾಗಿದೆ. 'My sculpture is more for the feeling of the twist and turn found inform, garain or texture, in other words modifying nature to my purposes' ಎಂದು ತಮ್ಮ ಶಿಲ್ಪಗಳ ಮೈವಳಿಕೆಯ ನಿರ್ವಹಣೆಯ ಕುರಿತು ರಾಜಾರಾಂ ಹೇಳಿಕೊಂಡಿರುವರು. 'The beauty of wood is in its shape, its irregular grain, colour and texture. In the grain of wood one can imagine a picture and in its shape a movement common in every day life' ಎಂದಿರುವ ರಾಜಾರಾಮ ಅವರ ಈ ಅಭಿಪ್ರಾಯ ಒಟ್ಟಾರೆ ಶಿಲ್ಪಗಳ ಮೈವಳಿಕೆಯ ಮಹತ್ವವನ್ನು ಕುರಿತಾಗಿ ವಿವರಣೆ ನೀಡುತ್ತದೆ.

ಎನ್. ಎಚ್. ಕುಲಕರ್ಣಿಯವರ ವಿವಿಧ ಮಾಧ್ಯಮಗಳ ಶಿಲ್ಪಗಳಲ್ಲಿ ಮೈವಳಿಕೆಯ ವಿಶಿಷ್ಟತೆಯನ್ನು ಕಾಣಬಹುದು. ನುಣುಪು, ಒರಟು, ಹೊಳಪು, ತಗ್ಗು, ದಿನ್ನೆ, ಕ್ರಮಬದ್ಧ, ಕ್ರಮವಲ್ಲದ ರೀತಿಯ ಮೈವಳಿಕೆಯನ್ನು ಬಳಸಿ ಶಿಲ್ಪಗಳನ್ನು ಪರಿಣಾಮಕಾರಿಯಾದ

ಅನುಭವ ನೀಡುವಂತೆ ಮಾಡಿರುವರು. ವೆಂಕಟಾಚಲಪತಿಯವರ ಶಿಲೆ, ಟೆರಾಕೊಟಾ, ಫೈಬರ್ ಮಾಧ್ಯಮಗಳ ಶಿಲ್ಪಗಳಲ್ಲಿನ ಮೈವಳಿಕೆ ವಿಶಿಷ್ಟ ಅನುಭವ ನೀಡುವಂತಹುದು. ಅವರ ಶಿಲಾ ಶಿಲ್ಪಗಳಂತೂ ನಿರ್ವಹಿಸಲ್ಪಟ್ಟ ಮೈವಳಿಕೆಯಿಂದಲೇ ಗಮನ ಸೆಳೆಯುತ್ತವೆ. ಶಿಲ್ಪವೊಂದರಲ್ಲೇ ಮೃದು, ನುಣುಪು, ಒರಟು, ಗಡಸು ಹೀಗೆ ವಿಭಿನ್ನ ರೀತಿಯ ಮೈವಳಿಕೆ ಸೃಷ್ಟಿಸಿ ಶಿಲ್ಪದ ಆಕರ್ಷಣೆ ಹೆಚ್ಚಿಸುತ್ತಾರೆ.

ಎನ್. ಪುಷ್ಪ ಮಾಲಾ ಅವರ ಟೆರಾಕೊಟ ಶಿಲ್ಪಗಳಲ್ಲಿನ ಮೈವಳಿಕೆ ವಿಶೇಷ ಬಗೆಯದು. ಗೋಣಿಚೀಲ, ಈಚಲು ಪೊರಕೆ ಇಂಥ ಕೆಲ ಸಿದ್ಧವಸ್ತುಗಳಿಂದ ಮೈವಳಿಕೆಯನ್ನು ಶಿಲ್ಪಗಳ ಮೈಗೆ ತಂದಿರುವರು. ಶ್ಯಾಮ್ ಸುಂದರರು ಬದುಕಿನ ವಿಕೃತಿಯನ್ನು ಪ್ರತಿಬಿಂಬಿಸಲು ಅತ್ಯಂತ ಒರಟು ಮೈವಳಿಕೆಯನ್ನೇ ತಮ್ಮ ಶಿಲ್ಪಗಳಲ್ಲಿ ದುಡಿಸಿಕೊಂಡಿರುವರು. ಕೆ.ಜಿ.ಸುಬ್ರಹ್ಮಣ್ಯಂ ಅವರ ಟೆರಾಕೊಟ್ಟ ಉಬ್ಬು ಶಿಲ್ಪಗಳಲ್ಲೂ ವಿಕೃತ, ಒರಟು ನಿರ್ವಹಣೆಯನ್ನೆ ಕಾಣುತ್ತವೆ. ಎಡಪಂಥೀಯ ಧೋರಣೆಯ ಜಾನ್ ದೇವರಾಜ್‌ರ ಶಿಲ್ಪಗಳೆಲ್ಲ ಒರಟು ಮೈವಳಿಕೆಯನ್ನೇ ಹೊಂದಿದೆ. ಬಾಲನ್ ನಂಬಿಯಾರ್ ರ ಲೋಹ ಶಿಲ್ಪಗಳು, ವಿ.ಎ. ದೇಶಪಾಂಡೆಯವರ ಲೋಹ ಹಾಗೂ ಫೈಬರ್ ಶಿಲ್ಪಗಳು ಪ್ರಧಾನವಾಗಿ ನುಣುಪು, ಹೊಳಪು ಮೈವಳಿಕೆಯನ್ನೇ ಹೊಂದಿವೆ. ಓಂಪ್ರಕಾಶ್, ಎಂ.ಸಿ.ರಮೇಶ್ ಅವರುಗಳು ಮರ, ಫೈಬರ್ ಮತ್ತು ಶಿಲಾಶಿಲ್ಪಗಳಲ್ಲಿ ಕೆತ್ತುವಾಗ ಉಳಿಸಿಕೊಳ್ಳುವ ಚಾಣ ಅಥವಾ ಉಳಿಯ ಬೀಸುಗಳ ಗುರುತುಗಳು ವಿಶಿಷ್ಟ ಬಗೆಯ ಮೈವಳಿಕೆಗಳಾಗಿ ತೋರುತ್ತವೆ. ಶಿವಾನಂದ ಬಂಟನೂರ ಅವರ ಆರಂಭದ ಶಿಲ್ಪಗಳು ನುಣುಪಾದ ಮೈವಳಿಕೆ ಹೊಂದಿದ್ದು, ಈಚೆಗೆ ಒರಟು ನಿರ್ವಹಣೆಯನ್ನೇ ದಕ್ಕಿಸಿಕೊಂಡಿವೆ. ಇನ್ನೂ ಕೆಲವು ಶಿಲ್ಪಿಗಳು ಮರದ ಮತ್ತು ಟೆರಾಕೊಟ್ಟ ಶಿಲ್ಪಗಳ ಮೈಗೆ ಮಳೆಹೊಡೆದೊ, ವಿವಿಧ ವಸ್ತು, ಚೂರುಗಳನ್ನು ಅಂಟಿಸಿಯೋ ಶಿಲ್ಪಗಳಿಗೆ ಮೈವಳಿಕೆ ತಂದಿದ್ದಾರೆ. ಆರ್.ಎಂ. ಹಡಪದವರು ಈ ಬಗೆಯ ಕೆಲವು ಶಿಲ್ಪಗಳನ್ನು ರಚಿಸಿರುವುದುಂಟು. ಮತ್ತೆ ಕೆಲವರು ಕೆಲವೊಮ್ಮೆ ಮೆತ್ತಿದ ವಸ್ತುಗಳನ್ನು ತೆಗೆದು ಹಾಕುವ ಮೂಲಕ ವಿಶಿಷ್ಟ ಬಗೆಯ ಮೈವಳಿಕೆಯನ್ನು ತಮ್ಮ ಕಲಾಕೃತಿಗಳಲ್ಲಿ ರೂಪಿಸಿದ್ದಾರೆ.

ಕಲಾಕೃತಿಗಳಲ್ಲಿ ವಿಶೇಷವಾಗಿ ಶಿಲ್ಪ ಮತ್ತು ಗ್ರಾಫಿಕ್ ಕಲಾಕೃತಿಗಳಲ್ಲಿ ಒಂದು ಆಯಾಮವನ್ನು ಇನ್ನೊಂದು ಆಯಾಮವು ಬೇರ್ಪಡಿಸಿ ತೋರಿಸಿರುವುದೇ ಈ ಮೈವಳಿಕೆ. ಶಿಲ್ಪಗಳಲ್ಲಿನ ಮೈವಳಿಕೆಯನ್ನು ಸ್ಪರ್ಶಿಸಿಯೂ ಅನುಭವಕ್ಕೆ ತಂದುಕೊಳ್ಳಬಹುದು.

ಒಟ್ಟಾರೆ ಕಲಾವಿದರು ತಮ್ಮ ಶಿಲ್ಪ ಮತ್ತು ಮುದ್ರಣ ಕಲಾಕೃತಿಗಳಲ್ಲಿ ತಂದಿರುವ ಮೈವಳಿಕೆ ಕುರಿತು ಇಲ್ಲಿ ವಿವೇಚಿಸಲಾಗಿದೆ. ಪ್ರಸ್ತುತ ಕೆಲವೇ ಕಲಾವಿದರ ಕೃತಿಗಳನ್ನು ಉದಾಹರಿಸಿ ಮೈವಳಿಕೆಗಳನ್ನು ಕುರಿತು ಪ್ರಸ್ತಾಪಿಸಲಾಗಿದೆ. ಇದೇ ರೀತಿ 'ಕಲಾಸೃಷ್ಟಿ' ಹಾಗೂ ಅದರ ವಿವಿಧ 'ಆಯಾಮಗಳ' ಕುರಿತು ಲೇಖನಗಳು ನಮ್ಮಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬರಬೇಕಿದೆ.

ಟಿಪ್ಪಣಿಗಳು

೧. ಡಾ. ಸಿದ್ದನಗೌಡ ಪಾಟೀಲ (ಸಂ): ಹೊಸತು, ನೆಮ್ಮದಿಯ ನಾಳೆ ನಮ್ಮದು, ಜುಲೈ ೨೦೧೪ : ಪುಟ ೬೩

೨. ಡಾ. ಶಿವಾನಂದ ಎಚ್. ಬಂಟನೂರ: ಮಾಟದೊಳಗಣ ನೋಟ, ಪುಟ ೮೮

೩. ಕನ್ನಡ ಪ್ರಭ : ಅಗಸ್ಟ್ ೨೦೦೮ ಸಮಕಾಲೀನ ಶಿಲ್ಪಗಳ ಕೆಲವು ನೋಟಗಳು ಕೆ.ವಿ.ಸು: ಪುಟ ೮

೪. ಕನ್ನಡ ಪ್ರಭ : ೧೫.೬.೨೦೦೮ ಗರಿಗೆದರಿದ ಶಿಲ್ಪ ಚಿತ್ರಗಳ ಆಯಾಮ: ಕೆ.ವಿ. ಸುಬ್ರಹ್ಮಣ್ಯಂ ಪುಟ ೬

೫. ಸಂಯುಕ್ತ ಕರ್ನಾಟಕ: ೭.೧೧.೧೦, ಸಂಪ್ರದಾಯ ಸಮಕಾಲೀನತೆಗಳ ಸಂಗಮ: ಕೆ.ವಿ.ಸುಬ್ರಹ್ಮಣ್ಯಂ, ಪುಟ ೧೩

೬. Contemporary sculptor's forum : An exhibition of recent Contemporary Sculptures 2010 : catelogue

೭. ಡಾ. ಶಿವಾನಂದ ಎಚ್. ಬಂಟನೂರ: ದೃಷ್ಟಿ ಸೃಷ್ಟಿ, ಪುಟ ೪೭

ಅಧ್ಯಾಯ : ಏಳು

ಸಮಕಾಲೀನ ಶಿಲ್ಪಕಲಾ ಶಿಬಿರಗಳು

ನಾಡಿನ ಸಂಸ್ಕೃತಿ ಮತ್ತು ಪರಂಪರೆಯನ್ನು ತಿಳಿಯುವುದು ಮತ್ತು ಆ ಪರಂಪರೆಯ ದಾರಿಗಳಲ್ಲಿ ಕಾಲಕಾಲಕ್ಕೆ ಆದ ಬದಲಾವಣೆಗಳನ್ನು ಗ್ರಹಿಸುವುದು ಅತ್ಯಂತ ಅವಶ್ಯವಾದುದು. ವಿಶೇಷವಾಗಿ ಲಲಿತಕಲೆಗಳಲ್ಲಿ ಶಿಲ್ಪಕಲೆಯಂತಹ ಪರಿಶ್ರಮ ಮತ್ತು ತಾಳ್ಮೆಯನ್ನು ನಿರೀಕ್ಷಿಸುವಂತಹ ಕಲೆಯಲ್ಲಿ ಆದ ಬದಲಾವಣೆ ಮತ್ತು ಬೆಳವಣಿಗೆಯನ್ನು ಪ್ರಸ್ತುತ ಸಂದರ್ಭದಲ್ಲಿ ತಿಳಿಯಲು ಮತ್ತು ಅವುಗಳನ್ನು ವಿವಿಧ ದಾರಿ ಮತ್ತು ಧಾರೆಗಳನ್ನು ಮುಂದಿನ ಪೀಳಿಗೆಗೆ ವರ್ಗಾಯಿಸಲು ಇಂತಹ ಅಧ್ಯಯನಗಳು ಬಹುಮುಖ್ಯ ಪಾತ್ರವಹಿಸುತ್ತವೆ. ಈ ಅಧ್ಯಯನದಿಂದ ಶಿಲ್ಪಕಲೆಯಲ್ಲಿ ಕಾಲದಿಂದ ಕಾಲಕ್ಕೆ ಆಗಿರುವ ಹೊಸ ಹೊಸ ತಿರುವುಗಳನ್ನು ಮಾರ್ಪಾಡುಗಳನ್ನು ಮೈಗೂಡಿಸಿಕೊಂಡು ಸಮುದಾಯದಿಂದ ಸಮುದಾಯಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ಬೀರಿದ ಅಗಾಧ ಪ್ರಭಾವ ಪ್ರೇರಣೆಗಳನ್ನು ತಿಳಿಯಬಹುದಾಗಿದೆ.

ಬದುಕಿನ ದಾರಿಯಲ್ಲಿ ಆದ ಬದಲಾವಣೆ, ಆಚಾರ, ವಿಚಾರ, ನಂಬಿಕೆಗಳಲ್ಲಿ ಕಂಡುಬಂದ ಪಲ್ಲಟಗಳನ್ನು ಅಭಿವ್ಯಕ್ತಿಯ ಮಾಧ್ಯಮ, ವಿಷಯದ ಆಯ್ಕೆ, ನಿರ್ವಹಣೆಯ ಕ್ರಮ,- ಹೊಸ ಮಾಧ್ಯಮಗಳನ್ನು ಬಳಸುವಿಕೆ, ವಸ್ತುಭಾಹುಳ್ಯ ಇತ್ಯಾದಿಗಳು ವಿದ್ಯಾರ್ಥಿಗಳಿಗೆ

ಉದಯೋನ್ಮುಖ ಕಲಾವಿದರಿಗೆ ಮಾರ್ಗದರ್ಶಿಯಾಗಿರಬೇಕೆಂಬ ಉದ್ದೇಶದ ಜೊತೆಜೊತೆಗೆ ನಮ್ಮ ಈ ಶಿಲ್ಪ ಕಲಾವಿದರ ಆಲೋಚನೆಗಳು, ಚಿಂತನೆಗಳು, ಶಿಲ್ಪಕಲೆಯೆಂಬ ದೃಶ್ಯಭಾಷೆಯ ಮೂಲಕ ಹರಿದು ಬಂದಿರುವ ರೀತಿಯನ್ನು ಶಾಬ್ದಿಕ ಭಾಷೆಯಲ್ಲಿ ಅಧ್ಯಯನದ ಮೂಲಕ ದಾಖಲಿಸಿ ವಿವರಣೆ ವಿಶ್ಲೇಷಣೆ ಮತ್ತು ವಿಮರ್ಶೆಗಳ ಮೂಲಕ ಸಮಕಾಲೀನ ಶಿಲ್ಪಕಲೆ ಮತ್ತು ಕಲಾವಿದರನ್ನು ಉಳಿಸುವ ಮತ್ತು ಬೆಳೆಸುವ ಉದ್ದೇಶ ಈ ಅಧ್ಯಯನದ ಹಿಂದೆ ಅಡಗಿದೆ.

ಶಿಲ್ಪಕಲಾಕೃತಿಯ ರಚನೆ ತೀರ ವೈಯಕ್ತಿಕವಾಗಿ ನಡೆಯುವುದಾದರೂ ಮುಖ್ಯ ಶಿಲ್ಪಿಯಾದವನು ಅನೇಕರ ಸಹಾಯ ಪಡೆದು ಕಲಾಕೃತಿಯನ್ನು ಸೃಷ್ಟಿಮಾಡುತ್ತಾನೆ. ಆದರೆ ಶಿಲ್ಪಕಲಾಕೃತಿಯ ಸೌಂದರ್ಯದಂತಹ ಭಾವನಿಷ್ಟ ನೆಲೆಗಳೆಲ್ಲವೂ ಮೂಲ ಅಥವಾ ಮುಖ್ಯ ಶಿಲ್ಪಿಯದೇ ಆಗಿರುತ್ತದೆ. ಸೃಜನಶೀಲವಾದ ಆಲೋಚನೆ, ವಿಷಯದ ಆಯ್ಕೆ, ಅಭಿವ್ಯಕ್ತಿಗೆ ಆಯ್ದುಕೊಳ್ಳುವ ಮಾಧ್ಯಮ ಮತ್ತು ರೀತಿ ಅಥವಾ ಕ್ರಮ ಎಲ್ಲವೂ ಅವನದೇ ಆಗಿರುತ್ತವೆ. ಸಹಾಯಕರು ಮುಖ್ಯ ಶಿಲ್ಪಿಯ ನಿರ್ದೇಶನದಂತೆ ಜೊತೆಗೆ ಮಾಡುವರು.

ಆದರೆ ಆಧುನಿಕ ಸಮಕಾಲೀನ ಸಂದರ್ಭದಲ್ಲಿ ಬದಲಾದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ರಂಗಗಳಲ್ಲಿ ಅನೇಕ ಬದಲಾವಣೆಗಳು ಪಲ್ಲಟಗಳು ಸಂಬಂಧಿಸಿದ ಕ್ಷೇತ್ರಗಳಲ್ಲಿನ ಜನರ ಅರ್ಥಾತ್ ಕಲಾವಿದರ ದೃಷ್ಟಿಕೋನಗಳ ಹಿನ್ನೆಲೆಯಲ್ಲಿ ರೂಢಿಗೆ ಬಂದಿವೆ. ಕಲಾ ಪ್ರಾತ್ಯಕ್ಷಿಕೆಗಳು, ಕಲಾ ಕಾರ್ಯಗಾರಗಳು, ಕಲಾಶಿಬಿರಗಳು, ಪ್ರದರ್ಶನಗಳು ಇತ್ಯಾದಿಗಳು ಉಲ್ಲೇಖಾರ್ಹ ಅಂಶಗಳಾಗುತ್ತವೆ. ಕರ್ನಾಟಕದಲ್ಲಿ ಸಮಕಾಲೀನ ಶಿಲ್ಪಕಲೆಯ ಕುರಿತು ಪ್ರಾಯಶಃ ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಕೆಲವಾರು ಶಿಲ್ಪಕಲಾ ಶಿಬಿರಗಳು ಜರುಗಿವೆ. ಇಂತಹ ಶಿಲ್ಪ ಶಿಬಿರಗಳು ಸಣ್ಣ ದೊಡ್ಡ ಪ್ರಮಾಣದಲ್ಲಿ ನಡೆದು ಶಿಲ್ಪಕಲೆಯ ಬಗೆಗೆ ಜನರಲ್ಲಿ ಬೇರೂರಿರುವ ಸಾಂಪ್ರದಾಯಿಕ ನಂಬಿಕೆಗೆ ಭಿನ್ನವಾಗಿ, ಶಿಲ್ಪಕಲೆಯ ತಿಳುವಳಿಕೆಯ ಅನುಭವ ನೀಡಿವೆ. ಕೆಲವು ಸಮಕಾಲೀನ ಶಿಲ್ಪಕಲಾ ಶಿಬಿರಗಳನ್ನು ಇಲ್ಲಿ ಗಮನಿಸಬಹುದು.

ಕನ್ನಡ ವಿಶ್ವವಿದ್ಯಾಲಯ: ಸಮಕಾಲೀನ ಶಿಲ್ಪಕಲಾ ಶಿಬಿರಗಳು

ಹಂಪಿ ಕನ್ನಡ ವಿಶ್ವವಿದ್ಯಾಲಯ ಒಂದು ವಿಶಿಷ್ಟ ವಿಶ್ವವಿದ್ಯಾಲಯ. ಸಂಶೋಧನೆ ಈ ವಿಶ್ವವಿದ್ಯಾಲಯದ ಪ್ರಮುಖ ಕಾಯಕ, ಜೊತೆಗೆ ಬೋಧನ ಮತ್ತಿತರ ಕಾರ್ಯಕ್ರಮಗಳು ಇದರ ಅವಿಭಾಜ್ಯ ಅಂಗಗಳಾಗಿರುವುದು ವಿಶೇಷ, ಕನ್ನಡ ವಿ. ವಿ. ಅಧ್ಯಯನ ಮತ್ತು ಅಧ್ಯಾಪನಗಳಿಗೆ ಆದ್ಯತೆ ನೀಡಿದ್ದರೂ ಆಗಾಗ ಚಿತ್ರಕಲಾ ಶಿಬಿರ, ಶಿಲ್ಪಕಲಾ ಶಿಬಿರ, ಕಲಾ ಕಾರ್ಯಗಾರ ಪ್ರದರ್ಶನಗಳು ಮೊದಲಾದ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದೆ.

ಈ ವಿಶ್ವವಿದ್ಯಾಲಯದ ಸುಮಾರು ೭೦೦ ಎಕರೆಯ 'ವಿದ್ಯಾರಣ್ಯ' ವೆಂಬ ಹೆಸರಿನ ಆವರಣ ಹೊಂದಿದ್ದು, ಈ ಆವರಣದಲ್ಲಿ 'ಶಿಲ್ಪವನ' ವನ್ನು ಸ್ಥಾಪಿಸಿದೆ. ಆವರಣದಲ್ಲಿರುವ ನೈಸರ್ಗಿಕವಾದ ಕಲ್ಲು ಬಂಡೆಗಳಿಗೇ ರೂಪಕೊಡುವುದರ ಮೂಲಕ ಅನೇಕ ಶಿಲ್ಪಗಳನ್ನು ಶಿಲ್ಪಿಗಳು ರಚಿಸಿದ್ದಾರಲ್ಲದೆ ಬೇರೆ ಪ್ರದೇಶದ ಕಲ್ಲುಗಳನ್ನು ವಿಶ್ವವಿದ್ಯಾಲಯದ ಆವರಣಕ್ಕೆ

ತಂದು ಶಿಲ್ಪಿಗಳಿಂದ ಶಿಲ್ಪಕಲಾಕೃತಿಗಳನ್ನು ಮಾಡಿಸಿ ಶಿಲ್ಪವನ ಮತ್ತು ಆವರಣದ ಇತರ ಸ್ಥಳಗಳಲ್ಲಿ ಪ್ರತಿಷ್ಠಾಪಿಸಿರುವುದನ್ನು ಕಾಣಬಹುದು. ಬಹುತೇಕ ಶಿಲ್ಪಕಲಾಕೃತಿಗಳು ಆಧುನಿಕ ಸಮಕಾಲೀನ ಶಿಲ್ಪಗಳಾಗಿವೆ. ಬಹಳಷ್ಟು ದೇಶಿ ಸಂಸ್ಕೃತಿಯ ಜೊತೆಗೆ ಪಶ್ಚಿಮದ ಶೈಲಿಗಳನ್ನು ಕಸಿಮಾಡಿ ಅಭಿವ್ಯಕ್ತಿಸಿದ ಶಿಲ್ಪಗಳಿರುವುದನ್ನು ಕಾಣುತ್ತೇವೆ.

ಅಂತರಾಷ್ಟ್ರೀಯ ಸಮಕಾಲೀನ ಶಿಲ್ಪಕಲಾ ಶಿಬಿರ

ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ೧೯೯೬-೯೭ ರಲ್ಲಿ ಒಂದು ಅಂತರಾಷ್ಟ್ರೀಯ ಶಿಲ್ಪಕಲಾ ಶಿಬಿರವು ಡಾ. ಚಂದ್ರಶೇಖರ ಕಂಬಾರರು ಕುಲಪತಿಯಾಗಿದ್ದಾಗ ಜರುಗಿತು. ಈ ಶಿಬಿರದಲ್ಲಿ ದೇಶವಿದೇಶಗಳ ಶಿಲ್ಪಿಗಳು ಭಾಗವಹಿಸಿದ್ದರು. ಸುಮಾರು ೨೫ ಜನ ಕಲಾವಿದರು ಒಂದು ತಿಂಗಳ ಕಾಲವಿದ್ದು ಅದ್ಭುತವಾದ ಸಮಕಾಲೀನ ಜೀವಧ್ವನಿಯ ಶಿಲ್ಪಕಲಾಕೃತಿಗಳನ್ನು ಶಿಲೆಯಲ್ಲಿ ರಚಿಸಿದರು. ಈ ಶಿಬಿರದಲ್ಲಿ ಸೃಷ್ಟಿಯಾದ ಶಿಲ್ಪಗಳು ನಮ್ಮ ನಾಡಿನ ಜನರಿಗೆ ವಿಶೇಷವಾಗಿ ಆಧುನಿಕ ಸಮಕಾಲೀನ ಶಿಲ್ಪಿಗಳಿಗೆ ಒಂದು ಹೊಸ ಅನುಭವ ಮತ್ತು ಪ್ರೇರಣೆ ನೀಡಿದವು. ಕಲಾವಿದ ವಿಶಾಲವಾದ ದೃಷ್ಟಿಕೋನ ಘನವಾದುದನ್ನು ಆಲೋಚಿಸುವ ವಿಧಾನ ಕರಕೌಶಲದಾಚೆಗೆ ಭಾವನಿಷ್ಟವಾಗಿ ಮತ್ತು ಭೌದ್ಧಿಕ ಕಸರತ್ತಿಗೆ ಕಾರಣವಾಗುವಂತಹ ಹೊಸ ದೃಷ್ಟಿಯನ್ನು ಬೆಳೆಸುವ ನಿಟ್ಟಿನಲ್ಲಿ ವಿಶೇಷವೆನಿಸಿದ್ದು- ಒಂದು ಐತಿಹಾಸಿಕ ಮೈಲುಗಲ್ಲು ಎನ್ನಬೇಕು. ಕಲಾವಿದ ಪ್ರೊ. ವಿ. ಜಿ. ಅಂದಾನಿ ಈ ಶಿಬಿರದ ಸಂಚಾಲಕರಾಗಿದ್ದರು. ಈ ಶಿಬಿರದಲ್ಲಿ ಸೃಷ್ಟಿಯಾದ ಸಮಕಾಲೀನ ಶಿಲ್ಪಗಳು ಕನ್ನಡ ವಿಶ್ವವಿದ್ಯಾಲಯದ ಆವರಣದ ಅಂದ-ಅರ್ಥಗಳನ್ನು ಹೆಚ್ಚಿಸಿವೆ.

ರಾಷ್ಟ್ರೀಯ ಸಮಕಾಲೀನ ಶಿಲ್ಪಕಲಾ ಶಿಬಿರ: ಒಂದು

೨೦೧೦-೧೧ ನೇ ಸಾಲಿನಲ್ಲಿ ಮತ್ತೊಂದು ಬಹಳ ಪ್ರಮುಖವಾದ 'ರಾಷ್ಟ್ರೀಯ ಶಿಲ್ಪಕಲಾ ಶಿಬಿರ' ಜರುಗಿತು. ಡಾ. ಎ. ಮುರಿಗೆಪ್ಪ ಅವರು ಕುಲಪತಿಯಾಗಿದ್ದಾಗ ಅವರ ಮಹದಾಸೆಯಂತೆ ಈ ಶಿಲ್ಪ ಶಿಬಿರ ಜರುಗಿತು. ೨೦೧೧-೧೨ ನ ಸಾಲಿನಲ್ಲಿ ಇಂಥದೇ ಮತ್ತೊಂದು ರಾಷ್ಟ್ರೀಯ ಶಿಲ್ಪಕಲಾ ಶಿಬಿರವನ್ನು ಆಯೋಜಿಸಿದ್ದರು. ಈ ಎರಡೂ ರಾಷ್ಟ್ರೀಯ ಶಿಬಿರಗಳು ಐತಿಹಾಸಿಕ ಮೈಲುಗಲ್ಲುಗಳಾಗಿ ಮಹತ್ವದ ದಾಖಲೆಗಳನ್ನಬೇಕು.[೧]

೨೦೧೦ ರಲ್ಲಿ ನಡೆದ ರಾಷ್ಟ್ರೀಯ ಶಿಲ್ಪಕಲಾ ಶಿಬಿರದಲ್ಲಿ ಸಂಪ್ರದಾಯಿಕ ಶಿಲ್ಪಗಳು ಬಿಟ್ಟರೆ ಬಹುಪಾಲು ನಾಲ್ಕಾರು ಸಮಕಾಲೀನ ಶಿಲ್ಪಕಲಾಕೃತಿಗಳೇ ಸೃಷ್ಟಿಯಾದುದು ವಿಶೇಷವಾಗಿದೆ. ಈ ಶಿಲ್ಪಕಲಾ ಶಿಬಿರದಲ್ಲಿ ಅತ್ಯಂತ ಹಿರಿಯ ಶಿಲ್ಪಿಯಾಗಿರುವ ನಮ್ಮವರೇ ಆದ ಬೆಂಗಳೂರಿನ ವೆಂಕಟಾಚಲಪತಿಯವರು ಶಿಬಿರದ ನಿರ್ದೇಶಕರಾಗಿಯೂ ಕೆಲಸ ನಿರ್ವಹಿಸುವುದರೊಂದಿಗೆ ಶಿಲ್ಪಕಲಾಕೃತಿಯನ್ನು ರಚಿಸಿದರು. ಬೆಂಗಳೂರಿನ ಮತ್ತೊಬ್ಬ ಶಿಲ್ಪಿ ಎಂ.ಸಿ. ರಮೇಶ್, ಮೈಸೂರಿನ ಡಾ. ಗೀತಾಂಜಲಿ ಆಚಾರ್, ಮಂಜುನಾಥ ಅವರೂ ಭಾಗವಹಿಸಿ ಶಿಲ್ಪಗಳನ್ನು ರಚಿಸಿದ್ದಾರೆ.

ಹೊರರಾಜ್ಯಗಳ ಸಮಕಾಲೀನ ಶಿಲ್ಪಿಗಳೂ ಇದ್ದರು. ತಮಿಳುನಾಡಿನ ಚೆನ್ನೈದಿಂದ ಪ್ರಸಿದ್ಧ ಶಿಲ್ಪಿ ರಾಜಶೇಖರನ್ ನಾಯರ್, ಗುಜರಾತಿನ ಬರೋಡಾದಿಂದ ಬ್ರಿಜೇಶ್ ಕುಮಾರ

ಸಿಂಗ್, ಭುವನೇಶ್ವರದಿಂದ ಎಸ್.ಡಿ. ಹರಿಪ್ರಸಾದ್ ಹಾಗೂ ಸ್ವರ್ಣಲತಾ ಅವರು ಆಗಮಿಸಿ ಸಮಕಾಲೀನ ಶೈಲಿಯ ಶಿಲ್ಪಗಳನ್ನು ರಚಿಸಿದ್ದರು. ಕನ್ನಡ ವಿಶ್ವ ವಿದ್ಯಾಲಯದಿಂದ ಡಾ. ಶಿವಾನಂದ ಎಚ್. ಬಂಟನೂರ ಭಾಗವಹಿಸಿ ಶಿಲ್ಪ ರಚಿಸಿದ್ದರು.

ಹಿರಿಯ ಶಿಲ್ಪಿ ವೆಂಕಟಾಚಲಪತಿಯವರು ರಚಿಸಿದ ಶಿಲ್ಪ ಎಂದಿನ ಅವರ ಶಿಲಾಶಿಲ್ಪ ಶೈಲಿಯನ್ನು ಒಳಗೊಂಡಿದೆಯಾದರೂ ಕುಳಿತಿರುವ ಭಂಗಿಯ ಸ್ತ್ರಿಯ ಶಿಲ್ಪವಾಗಿದ್ದು ತಾಯಿ ಮಗುವನ್ನು ಮುದ್ದಿಸುತ್ತಿರುವಂತೆ ರಚಿಸಿರುವುದು ಮನೋಜ್ಞವಾಗಿದೆ. ತಾಯಿಯ ಮಮತಯ ಅಪ್ಪುಗೆಯಲ್ಲಿ ಬೆಚ್ಚನೆಯ ಅನುಭವವನ್ನು ಹೊಂದುಂತಾ ಮಗು ತಾಯಿ ಇಬ್ಬರೂ ಆನಂದದಲ್ಲಿ ನಲಿಯುತ್ತಿರುವಂತೆ ಅನುಭವವದು. 'ನಾಗದೇವತೆ ಪ್ರಕೃತಿದೇವತೆಯಾಗಿಯೂ' ಈ ಶಿಲ್ಪವನ್ನು ನೋಡಬಹುದೆ ಎನ್ನುತ್ತಾರೆ. ಚಲಪತಿಯವರು. ಎಕ ಮೊನೆಯ ಉಳಿಯಿಂದ ದೊಗರುದೊಗರಾಗಿ ರಚಿಸಿರುವ ಮೈವಳಿಕೆ ಕುಳಿತ ಭಂಗಿ, ಗುಟ್ಟುಬಿಟ್ಟುಕೊಡಲಾರದ ವಸ್ತುವಿನಿಂದಾಗಿ ಶಿಲ್ಪ ನೋಡುಗರ ಮನಸ್ಸಲ್ಲಿ ಸೆಲೆ ನಿಲ್ಲುವಂತಿವೆ.

ಚೆನ್ನೈನ ಪ್ರಸಿದ್ಧ ಶಿಲ್ಪಿ ರಾಜಶೇಖರನ್ ನಾಯರ್ ರಚಿಸಿದ 'ಗೂಡು' ಶೀರ್ಷಿಕೆಯ ಕಲಾಕೃತಿ ಕುತೂಹಲ ಕೆರಳಿಸುವಂತಹುದಾಗಿದೆ. ಆರೇಳು ಅಡಿಗಳ ಎತ್ತರ ಹೊಂದಿರುವ ಈ ಶಿಲ್ಪವನ್ನು ನಾಲ್ಕೈದು ಭಾಗಗಳಾಗಿ ಸೀಳಿ ಪ್ರತ್ಯೇಕ ಗೊಳಿಸಿ ಅವುಗಳಲ್ಲಿ ಕೊರೆದು ಗೂಡುಗಳನ್ನು ಮಾಡಿಕೊಂಡು ಮತ್ತೆ ಯಥಾವತ್ತಾಗಿ ಜೊಡಿಸುವ ಮೂಲಕ ಅಧ್ಭೂತವನ್ನೇ ಮೆರೆದಿರುವದು ವಿಶೇಷ. ಶಿಲ್ಪದ ನಾಲ್ಕು ಬದಿಗಳಲ್ಲಿ ಒಂದು ಬದಿಯ ಮೈಯನ್ನು ಪ್ಕೃತಿ ಸಹಜವಾಗಿಯೇ ಇರುವ ಮೈವಳಿಕೆಯನ್ನು ಬಳಸಿಕೊಂಡು ಉಳಿದ ಮೈಗಳನ್ನು ಬೇಕಾದ ಹಾಗೆ ಕೆತ್ತಿ ನಿರ್ಮಿಸಿರುವುದು ಶಿಲ್ಪಿಯ ಜಾಣ್ಮೆ ಮತ್ತು ತಾಳ್ಮೆಗಳೆರಡಕ್ಕೂ ಸಾಕಿಯಾಗಿದೆ. ಶಿಲ್ಪದ ಸುತ್ತಲೂ ಬಹು ತಾಳ್ಮೆಯಿಂದ ಮಾಡಿದ ಗೂಡುಗಳು ನಿರ್ಮಿತಿಯಿಂದಾಗಿ ಸ್ವಲ್ಪ ದೂರದಿಂದ ವೀಕ್ಷಿಸಿದರೆ ಶಿಲ್ಪವು ಬಹುಮಹಡಿ ಕಟ್ಟಡವನ್ನು ನೆನಪಿಸುತ್ತದೆ. ಆಧುನಿಕತೆಯ ಬರದಲ್ಲಿ ವಗಪಡದುಕೊಂಡ ಕಾಂಕ್ರಿಟ್ ಕಾಡು– ನಾಗರಿಕತೆಯ ಸಂಕೇತವಾಗಿರುವುದಲ್ಲದೆ ಪ್ರಕೃತಿಯನ್ನು ಮರೆಮಾಡಿ ನಿಂತಂತಿದೆ. ಈ ಸಂಸ್ಕೃತಿ ನಿರ್ಮಿತಿಯಲ್ಲಿ ಮಾನವನು ಹಾಕುತ್ತಿರುವ ಹಜ್ಜಗಳು ಸಹಜವಾಗಿಯ ಪ್ರಕೃತಿಗೆ ಸವಾಲಾಗಿವೆ. ಇದು ಮಾನವನ ಅಭ್ಯದಯವೋ-ಅವನತಿಯೋ-ಎಂಬ ಹಲವಾರು ಭಾವಗಳನ್ನು ಒಳಗೊಂಡು ಪ್ರಕೃತಿ ರಕ್ಷಣೆಯ ಪರಿಯನ್ನು ಅದರ ಉಳಿವಿನ ಬಗೆಗಿನ ಕಳಕಳಿಯನ್ನು ಸಂಕೇತಿಸುವ ಗೋಡೆಯಲ್ಲಿ ಚಿಗುರುವಡೆದ ಗಿಡ ಸಂಕೇತಿಕವಾಗಿ ತೋರಿಸುತ; ಪರಿಸರ ಜಾಗೃತಿಯನ್ನು ಮೂಡಿಸುತ್ತದೆ.

ಚಿಂತನೆ ವೈಚಾರಿಕತೆಗಳಿಂದ ಕೂಡಿದ ಅಭಿವ್ಯಕ್ತಿಗಳಿಗೆ ಹೆಸರಾದ ಎಂ.ಸಿ. ರಮೇಶ್‌ರ ಶಿಲ್ಪ ಆಕಾರದಲ್ಲಿ ದೊಡ್ಡದೇ ಆಗಿದೆ. ಸುಮಾರು ಏಳು ಅಡಿಯಷ್ಟು ಎತ್ತರದ ಒಂದು ಬೀಗದ ಕೈ ಆಕಾರದಲ್ಲಿ ರಚಿಸಿರುವ ಶಿಲ್ಪದ ತುದಿಯ ಮೇಲೆ ಎದುರು ಬದಿರಾಗಿ ಹರೆಯದ ಒಂದು ಹೆಣ್ಣು ಹಾಗೂ ಒಂದು ಗಂಡು ಕೂತಿದ್ದು ಸಮಾಲೋಚನೆಯಲ್ಲಿ ತೊಡಗಿದಂತಿವೆ. ಒಬ್ಬರ ಕೈ ಇನ್ನೊಬ್ಬರ ಕೈಲಿದೆ. ಅಂತೆಯೆ ಪ್ರೇಮಿಗಳಂತೆ ಅನುಭವ ನಿಡುತ್ತದೆ. ಆದರೆ ಬೀಗದ ಕೈ ಆಕಾರ ಅದರ ಅರ್ಥವನ್ನು ಬದಲಿಸಿ ಬೇರೊಂದು ಸತ್ಯಾರ್ಥವನ್ನು ಹೊಡಿಸುತ್ತದೆ.

ಯಾವುದೇ ಒಂದು ವಿಚಾರ ಅಥವಾ ಸಮಸ್ಯೆಗೆ ಹೀಗೆ ಮುಖಾ ಮುಖಿಯಾಗಿ ಕುಳಿತು ಚರ್ಚಿಸಿದರೆ ಆ ಸಮಸ್ಯೆಗೆ ಒಂದು ಪರಿಹಾರ ಅಥವಾ ದಾರಿ ಸಿಗುತ್ತದೆ. ಅರ್ಥಾತ್ ಗೂಢ ಅಥವಾ ತೊಡಕಾಗಿರುವ ಅಥವಾ ಬೀಗಹಾಕಿ ಬಂಧಿಸಿಡಲ್ಪಟ್ಟ ಸಂಗತಿಯ ಅನಾವರಣಕ್ಕೆ ಒಂದು 'ಹೊಳಹು'ಎಂಬ ಬೀಗದ ಕೈ ಸಿಗಬಲ್ಲುದು ಎಂಬ ಶಯದ ಈ ಸೃಷ್ಟಿ ಹೀಗೆ ಹಲವು ನಲೆಗಳಿಂದ ಮುಖ್ಯವೆನಿಸುತ್ತದೆ.

ಐದಾರು ಅಡಿ ಎತ್ತರದ ಮತ್ತೊಂದು ಶಿಲ್ಪವನ್ನು ಎಸ್.ಡಿ. ಹರಿಪ್ರಸಾದ್ ರಚಿಸಿರುವರು. 'ತರ್ಪಣ' ಶೀರ್ಷಿಕೆಯ ಈ ಶಿಲ್ಪ ಸಂಪೂರ್ಣವಾಗಿ ಬಾಗಿ ನಿಂತಿರುವ ಮಹಿಳೆಯದಾಗಿದೆ. ಮರಳು ಶಿಲೆಯಾದರೂ ಕೈ ಮತ್ತು ಮುಖದಲ್ಲಿ ತಂದಿರುವ ಸೂಕ್ಷ್ಮ ವಿವರಗಳಿಂದ ಕೂಡಿದ ಕತ್ತನೆ ಮೆಚ್ಚುವಂಥದು. ಏಕ ಮೊನೆಯ ಉಳಿಯ ಬೀಸುಗಳು ಉಂಟು ಮಾಡಿದ ದೊಗರು ಮೈವಳಿಕೆ ಆಸಕ್ತಿ ದಾಯಕವಾಗಿ ತೋರುತ್ತದೆ. ಬಾಗಿದ ಭಂಗಿ, ಬೊಗಸೆಯಿಂದ ತಪಣವನ್ನರ್ಪಿಸುತ್ತಿರುವ ರೀತಿ ನೋಡಿಸಿಕೊಳ್ಳುವಂಥದಾಗಿದೆ.

ಶಿವಾನಂದ ಬಂಟನೂರ ಅವರು ರಚಿಸಿದ ಶಿಲ್ಪಕ್ಕೆ 'ಬುದ್ಧಿ ಜೀವಿ' ಎಂಬ ಶೀರ್ಷಿಕೆಯಿಂದ ಕರೆಯಬಹುದು. ಕನ್ನಡ ವಿ.ವಿ.ಯ ಅತಿಥಿ ಗೃಹದ ಆವರಣದಲ್ಲಿ ಇದನ್ನು ಸ್ಥಾಪಿಸಲಾಗಿದೆ. ಇಡೀ ದೇಹವೇ ಮನುಷ್ಯನ ಮುಖವಾಗಿ ಮಾರ್ಪಟ್ಟು ಮಂಡಿಯೂರಿ ಕುಳಿತಂತೆ ಶಿಲ್ಪಿಸಲಾಗಿದೆ. ಅಸಂಗತ ಆಕಾರವಾಗಿದೆ. ಕೆ.ವಿ. ಸುಬ್ರಹ್ಮಣ್ಯಂ 'ಈ ಶಿಲ್ಪ ವಿಕೃತಿ ಸೌಂದರ್ಯ ಮೀಮಾಂಸೆಗೆ ಒಂದು ಸುಂದರ ಉದಾಹರಣೆ' ಎಂದಿರುವರು.[೨] ಅರ್ಧ ನಿಮೀರಿದ ಕಣ್ಣುಗಳು ಧ್ಯಾನಸ್ಥ ಭಂಗಿಯಲ್ಲಿದೆ. ಈ ಜೀವಿಗೆ ಕೈ, ಹೊಟ್ಟೆ ಮುಂತಾದ ಮನುಷ್ಯ ಸಹಜ ಅಂಗಗಳು ಇಲ್ಲವಾದರೂ ತಲೆಯು 'ಭೌಧಿಕ' ಅಥವಾ ಜ್ಞಾನದ ಸಂಕೇತವಾಗಿಯೂ ಮಂಡಿಯೂರಿದ ಕಾಲುಗಳು, ವಜ್ರಾಸನವನ್ನು ಸಂಕೇತಿಸುವುದರ ಮೂಲಕ ಕನ್ನಡ ವಿಶ್ವ ವಿದ್ಯಾಲಯದಂತಹ ಜ್ಞಾನ ಸೃಷ್ಟಿಯ ಕೇಂದ್ರಗಳ ರೂಪಕವೆಂಬಂತೆಯೂ ಅನುಭವಕ್ಕೆ ಬರುತ್ತದೆ.[೩] ಕುಲಪತಿಗಳಾಗಿದ್ದ ಡಾ. ಎ. ಮುರಗೆಪ್ಪ ಅವರು 'ಬಂಟನೂರರ ಈ ಶಿಲ್ಪ 'ನಮ್ಮ ವಿಶ್ವ ವಿದ್ಯಾಲಯದ ಭೋದನಾಂಗ ಮತ್ತು ಪ್ರಸಾರಾಂಗಗಳ ಸಂಕೇತವಾಗಿದೆ[೪] ಎಂದಿರುವರು. ಶಿಲ್ಪದಲ್ಲಿ ತಂದಿರುವ ನಯವಾದ ಜಿನುಗಿನಿಂದ ಕೂಡಿದ ಮತ್ತು ಅಗತ್ಯ ಕಂಡಲ್ಲಿ ತುಂಬಾ ದೊಗರು ದೊಗರು ಮೈವಳಿಕೆಯ ರಚನೆಯಿಂದ ಶಿಲ್ಪ ತುಂಬಾ ಸೊಗಸಾಗಿ ಕಾಣುತ್ತದೆ. ಮಕ್ಕಳಾದಿಯಾಗಿ ವಯೋವೃದ್ಧರನ್ನೂ ಮಂತ್ರಮುಗ್ಧರನ್ನಾಗಿಸುತ್ತದೆ.

ಬರೋಡಾದ ಬ್ರಿಜೇಶ ಕುಮಾರ್ ಸಿಂಗ್‌ರ ರಚನೆ ತೀರ ಭಿನ್ನವಾದ ಮತ್ತು ಆಧುನಿಕೋತ್ತರ ದೃಶ್ಯಕಲಾ ಸಿದ್ಧಾಂತಗಳನ್ನ ನಿರ್ವಚಿಸುವಂತೆ ಮೂಡಿಬಂದ ಶಿಲ್ಪವಾಗಿದೆ. ಸಾಮೂಹಿಕವಾಗಿ ಮೂರ್‍ನಾಲ್ಕು ಜನ ಒಟ್ಟಿಗೆ ಕುಳಿತುಕೊಳ್ಳಬಹುದಾದ ಕುರ್ಚಿಯೊಂದನ್ನು ರಚಿಸಿ ಅದನ್ನ ಮೂರು ತುಂಡುಗಳಾಗಿ ಒಡದು ಹಾಕಿರುವ ರಚನೆ ವಿನೂತನವಾಗಿ ತೋರುತ್ತದೆ. ಹಲವು ಭಿನ್ನ ಅನುಭವಗಳನ್ನು ಸಂಕೇತಿಸುವ ಈ ಅಭಿವ್ಯಕ್ತಿ ಅವರ ಪ್ರತಿಭೆ, ಆಲೋಚನೆ ಮತ್ತು ಸಮಕಾಲೀನತೆಗಳಿಗೆ ಹಿಡಿದ ಕನ್ನಡಿ ಎನ್ನಬಹುದು.

ಗೀತಾಂಜಲಿಯವರು ಎಂದಿನ ಶೈಲಿಯಲ್ಲಿ ಮತ್ತು ಸ್ತ್ರೀ ಸಂವೇದನೆ ಶಿಲ್ಪದಲ್ಲಿ ಆಕರ್ಷಕವಾಗಿ ಮೂಡಿಬಂದಿದೆ. ಹೊಕ್ಕುಳಿಂದ ಹೊರಬಂದ–ಹೊಕ್ಕುಳ ಬಳ್ಳಿಯ ತುದಿಯಲ್ಲಿ ಆಕಾಶಕ್ಕೆ ಮುಖಮಾಡಿದ ಕಮಲ ಸೃಷ್ಟಿ ವೈಚಿತ್ರ್ಯವನ್ನು ಬಿಚ್ಚಿಡುವಂತಿದೆ. 'ತಾಯಿ' ಅಥವಾ ಫಲದೇವತೆಯ ಸಂಕೇತವಾಗಿ ಗಮನ ಸೆಳೆಯುತ್ತದೆ. ಎಸ್. ಮಂಜುನಾಥರ ಶಿಲ್ಪವೂ ಆಕಾರದಲ್ಲಿ ದೊಡ್ಡದಾಗಿದ್ದು ಗಮನ ಸೆಳಯುತ್ತದೆ. ಪ್ರಸ್ತುತ ಪ್ರದರ್ಶನದಲ್ಲಿ ಅರಳಿದ ಎಲ್ಲ ಶಿಲ್ಪಗಳೂ ಮರಳು ಶಿಲಾ ಮಾಧ್ಯಮದವುಗಳಾಗಿವೆ.

ರಾಷ್ಟ್ರೀಯ ಸಮಕಾಲೀನ ಶಿಲ್ಪಕಲಾ ಶಿಬಿರ: ಎರಡು

ಕನ್ನಡ ವಿ.ವಿ. ಆವರಣದಲ್ಲಿ ೨೦೧೧–೧೨ನೇ ಸಾಲಿನಲ್ಲಿ ಮತ್ತೊಂದು ರಾಷ್ಟ್ರೀಯ ಶಿ.ಕ.ಶಿಬಿರ ಹಮ್ಮಿಕೊಳ್ಳಲಾಗಿತ್ತು. ೧೪ ದಿನಗಳ ನಡೆದ ಈ ಶಿಲಾ ಶಿಲ್ಪ ಶಿಬಿರದಲ್ಲಿ ನವದೆಹಲಿಯ ಅಶೂರವೇದ ಐದು ಅಡಿ ಎತ್ತರದ ಶಿಲ್ಪವನ್ನು ತುಂಬ ಸರಳ ರೀತಿಯಲ್ಲಿ ರಚಿಸಿದರು. ಉದಯಪುರದ ಅಮಿತ್ ಕುಮಾರ್ ಸಿಂಗ್, ಎಚ್.ಜಿ. ಗಣೇಶ್ ಉರಾಳ, ಚೆನ್ನೈನ ಸಿಂಗಾರವೇಲನ್ ಹರಿಯಾಣದ ಸುರೇಶಕುಮಾರ ಅಲ್ಲದೆ ನಮ್ಮವರೇ ಆದ ಬರೋಡದ ಕಾಸರಗೋಡಿನ ಪ್ರವೀಣ ಪುಂಚಿತ್ತಾಯ, ಮೈಸೂರಿನ ಶಿಲ್ಪಿನಿ ಡಾ.ಬಿ. ಆರ್. ಗೀತಾಂಜಲಿ, ಬೆಂಗಳೂರಿನ ಡಾ. ಜಿ. ಲಕ್ಷ್ಮೀಪತಿ, ಕಲಬುರ್ಗಿಯ ನಿಂಗಣ್ಣ ಡಿ. ಕೇರಿ, ಉಪ್ಪಿನ ಬಿಟಾಗರಿಯ ಕೆ.ಎಂ. ಸಾಬಣ್ಣವರ ಇವರಲ್ಲದೆ ಕನ್ನಡ ವಿಶ್ವವಿದ್ಯಾಲಯದ ಡಾ. ಶಿವಾನಂದ ಬಂಟನೂರ ಡಾ.ಮೋಹನರಾವ್ ಪಂಚಾಳ, ಮಲ್ಲಿಕಾರ್ಜುನ ಮಹಾಮುನಿ ಉದಯಕುಮಾರ ಟಿ.ಕೆ. ಹಾಗೂ ಬಾದಾಮಿ ಶಾಖೆಯ ಮಹಾಂತೇಶ ಫಲದಿನ್ನಿ, ಮಂಜುನಾಥ ಕಂಚಗಾರ, ಬಸಮ್ಮ ನರಗುಂದ ರಾಜಕುಮಾರ ಮಾಲಗತ್ತಿ, ನಟರಾಜ ಶಿಲ್ಪಿ ಮೊದಲಾದ ಹಿರಿಕಿರಿಯ ಶಿಲ್ಪಿಗಳು ಭಾಗವಹಿಸಿ ಶಿಲ್ಪಗಳನ್ನು ಖಂಡರಿಸಿರುವರು.

ಗೀತಾಂಜಲಿಯವರು /ದೀಪಸ್ತಂಬ' ಎನ್ನುವ ಶಿಲ್ಪ ೬–೭ ಅಡಿ ಎತ್ತರವಾಗಿದ್ದು ಚೌಕ ಮತ್ತು ದುಂಡು ಆಕಾರಗಳನ್ನು ಹೊಂದಿದ. ದೈವಿಕ ಆರಾಧನೆಗೆ ಸಂಬಂಧಿಸಿದ ಸಾಂಕೇತಿಕ ಉಬ್ಬು ಶಿಲ್ಪ ಮತ್ತು ರೇಖಾಚಿತ್ರಗಳನ್ನು ನಾಲ್ಕು ಮೈಗಳಿಗೆ ಕೆತ್ತಲಾಗಿದೆ. ಒಂದು ಬದಿ ಶಿವಲಿಂಗದಾಕೃತಿ ಮತ್ತೊಂದು ಮೈಗೆ ಹೂ ಮತ್ತೊದೆಂಡೆ ಅಣುವನ್ನು ಭೇದಿಸುವ ಯಾವುದೋ ಒಂದು ವಸ್ತು ಎಲ್ಲಿಂದಲೋ ಚಲಿಸಿ ವೃತ್ತದ ಮಧ್ಯಕ್ಕೆ ಬಂದಿರುವ ಆಕೃತಿಯು ಏನನ್ನೋ ಗಹನವಾದ ವಿಚಾರಗಳನ್ನು ಒಳಗೊಂಡಂತಿದೆ. ಅಲ್ಲದೆ ಸ್ತಂಭದ ನಾಲ್ಕೂ ಬದಿಗಳಲ್ಲಿ ಕಾಣುವಂತೆ 'ಒಂದು ಶಿವ ಸ್ತುತಿಯನ್ನು ಬರೆದಿರುವರು', 'ನಮಸ್ತೇಸ್ತು ಶಿರಶ್ಸುಂಬಿ ಚಂದ್ರಚಾಮರಚಾರವೇ ತ್ರೈಲೋಕ್ಯಂ ನಗರಾರಂಭಂ ಮೂಲಸ್ತಂಭಾಯ ಶಂಭುವೇ" ಎಂದಾಗಿದ್ದು ನಾಗರೀಕತೆಯಲ್ಲಿ ಸ್ತಂಭದ ಮಹತ್ವ ಹಾಗೂ ಶಿವನನ್ನು ಸ್ತುತಿಸುವಲ್ಲಿ ಹಳುವ ಮಾತಿನ ರೀತಿಯನ್ನು ವಿವರಿಸುತ್ತದೆ. ವಿವಿಧ ಮೈವಳಿಕೆಯನ್ನು ಶಿಲ್ಪದಲ್ಲಿ ವಿಶಿಷ್ಟವಾಗಿ ದುಡಿಸಿಕೊಂಡಿರುವರು.

ನಿಂಗಪ್ಪ ಕೇರಿಯವರ ರಚನೆ 'ಮಿಲನ' ದ ದೃಶ್ಯವಾಗಿದೆ. ಗಂಡು ಹೆಣ್ಣುಗಳೆರಡೂ ಬೆರೆತ ಒಂದಾಗಿರುವಂತೆ ಎದುರುಬದುರಾಗಿ ಕುಳಿತಂತೆ ಶಿಲ್ಪಿಸಲಾಗಿದೆ. ತನ್ಮೂಲಕ ರತಿಸ್ಥಾಯಿಯಾಗಿರುವ ಶೃಂಗಾರ ರಸವನ್ನು ಹೊಮ್ಮಿಸುವ ಪ್ರಯತ್ನ ಮಾಡಿರುವರು. ಶಿಲ್ಪಗಳ

ಭಂಗಿ– ಮೈಮಾಟಗಳು ಮಿತಿಯನ್ನು ಮೀರಿ ವೈಭವೀಕರಣಗೊಂಡಿದ್ದರಿಂದ ಔಚಿತ್ಯದ ಗಡಿಯನ್ನು ದಾಟಿದಂತೆ ಅನಿಸುತ್ತದೆ. ಇಂತಹ ವಿಷಯಗಳನ್ನು ಚಿತ್ರಿಸುವಾಗ ಶಿಲ್ಪಿಸುವಾಗ ಕಲಾವಿದರಿಗೆ ಜವಾಬ್ದಾರಿ ಇರಬೇಕಾಗುತ್ತದೆ.

ಶಿವಾನಂದ ಬಂಟನೂರರ ಒಂದು ಶಿಲ್ಪವೂ ಈ ಶಿಬಿರದಲ್ಲಿ ಅರಳಿದೆ. ಐತಿಹಾಸಿಕವಾದ ಸಂಗತಿಯನ್ನು ಸಮಕಾಲೀನ ದೃಶ್ಯಾಭಾಷೆಯಲ್ಲಿ ಬಿಂಬಿಸಿವೆ. ದೃಶ್ಯಾತ್ಮಕವಾಗಿ ಹಳೆಯಕಾಲದ ಕೋಟೆಗೋಡೆಯನ್ನು ನೆನಪಿಸುತ್ತದೆ. ಸೂಕ್ಷ್ಮವಾಗಿ ಪರಿಶೀಲಿಸಿದಾಗ ಚಾಳುಕ್ಯ ಅಥವಾ ವಿಜಯನಗರ (ಹಂಪೆ) ಕಾಲದ ಗೋಡೆಯನ್ನು ನೆನಪಿಸುತ್ತದೆ. ಲಾಂಚನದಲ್ಲಿರುವ ಶಾರ್ದೂಲ, ವರಾಹ, ಛತ್ರ– ಚಾಮಗಳು ಶಿಲ್ಪಿತಗೊಂಡು, ಲಾಂಛನವು ಒಡೆದು ಎರಡು ಹೋಳಾದಂತೆ ಇದ್ದು ಗತಚರಿತ್ರೆಯ ಕುರುಹಾಗಿ ಶಿಥಿಲಾವಸ್ಥೆಯಲ್ಲಿ ಇರುವಂತೆ ಸುಂದರವಾಗಿ ಅರ್ಥಪೂರ್ಣವಾಗಿ ರಚಿಸಲಾಗಿದೆ.

ಏಕಶಿಲೆಯದಾದರೂ ಹಲವಾರು ಕಲ್ಲುಗಳನ್ನು ಕಡೆದು ಜೋಡಿಸಿ ಕಟ್ಟಿದ ಗೋಡೆಯಂತೆ ತೋರುವ ಈ ಕಲಾಕೃತಿ ನಿಜವಾಗಿಯೂ ಪರಿಣಾಮಕಾರಿಯಾಗಿದೆ. ಕಲಾವಿದನ ಸೃಜನಶೀಲತೆಯ ಉತ್ತುಂಗ ಅಭಿವ್ಯಕ್ತಿಯಾಗಿದೆ. ಮುಟ್ಟಿದರೆ ಬೀಳುವಂತ ಕಾಣೂವ ಒಂದೊಂದು ಕಲ್ಲು ಲಾಂಛನದಲ್ಲಿರುವ ವ್ಯಾಳಿ (ಸಿಂಹ) ಅಥವಾ ಶಾರ್ದೂಲ ಹಾಗೂ ವರಾಹ ಅದು ಹಾಳಾದ ಕೋಟೆಗಳೆಲ್ಲ ಅಳಿದುಹೋದ ಸಾಮಾಜ್ಯದ ಗತ ವೈಭವವನ್ನು ಸಾರುತ್ತವೆ. ಆದರ ಶಿಥಿಲಗೊಂಡಿರುವ ಗೋಡೆಯ ಬಿರುಕಿನಲ್ಲಿ ಜೀವಸೆಲೆಯ ಸಂಕತವಾಗಿ ಎಲೆ ಚಿಗುರೊಡೆದಿದೆ. ಸಾಮ್ರಾಜ್ಯಗಳಿದರೂ ಮತ್ತೊಂದು ರೀತಿಯಲ್ಲಿ ಜೀವನ (ಜೀವಸೆಲೆ) ಮುನ್ನಡೆಯುತ್ತದೆ ಎಂಬ ಸಂತೋಷ– ಸಮಾಧಾನ ತರುವ ಸಂದೇಶ ಇದರಲ್ಲಿದೆ.

ಚೆನ್ನೈನ ಸಿಂಗಾರವೇಲನ್‌ರ ಕೃತಿ ಚೌಕಾರದ ಶಿಲೆಯಲ್ಲಿ ಶಿಲೆಯ ಆಕಾರ ಇರುವ ಹಾಗೆಯೇ ಆಕೃತಿಗೆ ತಕ್ಕಂತೆ ಶಿಲ್ಪ ಕೆತ್ತನೆ ಮಾಡಲಾಗಿದೆ. ಹಲವು ಅಪೂರ್ಣ ಸ್ತ್ರೀ ಶಿಲ್ಪಗಳ ಆಕೃತಿಗಳಿಂದ ಕೃತಿಯು ಪೂರ್ಣಗೊಂಡಿದೆ. ಶೋಷಿತ ಮಹಿಳೆಯ ಪರ ಧ್ವನಿ ಎತ್ತಿದಂತೆ ಇವರ ಶಿಲ್ಪದ ಆಶಯವಿದೆ. ಶಿಲ್ಪಿತ ವಿಕಾರ ಸ್ತ್ರೀಯ ರೂಪಾಕೃತಿಗಳು ವಿಕೃತಿ ಸೌಂದರ್ಯವನ್ನು ಬಿಂಬಿಸಿವೆ.

ಕಾಸರಗೋಡಿನ ಪ್ರವೀಣ್ ಪುಂಚಿತ್ತಾಯರ ಶಿಲ್ಪವು ವೀಣೆಯ ಆಕೃತಿಯಾಗಿದೆ. ಸಂಗೀತ ಪಾರಂಪರಿಕ ಮಹತ್ವ ಹೊಂದಿದ ವೀಣೆಯಂತಹ ಆಧುನಿಕ ಸಂಗೀತದ ಅಬ್ಬರದಲ್ಲಿ ಇಂತಹ ಸಂಗೀತದ ವಾದ್ಯಗಳ ಪಾಮುಖ್ಯ ಕಡಿಮೆಯಾಗುತ್ತಿದ್ದು ಅದರ ದಾಖಲೆಯಾಗಿಯೂ ಈ ಶಿಲ್ಪ ಮುಖ್ಯವಾಗುತ್ತದೆ.

ಕಾಮದ ಆರಾಧನೆ ಕುರಿತಾಗಿರುವ ಶಿಲ್ಪ ಜಿ. ಲಕ್ಷ್ಮೀಪತಿಯವರದ್ದಾಗಿದ್ದು ೬–೭ ಅಡಿ ಎತ್ತರಕ್ಕಿರುವ ದೊಡ್ಡ ಕೃತಿಯಾಗಿದೆ. ದೃಢತೆಯನ್ನು ಸಂಕೇತಿಸುವ ನಟರಾಜ ಶಿಲ್ಪಿಯವರ ಶಿಲ್ಪ, ನೀರಿನ ಅಲೆಗಳು ಹಾಗೂ ತೊಟ್ಟಿಯ ಸಂಕೇತವಾಗುವ ಮಂಜುನಾಥ ಕಂಚಗಾರರ ಶಿಲ್ಪ, ಸ್ತ್ರೀಯ ಮುಖ– ಸುಂದರ ಕೇಶರಾಶಿಗಳಿಂದ ಕೂಡಿದ ಬಸಮ್ಮ

ನರಗುಂದರ ಶಿಲ್ಪ, ಶಿಲ್ಪ ಕೆತ್ತನೆಯಲ್ಲಿ ನಿರತರಾದ ಜಕಣಾಚಾರಿ ಶೀರ್ಷಿಕೆಯ ರಾಜಕುಮಾರ ಮಾಲಗತ್ತಿಯವರ ಶಿಲ್ಪ, ಬರೋಡದಲ್ಲಿ ಶಿಲ್ಪಕಲೆ ಕಲಿತ ಗಣೇಶ್ ಉರಾಳರ 'ಹೂ' ಶೀರ್ಷಿಕೆಯ ಶಿಲ್ಪ, ಮಲ್ಲಿಕಾರ್ಜುನ ಮಾಮುನಿಯವರ ಸೃಷ್ಟಿ ಸಂತಾನದ ಮಹತ್ವ ಬೀರುವ ಶಿಲ್ಪ, ಹೆಣ್ಣು, ಹೆಂಡಗಳ ದಾಸನಾಗಿರುವವರನ್ನು ವಾಚ್ಯವಾಗಿ ಬಿಂಬಿಸುವ ಉದಯಕುಮಾರ ಟಿ. ಅವರ ಶಿಲ್ಪ, ಮೊಹನ್‌ರಾವ್ ಪಂಚಾಳರ 'ಮತ್ಸ್ಯ' ಶಿಲ್ಪಗಳೂ ಈ ಶಿಬಿರದಲ್ಲಿ ಸೃಷ್ಟಿಯಾಗಿದ್ದು ಈ ಎಲ್ಲ ಶಿಲ್ಪಗಳೂ ಕನ್ನಡ ವಿಶ್ವವಿದ್ಯಾಲಯದ ಆವರಣದ ಪರಿಸರದಲ್ಲಿ ಪ್ರದರ್ಶನಗೊಂಡಿವೆ.

ಸಮಕಾಲೀನ ಶಿಲಾಶಿಲ್ಪಕಲಾ ಶಿಬಿರ, ಮೈಸೂರು

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಮತ್ತು ಡಾ. ಬಿ. ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಸಹಯೋಗದೊಂದಿಗೆ ವಿಶೇಷ ಘಟಕ ಯೋಜನೆಯಡಿ ದಿನಾಂಕ೨೧–೩೦ ಅಕ್ಟೋಬರ್,೨೦೧೪ ರವರೆಗೆ "ಸಮಕಾಲೀನ ಶಿಲಾ ಶಿಲ್ಪಕಲಾ ಶಿಬಿರ' ವನ್ನು ಮೈಸೂರಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿ ಆವರಣದಲ್ಲಿ ಏರ್ಪಡಿಲಾಗಿತ್ತು.

ದಿನಾಂಕ: ೨೧ ಅಕ್ಟೋಬರ್ ೨೦೧೪ ರಂದು ಶಿಬಿರದ ಉದ್ಘಾಟನೆಯನ್ನು ಮೈಸೂರು ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ. ಕೆ. ಎಸ್. ರಂಗಪ್ಪ ಅವರು ನೇರವೇರಿಸಿದರು. ಸಮಾರಂಭದ ಆಶಯ ನುಡಿಗಳನ್ನು ಅಂತರಾಷ್ಟ್ರೀಯ ಪ್ರಖ್ಯಾತಿಯ ಕಲಾವಿದ ಹಾಸನದ ಶ್ರೀ ಕೆ.ಟಿ. ಶಿವಪ್ರಸಾದ್ ಅವರು ಹೇಳಿದರು. ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷ, ಶ್ರೀ ಪಿಚ್ಚಳ್ಳಿ ಶ್ರೀನಿವಾಸ ಬೆಂಗಳೂರು ಅವರು ಹಾಗೂ ಶ್ರೀ ಕೆ. ಎ. ದಯಾನಂದ (ಕ.ಆ.ಸೇ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಬೆಂಗಳೂರು ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅಧ್ಯಕ್ಷತೆಯನ್ನು ಶ್ರೀ ಮಹಾದೇವಪ್ಪ ಎಸ್. ಶಿಲ್ಪಿ, ಅಧ್ಯಕ್ಷರು ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು ಇವರು ವಹಿಸಿದ್ದರು.

ದಿನಾಂಕ ೩೦ ಅಕ್ಟೋಬರ್ ೨೦೧೪ ರಂದು ನಡೆದ ಸಮಾರೋಪ ಸಮಾರಂಭದಲ್ಲಿ ಕಲಾಕೃತಿಗಳ ಲೋಕಾರ್ಪಣೆಯನ್ನು ಸಂಸ್ಕೃತಿ ಚಿಂತಕರಾದ ಕೋಲಾರದ ಶ್ರೀ ಕೋಟಿಗನಹಳ್ಳಿ ರಾಮಯ್ಯ ಅವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಪ್ರೊ. ಸಿ. ಬಸವರಾಜು ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ವಹಿಸಿದ್ದರು. ಶ್ರೀ ಸಿ. ಬಸವಲಿಂಗಯ್ಯ, ನಿರ್ದೇಶಕರು, ರಾಷ್ಟ್ರೀಯ ನಾಟಕ ಶಾಲೆ, ಬೆಂಗಳೂರು ಕೇಂದ್ರ ಇವರು ಸಮಾರೋಪದ ಮಾತುಗಳನ್ನು ಹೇಳಿದರು. ಮುಖ್ಯ ಅತಿಥಿಗಳಾಗಿ ಶ್ರೀ ಎಚ್. ಜನಾರ್ಧನ್ ನಿರ್ದೇಶಕರು, ರಂಗಾಯಣ ಮೈಸೂರು ಹಾಗೂ ವಿಶೇಷ ಆಹ್ವಾನಿತರಾಗಿ ಹೆಸರಾಂತ ಚಿತ್ರಕಲಾವಿದರಾದ ಡಾ.ಸಿ. ಚಂದ್ರಶೇಕರ್ ಪಾಲ್ಗೊಂಡರು. ಡಾ. ಗೀತಾಂಜಲಿ ಆಚಾರ್ ಹಾಗೂ ಎಸ್. ಶಿವಪ್ರಸಾದವರು ಉಪಸ್ಥಿತರಿದ್ದರು.

ಶಿಬಿರದ ನಿರ್ದೇಶಕರಾಗಿ ಮೈಸೂರಿನ ಬಸವರಾಜ ಎಲ್. ಭಾಗಿಯಾಗಿದ್ದರು. ಮುಖ್ಯ ಶಿಲ್ಪಿಗಳಾಗಿ ಕು. ಅಮೂಲ್ಯ ಎಂ. ಜಿ., ಪುನೀತ್ ಟಿ. ಆರ್, ಶರಣ್ ಎಂ., ಚಂದ್ರು ನಾಯಕ್., ಸುಮನ್ ಬಿ., ಸುನೀಲ್ ಕುಮಾರ್ ಬಿ., ಪ್ರದೀಪ್, ನರೇಶ ನಾಯ್ಕ, ಜಗದೀಶ್ ಕಡೂರು, ನಾಗೇಂದ್ರ ಎಂ. ಇವರು ಭಾಗಿಗಳಾಗಿದ್ದರು.

ಸಹಾಯಕ ಶಿಲ್ಪಿಗಳಾಗಿ ಭವಾನಿ ಶಂಕರ್, ಶೇಖರ್ ರಾಮಮೂರ್ತಿ ಎಂ., ನಂಜುಂಡಸ್ವಾಮಿ, ಕು. ಜ್ಯೋತಿ ಭಾರತಿ, ಅಶೋಕ್ ಉಜಿರೆ, ಮನು ಎಸ್, ಆನಂದ ಎಸ್. ಶಿವಶಂಕರ ಡಿ. ಎಸ್., ಎಸ್. ಸಂತೋಷ್ ಕುಮಾರ್ ಇವರೆಲ್ಲರೂ ಭಾಗಿಗಳಾಗಿದ್ದರು.

ಶಿವಮೊಗ್ಗ ಜಿಲ್ಲೆ ಕುಪ್ಪಳ್ಳಿಯ ಕುವೆಂಪು ಕನ್ನಡ ಅಧ್ಯಯನ ಕೇಂದ್ರದಲ್ಲಿ ರಾಜ್ಯ ಮಟ್ಟದ ಶಿಲಾ ಶಿಲ್ಪಕಲಾ ಶಿಬಿರವನ್ನು ಏರ್ಪಡಿಸಿತ್ತು. ವಿಶೇಷವೆಂದರೆ ರಾಷ್ಟ್ರಕವಿ ಕುವೆಂಪು ಸಾಹಿತ್ಯದ ಘಟನೆಗಳಾಧಾರಿತ ಶಿಲ್ಪಗಳನ್ನು ಈ ಶಿಬಿರದಲ್ಲಿ ರಚಿಸಲಾಗಿದೆ. ಕುವೆಂಪು ಅವರ ಕಾವ್ಯ ಮತ್ತು ಸಾಹಿತ್ಯದಲ್ಲಿ ಬರುವ ವಿಶೇಷ ಘಟನೆಗಳು, ಸನ್ನೀವೇಷಗಳು, ವ್ಯಕ್ತಿ ಅಥವಾ ಪಾತ್ರಗಳನ್ನು ಆಧರಿಸಿ ತಮ್ಮದೇ ಆದ ಸಮಕಾಲೀನ ಶೈಲಿಯಲ್ಲಿ ಕಲಾವಿದರು ಶಿಲ್ಪ ಕಲಾಕೃತಿಗಳನ್ನು ರಚಿಸಿರುವರು. ಈ ಶಿಬಿರದಲ್ಲಿ ಶಿವಾನಂದ ಬಂಟನೂರ, ಮೋಹನ್ ಪಂಚಾಳ, ಎಚ್. ಎನ್. ಕೃಷ್ಣೇಗೌಡ, ರಾಘವಾಚಾರಿ, ಡಿ. ಹುಸೇನ್, ಮಹಾಂತೇಶ್ ಫಲದಿನ್ನಿ, ವಿಠ್ಠಲ ಬಡಿಗೇರ, ಮಂಜುನಾಥ ಕಂಚಗಾರ, ಮಲ್ಲಿಕಾರ್ಜುನ ಮಹಾಮುನಿ, ಟಿ.ಉದಯಕುಮಾರ್, ಹೇಮಂತಕುಮಾರ, ಭಾರತಿ ಸರಗಣಾಚಾರಿ, ಬಸಮ್ಮ ನರಗುಂದ, ನಿಂಗಪ್ಪ ಡಿ. ಕೇರಿ ಮೊದಲಾದ ಶಿಲ್ಪಿಗಳು ಭಾಗವಹಿಸಿ ಅರ್ಥಪೂರ್ಣವಾದ ಶಿಲ್ಪಗಳನ್ನು ರಚಿಸಿರುವರು. ಹದಿನೈದು ದಿನಗಳ ಕಾಲ ನಡೆದ ಈ ಶಿಬಿರದಲ್ಲಿ ಶಾಬ್ದಿಕ ಮಾಧ್ಯಮದಲ್ಲಿ ಮಡುಗಟ್ಟಿದ ಕುವೆಂಪು ಅವರ ಸಮಸ್ತ ಪ್ರಕೃತಿ ಮತ್ತು ಮನುಷ್ಯನ ಕೇಂದ್ರಿತ ಹಲವು ಸಂಗತಿಗಳ ಕುರಿತು ಅವುಗಳ ಒಳನೋಟಗಳನ್ನು ಕುರಿತು ಚಿಂತಿಸಿ ಶಿಲ್ಪಿಗಳು ತಮ್ಮದೇ ಶೈಲಿಯ ದೃಶ್ಯಭಾಷೆಯಲ್ಲಿ ಅಭಿವ್ಯಕ್ತಿಸಿದರು.

ಸುಮಾರು ಏಳು ಅಡಿ ಎತ್ತರದ ಶಿಲ್ಪದಲ್ಲಿ ಕುವೆಂಪು ಅವರು ಕಂಡ 'ಮೇಲು ಕೀಳೆಂಬ' ಸಾಮಾಜಿಕ ವ್ಯವಸ್ಥೆಯನ್ನು ಕುರಿತು ಶಿವಾನಂದ ಬಂಟನೂರ ಅವರು ಅಭಿವ್ಯಕ್ತಿಸಿರುವರು. ಹತಾಸೆ ನೋವಿನಿಂದ ಕೂಡಿದ ಮುಖವೊಂದು ತಲೆಯ ಮೇಲೆ ನಲಿವಿನಿಂದ, ಗೆಲುವಿನ ಮುಖಭಾವದಿಂದ ಕೂಡಿದ ತಲೆಯನ್ನು ಇರಿಸಿದಂತೆ ಕೆತ್ತಿರುವ ಈ ಶಿಲ್ಪ ಮನೋಜ್ಞವಾಗಿದೆ.

ತಾರತಮ್ಯದ, ಸಾಮಾಜಿಕ ಶೋಷಣೆಯಿಂದ ಕೂಡಿದ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ ಈ ಶಿಲ್ಪಕಲಾಕೃತಿ. ಕೆಲವೆಡೆ ನುಣುಪಾದ ಕೆಲವೆಡೆ ದೊಗರು ದೊಗರಾದ ಮೈವಳಿಕೆಯಿಂದ ಕೂಡಿ ಶಿಲ್ಪ ಪರಿಣಾಮಕಾರಿಯಾಗಿದೆ. ಮೈಸೂರಿನ ಹೇಮಂತ್ ಅವರು ರಚಿಸಿದ 'ಜಲಗಾರ' ಶಿವನ ಕೃತಿಯೂ ಬಹಳ ಉತ್ತಮವಾಗಿ ಮೂಡಿಬಂದಿದೆ. ಲೋಕದ ಕೊಳೆಯನ್ನು ಸ್ವಚ್ಚಗೊಳಿಸಲು ಪೊರಕೆಯನ್ನು ಕೈಯಲ್ಲಿ ಹಿಡಿದು ಅಣಿಯಾಗಿರುವ ಶಿವನ ತತ್ವವನ್ನು ದೃಶ್ಯ ಭಾಷೆಯಲ್ಲಿ, ಸಮಕಾಲೀನ ಶೈಲಿಯಲ್ಲಿ ಬಹಳ ಸುಂದರವಾಗಿ

ಖಂಡರಿಸಲಾಗಿದೆ. ನಯವಾದ ಮೈವಳಿಕೆ, ವೈಯಕ್ತಿಕ ಶೈಲಿ, ಪರಿಣಾಮಕಾರಿಯಾದ ವಸ್ತು, ಎತ್ತರವಾದ ಶಿಲೆಯಲ್ಲಿ ಮೂಡಿಬಂದಿರುವುದರಿಂದ ಈ ಶಿಲ್ಪಕಲಾಕೃತಿಯು ಗಮನಾರ್ಹ ಶಿಲ್ಪಗಳಲ್ಲಿ ಒಂದಾಗಿದೆ.

ಕುವೆಂಪು ಅವರ ಕಾವ್ಯಗಳಲ್ಲಿ ಅನೇಕ ಪಾತ್ರಗಳು ಬರುತ್ತವೆ. ಅದರಲ್ಲಿ 'ಕರಿಸಿದ್ದನದೂ' ಒಂದು, ಕಲಬುರಗಿಯ ನಿಂಗಪ್ಪ ಕೇರಿಯವರು ಈ ಶಿಲ್ಪವನ್ನು ಸಾಂಕೇತಿಕ ಅರ್ಥಗಳಿಂದ ಕೂಡಿರುವಂಥೆ ಸೊಗಸಾಗಿ ರಚಿಸಿರುವರು. ಕರಿಸಿದ್ದ ಆತನ ಗುಡಿಸಲು ಮನ, ಕಾಡು– ಮರಗಳು, ಉದಯಿಸುವ ಸೂರ್ಯ, ಹಕ್ಕಿಗಳು ಏನೆಲ್ಲ ಪ್ರಕೃತಿಯ ಸೊಬಗುಗಳಿಂದ ಕೂಡಿದ ಶಿಲ್ಪ ಸುಂದರವಾಗಿದೆ. ಪಂಚಮಹಾಭೂತಗಳನ್ನು ತನ್ನದೇ ರೀತಿಯಲ್ಲಿ 'ರಾಘವಾಚಾರಿ' ಅವರು ಶಿಲ್ಪಿಸಿರುವರು. ಪಂಚತತ್ವಗಳಾದ ನೀರು, ಅಗ್ನಿ, ವಾಯು, ಆಕಾಶ, ಪೃಥ್ವಿಗಳನ್ನು ಸಾಂಕೇತಿಕವಾಗಿ ಮತ್ತು ಸರಳವಾಗಿ ಶಿಲ್ಪಿಸಿರುವರು. ಬೃಹತ್ ಶಿಲೆಯಾಗಿರುವುದರಿಂದ ಇನ್ನಷ್ಟು ದಿನಗಳ ಕತ್ತನೆ ಈ ಶಿಲ್ಪ ಬೇಡುತ್ತ ನಿಂತಂತಿದೆ.

ಕುವೆಂಪು ಅವರ ಪ್ರಸಿದ್ಧ ಉಕ್ತಿ 'ಅನಿಕೇತನ' ಕುರಿತು ಎಚ್.ಎನ್. ಕೃಷ್ಣೇಗೌಡ ಸೃಷ್ಟಿಸಿರುವರು. ಸುತ್ತಲೂ ನಾಲ್ಕೂ ಬದಿಗಳಿಗೂ ಉಬ್ಬು ಶಿಲ್ಪಗಳನ್ನು ಕೆತ್ತಿರುವುದರ ಮೂಲಕ ಅರ್ಥಮಪ್ರಾಧಾನ್ಯತೆ ಮರೆದಿರುವರು. 'ನಿಸರ್ಗ' ಕುವೆಂಪು ಅವರ ಸಾಹಿತ್ಯ ಕೃತಿಯ ಅದ್ಭುತ ಸಂಪತ್ತಾಗಿದೆ. ಈ ನಿಸರ್ಗದ ಸೊಬಗನ್ನು ಕುರಿತು ಮೋಹನರಾವ್ ಪಂಚಾಳರು ಶಿಲ್ಪ ರಚಿಸಿರುವರು. ಶಿಲ್ಪವು ಆಕಾಶದಲ್ಲಿ ಕಿರಿದಾದರೂ ಸುಂದರವಾಗಿದೆ.

ಮತ್ತೋರ್ವ ಯುವ ಶಿಲ್ಪಿಯ ಕೈಯಲ್ಲಿ ಕುವೆಂಪು ಶೀರ್ಷಿಕೆಯ ಶಿಲ್ಪ ಪರಿಣಾಮಕಾರಿಯಾಗಿ ಮೂಡಿಬಂದಿದೆ. ಪುಸ್ತಕವೊಂದನ್ನು ಶಿಲೆಯಲ್ಲಿ ರಚಿಸಿ ಆಪುಸ್ತಕದ ಪುಟದಲ್ಲಿ ಕುವೆಂಪು ಅವರ ರೇಖಾತ್ಮಕ ಚಿತ್ರವನ್ನು ಕೊರೆದ ಈ ಶಿಲ್ಪವು ಸುಂದರ ಅಭಿವ್ಯಕ್ತಿಯಾಗಿರುವುದು, ಇದನ್ನು ವಿಜಯಪುರದ 'ವಿಠ್ಠಲ ಬಡೀಗೇರ ರಚಿಸಿರುವರು. ಹಾಗೇ ಕಡಿಮೆ ಕತ್ತನೆ ಹಾಗೂ ಸರಳತೆಯಿಂದ ಕೂಡಿದ ಮಂಜುನಾಥ ಕಂಚಗಾರ, ಮಲ್ಲಿಕಾರ್ಜುನ ಮಹಾಮುನಿ ಅವರ, ಭಾರತಿ ಸರಗಣಾಚಾರಿ, ಬಸಮ್ಮ ನರಗುಂದ, ಡಿ. ಹುಸೇನ್‌ರ ಶಿಲ್ಪಗಳೂ ಈ ಶಿಬಿರದಲ್ಲಿ ರಚನೆಯಾಗಿರುವವು.

ಕಲಬುರಗಿಯಲ್ಲಿ ಶಿವಶರಣ ಬಿ. ಉಪ್ಪಿನ್ ಅವರ ಸಂಚಾಲಕತ್ವದಲ್ಲಿ ಅವರ ತೋಟದ ಮನೆಯಲ್ಲಿ (೧೯೯೨) ಅಂತರಾಷ್ಟ್ರೀಯ ಶಿಲ್ಪಕಲಾ ಶಿಬಿರ ನಡೆಯಿತು. ಜರ್ಮನಿ, ಜಪಾನ್, ರಷ್ಯಾ, ಅಮೇರಿಕೆ, ಮಲೇಷಿಯಾ ದೇಶಗಳಿಂದ ಅಲ್ಲದೆ ನಮ್ಮ ದೇಶದ ಬೇರೆಬೇರೆ ರಾಜ್ಯಗಳಿಂದಲೂ ಹಾಗೂ ಕರ್ನಾಟಕದ ಕೆಲವು ಕಲಾವಿದರು ಈ ಶಿಬಿರಕ್ಕೆ ಆಹ್ವಾನಿಸಲ್ಪಟ್ಟು ಶಿಲ್ಪಗಳನ್ನು ರಚಿಸಿದ್ದು ಒಂದು ಐತಿಹಾಸಿಕ ದಾಖಲಾರ್ಹ ಸಂಗತಿಯೇ ಸರಿ.

ನಂತರ ಅಂದರೆ ೧೯೯೩ ರಲ್ಲಿ ಐಡಿಯಲ್ ಫೈನ್ ಆರ್ಟ್ ಸೋಸ್ಯಟಿಯಲ್ಲಿ ಅದರ ಕಾರ್ಯದರ್ಶಿಗಳಾದ ಪ್ರೊ. ವಿ.ಜಿ. ಅಂದಾನಿಯವರ ಸಂಚಾಲಕತ್ವದಲ್ಲಿ ಮತ್ತೊಂದು ಅಂತರಾಷ್ಟ್ರೀಯ ಶಿಲ್ಪ (ಚಿತ್ರಕಾರರೂ ಇದ್ದರು) ಕಲಾ ಸಿಂಪೋಷಿಯಂ ನಡೆಯಿತು. ಈ ಶಿಬಿರದಲ್ಲೂ ಜಪಾನ್, ಜರ್ಮನಿ, ರಷ್ಯಾ, ಅಮೇರಿಕ, ಮಲೇಷಿಯಾ ಮೊದಲಾದ

ದೇಶಗಳಿಂದ ಮತ್ತು ಹೊರರಾಜ್ಯಗಳಿಂದ ಹಾಗೂ ನಮ್ಮ ರಾಜ್ಯದಿಂದ ಆಯ್ಕೆಯಾದ ಶಿಲ್ಪ ಕಲಾವಿದರು ಬಂದು ಭಾಗವಹಿಸಿ ಪರಿಣಾಮಕಾರಿಯಾದ ಸಮಕಾಲೀನ ಶಿಲ್ಪಗಳನ್ನು ರಚಿಸಿರುವರು. ಕಲಬುರ್ಗಿಯಲ್ಲಿ ನಡೆದ ಮೇಲಿನ ಎರಡೂ ಶಿಲ್ಪ ಶಿಬಿರಗಳು ಐತಿಹಾಸಿಕವಾಗಿ ಮತ್ತು ಸಮಕಾಲೀನ ಶಿಲ್ಪಕಲೆಯ ದೃಷ್ಟಿಕೋನ ಹಾಗೂ ಬೆಳವಣಿಗೆಯ ದೃಷ್ಟಿಯಿಂದ ಅತ್ಯಂತ ಮಹತ್ವದವುಗಳಾಗಿವೆ.

೧೯೮೨ ರಲ್ಲಿ ಬೆಂಗಳೂರಿನಲ್ಲಿ 'ಇಂಡಸ್ಟ್ರೀಯಲ್ ಮತ್ತು ಟೆಕ್ನೋಲಾಜಿಕಲ್ ಮ್ಯೂಜಿಯಂ' ಆಶ್ರಯದಲ್ಲಿ ಅದರ ಆವರಣದಲ್ಲಿಯೇ 'Techno Art camp' ನಡೆಯಿತು. ಶಿವಸಿಂಗ್, ರಾಘವ ಕನೇರಿಯಾ, ವಾಸುದೇವ್ ಮೊದಲಾದವರಿದ್ದ ಶಿಬಿರವದು. ದೃಶ್ಯಕಲೆ ಮತ್ತು ತಾಂತ್ರಿಕತೆಗಳೆರಡನ್ನೂ ಬೆಸೆದು ಅಭಿವ್ಯಕ್ತಿಸಿದ ವಿಶಿಷ್ಟ ಉದ್ದೇಶದ ಶಿಬಿರವಿದಾಗಿತ್ತು. ಶಿವಸಿಂಗ್‌ರ angularform, ಅಜಿತ್ ಚಕ್ರವರ್ತಿಯವರ one, ರಾಘವ ಕನೇರಿಯಾರವರ sprouting seed ಕನ್ನೈಯಿ ಕುನ್ಹಿರಾಮನ್‌ರವರ' Kenetic, ವಿದ್ಯಾಶಂಕರ್ ಸ್ತಪತಿಯವರ space, ಭಾಸ್ಕರ್‌ರಾವ್ ಅವರ ಶಿರ್ಷಿಕೆರಹಿತ, ವಾಸುದವ್ ರ Kalpavriksh, ಜಿ. ಎಸ್. ಶೆಣ್ಯೆಯವರ srishti, ಸರ್ಬರಿರಾಯ್ ಚೌಧುರಿಯವರ 'ಹೆಡ್', ವಿ.ಎ. ದೇಶಪಾಂಡೆಯವರ ಶಿಲ್ಪ ಹಾಗೂ ಅಂಚನ್ ಅವರ 'Garden of Death' ಮೂಡಿಬಂದವು.

ಸಾರ್ವಜನಿಕ ಶಿಲ್ಪಸೃಷ್ಟಿಗೆ ಪ್ರೇರಣೆ ನೀಡಿದ ಶಿಲ್ಪಕಲಾ ಶಿಬಿರ

ಇಂದಿನ ನಮ್ಮ ಕನ್ನಡ ಶಿಲ್ಪವು ಸಂಪ್ರದಾಯ ಶೈಲಿಯನ್ನು ಮೀರಿದ ಸಮಕಾಲೀನ ನೆಲೆಯದು ಬೇರುಗಳನ್ನು ಉಳಿಸಿಕೊಂಡೇ ಇಂದಿನ ಸಂವೇದನೆಗಳನ್ನು ಅರಗಿಸಿಕೊಂಡ ನಮ್ಮ ಶಿಲ್ಪಗಳು ಸಹಜವಾಗಿಯೇ ಇಂದಿನ ಧ್ವನಿಯ ವಕ್ತಾರರಂತೆ ಅಭಿವ್ಯಕ್ತಿಸುತ್ತಿದ್ದಾರೆ. ಇವರ ಸೃಷ್ಟಿಗಳು ಒಂದೇ ಸಂದರ್ಭದಲ್ಲಿ ಇನ್‌ಸ್ಟಾಲೇಷನ್ ಕಲೆ (Installation Art) ಯನ್ನೂ ಒಳಗೊಂಡಂತೆ ಶಿಲ್ಪ ಪ್ರಕಾರದ ಹಲವು ಮಾಧ್ಯಮ, ಶೈಲಿ, ನಿರ್ವಹಣೆಗಳನ್ನು ಹೊಂದಿವೆ.

ಬೆಂಗಳೂರು ಜಾಗತಿಕವಾಗಿ ಹಲವು ಕಾರಣಗಳಿಂದ ಪ್ರಾಮುಖ್ಯತೆ ಪಡೆದಿರುವ ನಗರ. ಇಂದು ಇಲ್ಲಿನ ಭೂದೃಶ್ಯ (landscape) ಬದಲಾಗಿದೆ. Information Technologyಯ ಹಲವಾರು ಕಟ್ಟಡಗಳು ಜಾಗತಿಕ ವಾಸ್ತುಶಿಲ್ಪ ಕಲೆಯಮಟ್ಟಕ್ಕೆ ಅನುಗುಣವಾಗಿವೆ. ಹೊಸೂರು ರಸ್ತೆ, ವೈಟ್‌ಫೀಲ್ಡ್, ಬ್ರೂಸ್ ಫೀಲ್ಡ್ ರಸ್ತೆಗಳ ಕಟ್ಟಡಗಳು, ನಗರದ ಇನ್‌ಫೋಸಿಸ್, ವಿಪ್ರೋ, ಯು.ಬಿ. ಇತ್ಯಾದಿ ಕಟ್ಟಡಗಳು ಇಲ್ಲಿ ನೆನಪಾಗುತ್ತವೆ. ಆದರೆ ಸಮಕಾಲೀನ ಸಾರ್ವಜನಿಕ ಶಿಲ್ಪ (Public Sculpture) ಸೃಷ್ಟಿಯಲ್ಲಿ ಬೆಂಗಳೂರು ಒಂದೇ ಒಂದು ದಿಟ್ಟ ಹೆಜ್ಜೆಯನ್ನೂ ಇಟ್ಟಿಲ್ಲ. ಇಲ್ಲಿನ ನಾಗರೀಕರಿಗೆ ಉಪಯುಕ್ತ ಶಿಲ್ಪ ಸಂಕುಲ ದೊಡ್ಡ ರೀತಿಯಲ್ಲಿ ಬೆಳೆಯಲು ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ನಗರ ಸಭೆಯ ಇಲಾಖೆಗಳೇ ಅಲ್ಲದೆ ಸಾಹಿತ್ಯ ಪರಿಷತ್ತು, ಶಿಲ್ಪಕಲಾ ಅಕಾಡೆಮಿಗಳೂ

ಶಿಲ್ಪಿಗಳೊಂದಿಗೆ ಒಟ್ಟಾಗಿ ಕಾರ್ಯಯೋಜನೆ ಸಿದ್ಧಪಡಿಸಬೇಕಿದೆ. ರವೀಂದ್ರ ಕಲಾಕ್ಷೇತ್ರ ಮತ್ತು ಪುರಭವನದ ಮಧ್ಯದ ಉದ್ಯಾನವನದ ಸಮೂಹ ಶಿಲ್ಪ ಹಾಗೂ ಕಿತ್ತೂರು ರಾಣಿ ಚೆನ್ನಮ್ಮನ ಶಿಲ್ಪಗಳನ್ನು ಹೊಂದಿದೆ. ಇವೆರಡೂ ಸಾರ್ವಜನಿಕ ಜನನಿಬಿಡ ಕೇಂದ್ರಸ್ಥಾನದಲ್ಲಿದ್ದರೂ, ಜನರಿಂದ ದೂರವಾಗಿವೆ. ಇಲ್ಲಿನ ಆಡಳಿತ ವ್ಯವಸ್ಥೆ ಶಿಲ್ಪಗಳು ಹಾಗೂ ಜನರ ನಡುವೆ ಅಡೆ-ತಡೆಗಳನ್ನು ಒಡ್ಡಿವೆ. ಈ ಶಿಲ್ಪಗಳ ಉದ್ದೇಶಕ್ಕೆ ಭಂಗ ತಂದಿವೆ. ಇನ್ನುಳಿದ ಉದ್ಯಾನವನಗಳು ಕೇಳುವವರಿಲ್ಲದೆ ಬಿಕೋ ಎನ್ನುತ್ತಿವೆ. ಇಂತಹ ಸ್ಥಳವನ್ನು ಜೀವಂತಗೊಳಿಸುವ ಹಲವು ಅಪಕ್ವ ಪ್ರಯತ್ನಗಳು ವಿಫಲವಾಗಿವೆ. ಪ್ರಸ್ತುತ ಅಲ್ಲಿ ಸರ್ಕಾರವು, 'ಸುವರ್ಣ ಕರ್ನಾಟಕ ಶಿಲ್ಪವನ'ವನ್ನು ಅಭಿವೃದ್ಧಿಗೊಳಿಸಿ, ಶಿಲ್ಪಗಳಿಂದ ಅಲಂಕರಿಸಿ ಸಾರ್ವಜನಿಕರಿಗಾಗಿ ಈ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ತೆರೆದಿರುವುದು, ಸಾಂಸ್ಕೃತಿಕವಾಗಿ ಸಂತಸ ನೀಡಿದ ಸಂದರ್ಭ.

'ಸುವರ್ಣ ಕರ್ನಾಟಕ ಶಿಲ್ಪವನ'ಕ್ಕಾಗಿ ನಡೆದ ಜುಲೈ ೨೭ ರಿಂದ ಅಗಸ್ಟ್೧೦, ೨೦೦೬ ಶಿಲ್ಪಕಲಾ ಶಿಬಿರದಲ್ಲಿ ರಾಜ್ಯದ ೧೫ ಶಿಲ್ಪಿಗಳು ಪಾಲ್ಗೊಂಡರು. ಇವರೆಲ್ಲ ತಮ್ಮದೇ ಆದ ರೀತಿಯ ಶಿಲ್ಪಗಳನ್ನು ಸೃಷ್ಟಿಸಿದರು; ತಂತ್ರ, ವಸ್ತು, ಶೈಲಿ ಹಾಗೂ ನಿರ್ವಹಣೆಗಳು ಸಹಜವಾಗಿಯೇ ವಿಭಿನ್ನವಾಗಿವೆ. ಸಾಂಸ್ಕೃತಿಕ ರಂಗದ, ಅದರಲ್ಲೂ ಲಲಿತಕಲಾ ರಂಗದ ಕಲಾವಿದರು, ಶಿಲ್ಪಿಗಳು, ಇತಿಹಾಸಕಾರರು, ವಿರ್ಮಕರು ಒಂದೆಡೆ ಸೇರದಿರುವ ಇಂದಿನ ಸಂಕೀರ್ಣ ಸಂದರ್ಭದಲ್ಲಿ ಸುವರ್ಣ ಕರ್ನಾಟಕ ಉತ್ಸವದ ನೆಪದಲ್ಲಿ ವಿವಿಧ ದೃಷ್ಟಿಯ ಶಿಲ್ಪಿಗಳು ಒಂದೆಡೆ ಸೇರಿ ೧೫ ದಿನಗಳ ಕಾಲ ಒಟ್ಟಿಗೆ ಸೃಷ್ಟಿಸಿದ್ದೇ ಒಂದು ವಿಶೇಷ.

ನಾಡಿನ ಹಿರಿಯ, ಪ್ರತಿಭಾನ್ವಿತ ಶಿಲ್ಪಿಗಳು ಮೈಸೂರಿನ ಹೆಗ್ಗಡದೇವನ ಕೋಟೆಯ ಕಪ್ಪುಶಿಲೆಯನ್ನು ತಮ್ಮ ಅಭಿವ್ಯಕ್ತಿಗೆ ಬಳಸಿಕೊಂಡರು. ಕರ್ನಾಟಕದ ತೀರ್ಥಹಳ್ಳಿಯ, ಹಿರಿಯ ಶಿಲ್ಪಿಗಳಲ್ಲಿ ಒಬ್ಬರಾಗಿರುವ, ಶಾಂತಿನಿಕೇತನದಲ್ಲಿ ಕಲಿತು ಬಂದಿರುವ ಹೆಚ್.ಎನ್. ಕೃಷ್ಣಮೂರ್ತಿಯವರು ಸಿಮೆಂಟ್ ಮಾಧ್ಯಮದಲ್ಲಿ ಸೃಷ್ಟಿಸಿದರು. ಹಳ್ಳಿಯ ನೆಲ್ಲುಕುಟ್ಟುವ ಇಬ್ಬರು ಮಹಿಳೆಯರ ಈ ಶಿಲ್ಪ ಜಾನಪದೀಯ- ಸಮಕಾಲೀನ ಸತ್ವಗಳೆರಡನ್ನೂ ಅರಗಿಸಿಕೊಂಡಿದೆ.

ಸಂಪ್ರದಾಯ ಶಿಲ್ಪಿಗಳಾದ ಶ್ರೀಮತಿ ಕನಕಾಮೂರ್ತಿ, ನಿಂಗಪ್ಪ ಡಿ.ಕೇರಿ ಹಾಗೂ ಎಂ. ರಾಮಮೂರ್ತಿಯವರೂ ಸಮಕಾಲೀನವಾಗಿ ಸೃಷ್ಟಿಸಿದ್ದು ಗಮನ ಸೆಳೆಯುತ್ತಿತ್ತು. ಇವರ ಶಿಲ್ಪಗಳ ಕುಶಲತೆ ಶ್ರಮಗಳೂ ನೋಡುಗರನ್ನು ಆಕರ್ಷಿಸಬಲ್ಲವು. ಉದ್ಯಾನವನದ ಪಕ್ಷಿ ಸಂಕುಲವನ್ನು ಗಮನದಲ್ಲಿಟ್ಟು, ಕನಕಾಮೂರ್ತಿಯವರ ಒಡನಾಟ ಶಿಲ್ಪದಲ್ಲಿ ಬುದ್ಧನ ಕಾಲದ ಪ್ರಾಣಿ ದಯಾ ಶಿಲ್ಪ ಗ್ರಹಿಸಲ್ಪಟ್ಟಿದೆ. ಪ್ರಕೃತಿ ಪ್ರೀತಿಯ ಸಾಂಕೇತಿಕ ಸ್ನೇಹ ಅಭಿವ್ಯಕ್ತಿ ನಿಂಗಪ್ಪನವರ ಶಿಲ್ಪದಲ್ಲಿದೆ. ಉಳಿದಂತೆ ಎಲ್ಲ ಶಿಲ್ಪಿಗಳ ಸೃಷ್ಟಿಗಳು ಸಮಕಾಲೀನ ಸ್ಪರ್ಶಹೊಂದಿವೆ.

ಯು. ಭಾಸ್ಕರರಾವ್ ಅವರ 'Divin column' ಶಿಲ್ಪ, ಆದಿಮ ಸತ್ವಗಳ ಗ್ರಾಮೀಣ ಮೂಲದ ಸಾಂಸ್ಕೃತಿಕ ಆಚರಣೆಯ ಹೊಳಹುಗಳನ್ನು ಘನೀಭವಿಸಿದ ಗ್ರಹಿಕೆ. ಇನ್ನಿತರ ಶಿಲ್ಪಿಗಳಂತ ಇವರ ಕೆತ್ತನೆ ಹಾಗೂ ನಯಗೊಳಿಸುವಿಕೆಗೆ ಇಂದು ಲಭ್ಯವಿರುವ ತಾಂತ್ರಿಕತೆಯ

ನೆರವು ಪಡೆದಿದ್ದಾರೆ. ಕನ್ನಡ ಸಂಸ್ಕೃತಿ ಪರಂಪರೆಗೆ ಪೂರಕವಾಗುವ ತಮ್ಮ ಶಂಖ ಶಿಲ್ಪದಲ್ಲಿ ವಿಜಯರಾವ್ ನಮ್ಮ ಸಂಸ್ಕೃತಿಯ ಪವಿತ್ರ ಪಾಂಚಜನ್ಯದಿಂದ ಘೋಷಣೆಯಾಗಲಿ ಎಂಬ ಆಶಯವನ್ನು ಬಿಂಬಿಸಿದ್ದಾರೆ. ಅಮೂರ್ತತೆಯಿಂದ ದೂರವಾಗಿ ಸರಳ, ಸುಂದರ ರೂಪದ ಈ ಶಿಲ್ಪ ಸಾಮಾನ್ಯ ವೀಕ್ಷಕನಿಗೂ ಹತ್ತಿರವಾಗಬಲ್ಲದು. ವಿ.ಎ. ದೇಶಪಾಂಡೆಯವರ 'Force' ಶೀರ್ಷಿಕೆಗೆ ಪೂರಕವಾಗಿದೆ. ಇನ್ನೇನು ಕೆಲವೇ ಕ್ಷಣಗಳಲ್ಲಿ ಬಿಗಿದಿರುವ ಪಟ್ಟಿಗಳಿಂದ ಬಿಡುಗಡೆಗೊಂಡು ಬಿಗಿಯಲ್ಪಟ್ಟಿರುವ ವಸ್ತು ಹೊರಬರುವ ಕಾತರದ ಕ್ಷಣಗಣನೆಯ ಅನುಭವ ನೀಡುವ ಶಿಲ್ಪ. ಎನ್.ಎಸ್. ಪ್ರದೀಪ್‌ಕುಮಾರ್‌ರ ಶಿಲ್ಪ ಅರಳಿದ ಸೂರ್ಯಪಾನ ಹೂವಿನಲ್ಲಿ ಸ್ವಲ್ಪವೇ ವಾಲಿದ ಸರಳ ಸುಂದರ ಮುಖ ಕಾವ್ಯಮಯ, ಲಯಭರಿತ ಸೌಂದರ್ಯದ ಶಿಲ್ಪವಾಗಿದೆ. ಎಂ.ಸಿ. ರಮೇಶ್ ಅವರ 'Wirlpool' ಇಂದಿನ ಸಂಕೀರ್ಣ ಬದುಕಿನಲ್ಲಿ ಸಿಲುಕಿದವನ ಗ್ರಹಿಕೆ. ಕಲ್ಲಿನಲ್ಲಿನ ಒರಟುತನವನ್ನು ಅಗತ್ಯವಾದಷ್ಟು ಉಳಿಇಕೊಂಡ' ವಿಕೃತಿ ಸೌಂದರ್ಯ'ವನ್ನು ದುಡಿಸಿಕೊಂಡ ಶಿಲ್ಪ, ಕುಶಲತೆ ಹಾಗೂ ಒರಟುತನಗಳೆರಡನ್ನೂ ಕಸಿಮಾಡಿಕೊಂಡ ಶಿಲ್ಪವಿದು. ಜಾನ್ ದೇವರಾಜರ 'Triumph of freedom' ಹಲವು ಭಾಗಗಳ ಶಿಲ್ಪ ಸಮೂಹ. ಸಮಕಾಲೀನ ಜಾಗತಿಕ ಆರ್ಥಿಕ ಅಬ್ಬರದ ಪರಿಣಾಮಗಳ ಫಲವೇ ಅಲ್ಲದೆ ಸಾಮಾನ್ಯರ ನೋವು ನಲಿವುಗಳನ್ನೂ ಬಿಂಬಿಸುತ್ತದೆ. ದ್ರಾವಿಡ ಸಾಂಸ್ಕೃತಿಕ ಬೇರುಗಳನ್ನೂ ಗ್ರಹಿಸಿರುವ ಅಭಿವ್ಯಕ್ತಿ ಇದು. ದೇವರಾಜರ ಸಹಜ ಶೈಲಿಯ ಸಹಿ(signature) ನೆನಪಿಸುವ ಒರಟು ಶೈಲಿಯ ನಿರ್ವಹಣೆಯ ಶಿಲ್ಪವಿದು.

ವಿಪಿನ್‌ಸಿಂಗ್ ಭದೌರಿಯಾ ಅವರ 'Dark-n-light' ಶಿಲ್ಪ ಒಂದು ಬದಿಯಲ್ಲಿ ಸಿಹಿಯಾದ ಅನುಭವ ಬಿಂಬಿಸಿದ್ದರೆ ಮತ್ತೊಂದು ಬದಿಯಲ್ಲಿ ಕಹಿಯ ಅನುಭವ ಬಿಂಬಿಸಿವೆ. ಕಾಲದ ಶುಭ– ಅಶುಭ 'ಆಗುವಿಕೆಗಳ ಸಾಂಕೇತಿಕ ಗ್ರಹಿಕೆ' ಯ ವಿಶಿಷ್ಟ ಕಲ್ಪನೆಯ ಶಿಲ್ಪ ನೋಡುಗರನ್ನು ಬಹುಕಾಲ ಕಾಡಬಲ್ಲದು. ಶ್ಯಾಮ ಸುಂದರ್ ಅವರ 'Used shoes' ಶಿಲ್ಪ ಕಾಲವನ್ನು ಪ್ರತಿನಿಧಿಸುತ್ತದೆ ಮತ್ತು ಸಾಮಾನ್ಯರಿಂದಲೂ ನೋಡಿಸಿಕೊಳ್ಳುತ್ತದೆ.

ಜಿ. ಸುರೇಶಕುಮಾರ್ ಅವರ ಶಿಲ್ಪ ಸುತ್ತಲಿನ ಭೂದೃಶ್ಯದ ನಡುವೆ ವೇಗವಾಗಿ ಕಾಣೆಸಿಕೊಳ್ಳುತ್ತಿರುವ ಅತ್ಯಾಧುನಿಕ ರಸ್ತೆಗಳ ಬದಿ ಈ ಹಿಂದೆ ಬಳಸಿ ಬಿಟ್ಟ ಶಿಥಿಲ ರಸ್ತೆಯೊಂದರ ತುಣುಕಿನ ಸ್ತಬ್ದಚಿತ್ರ ಸಮಕಾಲೀನ ಶಿಲ್ಪಿಯೊಬ್ಬನನ್ನು ಸ್ಪಂದಿಸಿದಾಗ ಮೂಡಿ ಬರುವ ರೂಪ ಕಲ್ಪನೆ, ಅಭಿವ್ಯಕ್ತಿಗೆ ಆಯ್ಕೆ ಮಾಡಿಕೊಂಡ ಕಲ್ಲಿನ ರೂಪದ ಪ್ರಭಾವ ಇತ್ಯಾದಿಗಳನ್ನು ಆ ಶಿಲ್ಪದ ಸುತ್ತ ಸುತ್ತಿಯೇ ಅನುಭವಿಸಬೇಕು. ಇದೊಂದು ವಿಶಿಷ್ಟ ಗ್ರಹಿಕೆ; ಅಸಾಮಾನ್ಯ ನಿರ್ವಹಣೆ. ಶಿವಾನಂದ ಬಂಟನೂರರ ಅಭಿವ್ಯಕ್ತಿ 'ಜನಪ್ರಿಯ' ಕಲ್ಪನೆಯನ್ನು ಅರಗಿಸಿಕೊಂಡಿದೆ; ವೀಕ್ಷಕರಿಗೆ ಪ್ರಕೃತಿ ಸೌಂದರ್ಯ ಮರೆತಿರುವ ಬೆಂಗಳೂರು ಸಿಮೆಂಟ್ ಕಾಡಿನ ನಡುವೆ ಮುದ ನೀಡುವ ಶಿಲ್ಪ. ಹಿರಿಯ ಶಿಲ್ಪಿಗಳಲ್ಲೊಬ್ಬರಾಗಿರುವ ನಾರಾಯಣ ಸೂತ್ರದಾರರ ಕಪ್ಪು ಶಿಲೆಯ (ಬಳಪದ ಕಲ್ಲು) ಪ್ರೀತಿಯೊಂದಿಗೆ ಬೆಳೆಯುವ ಬದುಕಿನ ಪ್ರಯಾಣದ ರಮ್ಯ ಅನುಭವದ ಶಿಲ್ಪ 'ಶಿಲೆಯ ಅವಕಾಶದ ಸಹಜ ಅಲೆ– ಮೈವಳಿಕೆಗಳ ರೇಖೆಗಳನ್ನು ಪುನಃ ತೀಡಿ, ತಿದ್ದಿ, ಆಳವಾಗಿ ರೇಖಿಸಿ ಪಡೆದ ಆಕರ್ಷಕ ರೂಪ. ಎಲ್ಲ ವರ್ಗದವರಿಗೂ ಖುಷಿ ನೀಡಬಲ್ಲ ಶಿಲ್ಪವಿದು.

ಶಿಲ್ಪಕಲಾ ಅಕಾಡೆಮಿಯು ವೆಂಕಟಾಚಲಪತಿಯವರ ಸಲಹೆಯಂತೆ ಸಂಪ್ರದಾಯ ಶಿಲ್ಪಕಲೆಯ ಯುವ ಕಲಾವಿದರನ್ನು ಸಮಕಾಲೀನ ಕಲಾವಿದರೊಂದಿಗೆ ಶಿಲ್ಪ ಸೃಷ್ಟಿ ಪ್ರಕ್ರಿಯೆಯ ಸಂದರ್ಭದಲ್ಲಿ ತೊಡಗಿಸಿದ್ದು ಮಹತ್ವದ ಬೆಳವಣಿಗೆ, ಶಿಬಿರದ ಈ ಎಲ್ಲ ಶಿಲ್ಪಿಗಳೂ ಮೂಲತಃ ಹೆಗ್ಗಡದೇವನಕೋಟೆಯಿಂದ ಬಂದಿಳಿದ ಕಲ್ಲುಗಳ ಹೊಸರೂಪಕ್ಕೆ ತಮ್ಮನ್ನು ಹೊಂದಿಸಿ, ತಮಗೆ ಅಗತ್ಯವೆನ್ನಿಸಿದ ರೂಪಗಳನ್ನು ತಂದುಕೊಂಡರು. ರಮೇಶ್ ರಂತಹವರು ಮೂಲಕಲ್ಲಿನ ರೂಪವನ್ನು ಮರೆಸಿ ಹೊಸ ರೂಪವನ್ನೇ ತಂದುಕೊಂಡದ್ದೂ ಗಮನಾರ್ಹ.

ಈ ಮೊದಲು ಹೇಳಿರುವಂತೆ ನಮ್ಮಲ್ಲಿ ಗಣನೀಯ ರೀತಿಯ ಸಾರ್ವಜನಿಕ ಶಿಲ್ಪಗಳಿಲ್ಲ. ಭವಿಷ್ಯದಲ್ಲಿ ಸೃಷ್ಟಿಯಾಗುವ ಆ ಹಾದಿಯ ಶಿಲ್ಪಗಳನ್ನು ಅನುಭವಿಸಲು ಪ್ರಸ್ತುತ ನಮ್ಮ ನಡುವೆ ಇರುವ ಶಿಲ್ಪವನದ ಶಿಲ್ಪಗಳನ್ನಾದರೂ ನಮ್ಮ ಜನ ನೋಡುವಂತಹ ವಾತಾವರಣ ಕಲ್ಪಿಸಬೇಕು. ಜಾನಪದ, ಹೊಯ್ಸಳ, ಚಾಲುಕ್ಯ, ವಿಜಯನಗರ ಶಿಲ್ಪಕಲೆಗಳ ಒಳಗೇ ಬೆರೆತುಹೋಗಿರುವ ನಮ್ಮ ಜನರು ಸಮಕಾಲೀನ ಶಿಲ್ಪಗಳನ್ನೂ ಹೆಚ್ಚು ಹೆಚ್ಚು ನೋಡುವಂತಾಗಬೇಕು. ಹತ್ತಿರ ಬಂದು ಸ್ಪರ್ಶಿಸಿ, ಹತ್ತಿ ಇಳಿದು ನೋಡುವ ಭವಿಷ್ಯದ ಸಾರ್ವಜನಿಕ ಶಿಲ್ಪಗಳಿಗೆ ಈಗಿನಿಂದಲೇ ಅವರನ್ನು ಸಜ್ಜುಗೊಳಿಸಬೇಕು. ಈ ಹಿನ್ನೆಲೆಯಲ್ಲಿ ಚಿತ್ರಕ್ಕೆ ಚಿನ್ನದ ಚೌಕಟ್ಟು ಹೇಗೆ ವಿಶಿಷ್ಟ ಆಕರ್ಷಣೆ ನೀಡಬಲ್ಲದೋ, ಹಾಗೆ ಈ ವಿಶಿಷ್ಟ ಶಿಲ್ಪಗಳನ್ನು' ಸುವರ್ಣ ಕರ್ನಾಟಕ ಶಿಲ್ಪವನ' ದಲ್ಲಿ ಹೇಗೆ ಪ್ರದರ್ಶಿಸಿದರೆ, ನೋಡುಗರಿಗೆ ಆನಂದದ ಅನುಭವ ಆಗಬಲ್ಲದು? ಶಿಲ್ಪಿಗಳಿಗೆ ಸಮಾಧಾನ ನೀಡಬಲ್ಲದು? ಎಂಬ ಅಂಶಗಳೂ ಇಲ್ಲಿ ಮುಖ್ಯ ಭೂಮಿಕೆ ಪಡೆಯುತ್ತವೆ. ಈ ಎಲ್ಲ ಅಂಶಗಳು ಒಟ್ಟಾಗಿ ಮುಂದೆ ರಚನೆಯಾಗಲಿರುವ ಸಾರ್ವಜನಿಕ ಶಿಲ್ಪಗಳ 'ಸೃಷ್ಟಿಯ ದೃಷ್ಟಿಗೆ' ಪ್ರೇರಣೆ ನೀಡಬಲ್ಲವು.

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ ಗದಗ ಜಿಲ್ಲೆ 'ಹುಲಕೋಟಿಯಲ್ಲಿ ಶ್ರೀ ರಾಜೇಶ್ವರಿ ವಿದ್ಯಾ ಸಂಸ್ಥೆಯ ಸ್ವಾಮಿ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಸಹಯೋಗದೊಂದಿಗೆ ೨೦೧೫ ರಲ್ಲಿ ಸಮಕಾಲೀನ ಮತ್ತು ಸಾಂಪ್ರದಾಯಿಕ ಶೈಲಿಯ ಶಿಲಾ ಶಿಲ್ಪಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ ಮೈಸೂರಿನ ವೀರಣ್ಣ ಅರ್ಕಸಾಲಿ, ಹಂಪಿ ವಿ.ವಿ.ಯ ಶಿವಾನಂದ ಬಂಟನೂರ ಅಲ್ಲದೆ ಕಲ್ಲಪ್ಪ ಎಫ್. ಬಂಡಿ, ದಾನಯ್ಯ ಶಿ. ಚೌಕಿಮಠ, ಎನ್. ಬಿ. ಪರ್ವತಗೌಡರ್, ವೀರಣ್ಣ ಅರ್ಕಸಾಲಿ, ಪ್ರಸನ್ನಕುಮಾರ ಬಿ.ಸಿ, ಶ್ರೀಧರ ಎಂ.ಬಿ, ಉದಯಕುಮಾರ ಟಿ. ಕೊಪ್ಪದ, ಮಹದೇವ ಪಿ. ವಿಶ್ವ ಕರ್ಮ, ಡಿ. ಜನಾರ್ಧನಾಚಾರ್ಯ, ಸಂದೇಶ್, ನಟರಾಜ್, ವಿರೂಪಾಕ್ಷ ಪತ್ತಾರ, ಭರತ್ ಎಂ.ಸಿ. ಈ ಹದಿನೈದು ಮುಖ್ಯ ಶಿಲ್ಪಿಗಳೊಂದಿಗೆ ಸಹಾಯಕ ಶಿಲ್ಪಿಗಳಾಗಿ ಹದಿನೈದು ಜನ ಭಾಗವಹಿಸಿ ಶಿಲ್ಪಗಳನ್ನು ರಚಿಸಿದ್ದಾರೆ.

ದಿನಾಂಕ:೨೧.೦೪.೨೦೧೬ರಿಂದ ೦೫.೦೫.೨೦೧೬ ವರೆಗೆ ಬೆಂಗಳೂರಿನಲ್ಲಿ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಆವರಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಗೂ ಕರ್ನಾಟಕ ಶಿಲ್ಪಕಲಾ ಅಕಾಡೆಮಿಗಳು ಜಂಟಿಯಾಗಿ ಸಮಕಾಲೀನ ಶಿಲಾ ಶಿಲ್ಪಕಲಾ ಶಿಬಿರವನ್ನು ಹಮ್ಮಿಕೊಂಡಿದ್ದವು. ರಾಮನಗರ ಜಿಲ್ಲೆಯ ಶಿಲ್ಪಿ ರಾಮಕೃಷ್ಣ ಪಿ.ವಿ.

ಅವರು ಶಿಬಿರದ ನಿರ್ದೇಶಕರಾಗಿದ್ದರು. ಮುಖ್ಯ ಶಿಲ್ಪಿಗಳಾಗಿ ಶಿವಾನಂದ ಬಡಿಗೇರ, ಆರ್. ಕಂತರಾಜ್, ಹಣಮಂತ ಬಾಡದ, ಶಾಂತಗೌಡ ಎಸ್.ಟಿ., ಶಶಿಧರ್ ಆಚಾರ್ಯ, ಬಸವರಾಜ ಮೇತ್ರಿ, ಫಾಸ್ಟಿನ್ ಪ್ರಸನ್ನ, ಶ್ರೀಮತಿ ಶಾಮಲಾ ಬಿಲ್ಲವ, ಉಮೇಶ್ ಎಂ.ಎಸ್. ಜಗದೇಶ್ ಆರ್., ಬಸವರಾಜ್ ಎನ್.ಎಸ್. ಪ್ರಸನ್ನ, ಸುಕೇಶ್ ಬಿ.ಸಿ., ಗುರುರಾಜ್ ಹೆಚ್.ಎಸ್., ಪಿ. ಜ್ಯೋತಿ ಭಾರತಿ ಇವರೆಲ್ಲರೂ ಭಾಗವಹಿಸಿ ಸಮಕಾಲೀನ ಶಿಲ್ಪಗಳನ್ನು ರಚಿಸಿದರು. ಇವರೊಂದಿಗೆ ಹದಿನೈದು ಜನ ಸಹಾಯಕ ಶಿಲ್ಪಿಗಳೂ ಸಹಕರಿಸಿದರು.

ವೀರಣ್ಣ ಅರ್ಕಸಾಲಿಯವರು ಅಮೂರ್ತ ನೆಲೆಯಲ್ಲಿ ಸುಂದರವಾದ ಶಿಲ್ಪವನ್ನು ರಚಿಸಿದರು. ಕಲಬುರಗಿಯ ಶ್ರೀಧರ ಆಯರ್ವೇದ ಲೇಹ್ಯತಯಾರಿಗೆ ಸಂಬಂದಿಸಿದಂತೆ ಸುಂದರ ಶಿಲ್ಪವನ್ನು ರಚಿಸಿ ಭಾರತೀಯ ಆಯುರ್ವೇದ ಮದ್ದಿಗೆ ಸಂಬಂದಿಸಿದಂತೆ ಅದರ ತಯಾರಿ, ಪ್ರಯೋಜನ ಮಹತ್ವ ಮತ್ತು ಪರಿಕರಗಳಿಗೆ ಸಂಬಂಧಿಸಿದಂತಹ ವಿಷಯಗಳನ್ನು ಬಿಂಬಿಸಿದ್ದರು. ಉದಯಕುಮಾರ ಟಿ. ಅವರು ಬೃಹತ್ ಮರದ ಬುಡದ ಭಾಗವನ್ನು ಶಿಲೆಯಲ್ಲಿ ಕಡೆದು ನಿಲ್ಲಿಸಿದರು. ಪೇರಿಸಿಟ್ಟ ಪುಸ್ತಕಗಳು ಅದರ ಮೇಲೆ ಹೂ ಮೊಗ್ಗು ಇರುವಂತೆ ಶಿಲ್ಪ ರಚಿಸಿದ್ದೂ ಆ ಶಿಕ್ಷಣ ಸಂಸ್ಥೆಗೆ ಪ್ರೀಯವೆನಿಸಿತು.

ಶಿವಾನಂದ ಬಂಟನೂರರ ಶಿಲ್ಪ ಸಮಕಾಲೀನ ಸಂಗತಿಯನ್ನು ಬಿಂಬಿಸಿತು. ಭವಿಷ್ಯದಲ್ಲಿ 'ಪುಸ್ತಕಗಳಿಗೆ ಅಸ್ತಿತ್ವವುಂಟೆ?' ಎಂದು ಪ್ರಶ್ನಿಸುವಂತೆ ಸೃಷ್ಟಿಯಾಗಿದ್ದು, ಇಂದು ಪುಸ್ತಕ ಓದುಗ– ಕೊಳ್ಳುಗರ ಸಂಖ್ಯೆ ಕಡಿಮೆಯಾಗಿರುವುದರ ಬಗ್ಗೆ ಕಾಳಜಿಯು ಇದರಲ್ಲಿ ತುಂಬಿದೆ. ಪುಸ್ತಕದ ಮೇಲೆ ಕವಡೆಯೊಂದನ್ನು ಇರಿಸಿದಂತೆ ಕೆತ್ತಿರುವುದು ಕಂಪ್ಯೂಟರ್ ಯುಗದಲ್ಲಿ 'ಪುಸ್ತಕದ' ಮಹತ್ವ ಕಡಿಮೆಯಾಗಿರುವುದನ್ನ ಸೂಚಿಸಿದ್ದಾರೆ. ತನ್ಮೂಲಕ ಪುಸ್ತಕವೊಂದನ್ನು ಕೈಯಲ್ಲಿ ಹಿಡಿದು ಓದುವ ಸುಖ ಮಾಯವಾಗುತ್ತಿರುವುದರ ಬಗ್ಗೆ ಬೇಸರ ಮೂಡಿದಂತೆ ನಿರ್ಮಿಸಲಾಗಿದೆ. ೨೦ ದಿನಗಳ ಈ ಶಿಬಿರದಲ್ಲಿ ಕೆಲವು ಸಾಂಪ್ರದಾಯಿಕ ಶಿಲ್ಪಕಲಾಕೃತಿಗಳೂ ರಚನೆಯಾದವು.

೧೯೯೭ ರಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಪ್ರಥಮ ಅಧ್ಯಕ್ಷ ಕೆ. ಶಾಮರಾಯ ಆಚಾರ್ಯರ ನೇತೃತ್ವದಲ್ಲಿ ಮತ್ತು ರೆಜಿಸ್ಟಾರ್ ಆಗಿದ್ದ ಎನ್. ಮರಿಶಾಮಾಚಾರವರ ಸಂಚಾಲಕತ್ವದಲ್ಲಿ ಬೆಂಗಳೂರಿನ ರವೀಂದ್ರಕಲಾ ಕ್ಷೇತ್ರದ ಆವರಣದಲ್ಲಿ 'ಸಮಕಾಲೀನ ಮರ ಕೆತ್ತನೆ' ಶಿಲ್ಪ ಶಿಬಿರವನ್ನು ಆಯೋಜಿಸಲಾಗಿತ್ತು. ಸದರಿ ಶಿಬಿರದಲ್ಲಿ ಸುರೇಶ, ಪ್ರಭು ಆಚಾರ್, ಶಿವಾನಂದ ಬಂಟನೂರ, ಶಶಿಧರ ಪತ್ತಾರ, ಮಧುಸೂದನ ಮೊದಲಾದ ಯುವ ಶಿಲ್ಪಿಗಳು ಭಾಗವಹಿಸಿ ಸಮಕಾಲೀನ ಶಿಲ್ಪಗಳನ್ನು ರಚಿಸಿದ್ದರು. ಈ ಶಿಬಿರ ಪ್ರಾಯಶಃ ಶಿಲ್ಪಕಲಾ ಅಕಾಡೆಮಿಯ ಮೊಟ್ಟ ಮೊದಲ 'ಸಮಕಾಲೀನ ಶಿಲ್ಪ ಶಿಬಿರ' ವಾಗಿರಬಹುದು.

೨೦೦೭ ರಲ್ಲಿ 'ಮೂಡಬಿದ್ರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯವರು' ಸಂಸ್ಥೆಯ ಆವರಣದಲ್ಲಿ ಸಮಕಾಲೀನ ಶಿಲ್ಪಕಲಾ ಶಿಬಿರವನ್ನು ಏರ್ಪಡಿಸಿದ್ದರು. ೨೦ ಜನ ಶಿಲ್ಪಿಗಳು ಭಾಗವಹಿಸಿದ್ದರು. ಕಲ್ಲು, ಮಣ್ಣು, ಮರ, ಫೈಬರ್, ಸಿಮೆಂಟ್ ಅಲ್ಲದೆ ಗುಜರಿಯಿಂದ ತಂದ ಲೋಹದ ವಸ್ತುಗಳಿಂದಲೂ ಶಿಲ್ಪಗಳನ್ನು ರಚಿಸಿದರು. ಹರೀಶ್ ಮಾಳಮ್ಮನವರ ಗುಜರಿವಸ್ತುಗಳಿಂದಲೇ ದೊಡ್ಡದಾದ ಮನುಷ್ಯಾಕೃತಿಯ ಶಿಲ್ಪವನ್ನು ರಚಿಸಿದರು, ಸುಭಾಸ್

ಕಮ್ಮಾರರು ಶಿಲೆಯಲ್ಲಿ 'ಗೂಳಿಯನ್ನು', ಶಿವಾನಂದ ಬಂಟನೂರರು 'ಸಮಾಜಿಕ ವ್ಯವಸ್ಥೆಯಲ್ಲಿನ ಉಸಿರುಗಟ್ಟಿಸುವ ಸಂದರ್ಭಗಳ ಅನುಭವಗಳನ್ನು ಪರಿಣಾಮಕಾರಿಯಾಗುವಂತೆ ಶಿಲ್ಪದಲ್ಲಿ ಅಭಿವ್ಯಕ್ತಿಸಿರುವರು.' ಚಿಕ್ಕ ಮಂಗಳೂರಿನ ವಿಶ್ವಕರ್ಮಾಚಾರ್ ಅವರು ತಾಯಿ– ಮಗುವಿನ ಶಿಲ್ಪ ಸುಂದರವಾಗಿತ್ತು. ಬೆಂಗಳೂರಿನ ಮಧುಸೂಧನ ಅವರ ಅಮೂರ್ತನೆಲೆಯ ಮರ ಮಾಧ್ಯಮದ ಶಿಲ್ಪ ವಿನೂತನ ರೀತಿಯಲ್ಲಿ ಸೃಷ್ಟಿಗೊಂಡಿತ್ತು.

ಸಂಸ್ಥೆಯ ಅಧ್ಯಕ್ಷ ಮೋಹನ್ ಆಳ್ವಾ ಅವರು ಈ ರೀತಿಯ ಸಮಕಾಲೀನ ಶಿಲ್ಪ ಶಬಿರಗಳನ್ನು ರಾಜ್ಯ ಮಟ್ಟದಲ್ಲಿ ಅಲ್ಲದ ರಾಷ್ಟ್ರೀಯ ಮಟ್ಟದಲ್ಲಿ ಆಯೋಜಿಸಿ ವೈವಿಧ್ಯಮಯವಾದ ಸಮಕಾಲೀನ ಶಿಲ್ಪಗಳ ಸೃಷ್ಟಿಗೆ ಮತ್ತು ಅನೇಕ ಜನ ಸಮಕಾಲೀನ ಶಿಲ್ಪಿಗಳಿಗೆ ಪ್ರೇರಣೆ ನೀಡುವಲ್ಲಿ ಮಹತ್ವದ ಪಾತ್ರವನ್ನು ವಹಿಸಿರುವರು. ಅವರ' ಶಿಕ್ಷಣ ಸಂಸ್ಥೆಯ 'ಕ್ಯಾಂಪಸ್ ಈ ರೀತಿಯ ಶಿಲ್ಪಕಲಾಕೃತಿಗಳಿಂದ ತುಂಬಿ ದೊಡ್ಡ ಶಿಲ್ಪವನವಾಗಿ ಕಂಗೊಳಿಸುತ್ತಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಂಯೋಗದಲ್ಲಿ ಮೈಸೂರಿನ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿಯವರು 'ಅಖಿಲ ಬಾರತ ಶಿಲ್ಪಕಲಾ ಶಿಬಿರ' ವೊಂದನ್ನು ಏರ್ಪಡಿಸಿದ್ದರು. ದಿನಾಂಕ: ೨ ರಿಂದ ೧೬ ಮಾರ್ಚ ೨೦೦೯ರ ವರೆಗೆ ಬಾದಾಮಿಯಲ್ಲಿ ನಡೆದ ಈ ಶಿಬಿರದಲ್ಲಿ ೧೨ ಜನ ಶಿಲ್ಪಿಗಳು ಭಾಗವಹಿಸಿ ಶಿಲ್ಪ ಕಲಾಕೃತಿಗಳನ್ನು ರಚಿಸಿರುವರು. ಸುಮಾರು ಹದಿನೈದು ದಿನಗಳ ಕಾಲ ನಡೆದ ಈ ಶಿಬಿರದಲ್ಲಿ ಬೆಂಗಳೂರಿನ ವೆಂಕಟಾಚಲಪತಿ, ಚೆನ್ನೈನ ರಾಜಶೇಖರನ್ ನಾಯರ್, ಹಂಪಿ ವಿ.ವಿ.ಯ ಡಾ. ಶಿವಾನಂದ ಬಂಟನೂರ, ಪುಣೆಯ ಅನುಪ್ ಕುಮಾರ್, ಮೈಸೂರಿನ ವಿಜಯ್, ರಾಘವೇಂದ್ರ ಹಾಗೂ ಗುರುರಾಜ ಎಸ್. ನಾಯಕ್, ಬರೋಡಾದ ಮಹೇಂದ್ರ ಪಾಂಡೆ, ವಾರಾಣಾಸಿಯ ಸಂಜಯ್ ಸಿಂಗ್, ಉದಯಪುರದ ಹೇಮಂತ್ ಜೋಷಿ, ಜೈಪುರದ ವಿಫುಲ್ ಕುಮಾರ, ಬೆಂಗಳೂರಿನ ಗೋಪಿನಾಥ ಭಾಗವಹಿಸಿದ್ದರು.

ಬಾದಾಮಿಯ ಶ್ರೀ ವೀರಪುಲಕೇಶಿ ವಿದ್ಯಾವರ್ಧಕ ಸಂಸ್ಥೆಯ ಶಾಲಾ ಆವರಣದಲ್ಲಿ' ಆಯೋಜನೆಗೊಂಡಿದ್ದ ಈ ಶಿಬಿರದ ಮುಖ್ಯ ರೂವಾರಿಯಾಗಿದ್ದವರು' ಕಾವಾದ

ಡೀನ್‌ರಾದ ವಿ.ಎ. ದೇಶಪಾಂಡೆ ಅವರು ಬಾದಾಮಿ ಹತ್ತಿರದ ಐಹೊಳೆಯ ಗುಡ್ಡದಿಂದ ತಂದ ಮರಳು ಶಿಲಯಲ್ಲಿ ಇಲ್ಲಿನ ಎಲ್ಲ ಶಿಲ್ಪಗಳೂ ಸೃಷ್ಟಿಯಾದವು. ವೆಂಕಟಾಚಲಪತಿ ಎಂದಿನಂತೆ ನಿಸರ್ಗಕ್ಕೆ ಸ್ಪಂದಿಸಿದ 'ಕ್ಯಾಕ್ಟಸ್' ಶಿಲ್ಪವನ್ನು ಬೃಹತ್ತಾಗಿಯೇ ನಿರ್ಮಿಸಿದರು. ರಾಘವೇಂದ್ರ ಅವರು ಇನ್ನೂ ಬೃಹತ್ ಆದ ಶಿಲೆಯನ್ನು ಆರಿಸಿಕೊಂಡು ಮೈಯಲ್ಲೂ ಎಲೆಗಳ ನಕ್ಷೆಗಳಿಂದ ಕೂಡಿದಂತ ಮೈವಳಿಕೆಯನ್ನು ಸೃಷ್ಟಿಸಿ ಶಿಲ್ಪವನ್ನು ಪೂರ್ಣಗೊಳಿಸಿದರು. ಮಹೇಂದ್ರ ಪಾಂಡೆಯವರು ಐತಿಹಾಸಿಕ ಬಾದಾಮಿಯ ಶಿಲ್ಪವನ್ನು ಅದರಲ್ಲೂ ಪಳುವಳಿಕೆಯಾಗಿರುವ ಶಿಲ್ಪ ಸಂಪತ್ತನ್ನು ಸಂಕೇತಿಸುವಂತೆ ಅಭಿವ್ಯಕ್ತಿಸಿದರು. ಚಾಲುಕ್ಯರ ಸಾಮಾರಜ್ಯದ ಶಿಥಿಲ ಗೋಡೆಯ ಭಾಗವೊಂದನ್ನು ಸಂಕೇತಿಸುವಂತಹ 'ವಾಲ್

ಆಫ್ ಚಾಲುಕ್ಯ' ಶೀರ್ಷಿಕೆಯಲ್ಲಿ ರಚಿಸಿದರು. ಅಖಂಡ ಶಿಲೆಯಲ್ಲಿ ಒಂದರ ಮೇಲೆ ಒಂದು ಕಲ್ಲನ್ನು ಪೇರಿಸಿಟ್ಟಂತೆ, ಕಲ್ಲುಗಳ ಬಿರುಕಿನ ಮಧ್ಯದಿಂದ ಚಿಗುರೊಡೆದ ಎಲೆಗಳು,

ಬಾದಾಮಿಯ ಭಗ್ನಗೊಂಡ ಶಿಲ್ಪವು ಚಾಲುಕ್ಯರ ಲಾಂಛನ ಎಲ್ಲವುಗಳಿಂದ ಕೂಡಿ ಏಕಕಾಲಕ್ಕೆ ಚಾಲುಕ್ಯರ ಗತ ವೈಭವನ್ನೂ, ಹಾಳಾದುದನ್ನೂ ಭಗ್ನಾವಶೇಷಗಳ ಮೂಲಕ ಕಟ್ಟಿಕೊಟ್ಟು ತನ್ನ ಆಳವನ್ನು ತೋಡಿಕೊಳ್ಳುವಂತಿದೆ. ವಾರಣಾಸಿಯ ಸಂಜಯ್‌ಸಿಂಗ್‌ರ ಅಭಿವ್ಯಕ್ತಿಯು ಬಾದಾಮಿಯ ಐತಿಹಾಸಿಕ ಗತ ಸೌಂದರ್ಯವನ್ನೂ ಸಾಂಕೇತಿಕವಾಗಿ ಗಮನ ಸೆಳೆಯಿತು.

ಗೋಪಿನಾಥ ಜನಪದಕ್ಕೆ ಸ್ಪಂದಿಸಿ 'ದೊಡ್ಡದಾದ ಒರಳು ಮತ್ತು ರುಬ್ಬುಗಲ್ಲುಗಳನ್ನು ಸೃಷ್ಟಿಸಿದರು. ನಯವಾದ ಮೈವಳಿಕೆ, ನೀಟಾದ ನಿರ್ವಹಣೆಯಿಂದಾಗಿ ಅವರ ಶಿಲ್ಪಕೃತಿ ಗಮನಾರ್ಹವೆನಿಸಿತು. ವಿಜಯರಾವ್ ಮತ್ತು ಗುರುರಾಜ್ ನಾಯಕರು ಕ್ರಮವಾಗಿ ಬೆಕ್ಕು ಮತ್ತು ಯುವತಿಯ ಮುಖಗಳನ್ನು ನಿರ್ಮಿಸಿದರು. ಕಲ್ಲಿನ ತುಂಡಗರೆರಡನ್ನು ಸಂಯೋಜಿಸಿ ರಚಿಸಿದ ಬೆಕ್ಕಿನ ಶಿಲ್ಪ ಸೊಗಸಾಗಿ ಮೂಡಿಬಂದಿತು.

ಇನ್ನೂ ವಿಶೇಷವಾಗಿ ಜನರನ್ನು ಆಕರ್ಷಿಸಿದ ಶಿಲ್ಪವೆಂದರೆ 'ರಾಜಶೇಖರನ್ ನಾಯರ್ ಅವರದು, ಉದ್ದನೆಯ ಶಿಲೆಯನ್ನು ಆಯತಾಕಾರಕ್ಕೆ ರೂಪಿಸಿಕೊಂಡು ಅದರಲ್ಲಿ ೪-೫ ತುಂಡುಗಳನ್ನಾಗಿ ಒಡೆದುಕೊಂಡು ಅವುಗಳ ಮೇಲೆ ಮತ್ತೆ ಕತ್ತನೆ ಮಾಡಿ ಪುನಃ ಮೊದಲಿದ್ದಂತೆ ಒಂದರ ಮೇಲೊಂದು ಕಲ್ಲಿನ ತುಂಡುಗಳನ್ನು ಪೇರಿಸಿಡುವ ಮೂಲಕ 'ಗೂಡುಗಳಿಂದ ಕೂಡಿದ' ಶಿಲ್ಪ ರಚಿಸಿದರು. ಸ್ವಲ್ಪ ದೂರದಿಂದ ನೋಡಿದರೆ ಬಹುಮಹಡಿ ಕಟ್ಟಡಗಳಿಂದ ಕೂಡಿದ ವಸತಿ ಸಮುಚ್ಛಯದಂತೆ ಕಾಣುತ್ತದೆ. ಗಗನದೆತ್ತರಕ್ಕೆ ತಲೆ ಎತ್ತಿ ನಿಂತ ಆಧುನಿಕ ಕಾಂಕ್ರೀಟ್ ಕಾಡಿನಲ್ಲಿ ಮರೆಯಾಗಿ ಹೋದ ಹಸಿರಿನ ಸಂಕೇತವಾಗಿ ತುದಿಯಲ್ಲೊಂದು ಚಿಗುರೊಡೆದ ಸಸಿಯನ್ನು ಪ್ರತ್ಯೇಕವಾಗಿ ಖಂಡರಿಸಿ ಸಿಕ್ಕಿಸುವುದರ ಮೂಲಕ ಕಲಾಕೃತಿಯ ಅರ್ಥವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಿರುವುದು ಆಸಕ್ತಿದಾಯಕವನಿಸಿದೆ. ಪುಣೆಯ ಅನುಪ್‌ಕುಮಾರ್, ನೀರಿನ ಸುಳಿಯನ್ನು ಅದರ ಅಗಾದ ಚಲನೆ ಮತ್ತು ಸೌಂದರ್ಯವನ್ನು ಶಿಲೆಯಲ್ಲಿ ಖಂಡರಿಸಿರುವರು. ಹೇಮಂತ್ ಜೋಷಿ, ವಿಫುಲ್ ಕುಮಾರ್‌ರ ಶಿಲ್ಪಗಳೂ ಚಿಕ್ಕ ಆಕಾರದವುಗಳಾದರೂ ಆಕರ್ಷಕವಾಗಿ ಸೃಷ್ಟಿಗೊಂಡಿವೆ.

ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ(೨೦೧೪) ಸಹಯೋಗದೊಂದಿಗೆ ಚಿತ್ರಕಲಾ ಪರಿಷತ್ತಿನ ಆವರಣದಲ್ಲಿ ಶಿಲಾ ಶಿಲ್ಪಶಿಬಿರವನ್ನು ಏರ್ಪಡಿಸಿತು. ಸುಮಾರು ಹದಿನೈದು ಜನ ಯುವ ಶಿಲ್ಪಿಗಳು ಈ ಶಿಬಿರದಲ್ಲಿ ಭಾಗವಹಿಸಿ ಗಮನಾರ್ಹವಾದ ಶಿಲ್ಪಗಳನ್ನು ರಚಿಸಿದರು. ಪರಿಷತ್ತಿನ ಆವರಣದಲ್ಲಿ ಈ ಶಿಲ್ಪಗಳನ್ನು ಕಾಣಬಹುದು.

ಸಮಕಾಲೀನ ಶಿಲ್ಪಕಲಾ ಶಿಬಿರ: ಹುಲಕೋಟಿ

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಗದಗ ಜಿಲ್ಲೆಯ ರೂರಲ್ ಮೆಡಿಕಲ್ ಸರ್ವಿಸ್ ಸೊಸೈಟಿ, ಹುಲಕೋಟಿ ಅವರ ಸಂಯೋಗದಲ್ಲಿ ಸಮಕಾಲೀನ ಸಿಮೆಂಟ್ ಶಿಲ್ಪ ಶಿಬಿರವನ್ನು ಏರ್ಪಡಿಸಿತು. ದಿ. ೨೧.೨.೧೩ ರಿಂದ ೭.೩.೧೩ ರವರೆಗೆ ಕೆ.ಎಚ್. ಪಾಟೀಲ್ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಸಂಸ್ಥೆಯ ಆವರಣದಲ್ಲಿ ಈ ಶಿಬಿರವನ್ನು ಜರುಗಿಸಲಾಯಿತು. ಶಿಲ್ಪಿ ಬಾಬುರಾವ್ ಎಚ್. ಶಿಬಿರದ ನಿರ್ದೇಶಕರಾಗಿ ಜವಾಬ್ದಾರಿ ನಿರ್ವಹಿಸಿದರು. ಹಿರಿಯ ಶಿಲ್ಪಿಗಳಾಗಿ ಅರುಣ ಕಾಡಾಪುರ, ಗಿರೀಶ ಜಿ. ಗಿರಡ್ಡಿ, ಕುಮಾರ ಬಾಬು ಘಸ್ತೆ, ಅಕ್ಷಯ ಕುಮಾರ ವಿ., ಇಂದ್ರಕುಮಾರ ಎಚ್.ಕೆ., ಎಸ್.ಕೆ. ಪತ್ತಾರ, ಲಿಂಗರಾಜ್ ವನ್ನೂರ, ಗೌರಿಶಂಕರ್ ಬಿ.ಜಿ., ಲೋಹಿತ್, ರವಿ ಶಿಶ್ವಿನಹಳ್ಳಿ, ವಿ.ಕೆ. ಜ್ಞಾನೋಪಂಥ, ಗುರುಸಿದ್ದನಗೌಡ ಪಾಟೀಲ, ಪ್ರತಾಪ ಬಹುರೂಪಿ ಮೊದಲಾದ ಕಲಾವಿದರು ಭಾಗವಹಿಸಿ ವೈವಿಧ್ಯಮಯ ಶಿಲ್ಪಗಳನ್ನು ರಚಿಸಿದರು. ಸಹಾಯಕ ಶಿಲ್ಪಿಗಳೂ ಇವರೊಡನೆ ಸಹಕರಿಸಿದರು.

ಮುಖ್ಯವಾಗಿ ಗ್ರಾಮೀಣ ಜನಜೀವನ, ಕೃಷಿ, ಬದುಕು, ಅನಾರೋಗ್ಯ, ಅನಕ್ಷರತೆಗೆ ಸಂಬಂದಿಸಿದಂತಹ ಶಿಲ್ಪಗಳೊಂದಿಗೆ ಆಯುರ್ವೇದ ಪದ್ಧತಿಯ ವೈಧ್ಯಕಿಯ ಕ್ಷೇತ್ರದ ಹಲವು ಆಯಾಮಗಳ ಕುರಿತ ಶಿಲ್ಪಗಳು ಈ ಶಿಬಿರದಲ್ಲಿ ಮೂಡಿಬಂದವು.

ಮೈಸೂರು ಹತ್ತಿರದ ರಾಮನಗರದ ಜಾನಪದ ಲೋಕದ ದೊಡ್ಡ ಮನೆಯ ಆವರಣದಲ್ಲಿ 'ಸಮಕಾಲೀನ ಶಿಲ್ಪಕಲಾ ಶಿಬಿರವನ್ನು' ಏರ್ಪಡಿಸಲಾಯಿತು. ದಿ. ೧೫ –೨೦ ಮಾರ್ಚ೨೦೧೩ ರವರೆಗೆ ವಿಶೇಷ ಘಟಕ ಯೋಜನೆಯಡಿ ಈ ಸಮಕಾಲೀನ ಶಿಲ್ಪಕಲಾ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ಉದಯೋನ್ಮುಖ ಶಿಲ್ಪಿಗಳಿಗಾಗಿಯೇ ಹಮ್ಮಿಕೊಳ್ಳಲಾಗಿದ್ದ ಆರುದಿನಗಳ ಈ ಶಿಬಿರದಲ್ಲಿ ಚಿತ್ರಕಲಾವಿದರಾದ ಸಿ. ಚಂದ್ರಶೇಖರ ಅವರು ನಿರ್ದೇಶಕರಾಗಿದ್ದರು. ಪುನಿತ್ ಟಿ. ಆರ್, ಪರಿವರ್ತನ್, ಆನಂದ ಎಸ್. ಚಿಕ್ಕಮಾ, ಕಾಳ, ದೇವಿಪ್ರಸಾದ್, ನವನೀತ್, ಅಶೋಕ, ಗಣೇಶ ಎಂ. ಜೆ, ಉಮೇಶ್, ಎಸ್. ಸತೀಶ್, ಲೊಕೇಶ ಕೆ, ಪ್ರಸನ್ನಕುಮಾರ, ಶ್ರೀ ರಾಜಶೇಖರ ಪಿ, ನಾಗೇಶ್ವರ ಎಂ.ಡಿ, ನಾಗರಾಜ್ ಎಂ. ಎಸ್, ಶಿವಪ್ರಸಾದ, ಶಿವಕುಮಾರ ಎಚ್, ವಿಜಯಕುಮಾರ ಜೆ. ಯು, ಸುನೀಲ್ ಕುಮಾರ ಸಿರಿಸಿಂಗ್, ಮಹೇಶ್ ಎ. ಕೆ, ಪಂಚಮುಖಿ, ಶ್ಯಾಂ ಸುಂದರ್, ಬಾಬುರಾವ್ ಎಚ್, ರಾಘವೇಂದ್ರ ಮೊದಲಾದವರು ಸೇರಿದಂತೆ ಸುಮಾರು ೩೫ ಜನಕ್ಕೂ ಮಿಕ್ಕಿ ಯುವ ಕಲಾವಿದರು ಇದರಲ್ಲಿ ಭಾಗವಹಿಸಿದ್ದರು.

ಬಹುಪಾಲು ಕಲಾವಿದರು ವ್ಯಾಕರಣಗಳನ್ನು ಮೀರಿ, ಸ್ವಂತ ಆಲೋಚನೆಗಳನ್ನು ತಮ್ಮ ಅಭಿವ್ಯಕ್ತಿಯಲ್ಲಿ ತುಂಬಲು ಯತ್ನಿಸಿದರು. ಸಣ್ಣ ಅಳತೆಯ ಶಿಲ್ಪಗಳಾದರೂ ಪರಿಣಾಮಕಾರಿಯಾದ ಅನುಭವಗಳನ್ನು ಮೂಡಿಸಿದವು. ತಾಂತ್ರಿಕವಾಗಿ ಮತ್ತು ತಾತ್ವಿಕವಾಗಿ ಹೆಚ್ಚು ಪ್ರಯೋಜನಕಾರಿಯಾದ ಶಿಲ್ಪಕಲಾ ಶಿಬಿರ ಇದಾಗಿದೆ.

ಸಾರ್ಕ್ ರಾಷ್ಟ್ರಗಳ ಕಲಾವಿದರ ಸಮ್ಮಿಳನ: ಜಿಂದಾಲ್

ಬಳ್ಳಾರಿ ಜಿಲ್ಲೆ ತೋರಣಗಲ್ ನಲ್ಲಿರುವ ಜಿಂದಾಲ್ ಕಂಪನಿ (ಜೆ.ಎಸ್.ಡಬ್ಲ್ಯೂ ಸ್ಟೀಲ್ ಕಂಪೆನಿ)ಯ ಪ್ರತಿಷ್ಠಾಪನವು ದಕ್ಷಿಣ ಏಷ್ಯಾ ರಾಷ್ಟ್ರಗಳ ಯುವ ಕಲಾವಿದರಿಗಾಗಿ ೨೦ ದಿನಗಳ ಕಾಲ (೨೦೧೩) 'ಅಭಿಸಾರಣ' ಕಲಾ ಶಿಬಿರವನ್ನು ಏರ್ಪಡಿಸಿತು.

ಭಾರತ, ಬಾಂಗ್ಲಾ, ಪಾಕಿಸ್ತಾನ, ಶ್ರೀಲಂಕಾ, ನೇಪಾಳ ಮತ್ತಯ ಬಾರತ ಸೇರಿದಂತೆ ೧೦ ಜನ ಯುವ ಸಮಕಾಲೀನ ಕಲಾವಿದರು ಶಿಲ್ಪ ಮತ್ತು ಚಿತ್ರಗಳಲ್ಲಿ ಅಭಿವ್ಯಕ್ತಿಸಿದರು. ಸ್ಥಳೀಯವಾಗಿ ಸಿಗುವ ಮತ್ತು ಕಂಪನಿಯ ಗುಜರಿಯಲ್ಲಿ ದೊರೆತ ವಸ್ತುಗಳನ್ನೇ ಬಳಸಿ ಸ್ಥಳೀಯ ಪರಿಸರ, ಜನ ಜೀವನ, ಪ್ರಕೃತಿ, ಜನರ ಆಸಕ್ತಿಗಳು ಒಟ್ಟಾರೆ ಕರ್ನಾಟಕ ಮತ್ತು ಬಳ್ಳಾರಿ ಪ್ರದೇಶದ ಸಂಸ್ಕೃತಿಯನ್ನು, ಇಲ್ಲಿನ ಬದುಕನ್ನು ಪ್ರತಿಬಿಂಬಿಸುವಂತಹ ಶಿಲ್ಪಕಲಾಕೃತಿಗಳನ್ನು ಕಲಾವಿದರು ಸೃಷ್ಟಿಮಾಡಿದರು. ಕಂಪನಿಯ ಆವರಣದ' ಕಲಾಧಾಮದಲ್ಲಿ ಈ ಶಿಬಿರ ಆಯೋಜನೆಗೊಂಡಿತ್ತು. ವೈವಿಧ್ಯಮಯ ಸಾಂಸ್ಕೃತಿಕ ಹಿನ್ನಲೆ ಇರುವ ಬಹುತೇಕ ವಿದೇಶಿ ಕಲಾವಿದರು ಇದೇ ಮೊದಲ ಬಾರಿಗೆ ಇಲ್ಲಿಗೆ (JSW) ಭೇಟಿ ನೀಡಿದ್ದು, ಪಾಕಿಸ್ತಾನದ ಕಲಾವಿದರನ್ನು ಹೊರತು ಪಡಿಸಿ ಮಿಕ್ಕವರೆಲ್ಲ ಹಂಪಿ, ಸಂಡೂರು, ದೋಣಿಮಲೈ, ಗಣಿ ಪ್ರದೇಶಗಳಿಗೆ ಭೇಟಿ ನೀಡಿ ಕಾರ್ಮಿಕರು, ಗ್ರಾಮಸ್ಥರು, ಪ್ರವಾಸಿಗರನ್ನು ಸಂಪರ್ಕಿಸಿ ವಿಶಿಷ್ಟ ಜೀವನ ಶೈಲಿಯನ್ನು ಪ್ರತಿಬಿಂಬಿಸುವಂತಹ ಕಲಾಕೃತಿಗಳನ್ನು ರಚಿಸಿ ಗಮನ ಸೆಳೆದರು.

ಭಾರತದ ಪ್ರೇಕ್ಷಾ, ಟೇಟರ್, ಮೃಗೇನ್ ರಾಥೋರ್, ಬ್ಯಾಪ್ಟಿಸ್ಟ್ ಕೋಯೆಲ್ಹೋ, ನೇಪಾಳದ ಶಿಲಾ ಶಾ, ರಾಜ ಭಂಡಾರಿ, ಸಂಜೀವ್ ಮಹಾಜನ್, ಪಾಕಿಸ್ತಾನದ ಮೂರ್ಖುಮ್ಮಿಲ್ ರುಹೀಲ್ ಹಾಗೂ ಸೀಮಾ ನುಸ್ರಾತ್, ಬಾಂಗ್ಲಾದೇಶದ ಮಹಬೂಬ್-ಉರ್-ರೆಹಮಾನ್,ಶೀಲಂಕಾದ ಚಿಂತಕ ತೆಮ್ವಾರಾ, ಪಾಲಾ ಪೋತುಪಿತಿಯಾ ಅವರು ತಮ್ಮ ಕಲಾಕೃತಿಗಳ ಕುರಿತು ವಿವರ ನೀಡಿದರಲ್ಲದೆ ಪ್ರವಾಸದ ಅನುಭವ ಹಮ್ಮಿಕೊಂಡರು.

ಅಮೇರಿಕ ಮೂಲದ ಗ್ರೇಸ್ ಮರ್ರೇ, ಅವರು ಸ್ಥಳೀಯ ಶಾಲೆಗಳ ವಿದ್ಯಾರ್ಥಿಗಳಿಗಾಗಿ ವೈವಿಧ್ಯಮಯವಾದ ಕಲಾಕೃತಿ ರಚಿಸುವ ಕಾರ್ಯಾಗಾರ ಏರ್ಪಡಿಸಿದರು.

ಸ್ಥಳೀಯರಿಗೆ ಹಾಗೂ ಜೆ. ಎಸ್. ಡಬ್ಲ್ಯು ಸಿಬ್ಬಂದಿಗೆ ಅಂತರಾಷ್ಟ್ರೀಯ ಮಟ್ಟದ ಕಲೆಯನ್ನು ಪರಿಚಯಿಸಲು ಸಂಸ್ಥೆಯು ಆಯೋಜಿಸಿದ ಈ ಶಿಬಿರ ಸ್ಥಳೀಯ ಸಂಸ್ಕೃತಿಯ ಒಳನೋಟಗಳನ್ನು ಬಿಂಬಿಸಿತು. 'ಈ ಶಿಬಿರದ ಕಲಾವಿದರು ಸಾರ್ಕ್ ರಾಷ್ಟ್ರಗಳ ಒಗ್ಗಟ್ಟಿಗೆ ಮತ್ತಷ್ಟು ಬಲ ನೀಡಿತು.' ಎಂದು ಕಾರ್ಯಾಗಾರದ ಕ್ಯೂರೇಟರ ಅಮಿತ್‌ಕುಮಾರ್ ಜೈನ್ ಅಭಿಪ್ರಾಯ ಪಟ್ಟರು.

ಬೆಂಗಳೂರಿನ ಕಲಾಗ್ರಾಮದಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ ತಂಜ್ಯಾವೂರು ಸಹಯೋಗದೊಂದಿಗೆ 'ಕಾಷ್ಠ ಶಿಲ್ಪಕಲಾ ಶಿಬಿರ' ವೊಂದನ್ನು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಆಯೋಜಿಸಿತು.

ದಿನಾಂಕ: ೧೭.೨.೨೦೧೪ರಿಂದ ೨೭.೨.೨೦೧೪ರ ವರೆಗೆ ಹತ್ತು ದಿನಗಳ ಕಾಲ ನಡೆದ ಈ ಕಾಷ್ಠ ಶಿಲ್ಪಕಲಾ ಶಿಬಿರದಲ್ಲಿ ಬಹುಪಾಲು ಸಮಕಾಲೀನ ಶೈಲಿಯಲ್ಲೇ ಶಿಲ್ಪಗಳು ರಚನೆಯಾದವು. ಗಣೇಶ ಎಲ್. ಭಟ್ ನಿರ್ದೇಶಕರಾಗಿದ್ದರು. ಶಿವಕುಮಾರ್ ಎಚ್.ಆರ್, ಎಂ.ಎನ್. ಮಹೇಶ್ ಕುಮಾರ್, ವಿರೇಶ್ ಆಚಾರ್, ನರಸಣ್ಣ ವಿಶ್ವಕರ್ಮ, ವಿ. ಕೆ. ಪತ್ತಾರ, ಟಿ.ಎನ್. ಮಹೇಶ್, ಆದಯ ಆಚಾರ್, ಸಿ.ಎಮ್. ಪ್ರವೀಣ,(ಕುಂಭಕೋಣಂ), ಪಿ.ವಿ. ಪ್ರಭಾಕರನ್ (ಪುದುಚೇರಿ), ಶ್ರೀನಾಥ(ಹೈದರಾಬಾದ), ಎಸ್. ಅನೇಶ್(ಕೇರಳ), ಸ.ನಂ.ಸಿ. ನಾರಾಯಣ(ಕೇರಳ–ಕೊಚ್ಚಿ) ಮೊದಲಾದ ಶಿಲ್ಪಿಗಳು ರಾಜ್ಯ ಮತ್ತು ಹೊರರಾಜ್ಯದವರೂ ಕುಡಿ ಅಭಿವ್ಯಕ್ತಿಸಿದರು. ಬೃಹತ್ ಬರದ ದೊಡ್ಡ ಅಳತೆಯಲ್ಲಿ ಅರಳಿದ ಶಿಲ್ಪಗಳು ಭವ್ಯವಾಗಿಯೇ ಕಾಣುವಂತಿವೆ. ಹಲವು ಯುವ ಶಿಲ್ಪಿಗಳಿಗೆ ದೊಡ್ಡ ಕೊರಡುಗಳು ಅವರ ಪ್ರತಿಭೆಗೆ ಇಂಬುಗೊಡುವಂತಿದ್ದದುದು ವಿಶೇಷ.

ಗದುಗಿನ ಹತ್ತಿರದ ಹುಲಕೋಟೆಯಲ್ಲಿ ಅಲ್ಲಿನ ರೂರಲ್ ಮೆಡಿಕಲ್ ಸರ್ವಿಸಸ್ ಸೊಸೈಟಿಯ ಸಹಯೋಗದೊಂದಿಗೆ ಶಿಲ್ಪಕಲಾ ಅಕಾಡಮಿಯು 'ಟೆರಾಕೊಟ್ಟಾ' ಶಿಲ್ಪ ಶಿಬಿರವೊಂದನ್ನು ಆಯೋಜಿಸಿತ್ತು. ದಿನಾಂಕ ೯–೩–೨೦೧೪ ರಿಂದ ೧೮–೩–೧೪ ರವರೆಗೆ ಕೆ. ಎಚ್. ಪಾಟೀಲ ಪ್ರಕೃತಿ ಚಿಕಿತ್ಸೆ ಯೋಗ ವಿಜ್ಞಾನ ಸಂಸ್ಥೆಯ ಆವರಣದಲ್ಲಿ ಏರ್ಪಡಿಸಲಾಗಿದ್ದ ಈ ಶಿಬಿರ ಹಲವು ವಿಶೇಷಗಳಿಂದ ಗಮನ ಸೆಳೆಯುವಂತೆ ಜರುಗಿತು.

ಗ್ರಾಮೀಣ ಸೊಗಡಿನೊಂದಿಗೆ ಆಯುರ್ವೆದ ಯೋಗ ವಿಜ್ಞಾನ, ಪ್ರಕೃತಿ, ದೇಶೀ ಚಿಕಿತ್ಸಾವಿಧಾನ ಮೊದಲಾದ ಸಂಗತಿಗಳನ್ನು ಬಿಂಬಿಸುವ ರೀತಿಯಲ್ಲಿ ಶಿಲ್ಪಗಳು ಮೂಡಿಬಂದವು. ಸಾಂಥರ್ಭಿಕ ಸೃಷ್ಟಗಳಾದರೂ ಕೆಲವು ಕಲಾವಿದರು ಸಮಕಾಲೀನ ಶೈಲಿಯಲ್ಲಿ ತಮ್ಮದೇ ಆದ ರೀತಿಯಲ್ಲಿ ಸ್ವತಂತ್ರವಾಗಿ ಆಲೋಚಿಸಿ ಅಭಿವ್ಯಕ್ತಿಸಿದರು.

ಶಿಬಿರದ ನಿರ್ದೆಶಕರಾಗಿ ಉಲ್ಲಾಸ್ಕರ್ ಡೇ, ಎನ್.ಬಿ. ಪರ್ವತಗೌಡರ್ ಉಮಾಶಂಕರ ಬಿ.ಇ. ಕೃಷ್ಣ, ನಿಂಗರಾಜು ಡಿ.ಎಂ,ವೀರಣ್ಣ ಕರಡಿ, ರಮೇಶ್ ತೇರದಾಳ, ಬಸವರಾಜ, ಓ, ಭೀಮಪ್ಪ ಪತ್ತಾರ, ಸತೀಶ್ ಆಚಾರ್, ಜಿ.ಬಿ. ಓಂಕಾರಮೂರ್ತಿ ಇವರಲ್ಲ ಶಿಲ್ಪಿಗಳಾಗಿ ಭಾಗವಹಿಸಿ ಶಿಲ್ಪ ಕೃತಿಗಳನ್ನು ಸೃಷ್ಟಿಸಿ ಆನಂದಿಸಿದರು.

ಸಮಕಾಲೀನ ಶಿಲ್ಪ ಸಂವೇದನೆಗಳಿಗೆ ಗಮನಾರ್ಹ ಉದಾಹರಣೆಯೆಂಬಂತೆ ಮತ್ತೊಂದು ಸಮಕಾಲೀನ ಶಿಲ್ಪಕಲಾ ಶಿಬಿರ ಕೋಲಾರದಲ್ಲಿ ಆಯೋಜನೆಗೊಂಡು ಯಶಸ್ವಿಯಾಯಿತು.

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಇಲ್ಲಿನ 'ಆದಿಮ ಸಾಂಸ್ಕೃತಿಕ ಕೇಂದ್ರ' ದಲ್ಲಿ ಅದರ ಸಂಯೋಗದೊಂದಿಗೆ ದಿ.೮–೨೨ ಜುಲೈ ೨೦೧೫ ರವರೆಗೆ ಅಂದರೆ, ಹದಿನೈದು ದಿನಗಳ ಕಾಲ ನಡೆಸಿತು. ಶಿಬಿರದ ನಿದೇರ್ಶಕರಾಗಿ ಚಾಮರಾಜನಗರದ ಆನಂದರಾಜ

ಕಲಾವಿದರೊಂದಿಗೆ ಕೆಲಸ ಮಾಡಿದರು. ಉಳಿದಂತೆ ಆರೋಗ್ಯಸ್ವಾಮಿ, ಸಿದ್ಧರಾಜು, ಕುಮಾರಿ ಸುಧಾ, ರಾಮನಾಯಕ್ ಎಸ್, ಉಲ್ಲಾಸ್, ಕುಮಾರಿ ಶ್ವೇತಾ ಎಚ್, ರೇವಣ್ಣ ಕೆಂಚಪ್ಪ ಗೋಳ್, ಜಿನೇಂದ್ರ ಎಂ. ಎಂ, ಕುಮಾರಿ ಸಂಗಮ್ಮ ದೊಡ್ಡಮನಿ, ಬಸವರಾಜ ಮೇತ್ರಿ ಮೊದಲಾದವರು ಮುಖ್ಯ ಶಿಲ್ಪಿಗಳಾಗಿದ್ದರು. ಇವರಿಗೆ ಹತ್ತು ಜನ ಸಹಾಯಕ ಶಿಲ್ಪಿಗಳೂ ಶಿಲ್ಪ ರಚನೆಗೆ ಕೈಗೂಡಿಸಿದ್ದರು.

ಆದಿಮ ಸಾಂಸ್ಕೃತಿಕ ಕೇಂದ್ರ, ಜಿಂಕೆ ರಾಮಯ್ಯ ಜಿವತಾಣ– ಶಿವಗಂಗೆ, ತೇರಹಳ್ಳಿ, ವಡೇರಹಳ್ಳಿ, ಅಂಚೆ, ಕೋಲಾರ ಈ ಸ್ಥಳದಲ್ಲಿ ವಿಶೇಷ ಘಟಕ ಗಿರಿಜನ ಉಪಯೋಜನೆ ಮತ್ತು ಸಾಮಾನ್ಯರ ವರ್ಗದ ಶಿಲ್ಪ ಶಿಬಿರ ಇದಾಗಿತ್ತು.

ಕೆಲವು ಉತ್ತಮ ನೆಲೆಯ ಶಿಲ್ಪಗಳು ಈ ಶಿಬಿರದಲ್ಲಿ ಮೂಡಿಬಂದಿರುವವು. ಕೆಲವರು ತೀರ ಕಿರಿಯರು, ಎಂದೂ ಶಿಲ್ಪವನ್ನು ಕೆತ್ತದೇ ಇರುವವರೂ ಇದ್ದುದರಿಂದ ಪೇಲವ ಎನಿಸುವ ಶಿಲ್ಪಗಳೂ ಇಲ್ಲಿ ರಚನೆಗೊಂಡಿವೆ. ಆದರೆ ಯುವ ಮತ್ತು ಉದಯೋನ್ಮುಖ ಶಿಲ್ಪಿಗಳಿಗೆ ಈ ಶಿಲ್ಪ ಶಿಬಿರ ಪ್ರೇರಣೆಯನ್ನಂತೂ ಒದಗಿಸಿತೆಂಬುದರಲ್ಲಿ ಎರಡು ಮಾತಿಲ್ಲ. ಆ ಭಾಗದ ಜನತೆಗೆ ಒಂದು ಹೊಸ ಅನುಭವ ನೀಡಿತು.

ದಾವಣಗೆರೆಯ ವಿಶ್ವವಿದ್ಯಾಲಯ ಲಲಿತಕಲಾ ಮಹಾವಿದ್ಯಾಲಯದ ಆವರಣದಲ್ಲಿ ಲಲಿತಕಲಾ ಮಹಾವಿದ್ಯಾಲಯದ ಸಹಯೋಗದೊಂದಿಗೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು 'ಸಿಮೆಂಟ್ ಶಿಲ್ಪಕಲಾ ಶಿಬಿರವನ್ನು ಆಯೋಜಿಸಿತ್ತು. ಮಹಾವಿದ್ಯಾಲಯದ ವಿಶಾಲವಾದ ಆವರಣದಲ್ಲಿ ಸಿಮೆಂಟ್ ಮಾಧ್ಯಮದಲ್ಲಿ ಅರಳಿದ ಸುಮಾರು ೨೦ಕ್ಕೂ ಮಿಕ್ಕಿ ಸಮಕಾಲೀನ ಶಿಲ್ಪಗಳು ಆವರಣಕ್ಕೆ ಶೋಭೆಯನ್ನು, ಅರ್ಥವ್ಯಾಪ್ತಿಯನ್ನು ತಂದುಕೊಟ್ಟಿವೆ. ದಿ– ೧೬ ರಿಂದ ೩೦ ಮಾರ್ಚ ೨೦೧೫ ರವರೆಗೆ ಅಂದರೆ ೧೫ ದಿನಗಳ ಕಾಲ ನಡೆದ ಈ ಶಿಬಿರದಲ್ಲಿ ಅರಳಿದ ಸಿಮೆಂಟ್ ಶಿಲ್ಪಗಳಲ್ಲಿ ಬಹುಪಾಲು ಸಮಕಾಲೀನ ಶೈಲಿಯಲ್ಲಿದ್ದು ಅತ್ಯಂತ ಪರಿಣಾಮಕಾರಿಯಾಗಿವೆ. ಶಿಬಿರದ ನಿರ್ದೇಶಕರಾಗಿ ಕೆಲಸಮಾಡಿದ ನಾರಾಯಣ ಸೂತ್ರದಾರ ರಚಿಸಿದ ನಿಸರ್ಗವನ್ನು ಪ್ರತಿನಿಧಿಸುವ ಶಿಲ್ಪತ್ಯಂತ ಸೊಗಸಾಗಿ ಮತ್ತು ಬೃಹತ್ತಾಗಿಯೇ ರಚನಗೊಂಡಿದೆ.

ಉಳಿದಂತೆ ಎಂ. ಆರ್. ಹರ್ಲಾಪುರ, ರಾಘವೇಂದ್ರ ಕೆ. ರಾಮು, ಹರೀಶಕುಮಾರ್ ಆರ್, ನಾಗರಾಜ, ಮಂಜುನಾಥ ಕುಪ್ಪೇಲೂರು, ಗೋಪಿನಾಥ ದೇವಾಡಿಗ, ಚಂದ್ರಶೇಖರ ಎಸ್, ಹರಿಪ್ರಸಾದ್, ಕೃಷ್ಣ ಚಿತ್ರಗಾರ, ಇಂದ್ರಕುಮಾರ್ ಹೆಚ್. ಕೆ, ಸೋಮಶೇಖರಯ್ಯ ಐ.ಡಿ, ಡಾ ರವೀಂದ್ರ ಕಮ್ಮಾರ್, ಕೆ.ಟಿ. ಶಿವಪ್ರಸಾದ್, ಉಮೇಶ ಕೆ, ನಾಗರಾಜ್ ಎಸ್, ಜಿ.ಬಿ. ಅನೀಲ್, ಜಿ. ಸುರೇಶ್, ಹೆಚ್. ಹೆಚ್. ಭರತ್ ರಾಜ್, ಚಂದ್ರಶೇಖರ್ ಮಾಯಾಚಾರ್, ಮೌನೇಶ, ಜೆ. ಸಿದ್ದಲಿಂಗಯ್ಯ, ದರ್ಶನಕುಮಾರ, ಎ. ಆರ್. ಮಂಜುನಾಥಾಚಾರ್, ಅಮೃತ ಸಿಂಗ್ ಮೊದಲಾದವರು ಮುಖ್ಯ ಶಿಲ್ಪಿಗಳಾಗಿ ತಮ್ಮ ಸೃಜನ ಶೀಲನುಭವ ಗ್ರಹಿಕೆಗಳನ್ನು ಸಮಕಾಲೀನ ಶೈಲಿಯಲ್ಲಿ ತಮ್ಮ ತಮ್ಮದೇ ಆದ ರೀತಿಯಲ್ಲಿ ಅಭಿವ್ಯಕ್ತಿಸಿದರು. ಈ ಇಪ್ಪತ್ತೈದು ಮುಖ್ಯ ಶಿಲ್ಪಿಗಳಿಗೆ ತಲಾ ಒಬ್ಬರಿಗೆ ಒಬ್ಬ ಸಹಾಯಕರಂತೆ ೨೫ ಜನ ಸಹಾಯಕ ಶಿಲ್ಪಿಗಳು ಕೆಲಸಮಾಡಿರುವವರು.

ನಾಲ್ಕಾರು ಶಿಲ್ಪಗಳಂತೂ ದೊಡ್ಡ ಅಳತೆಯಲ್ಲಿದ್ದು ಹೆಚ್ಚಾಗಿ ಸಮಕಾಲೀನ ಬದುಕಿನ ವಿವಿಧ ಆಯಾಮಗಳನ್ನು, ಆಗುಹೋಗುಗಳನ್ನು, ಬದಲಾವಣೆಯ ಪ್ರಭಾವಗಳನ್ನು ಕುರಿತು ಸ್ಪಂದಿಸಿ ಅಭಿವ್ಯಕ್ತಿಸಿದವುಗಳಾಗಿವೆ. ಸಿಮಂಟ್ ಶಿಲ್ಪ ರಚನೆಗೆ ಸರಳ ಮಾಧ್ಯಮವಾದರೂ ಶಿಲ್ಪಗಳಲ್ಲಿ ತಂದಿರುವ ಮೈವಳಿಕೆ, ಸೂಕ್ಷ್ಮತೆ, ನಾವಿನ್ಯತೆಗಳು ಕಲಾವಿದರ ಸೃಜನಶೀಲತೆಗೆ ಸಾಕ್ಷಿಯಾಗಿದೆ. ವಿಶಾಲವಾದ ಆ ಆವರಣಕ್ಕೆ ಈ ಎಲ್ಲ ಶಿಲ್ಪಗಳು ಕಳೆ ಕೊಟ್ಟಿವೆ ಎಂದರೆ ತಪ್ಪಲ್ಲ. ಇಂದ್ರಮ್ಮ ಎಚ್. ವಿ. ರಜಿಸ್ಟಾರ್ ಅವರೊಂದಿಗ ಸದಸ್ಯ ಸಂಚಾಲಕ ಕುಮಾರ್ ವೈ. ಸಾಕಷ್ಟು ಶ್ರಮವಹಿಸಿರುವವರೆಂಬುದು ಬೇರೆ ಹೇಳಬೇಕಿಲ್ಲ. ಇದೊಂದು ಸಾರ್ಥಕ ಶಿಲ್ಪಶಿಬಿರವೆಂದು ಹೇಳಬಹುದು.

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಹಾಗೂ ಎಸ್. ನಿಜಲಿಂಗಪ್ಪ ಮೆಮೊರಿಯಲ್ ಟ್ರಸ್ಟ ಚಿತ್ರದುರ್ಗ ಇವುಗಳ ಸಂಯುಕ್ತಾಶ್ರಯದಲ್ಲಿ “ಸಿಮಂಟ್ ಶಿಲ್ಪಕಲಾ ಶಿಬಿರ” ಜರುಗಿತು. ದಿ. ೨೯ ಡಿಸೆಂಬರ್ ೨೦೧೪ ರಿಂದ ೧೨ ಜನವರಿ ೨೦೧೫ರ ವರಗೆ ೧೪ ದಿನಗಳ ಕಾಲ ಜರುಗಿದ ಈ ಶಿಬಿರದಲ್ಲಿ ಸಾಂಪ್ರದಾಯಿಕ ನೈಜ ಹಾಗೂ ಸಮಕಾಲೀನ ಶೈಲಿಯ ಶಿಲ್ಪಗಳು ಅರಳಿದವು. ಟಿ. ಸೋಮೇಶ, ಟಿ. ಶಿವಶಂಕರ, ಮುರಳಿಧರಾಚಾರ್, ಚಂದ್ರಪ್ಪ ಕಮ್ಮಾರ್, ಬಿ. ಧನಂಜಯ, ಅಭಿಲಾಷ್, ನಾಗರಾಜ ಬಡಿಗೇರ, ರಮೇಶ ಕಾಂಬ್ಳೆ, ಶ್ರೀನಾಥ್ ಚಿತ್ರಗಾರ, ಮಧು ಪ್ರಕಾಶ್ ಗದಗ, ತುಕಾರಾಂ ವಿ. ಲೋಹಿತ್, ಶಿವರಾಜ್, ಬಿ.ಜಿ. ಓಂಕಾರಮೂರ್ತಿ, ಬಿ.ಸಿ. ಸುಕೇಶ್ ಮೊದಲಾದ ೧೫ ಜನರು ಮುಖ್ಯ ಶಿಲ್ಪಿಗಳಾಗಿ ಹಾಗೂ ಇವರಿಗೆ ಸಹಾಯಕ ಶಿಲ್ಪಿಗಳಾಗಿ ೧೫ ಜನರು ಭಾಗವಹಿಸಿ ಶಿಲ್ಪಗಳನ್ನು ರಚಿಸಿದರು. ಈ ಶಿಬಿರವು ಚಿತ್ರದುರ್ಗದ ಸೀಬಾರದ ಶ್ರೀ ಎಸ್. ನಿಜಲಿಂಗಪ್ಪ ಸ್ಮಾರಕ ಕೇಂದ್ರದಲ್ಲಿ ಆಯೋಜನೆಗೊಂಡಿದ್ದಿತು. ಈ ಶಿಬಿರದ ನಿರ್ದೇಶಕರಾಗಿ ಕಲಬುರಗಿಯ ಶ್ರೀ ರಾಜಕುಮಾರ ಎಲ್. ಯಳಸಂಗಿಕರ್ ಅವರು ಆಗಮಿಸಿ ಯುವ ಶಿಲ್ಪಿಗಳಿಗೆ ಮಾರ್ಗದರ್ಶನ ಮಾಡಿದರು. ಓಂ. ತೀರ್ಥಾಚಾರ್ಯರು ಸಂಚಾಲಕರಾಗಿದ್ದರು. ಈ ಶಿಬಿರದ ಶಿಲ್ಪಗಳು ಸ್ಥಳೀಯ ಜನರಿಂದ ಪ್ರಶಂಸೆಗೊಳಗಾದವು.

ಮೂಡಬಿದ್ರೆಯ ‘ಆಳ್ವಾಸ’ ಶಿಕ್ಷಣ ಪ್ರತಿಷ್ಠಾನದವರು ಪ್ರೌಢಶಾಲಾ ಆವರಣದಲ್ಲಿ ಏರ್ಪಡಿಸಿದ ‘ಆಳ್ವಾಸ್ ಶಿಲ್ಪಸಿರಿ– ೨೦೧೫’ ಗಮನಾರ್ಹ. ನವೆಂಬರ್ ೧೬ ರಿಂದ ೨೨.೨೦೧೫ ವರಗೆ ನಡೆದ ಈ ಶಿಬಿರದಲ್ಲಿ ರಾಜ್ಯದ ಬೇರೆ ಬೇರೆ ಭಾಗಗಳಿಂದ ಆಯ್ದ ಹನ್ನೊಂದು ಜನ ಶಿಲ್ಪಿಗಳು ಭಾಗವಹಿಸಿದ್ದರು. ಮೈಸೂರಿನ ಅಕ್ಷಯ ಕುಮಾರ, ಬಾಗಲಕೋಟೆಯ ಆನಂದ ಬೀಳಗಿ, ಬೆಂಗಳೂರಿನ ಅನಿಲ್, ಉಡುಪಿಯ ಚಂದ್ರಶೇಖರ್ ಹಾಗೂ ಗಣೇಶ್ ಉರಾಳ, ಹಾವೇರಿಯ ಮಂಜುನಾಥ ಕೆ, ದಾವಣಗೆರೆಯ ಪ್ರಮೋದ್‌ಕುಮಾರ್, ಕಲಬುರಗಿಯ ರಾಜಕುಮಾರ್, ಶಿವಮೊಗ್ಗೆಯ ಕೆ. ಶಂಕರ್, ದಾವಣಗೆರೆಯ ವೆಂಕಟೇಶ್, ಬೀದರ್‌ನ ಪ್ರಕಾಶ್ ಉಮರಾಣೆ ಭಾಗವಹಿಸಿದ್ದರು. ಇವರೆಲ್ಲ ತಮ್ಮದೇ ಆದ ಶೈಲಿಯಲ್ಲಿ ಮರ, ಗುಜರಿ ವಸ್ತು, ಶಿಲೆ ಮೊದಲಾದ ಮಾಧ್ಯಮಗಳನ್ನು ದುಡಿಸಿಕೊಂಡು ಅಭಿವ್ಯಕ್ತಿಸಿರುವರು.

ಆಳ್ವಾಸ್‌ನವರು ನಿರಂತರವಾಗಿ ಈ ರೀತಿಯ ಶಿಬಿರವನ್ನು ಕೆಲವು ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವರು. ಇದರಿಂದ ಸಮಕಾಲೀನ ಶಿಲ್ಪಕಲೆಗೆ ಕಲಾವಿದರಿಗೆ ಒಂದು ಪ್ರೇರಣೆಯಾಗಿದೆ ಎಂದು ಹೇಳಿದರೆ ತಪ್ಪಲ್ಲ. ಅಲ್ಲದೆ 'ಶಿಲ್ಪಸಿರಿ' ಎಂಬ ಪ್ರಶಸ್ತಿಯನ್ನು ಹಿರಿಯ ಶಿಲ್ಪ ಕಲಾವಿದರಿಗೆ ನೀಡುತ್ತ ಬಂದಿದ್ದಾರೆ.

ಟಿಪ್ಪಣಿಗಳು

೧. ಗುರುಲಿಂಗ ಚ. ಕುಂಬಾರ: ಕನ್ನಡ ವಿಶ್ವವಿದ್ಯಾಲಯದ ಆವರಣ ಶಿಲ್ಪಗಳು: ಶಿಲ್ಪಕಲಾ ಶಿಬಿರಗಳನ್ನು ಅನುಲಕ್ಷಿಸಿ ಅಪ್ರಕಟಿತ ಕಿರು ಪ್ರಬಂದ ಪುಟ ೪೬

೨. ಕೆ.ವಿ. ಸು. : ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ, ಪುಟ ೧೪೧

೩. ಸಂಯುಕ್ತ ಕರ್ನಾಟಕ : ಕ.ವಿ.ಸು.; ೨೦೧೦

೪. ಡಾ. ಎ. ಮುರಿಗೆಪ್ಪ ಕುಲಪತಿಗಳುಕನ್ನಡ ವಿವವಿದ್ಯಾಲಯ ಹಂಪಿ: ಸಮಾರೋಪ ಭಾಷಣದಲ್ಲಿ

೫. ಸದರಿ ಸಂಸ್ಥೆಯು ಪ್ರಸಿದ್ಧ ರಾಜಕಾರಣಿ ಎಚ್. ಕೆ. ಪಾಟೀಲರದ್ದಾಗಿದೆ.

೬. ಗೌರವ ಪುರಸ್ಕೃತರು, ವಾರ್ಷಿಕ ಶಿಲ್ಪಕಲಾ ಪ್ರದರ್ಶನ ೨೦೧೨, ಪುಸ್ತಕ: ಬ್ರಹ್ಮಣೀಪುರ ಹರೀಶ್ (ಸಂ): ೨೦೧೩ ಪುಟ ೪೬–೪೭.

೭. ಪ್ರಜಾವಾಣಿ : ಕನ್ನಡ ವಿ.ವಿ.ಯಲ್ಲಿ ಕಿನ್ನಾಳ ಕಲೆ ಅನಾವರಣ, ದಿ: ೨೬.೧೧.೨೦೧೪. ಪುಟ ೩

೮. ಕೆ.ವಿ.ಸು: ಕನ್ನಡ ಪ್ರಭ, ಜುಲೈ ೨೦೦೮

ಅಧ್ಯಾಯ: ಎಂಟು

ಸಮಕಾಲೀನ ಶಿಲ್ಪಕಲಾ ಪ್ರದರ್ಶನಗಳು

ಕಲಾವಿದರು ಕಲಾ ಪ್ರದರ್ಶನವನ್ನು ಏರ್ಪಡಿಸುವುದೆಂದರೆ, ಕಲೆಯ ಘನತೆ ಅಥವಾ ಪಾವಿತ್ರ್ಯತೆಯನ್ನು ಕಡಿಮೆ ಮಾಡಿದಂತೆ ಎಂಬ ನಂಬಿಕೆ ಕೆಲವು ದಶಕಗಳ ಹಿಂದೆ ಮಾಜದಲ್ಲಿ ಮತ್ತು ಕಲಾವಲಯದಲ್ಲಿ ಪ್ರಚಲಿತದಲ್ಲಿದ್ದಿತು. ಆದರೆ ಇದೀಗ ಅಂದರೆ ಆಧುನಿಕ–ಸಮಕಾಲೀನ ಸಂದರ್ಭದಲ್ಲಿ ಪರಿಸ್ಥಿತಿ ಸಾಕಷ್ಟು ಬದಲಾಗಿದೆ. ಪ್ರಸಿದ್ಧ ಕಲಾವಿದರ ಕಲಾಕೃತಿಗಳನ್ನು ಅವರ ಕಲಾಭಿಮಾನಿಗಳು ಇಲ್ಲವೆ ಸಂಘ ಸಂಸ್ಥಗಳವರು ಕಲಾವಿದರು ಜೀವಿಸಿದ್ದಾಗ ಅಥವಾ ಸತ್ತ ಬಳಿಕವೂ ಪ್ರದರ್ಶನ ಮಾಡುತ್ತಿದ್ದರು, ಮತ್ತು ಗ್ಯಾಲರಿಗಳನ್ನು ನಿರ್ಮಿಸಿ ಶಾಶ್ವತವಾಗಿ ಆಯಾ ಕಲಾವಿದರ ಕೃತಿಗಳನ್ನು ಪ್ರದರ್ಶನಕ್ಕಿಟ್ಟಿರುವ ಉದಾಹರಣೆಗಳಿವೆ.[1] ವೆಂಕಟಪ್ಪನವರ ಕಲಾಕೃತಿಗಳಿರುವ ಬೆಂಗಳೂರಿನ 'ಕೆ. ವಂಕಟಪ್ಪ ಕಲಾ ಗ್ಯಾಲರಿ, ಹುಬ್ಬಳ್ಳಿಯ ಮಿಣಜಗಿಯವರ ಕಲಾಕೃತಿಗಳಿರುವ ಎಂ.ವಿ. ಮಿಣಜಗಿ ಆರ್ಟ್ ಗ್ಯಾಲರಿ, ಕಲಬುರ್ಗಿಯಲ್ಲಿ ಪಂಡಿತರ ಕಲಾಕೃತಿಗಳಿರುವ ಎಸ್.ಎಂ. ಪಂಡಿತ್ ಆರ್ಟ್ ಗ್ಯಾಲರಿ ಇಂತಹ ಅನೇಕ ಕಲಾಗ್ಯಾಲರಿಗಳನ್ನು ಕಾಣಬಹುದು.

ಪ್ರಾಯಶಃ ಈ ಗ್ಯಾಲರಿಗಳು ಕಲಾವಿದರು ಕಾಲವಾದ ಬಳಿಕ ಅವರ ವಶಂಸ್ಥರು ಇಲ್ಲವೆ ಅಭಿಮಾನಿಗಳು ಅಥವಾ ಜನ ಪ್ರತಿನಿಧಿಗಳು ಸ್ಥಾಪಿಸುತ್ತಾರೆ. ಇಂಥವರಲ್ಲಿ ಕಲಾವಿದರ ಕಲಾಕೃತಿಗಳನ್ನು ಶಾಶ್ವತ ಪ್ರದರ್ಶನಕ್ಕೆ ವ್ಯವಸ್ಥೆ ಗೊಳಿಸಲಾಗಿರುತ್ತದೆ. ಆದರೆ ಈ ರೀತಿಯ ಪ್ರದರ್ಶನಗಳಿಗಿಂತಲೂ ಭಿನ್ನವಾಗಿ ಹಲವು ಭಿನ್ನ ಆಯಾಮಗಳನ್ನು ಮೈಗೂಡಿಸಿಕೊಂಡು 'ಕಲಾಪ್ರದರ್ಶನ ಸಂಸ್ಕೃತಿ' ಜಗತ್ತಿನಲ್ಲಿ ಬೆಳೆದಿದೆ. ಮುಖ್ಯವಾಗಿ ಕಲಾವಿದರು ಏಕವ್ಯಕ್ತಿ/ ಸಮೂಹ ಕಲಾಪ್ರದರ್ಶನಗಳನ್ನು ಒಂದು ಗೊತ್ತಿದ್ದ ನಿರ್ದಿಷ್ಟ ಸ್ಥಳ

ಅಥವಾ ಗ್ಯಾಲರಿಗಳಲ್ಲಿ ಕೆಲವು ದಿನಗಳ ಕಾಲ ಪ್ರದರ್ಶನ ಏರ್ಪಡಿಸುವುದು. ತನ್ಮೂಲಕ ತಾವು ಯುವ ಬಗೆಯ ಕಲಾವಿದರು, ತಮ್ಮ ದೃಷ್ಟಿ ಧೋರಣೆಗಳೇನು? ಆಯಾ, ಕಲಾವಿದರ ಅಭಿವ್ಯಕ್ತಿ, ಮಾಧ್ಯಮ ತತ್ವ ಸಿದ್ಧಾಂತಗಳಲ್ಲದೆ ಪ್ರಚಾರ, ಮಾರಾಟ ಪ್ರಾಯೋಜಿತದ ಹಿಂದಿನ ಹಣ– ರಾಜಕಾರಣ ಎಲ್ಲವುಗಳ ಹಿನ್ನೆಲೆಯಲ್ಲಿ ಇಂದು ಕಲಾಪ್ರದರ್ಶನಗಳು ಜರುಗುತ್ತಲಿವೆ. ಕಲಾಪ್ರದರ್ಶನಗಳನ್ನು ಮಾಡುವ ಉದ್ದೇಶ ಮತ್ತು ಅವುಗಳಿಂದಾಗುವ ಪ್ರಯೋಜನಗಳು– ಆಂತರಂಗಿಕವಾಗಿ ಮತ್ತು ಬಾಹ್ಯವಾಗಿ ಉತ್ತಮವೇ ಆದರೂ ತೀರ ಇತ್ತೀಚಿನ ಕಲಾ ಪ್ರದರ್ಶನಗಳೆಲ್ಲವೂ ಸಾಂಸ್ಕೃತಿಕ ಉದ್ದೇಶವನ್ನೇ ಸಾಧಿಸುತ್ತವೆ ಎಂದು ಹೇಳಲಾಗದು. ಆದರೆ ಕೆಲವು ಪ್ರಮುಖ ಪ್ರದರ್ಶನಗಳು ಮುಖ್ಯ ಕಾರ್ಯಾಗಾರಗಳು ಅಭೂತಪೂರ್ವವಾದ ಅನುಭವವನ್ನು ನೀಡಿರುವುದಂತೂ ದೃಶ್ಯ ಸತ್ಯ. ಅಂತಹ ಕೆಲವು ಕಲಾಪ್ರದರ್ಶನ ಅದರಲ್ಲೂ ಮುಖ್ಯವಾಗಿ ಶಿಲ್ಪಕಲಾ ಪ್ರದರ್ಶನಗಳನ್ನು ಕೇಂದ್ರೀಕರಿಸಿ ಇಲ್ಲಿ ಅಧ್ಯಯನ ಮಾಡಲಾಗಿದೆ.

ಕಲಾವಿದರ ಕಲಾಕೃತಿಗಳ ಪ್ರದರ್ಶನಕ್ಕಾಗಿ ಕರ್ನಾಟಕದಲ್ಲಿ ಹಲವು ಗ್ಯಾಲರಿಗಳು ಆರಂಭಗೊಂಡಿವೆ. ಆರಂಭಗೊಂಡ ಅನೇಕ ಕಲಾಗ್ಯಾಲರಿಗಳು ಬೇರೆ ಬೇರೆ ಕಾರಣಗಳಿಗಾಗಿ ಮುಚ್ಚಿಕೊಂಡಿವೆ.

ಬೆಂಗಳೂರಿನಲ್ಲಿ ಕಲಾವಿದರಿಗೆ ಕಲಾಪ್ರದರ್ಶನಕ್ಕಾಗಿ ಇದ್ದುದು ಸರಕಾರದ ಗ್ಯಾಲರಿಯೆಂದರೆ ವೆಂಕಟಪ್ಪ ಗ್ಯಾಲರಿಯೊಂದೇ. ಬಳಿಕ ಕನ್ನಡ ಭವನದಲ್ಲಿ ಆ ಬಳಿಕ 'ರಾಷ್ಟ್ರೀಯ ಆಧುನಿಕ ಕಲಾಗ್ಯಾಲರಿ' (NGM) ಆರಂಭಗೊಂಡಿತು.

ಖೋಜ್–೨೦೦೩

ಬೆಂಗಳೂರಿನ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ನಡೆದ 'ಖೋಜ್ ೨೦೦೩' ಅಂತರಾಷ್ಟ್ರೀಯ ಕಲಾಪ್ರದರ್ಶನ– ಅತ್ಯಂತ ಗಣನೀಯವಾದುದು. ಯಾರ ಪ್ರಭಾವ ಯಾರ ಮೇಲೆ? ಪ್ರಭಾವಗಳನ್ನು ಮೀರಿದ ಕಾಲವಿದು ಹೀಗಾಗಿ ಸಮಕಾಲೀನ ಕಲಾಸೃಷ್ಟಿ ಜಾಗತೀಕ ಸಂವೇದನಾತ್ಮಕ ನೆಲಯಲ್ಲಿಯೂ ಆಯಾ ಸ್ಥಳೀಯ ಅನುಭವ– ಗ್ರಹಿಕೆಗಳ ಸೊಗಡನ್ನು ಅರಗಿಸಿಕೊಂಡಿರುವುದರ ಅನಿವಾರ್ಯತೆ ಸಹಜವಾಗಿಯೆ ಇದೆ.

ಖೋಜ್– ೨೦೦೩ ನ ಯೋಜನೆಯು ಮುಂದಿನ ಹಲವು ಕಾರ್ಯಾಗಾರಗಳಿಗೂ ಕಾರಣವಾಗುವಂತಹ ಸಂದರ್ಭವನ್ನು ಹುಟ್ಟುಹಾಕಿತು. ಲಿಂಗ ಸಮಾನತೆಯನ್ನು ಸಾಧಿಸುವ ಸಮ ಸಂಖ್ಯೆಯ ಕಲಾವಿದ/ದೆಯರನ್ನು ಇದು ಹೊಂದಿರುವುದು ಅಲ್ಲದೆ ವಿಡಿಯೋ ಡಿಜಿಟಲ್ ಮತ್ತು ಮಿಶ್ರ ಮಾಧ್ಯಮದ ಕಲಾವಿದರನ್ನು ಒಳಗೊಂಡಿರುವುದು ವೆಂಕಟಪ್ಪ ಆರ್ಟ್ ಗ್ಯಾಲರಿಯ ಕಾರ್ಯಾಗಾರ ಹಾಗೂ ಡಿಸೆಂಬರ್ ೨೦,೨೧ ರಲ್ಲಿ ಸಾರ್ವಜನಿಕವಾಗಿ ತೆರೆದಿಡಲ್ಪಟ್ಟ ಕಲಾ ಪ್ರದರ್ಶನ ಅಭಿಮಾನಿಗಳನ್ನು ದೊಡ್ಡ ರೀತಿಯಲ್ಲಿ ತನ್ನತ್ತ ಸೆಳೆದುಕೊಂಡಿತು.

ಈ ಕಾರ್ಯಾಗಾರದಲ್ಲಿ ನಮ್ಮ ಪ್ರಸಿದ್ಧ ಕಲಾವಿದ/ ಕಲಾವಿದೆಯರು ಇದ್ದರು. ಉತ್ತರ ಭಾರತದಲ್ಲಿ ಸಂಚಲನ ಉಂಟುಮಾಡಿದ ಖೋಜ್‌ನ ಕಾರ್ಯಾಗಾರ/

ಪ್ರದರ್ಶನಗಳು ಹಿಂದಿನ ವರ್ಷ ಮೈಸೂರಲ್ಲೂ ಯಶಸ್ವಿಯಾದ ಕಾರಣ ಈಗ ಬೆಂಗಳೂರಲ್ಲಿ ನಮ್ಮ ಯುವ ಕಲಾವಿದ/ ಕಲಾವಿದೆಯರ ಅಭಿವ್ಯಕ್ತಿಯ ಅನನ್ಯತೆ, ಖ್ಯಾತಿಗೆ ಇಂಬುಗೊಟ್ಟಿದೆ.

ಖೋಜ್‌ನಲ್ಲಿ ನಮ್ಮವರಾದ ಕೆ.ಟಿ. ಶಿವಪ್ರಸಾದ, ಶೀಲಾಗೌಡ, ರಂಜನಿ ಸೆಟ್ಟರ್, ರಾಘವೇಂದ್ರರಾವ್, ಪ್ರಭಾವತಿ ಮೊದಲಾದವರಲ್ಲದೆ ೮-೧೦ ಜನ ವಿವಿಧ ದೇಶಗಳಿಂದ ಆಗಮಿಸಿದ ಕಲಾವಿದ/ ಕಲಾವಿದೆಯರಿದ್ದರು. ಖೋಜು ಪ್ರದರ್ಶನದಲ್ಲಿ- ವೆಂಕಟಪ್ಪ ಆರ್ಟ್ ಗ್ಯಾಲರಿಯ ಪರಿಸರವೇ ಅಲ್ಲದೆ ಬೆಂಗಳೂರು ನಗರ ಸಂಸ್ಕೃತಿ ಪ್ರೇರಿತ ಅಭಿವ್ಯಕ್ತಿಗಳು ಮೂಡಿಬಂದವು, ಇನ್ಸಸ್ಟಾಲೇಷನ್ ಅಭಿವ್ಯಕ್ತಿಯೊಂದರಲ್ಲಿ ಮತೀಯ ಸಂಬಂಧೀ ಹಿಂಸೆ-ಕರಾಳತೆಯ ರಾಜಕಾರಣವಿದೆ. ಬಹುಪಾಲು ಕಲಾವಿದರು ವಿಡಿಯೋ ಹಾಗೂ ಡಿಜಿಟಲ್ ಗಳನ್ನು ಗಣನೀಯ ರೀತಿಯಲ್ಲಿ ಬಳಸಿಕೊಂಡಿದ್ದರು. ಇಲ್ಲೆಲ್ಲ ಸಮಕಾಲೀನ ಬುದ್ಧಿವಂತಿಕೆಯ ತಾಂತ್ರಿಕ ಹೆಚ್ಚುಗಾರಿಕೆ ಇದ್ದಿತು. 'ವರ್ಯ' ನ ವೈಭವವೀಕರಣ, ವರದಕ್ಷಿಣೆ ನಿಷೇದ, ಮದುವೆ ಬೇಕು ಇಂತಹ ಚಿಂತನೆಗಳ ಅಭಿವ್ಯಕ್ತಿಗಳೂ ಇವೆ. 'ಪ್ರಕೃತಿ' 'ಪ್ರೇಮವೂ ಇತ್ತು, ನಮ್ಮನ್ನು ನಾವ ಕಂಡುಕೊಳ್ಳುವುದು ಇತ್ಯಾದಿ ಗ್ರಹಿಕೆಗಳಲ್ಲಿ ಕ್ಯಾಲೆಂಡರ್ ಕಲೆ, ಬ್ಯಾನರ್ ಕಲೆಗಳನ್ನು ಬಳಸಿಕೊಳ್ಳಲಾಗಿತ್ತು. ಕಣ್ಣು, ಮನಸ್ಸುಗಳು ಮುಖ್ಯ ಅಂಶಗಳಾಗಿ ಇಲ್ಲಿ ಪಾಲ್ಗೊಳ್ಳಬೇಕಿತ್ತು 'ವಿ ಆರ್ ಆಲ್ ವ್ಯುಮನ್ಸ್ ಇನ್ಸ್ಟಾಲೇಷನ್, ಕಹಿ, ಕಾಡುವ ನೆನಪೊಂದನ್ನು ಬೀಗ ಹಾಕಿ, ಕೈದೂರ ಬಿಸುಟು ನೆಮ್ಮದಿ ಕಾಣುವ ಯತ್ನದಂತಹ ಅಭಿವ್ಯಕ್ತಿ ಇತ್ಯಾದಿಗಳಿದ್ದವು. ಇಲ್ಲೆಲ್ಲ ಕಲಾವಿದರು, ಕಲಾವಿದೆಯರ ಜೊತೆ ಅಲ್ಲಿನ ಪರಿಸರವೇ ಅಲ್ಲದೆ ವೀಕ್ಷಕರೂ ಪಾಲ್ಗೋಳ್ಳುವಂತಹ ಸಂದರ್ಭವನ್ನು ಬಹುಪಾಲು ಕಲಾವಿದರು ಸೃಷ್ಟಿ ಮಾಡಿದ್ದರು.

ವಾಸ್ತುಶಿಲ್ಪ ಸೌಂದರ್ಯ ಮೂಲದ ದೃಶ್ಯಲೋಕ

ನಗರಗಳ ಭೂ ದೃಶ್ಯಗಳು ಬದಲಾಗಿವೆ. ಆಗುತ್ತಲೇ ಇರುತ್ತವೆ. ವಾಸ್ತು ಶಿಲ್ಪಕಲೆ ನಮ್ಮ ರಾಜ್ಯದ ನಗರಗಳಲ್ಲೂ ಉತ್ತುಂಗವನ್ನು ಮುಟ್ಟಿವೆ. ನಮ್ಮ ಸಮಕಾಲೀನ ವಾಸ್ತು ಶಿಲ್ಪಕಲೆ ದೃಶ್ಯ ಸಂಸ್ಕೃತಿಯನ್ನು ಪರೋಕ್ಷವಾಗಿ ಬದಲಿಸಿಬಿಟ್ಟಿದೆ. ಎಲ್ಲರಲ್ಲೂ ದೃಶ್ಯ ಪ್ರಜ್ಞೆಯನ್ನು ಸಹಜವಾಗಿ ಉಂಟಾಗಿದೆ. ಕಲಾವಿಮರ್ಶಕಿ ಮಾರ್ತಾ ಜಾಕಿಮೊವಿ ಸಮಕಾಲೀನ ವಾಸ್ತು ಸಂಸ್ಕೃತಿ ಹಾಗೂ ಅದು ನಮ್ಮ ದೃಶ್ಯಕಲೆಯನ್ನು ಪ್ರಭಾವಿಸಿರುವ ರೀತಿಯೆಡೆಗೆ ಬೀರಿದ ಒಂದು ವಿಶಿಷ್ಟ ನೋಟದ ಫಲವಾಗಿ 'Around architecture' ದೃಶ್ಯಕಲಾ ಪ್ರದರ್ಶನ ಮೂಡಿಬಂದಿತು. ಅದು ಬೆಂಗಳೂರಿನ 'ಕೊಲಾಜ್ ಆರ್ಟ ಪ್ರದರ್ಶನ ಆರ್ಕಿಟೆಕ್ಚರ್' ಹಾಗೂ 'ಬೋಧನಾ' ಗಳ ಆಶ್ರಯದಲ್ಲಿ ಕಟ್ಟಡದಲ್ಲಿ ೨೦೦೬ ರಲ್ಲಿ ನಡೆಯಿತು.

ಆಯೇಶಾ ಅಬ್ರಹಾಂ, ಎ. ಬಾಲಸುಬ್ರಮಣಿಯಮ್, ಗೌತಮ ಬಾಟಿಯಾ, ಅನಿತಾ ದುಬೆ, ಪೂಜಾ ಈರಣ್ಣ, ಜಿ. ಸುರೇಶ ಕುಮಾರ್, ಎಲ್. ಎನ್. ತಳ್ಳೂರ್, ನಸರೀನ್ ಮಹಮದಿ, ಅಶೋಕ್ ಸುಕುಮಾರನ್ ಹಾಗೂ ಅವಿನಾಶ್ ವೀರರಾಘವನ್ ಅವರು ಮಾರ್ಥಾರವರು ಕ್ಯೂರೇಟ್ ಮಾಡಿದ್ದ ಈ ಪ್ರದರ್ಶನದಲ್ಲಿ ಭಾಗಿಯಾಗಿದ್ದರು. ಪ್ರದರ್ಶನದಲ್ಲಿ ಮರ ಮಾಧ್ಯಮದ ಚಿತ್ರ ರೇಖಾ ಚಿತ್ರ, ಡಿಜಿಟಲ್ ತಂತ್ರಜ್ಞಾನವನ್ನು ಬಳಿಕೊಂಡ ಇನ್ಸ್ಟಾಲೇಷನ್, ಛಾಯಾ ಚಿತ್ರ, ಫೈಬರ್ ಗಾಜು, ಓಣಮರ ಕಬ್ಬಿಣ, ಆಕ್ರಲಿಕ್

ಬಣ್ಣ, ಗೋಡೆ, ಡಿವಿಡಿ ಹೀಗೆ ಹಲವು ಮಾಧ್ಯಮಗಳ ವಿಶಿಷ್ಟ ದೃಷ್ಟಿಯ ಸೃಷ್ಟಿಗಳಿದ್ದ ಪ್ರದರ್ಶನವಿದು.

ಐತಿಹಾಸಿಕ ವಾಸ್ತು ಶಿಲ್ಪ, ಸ್ಮಾರಕಗಳೋ ಕಾಡುವಿಕೆಯ ಜತೆಗೆ ಸಮಕಾಲೀನ ಸೌಂದರ್ಯ ಪ್ರಜ್ಞೆಯೂ ಈ ಎಲ್ಲ ಕಲಾವಿದ/ ಕಲಾವಿದೆಯರನ್ನು ಸ್ಪರ್ಶಿಸಿದೆ. ಕರಾಚಿಯಲ್ಲಿ ಜನಿಸಿದ ದಿ/ ನಸರೀನ್ ಮಹಮದಿಯರವರ ದೃಶ್ಯಾತ್ಮಕ ಛಾಯಾಚಿತ್ರಗಳು ಅವರ ಸ್ವಂತ ಸಂಗ್ರಹದಿಂದ ಆಯ್ಕೆ ಮಾಡಿ ಪ್ರದರ್ಶಿಸಲ್ಪಟ್ಟಿದ್ದವು.

ದೃಶ್ಯಕಲೆಯ ಅಧ್ಯಯನದ ಜೊತೆಗೆ ವಾಸ್ತು ಶಿಲ್ಪ ಶಾಸ್ತ್ರದ ಅಧ್ಯಯನ ಮಾಡಿರುವ ಗೌತಮ ಭಾಟಿಯಾ ಮಿಶ್ರ ಮಾಧ್ಯಮದ ಕಾಗದದ ಅವಕಾಶದಲ್ಲಿ ಗ್ರಹಿಸಲ್ಪಟ್ಟಿರುವ ಅಭಿವ್ಯಕ್ತಿಗಳಲ್ಲಿ ಪ್ರದರ್ಶನದ ಉದ್ದೇಶಕ್ಕೆ ಪೂರಕವಾಗಿವೆ. ಇಲ್ಲಿ ವಾಸ್ತು ಶಿಲ್ಪಿ ದೃಶ್ಯಕಲೆಯ ಹಾದಿಯಲ್ಲಿ ವಿಶಿಷ್ಟವಾಗಿ ನಡೆದಿದ್ದಾರೆ. ಸುರೇಶ್‌ರ ಮಿಶ್ರಮಾಧ್ಯಮದ ಇನ್ಸಸ್ಟಾಲೇಷನ್ ಅಪೂರ್ವವೇ ಅಂದರೆ ಒಳಾಲಂಕರಣಗೊಳ್ಳದ ಕಟ್ಟಡದ ವಾಸ್ತು ಶಿಲ್ಪಿಯ ಸೌಂದರ್ಯದೊಂದಿಗೆ ಹೊಂದಿಕೊಂಡಿತ್ತು. ಮೂರ್ತ ಆ ಕಟ್ಟಡದ ಮೂರನಾಲ್ಕು ಅಂತಸ್ತುಗಳುನ್ನೂ ದುಡಿಸಿಕೊಂಡಿದ್ದರು. ನಾಗರಗಳನ್ನು ಬಹುರಾಷ್ಟ್ರೀಯ ಕಂಪನಿಗಳು ಆಕ್ರಮಿಸಿಕೊಳ್ಳುತ್ತ ಉಂಟು ಮಾಡಿರುವ ಸಾಂಸ್ಕೃತಿಕ ತಲ್ಲಣ ಅವರ ಅಭಿವ್ಯಕ್ತಿಯಲ್ಲಿ ಗ್ರಹಿಸಲ್ಪಟ್ಟ ರೀತಿ ಬಹುಕಾಲ ಕಾಡುವಂತಿದ್ದಿತು.

ಉಳಿದಂತೆ ಯುದ್ಧ ಸಂಸ್ಕೃತಿಯನ್ನು ವಿಡಂಬಿಸುವ ಪ್ರಶ್ನಿಸುವ ಇನ್ನೋರ್ವ ಕಲಾವಿದೆ ಇನ್‌ಸ್ಟಾಲೇಷನ್, ವಿಶಿಷ್ಟ ನಗರಗಳ ಬದಲಾಗುತ್ತಿರುವ ಭೂ ದೃಶ್ಯ ಅಭಿವ್ಯಕ್ತಿಸಿದ್ದ ಅವಿನಾಶ್ ವೀರ ರಾಘವನ್, ವಿಶಿಷ್ಟ ಅಭಿವ್ಯಕ್ತಿ ಪೂಜಾ, ಈರಣ್ಣರ 'From secular to sacred'ಆಕ್ರಲಿಕ್, ಬಣ್ಣ ಹಾಗೂ ಡಿಜಿಟಲ್ ತಂತ್ರಜ್ಞಾನದ ನೆರವು ಪಡೆದ ಅಭಿವ್ಯಕ್ತಿಗಳು, ಆಯೇಶಾ ಅಬ್ರಹಾಂರ ಛಾಯಾ ಚಿತ್ರ ಸರಣಿ, ಅಶೋಕ್‌ರ 'ವಿಡಿಯೊ'ಗಳೂ ಸಹ ಪ್ರದರ್ಶನದಲ್ಲಿದ್ದವು. ಎಲ್.ಎನ್. ತಲ್ಲೂರ್ ನಗರೀಕರಣ– ಜಾಗತೀಕರಣಗಳ ನುಡುವೆ ನಲುಗುತ್ತಿರುವ ಬದುಕಿನ ವಿಡಂಬನೆಯನ್ನು ಹಲವು ಸಂಕೀರ್ಣ ಮುಖಗಳೊಂದಿಗೆ ಇನ್ಸ್ಟಾಲೇಷನ್‌ನಲ್ಲಿ ಬಿಂಬಿಸಿದ್ದರು.[9] ಈ ಪ್ರದರ್ಶನ ಹಲವರಿಗೆ ಖುಷಿ ನೀಡಿತು.

ತಾಜ್ಯ ವಸ್ತುಗಳಲ್ಲಿ ನಗರಗಳ ನೋಟ

ತೀವ್ರತೆ ಇಂದಿನ ಕಲಾವಿದರ ಅಭಿವ್ಯಕ್ತಿಯಲ್ಲಿ ಸಾಕಷ್ಟು ಪ್ರಭಾವ ಬೀರುತ್ತಿದೆ. ಏನೆಲ್ಲ ವಸ್ತುಗಳು ಅವರ ಅಭಿವ್ಯಕ್ತಿಗಳಲ್ಲಿ ದುಡಿಸಿಕೊಳಲ್ಪಟ್ಟಿವೆ. ಶೀಲಾಗೌಡ, ಸುರೇಖಾ, ರವಿ ಕಾಶಿಯಂತಹವರು ತಮ್ಮ ಕೃತಿಗಳಲ್ಲಿ ಸುತ್ತ ಕಾಣುವ ಏನೆಲ್ಲಾ ವಸ್ತುಗಳನ್ನು ಕೃತಿಗಳಲ್ಲಿ ತಂದುಕೊಂಡಿದ್ದಾರೆ. ನಗರಗಳ ಅನುಭವಗಳ ಕೃತಿಗಳ ಮೆಲ್ನೋಟಕ್ಕೆ ನೋಡುಗರ ಕಂಗಳನ್ನು ಸೆಳೆಯುವಂತೆ ತಾಜ್ಯ ವಸ್ತುಗಳನ್ನು ಸಂಯೋಜಿಸಿರುವ ರೀತಿಯಿಂದಾಗಿ ಯಶಸ್ವಿಯಾಗುತ್ತವೆ.

ಸಾರ್ವಜನಿಕ ಕಲೆಯ ವಾಸ್ತವಿಕತೆ ಮತ್ತು ನಾವೀನ್ಯತೆ

ಸಾರ್ವಜನಿಕ ಕಲೆಗೆ ನಮ್ಮಲ್ಲಿ ಸಾವಿರಾರು ವರ್ಷಗಳ ಇತಿಹಾಸವಿದೆ. ಮೂಲತಃ ವಾಸ್ತು ಶಿಲ್ಪದೊಂದಿಗೆ ಹೊಂದಿಕೊಂಡ, ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಷ್ಠಾಪಿಸುವ ಶಿಲ್ಪ ಇತ್ಯಾದಿಗಳ ಪರಂಪರೆ ಇಂದಿಗೂ ಮುಂದುವರೆದಿದೆ. ಎಸ್.ಜಿ. ವಾಸುದೇವ್, ನಂಬಿಯಾರ್, ಶೆಣೈ, ಯುಸೂಫ್, ಗುರುದಾಸ್ ಶೆಣೈ ಅವರೆಲ್ಲ ಸಂದರ್ಭವನ್ನು ಅವರದೇ ರೀತಿಯಲ್ಲಿ ದುಡಿಸಿಕೊಂಡವರು. ಈಚೆಗೆ ಎಲೆಕ್ಟ್ರಾನಿಕ್ಸ್ ನಗರದ ಬಳಿಯ ಬಯೋಕಾನ್ ಇಂಡಿಯಾ ಗುಂಪಿವರು ಅರಕ್ಕಲ್‌ರ 'ಅಪ್ಲೈಡ್ ಡಿ. ಎನ್.ಎ, ಶಿಲ್ಪ ಸಿನ್ಜೀನ

ಇಂಟರ್‌ನ್ಯಾಷನಲ್ ಕಟ್ಟಡದ ಒಳಾವರಣದಲ್ಲಿ ಪ್ರತಿಷ್ಠಾಪಿಲ್ಪಟ್ಟಿತು. ಜೀವ ವಿಜ್ಞಾನ– ತಾಂತ್ರಿಕ ಸಾಧನೆಗಳ ಪ್ರತಿಫಲನದಂಥ ಈ ಶಿಲ್ಪ ಕೌತುಕವನ್ನು ಹುಟ್ಟಿಸಿತು. ಟೌನ್‌ಹಾಲ್ ಬದಿಯ ಕಿತ್ತೂರು ಚೆನ್ನಮ್ಮ ಅದರ ಬದಿಯ ಸಮಕಾಲೀನ ಸಮೂಹ ಶಿಲ್ಪ, ಹಾಗೆಯೇ ಬೆಂಗಳೂರಿನ ಹಲವು ಸಾರ್ವಜನಿಕ ಸ್ಥಳಗಳಲ್ಲಿರುವ ನಾಡು –ನುಡಿಗೆ ದುಡಿದವರ ಭಾವಶಿಲ್ಪಗಳು ವಿಧಾನಸೌಧದಂತಹ ಕಟ್ಟಡಗಳ ಸುತ್ತಲಿನ ಪೂರ್ಣ ಪ್ರಮಾಣದ ಶಿಲ್ಪಗಳು ಸಾರ್ವಜನಿಕರ ಗಮನ ಸೆಳದಿದೆ.

ಆದರೆ ಪ್ರಜಾಪ್ರಭುತ್ವದ ಹೆಸರಿನಲ್ಲಿ ಎಷ್ಟೋ ಸಾರ್ವಜನಿಕ ಸ್ಥಳಗಳು ಖಾಸಗೀ ಉಪಯೋಗಕ್ಕೆ ಬಳಕೆಯಾಗಿ 'ಸಾರ್ವಜನಿಕ ಸ್ಥಳಗಳ ಇಲ್ಲವಾಗುವ ರಾಜಕಾರಣದ' ನಡುವೆ ನಾವಿದ್ದೇವೆ. ಇನ್ನೂ 'ಹೊಸ ಸಾರ್ವಜನಿಕ ಕಲೆ' ಬಳಸಲು ನಮ್ಮ ಕಲಾವಿದರು ತಮಗಿಂತ ಬೇರೆಯದ ದೃಷ್ಟಿಯ ಗುಂಪಿನ ಜನರೊಂದಿಗೆ ಸೇರಿ ಮಾಡಬೇಕಾಗುತ್ತದೆ ಎನ್ನುತ್ತಾರೆ ಕಲಾವಿಮರ್ಶಕ ಕೆ.ವಿ. ಸುಬ್ರಹ್ಮಣ್ಯಂ.[೪]

ಅಭಿವ್ಯಕ್ತಿಯಲ್ಲಿ ಮಣ್ಣಿನ ವಾಸನೆ

ಇಂದಿನ ಆಧಿನಿಕೋತ್ತರ ಕಲೆಯ ಬೆಳವಣಿಗೆಗೆ ಸ್ಥಳೀಯ ಸೊಗಡು ಪ್ರಭಾವ ಬೀರುತ್ತಿದ. ಮಣ್ಣಿನ ವಾಸನೆ ನಮ್ಮ ಕಲಾವಿದರ ಸೃಷ್ಟಿಗಳಲ್ಲಿ ತಟ್ಟುತ್ತಿದೆ. ಬೆಂಗಳೂರಲ್ಲಿ (೧೯೯೯)'ಸ್ಥಳ ಪುರಾಣಗಳು', ' two conversations and a dialogue' ಶೀರ್ಷಿಕೆಯಡಿ ಆಯೋಜನಗೊಂಡ ಇನ್‌ಸ್ಟಾಲೇಷನ್ ಕಲೆಯ ಪ್ರದರ್ಶನ ಅಲಸೂರಿನ ಕರಬಸವನಗುಡಿಯ ಸಮುದಾಯ ನಾಟಕ ತಂಡದ ಕಛೇರಿ ಹಾಗೂ ಕನ್ನಡ ಭವನದ 'ಚಿತ್ರ' ಗ್ಯಾಲರಿಗಳಲ್ಲಿ ನಡೆಯಿತು.

ಎನ್. ಪುಷ್ಪಮಾಲಾ ಕ್ಯೂರೇಟ್ ಮಾಡಿದ್ದ ಈ ಪ್ರದರ್ಶನದಲ್ಲಿ ಆಯ್ಕೆ ಮಾಡಿಕೊಂಡ ಸ್ಥಳಗಳ ಬಗೆಗೆ ಪ್ರಚಲಿತವಿರುವ ಕಥೆ, ಭೌಗೋಲಿಕ ದೃಶ್ಯಾನುಭವಗಳೊಂದಿಗೆ ಶ್ರೀಸಾಮಾನ್ಯರು ಹಾಗೂ ಅಭಿಮಾನಿಗಳು[೫] ಪಾಲ್ಗೊಳ್ಳುವಂತಹ ಸಂವಾದ ನಡೆಸುವಂತಹ ವಾತಾವರಣ ಸೃಷ್ಟಿಯ ಉದ್ದೇಶಕ್ಕಾಗಿ ಇನ್‌ಸ್ಟಾಲೇಷನ್(೧೯೯೯) ಕಲೆಯನ್ನು ದುಡಿಸಿಕೊಂಡಿದ್ದರು.

ಸಮೂಹ ಚಟುವಟಿಕೆಗಳು

ಕರ್ನಾಟಕದ ಬೇರೆ ಬೇರೆ ಭಾಗಗಳ ಶಿಲ್ಪಕಲಾವಿದರು ಕೂಡಿ ಗುಂಪು 'ಶಿಲ್ಪಕಲಾ ಪ್ರದರ್ಶನವನ್ನು ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ಹಮ್ಮಿಕೊಳ್ಳಲಾಗಿತ್ತು. ವೆಂಕಟಾಚಲಪತಿಯವರ ಹಿರಿತನ ಇದು 'Contemporary Sculptpors forum' ಹೆಸರಿನ ಗುಂಪು ಕಟ್ಟಿಕೊಂಡು ೨೦೦೮ 'ಸಮಕಾಲೀನ ಶಿಲ್ಪಕಲಾ ಕೃತಿಗಳ ಪ್ರದರ್ಶನ ಹಮ್ಮಿಕೊಂಡಿದ್ದು ಗಮನಾರ್ಹವಾಗಿದೆ. ವೆಂಕಟಾಚಲಪತಿಯವರಲ್ಲದೆ ಆನಂದಬಾಬು, ನಾಗಪ್ಪ ಪ್ರಧಾನಿ, ಎಂ. ರಾಮಮೂರ್ತಿ, ಬಿ.ಂ. ರವಿಕುಮಾರ, ರಾಜೇಶ್ ದೇವಣಗಾಂವ್, ಉಲ್ಲಾಸ್‌ಕರ ಡೇ, ಶಿವಾನಂದ ಬಂಟನೂರ, ಜಗನ್ನಾಥ ಜಕ್ಕೇಪಳ್ಳಿ, ಕೆ. ರಾಘವೇಂದ್ರ, ಎಂ. ರಘುರಾಮ, ಎಂ. ವಿಶ್ವನಾಥ ಅವರು ಭಾಗವಹಿಸಿದ್ದರು.

ಸಮಕಾಲೀನ ಶಿಲ್ಪಕಲೆಯ ಕುರಿತು ಆಯೋಜನೆಗೊಂಡ ಅಪರೂಪದ ಪ್ರದರ್ಶನ ಇದಾಗಿದೆ. ಆನಂದಬಾಬು ಅವರು ಕಂಚು, ಟೆರಾಕೊಟ್ಟ ಮಾಧ್ಯಮದಲ್ಲಿ ಅಭಿವ್ಯಕ್ತಿಸಿದ್ದರೆ ಶಿವಾನಂದ ಬಂಟನೂರ ಶಿಲಾ ಮಾಧ್ಯಮದಲ್ಲಿ ಅಭಿವ್ಯಕ್ತಿಸಿ ಪ್ರದರ್ಶಿಸಿದ್ದರು. ಜಕ್ಕೇಪಳ್ಳಿಯವರು ಟೆರಾಕೊಟ್ಟ ಮತ್ತು ಫೈಬರ್ ಮಾಧ್ಯಮಗಳಲ್ಲಿ, ರಾಘವೇಂದ್ರ ಕಲ್ಲಿನಲ್ಲಿ, ಲೋಹವನ್ನು ಸಮೀಕರಿಸಿ ಶಿಲ್ಪಗಳನ್ನು ರಚಿಸಿದ್ದರು. ಎಂ. ರಘುರಾಮರು ಫೈಬರ್ ಗ್ಲಾಸ್, ಆಕ್ರಲಿಕ್ ಸೀಟ್ ಇತ್ಯಾದಿಗಳನ್ನು ಬಳಸಿ ಶಿಲ್ಪ ರಚಿಸಿದ್ದರು. ವಿಶ್ವನಾಥ ಕೂಡ ಫೈಬರ್ ಮಾಧ್ಯಮದಲ್ಲಿ ಸುಂದರವಾದ ಶಿಲ್ಪಗಳನ್ನು ರಚಿಸಿದ್ದರು. ನಾಗಪ್ಪ ಪ್ರಧಾನಿಯವರು ತಮ್ಮ ಎಂದಿನ ಹೆಡ್ ಸರಣಿಯ ಶಿಲಾ ಶಿಲ್ಪ ಸೇರಿದಂತೆ ಶಿಲಾ ಮಾಧ್ಯಮದ ಶಿಲ್ಪಗಳನ್ನೇ ಪ್ರದರ್ಶಿಸಿದ್ದರು. ಎಂ. ರಾಮಮೂರ್ತಿಯವರು ಮರಮಾಧ್ಯಮದಲ್ಲಿ ಗಮನಾರ್ಹವಾದ ತೀರ ಚಿಕ್ಕ ಮತ್ತು ದೊಡ್ಡ ಅಳತೆಯ ಶಿಲ್ಪಗಳನ್ನು ಪ್ರದರ್ಶಿಸಿದರು. ಬಿ.ಎಂ. ರವಿಕುಮಾರರು 'ಅರ್ಬನ್ ಕೌ' ನಂತಹ ಶಿಲ್ಪಗಳನ್ನು ಫೈಬರ್‌ನಲ್ಲಿ ಪರಿಣಾಮಕಾರಿಯಾಗಿ ರಚಿಸಿದರು. ದೇವಣಾಂ ರಾಜೇಶ್ ಲೋಹ, ಫೈಬರ್ ಮಾಧ್ಯಮದ ಶಿಲ್ಪಗಳು ಉಲ್ಲಾಸ್ ಕರ್ ಡೇ ಅವರ ಶಿಲ್ಪಗಳೂ ಗಮನಾರ್ಹವಾಗಿದ್ದವು. ವೆಂಕಟಾಚಲಪತಿಯವರ ಶಿಲ್ಪಗಳೂ ಸುಂದರವಾಗಿದ್ದವು. ಬೇರ ಬೇರೆ ಶಿಲೆಗಳಲ್ಲಿ ಅವರು ಅಭಿವ್ಯಕ್ತಿಸಿದರು.

ಇದೇ Contemporary Sculptpors forum 2010 ರಲ್ಲಿ ಮತ್ತೊಂದು ೧೩-೨೨ ಅಗಸ್ಟ್ ೨೦೧೦) ಸಮಕಾಲೀನ ಶಿಲ್ಪಕಲಾಕೃತಿಗಳ ಪ್ರದರ್ಶನ ಬೆಂಗಳೂರಿನ ಕರ್ನಾಟಕ ಚಿತ್ರಕಲಾಪರಿಷತ್‌ನಲ್ಲಿ ಹಮ್ಮಿಕೊಂಡಿತ್ತು. ಜಗನ್ನಾಥ ಜಕ್ಕೇಪಳ್ಳಿ, ಮಂಜುನಾಥ ಎ. ಆರ್, ನಾಗಪ್ಪ ಪ್ರಧಾನಿ, ಎಲ್. ನರಸಿಂಹ ಪ್ರಕಾಶ, ಜಿ.ಬಂ. ಓಂಕಾರಮೂರ್ತಿ, ಎಂ. ರಘುರಾಮ, ಎಂ. ರಾಮಮೂರ್ತಿ, ಕೆ. ರಾಘವೇಂದ್ರ, ರಾಜೇಶ್ ದೇವಣಗಾಂ, ಬಿ.ಎಂ. ರವಿಕುಮಾರ್, ವೆಂಕಟಾಚಲಪತಿ, ಎಂ. ವಿಶ್ವನಾಥ, ವೆಂಕಟೇಶ ಎಂ., ಬಿ.ಎನ್. ವಿಚಾರ್ ಬಾಗವಹಿಸಿ ತಲಾ ೩-೪ ಶಿಲ್ಪಕಲಾ ಕ್ತಿಗಳನ್ನು ಪ್ರದರ್ಶಿಸಿದ್ದರು. ಜಕ್ಕೇಪಳ್ಳಿಯವರು ಫೈಬರ್ ಗ್ಲಾಸ್‌ನಲ್ಲಿ, ಮಂಜುನಾಥ ಗ್ರ್ಯಾನೈಟ್ ಶಿಲೆಯಲ್ಲಿ ಅಭಿವ್ಯಕ್ತಿಸಿದ್ದಾರೆ. ನಾಗಪ್ಪ ಪ್ರಧಾನಿಯವರು ಈ ಸಲ ಫೈಬರ್ ಗ್ಲಾಸ್‌ನ ಶಿಲ್ಪಗಳನ್ನು ಪ್ರದರ್ಶನಕ್ಕಿಟ್ಟರು. ನರಸಿಂಹಪ್ರಕಾಶ್‌ರು ಫೈಬರ್ ಗ್ಲಾಸ್, ಓಂಕಾರಮೂರ್ತಿ ಅಲ್ಯೂಮಿನಿಯಂ ಮಾಧ್ಯಮಗಳ ಶಿಲ್ಪಗಳನ್ನು ಸೃಷ್ಟಿಮಾಡಿದ್ದರು.

ರಘುರಾಮ ಅವರು, ಫೈಬರ್ ಮತ್ತು ಇತರ ಮಿಶ್ರ ಮಾಧ್ಯಮಗಳಲ್ಲಿ ಶಿಲ್ಪಗಳನ್ನು ಸೃಷ್ಟಿಸಿದರು. ರಾಮಮೂರ್ತಿ ಎಂದಿನಂತೆ ತಮ್ಮ ಪ್ರಿತಿಯ ಮರಮಾಧ್ಯದಲ್ಲೇ ಅಭಿವ್ಯಕ್ತಿಸಿ ಪ್ರದರ್ಶಿಸಿದ್ದರು. ಶಿಲೆಯೇ ನನ್ನ ಪ್ರೀತಿಯ ಅಭಿವ್ಯಕ್ತಿ ಮಾಧ್ಯಮ ಎನ್ನುವ ರಾಘವೇಂದ್ರ ಇಲ್ಲೂ ಶಿಲಾ ಮಾಧ್ಯಮದ ಸುಂದರ ಗ್ರಹಿಕಗಳು ಶಿಲ್ಪಗಳನ್ನೇ ಪ್ರದರ್ಶಿಸಿದರು. ತೀವ್ರ ವೈಚಾರಿಕ ನೆಲೆಯ ಮಿಶ್ರಮಾಧ್ಯಮದ ಶಿಲ್ಪಗಳನ್ನು ರಾಜೇಶ್ ದೇವಣಗಾಂ ಸೃಷ್ಟಿಸಿ ಪ್ರದರ್ಶಿಸಿದ್ದರು. ಫೈಬರ್ ಮುಖ್ಯವೆನಿಸಿದರೂ ಮಿಶ್ರಮಾಧ್ಯಮಗಳಲ್ಲಿ 'ಪರಿಣಾಮಕಾರಿಯಾದ ಕಲಾಕೃತಿಗಳನ್ನು ಸೃಷ್ಟಿ ಮಾಡಿದ್ದವರು, ಬಿ.ಎಂ. ರವಿಕುಮಾರ್‌ರು ಅವರ 'ಅರ್ಬನ್ ಕೌ' ಚಿಂತನೆಗೆ ಹಚ್ಚುವ, ಸಮಕಾಲೀನ ಸಮಸ್ಯೆಗಳಿಗೆ ತೀವ್ರವಾಗಿ ಸ್ಪಂದಿಸಿದ ಶಿಲ್ಪವಾಗಿತ್ತು.

ಹಿರಿಯ ಶಿಲ್ಪಿ ವೆಂಕಟಾಚಲಪತಿ ತಮ್ಮ ಎಂದಿನ "ಹಾರ್ಮೋನ್' ಸರಣಿಯ ಶಿಲ್ಪಗಳನ್ನು ಇಲಾಮಾಧ್ಯಮದಲ್ಲಿ ರಚಿಸಿ ಪ್ರದರ್ಶನಲ್ಲಿರಿಸಿದ್ದರು. ಎಂ. ವಿಶ್ವನಾಥ ಶೀರ್ಷಿಕೆಯಿಲ್ಲದ ಶಿಲ್ಪಗಳನ್ನು ಮಿಶ್ರ ಮಾಧ್ಯಮಗಳಲ್ಲಿ ರಚಿಸಿದ್ದರು.

ಸಮಕಾಲೀನ ಸಂದರ್ಭದ ಸುಂದರ ಗ್ರಹಿಕೆಗಳನ್ನು ಫೈಬರ್ ಮಾಧ್ಯಮದಲ್ಲಿ ಸೃಷ್ಟಿಸಿದ ಎಂ. ವೆಂಕಟೇಶ್, ಟೆರಾಕೊಟ್ಟ ಮಾಧ್ಯಮದಲ್ಲಿ ಹೆಬ್ಬೆರಳನ್ನು ರಚಿಸಿ ಅದರ ಮೇಲೆ ವರ್ಣಚಿತ್ರಗಳನ್ನು ರಚಿಸಿದ ಬಿ.ಎನ್. ವಿಚಾರ ಅವರ ಶಿಲ್ಪಗಳೂ ಗಮನಾರ್ಹವಾಗಿದ್ದವು.

ಈ ಮಹತ್ವದ ಗುಂಪು ತನ್ನ ಪ್ರದರ್ಶನಗಳನ್ನು ನಿಲ್ಲಿಸದೆ ಪ್ರತಿವರ್ಷವೂ ಮುನ್ನೆಡಿಸಿಕೊಂಡು ಬಂದಿದ್ದರೆ ಹಿಂದೆ ಬಿದ್ದಿರುವ ಸಮಕಾಲೀನ ಶಿಲ್ಪಕಲಾ ವಲಯಕ್ಕೆ ಗಮನಾರ್ಹ ಕೊಡುಗೆ ನೀಡಬಹುದಿತ್ತು. ಈಗಲೂ ಕಾಲ ಮುಗಿದಿಲ್ಲ, ಗುಂಪು ಕ್ರಿಯಾಶೀಲವಾಗಬೇಕೆನಿಸುತ್ತದೆ. ಚಿತ್ರಕಲಾವಿದರಿಗೆ ಹೋಲಿಸಿದರೆ ಈ ರೀತಿಯಲ್ಲಿ ಸಮಕಾಲೀನ ಶಿಲ್ಪ ಕಲಾಕೃತಿಗಳ ಗುಂಪು ಪ್ರದರ್ಶನಗಳನ್ನು ನಡೆದೇ ಇಲ್ಲವೆನ್ನುವಷ್ಟು ಅಪರೂಪ ಈ ಗುಂಪು, ೩–೪ ಪ್ರದರ್ಶನಗಳನ್ನು ಮಾಡಿತು ಅಷ್ಟೇ. ಆದರೆ ಐತಿಹಾಸಿಕ ದಾಖಲೆಯಾಗಿ ಮಹತ್ವ ಪಡೆದಿವೆ.

ಕರ್ನಾಟಕ ಲಲಿತಕಲಾ ಅಕಾಡೆಮಿ ಏರ್ಪಡಿಸುವ ವಾರ್ಷಿಕ ಕಲಾ ಪದರ್ಶನದಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಸಮಕಾಲೀನ ಶಿಲ್ಪಗಳು ಇರುತ್ತಿದ್ದವು. ಆದರೆ ಶಿಲ್ಪಕಲಾ ಅಕಾಡೆಮಿ ಆರಂಭವಾದ ಮೇಲೆ ಅಕಾಡೆಮಿಯ ವಾರ್ಷಿಕ ಶಿಲ್ಪಕಲಾ ಪ್ರದರ್ಶನದಲ್ಲಿ ಪ್ರದರ್ಶನಗೊಳ್ಳುವ ಸಮಕಾಲೀನ ಶಿಲ್ಪಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಿರುವುದು ಸಂತೋಷದ ಆಶಾದಾಯಕ ಸಂಗತಿಯಾಗಿದೆ.[2] ಆದರೆ ಶಿಲ್ಪಕಲಾ ಅಕಾಡೆಮಿಯು ಇದುವರಗೆ ಬಹುಪಾಲು ಸಾಂಪ್ರದಾಯಿಕ ಶಿಲ್ಪಿಗಳನ್ನೇ ಅಧ್ಯಕ್ಷರನ್ನಾಗಿ ಪಡೆದಿದುದರಿಂದಲೇ ಏನೋ ಇನ್ನೂ ಕೂಡ ಸಮಕಾಲೀನ ಶಿಲ್ಪ ಕಲೆ ಅಲ್ಲಿ ಎರಡನೇ ದರ್ಜೆಯಂತೆ ಕಾಣಲಾಗುತ್ತಿದೆ, ಮಾತ್ರವಲ್ಲಿ ಬಹುಸಂಖ್ಯೆಯಲ್ಲಿ ಶಿಲ್ಪಗಳ ಪ್ರದರ್ಶನಕ್ಕೆ ಬಂದರೂ ಸಂಪ್ರದಾಯ ಶಿಲ್ಪಗಳಿಗೇ ಬಹುಮಾನ ಪುರಸ್ಕಾರಗಳನ್ನು ನೀಡುತ್ತಲಿರುವುದು ಆಶ್ಚರ್ಯದ ಸಂಗತಿ. ಪರಂಪರೆಯ ಬೆರಗು ಎಷ್ಟು ಮುಖ್ಯವೋ ಆಧುನಿಕ–ಸಮಕಾಲೀನ ಹೂ– ಚಿ ಗುರುಗಳು ಅದಕ್ಕಿಂತಲೂ ಮುಖ್ಯವೆಂಬುದನ್ನು ಸಂಬಂದಿಸಿದವರು ಅರಿಯಬೇಕಿದೆ.

೨೦೦೭ರಲ್ಲಿ ಮುಂಬೈನ ಜಹಾಂಗೀರ್ ಆರ್ಟ್ ಗ್ಯಾಲರಿಯಲ್ಲಿ ಗುಂಪು ಪ್ರದರ್ಶನದಲ್ಲಿ ಬಂಟನೂರ ತಮ್ಮ ಮರ ಮತ್ತು ಶಿಲಾ ಶಿಲ್ಪಗಳನ್ನು ಪ್ರದರ್ಶನ ಮಾಡಿದರು. ಹಾಗ ೨೦೦೯ ರಲ್ಲಿ ಪೂನಾದಲ್ಲಿ ಗುಂಪು ಪ್ರದರ್ಶನದಲ್ಲಿ(wete group) ಮಾಡಿರುವರು. ೧೯೯೪ ರಲ್ಲಿ 'ಶಿವಾನಂದ ಬಂಟನೂರ ಅವರು ಧಾರವಾಡದ ವಿದ್ಯಾರ್ಧಕ ಸಂಘದಲ್ಲಿ ತಮ್ಮ ಮರ ಮತ್ತು ಮೃತ್ತಿಕೆ ಮಾಧ್ಯಮದ ಶಿಲ್ಪಗಳ ಏಕವ್ಯಕ್ತಿ ಕಲಾಪ್ರದರ್ಶನವನ್ನು ಹಮ್ಮಿಕೊಂಡು ಹೊಸ ಸಂಚಲನ ಮೂಡಿಸಿದ್ದು ಒಂದು ಸಾಹಸವೇ ಸರಿ. ಆ ಬಳಿಕ ಈ ರೀತಿಯ ಪ್ರದರ್ಶನಗಳಲ್ಲದೆ 'ಸಮಕಾಲೀನ ಶಿಲ್ಪಕಲಾ ಕೃತಿಗಳದೇ' ಏಕವ್ಯಕ್ತಿ ಪ್ರದರ್ಶನಗಳು ನಮ್ಮಲ್ಲಿ ನಡೆದೇ ಇಲ್ಲ! ಹಲವು ಸಮಸ್ಯೆ- ಸವಾಲುಗಳನ್ನು ಎದುರಿಸಿಯೂ ಒಬ್ಬಿಬ್ಬರು ಇಂತಹ ಸಾಹಸಕ್ಕೆ ಕೈ ಹಾಕಿದ್ದೂ ಇದೆ. ಅಗಸ್ಟ ೧೯೯೧ ರಲ್ಲಿ ಬೆಂಗಳೂರಿನ ವೆಂಕಟಪ್ಪ ಆರ್ಟ್‌ಗ್ಯಾಲರಿಯಲ್ಲಿ ಶಿವಾನಂದ ಬಂಟನೂರ ಅವರು ತಮ್ಮ ಮರಮಾಧ್ಯಮದ ಶಿಲ್ಪಕಲಾಕೃತಿಗಳ ಏಕವ್ಯಕ್ತಿ ಪ್ರದರ್ಶನವನ್ನು ಮಾಡಿದ್ದರು.[೭] ಶಿಲ್ಪಗಳ ಮತ್ತೊಂದು ಏಕವ್ಯಕ್ತಿ ಕಲಾಪ್ರದರ್ಶನವನ್ನು ಗದುಗಿನ ವಿಜಯ ಕಲಾಮಂದಿರದಲ್ಲಿ ಏರ್ಪಡಿಸಿ ಕುತೂಹಲ ಮೂಡಿಸಿದ್ದರು. ಇವೆರಡೂ ಪ್ರದರ್ಶನಗಳನ್ನು ಅವರು ಸ್ವಂತ ಹಣದಲ್ಲಿ ಏರ್ಪಡಿಸಿದುದು ಗಮನಾರ್ಹ.

ದಿನಾಂಕ: ೨೮-೩೦ ಮಾರ್ಚ್ ೨೦೧೬ರ ವರೆಗೆ ವಿಜಯಪುರದ ಸಿದ್ದೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಮತ್ತೊಂದು ಏಕವ್ಯಕ್ತಿ ಶಿಲ್ಪಕಲಾ ಪ್ರದರ್ಶನವನ್ನು ಹಮ್ಮಿಕೊಂಡು ಅಲ್ಲಿನ ಜನತೆಗೆ ಹೊಸ ಬಗೆಯ ಅನುಭವವನ್ನು ಶಿವಾನಂದ ಬಂಟನೂರ ನೀಡಿದರು. ಈ ಸಲ 'ಕನ್ನಡ ಮತ್ತು ಸಂಸ್ಕೃತಿ ಇಲಾಖೆ' ಧನಸಹಾಯ ನೀಡಿದ್ದುದು ವಿಶೇಷ. ಹಂಪಿ ಕನ್ನಡ ವಿ.ವಿ.ಯಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಇವರು ರಚಿಸಿದ ಶಿಲ್ಪಕಲಾಕೃತಿಗಳ ಪ್ರದರ್ಶನಕ್ಕೆ ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಂ.ಎಸ್. ಮದಭಾವಿ ಚಾಲನೆ ನೀಡಿದರು. ಬಳಿಕ ಅವರು ಮಾತನಾಡುತ್ತ,- ಕಲಾವಿದರು ಕಲೆಗಾಗಿ ತಮ್ಮ ಬದುಕನ್ನು ಅರ್ಪಿಸಿಕೊಂಡಿರುತ್ತಾರೆ. ಕಲೆಯಲ್ಲಿ ಅಪಾರವಾದ ಶಕ್ತಿ ಇದೆ, ಶಿವಾನಂದ ಬಂಟನೂರ ಅನೇಕ ಮಾಧ್ಯಮಗಳಲ್ಲಿ ಕಲಾಕೃತಿಗಳನ್ನು ರಚಿಸಿದ್ದಾರೆ. ಕೆಲವನ್ನು ಇಲ್ಲಿ ಪ್ರದರ್ಶನ ಮಾಡಿದ್ದಾರೆ. ನಗರದ ಜನತೆ ಇವರ ಕಲಾಕೃತಿಗಳ ಸೌಂದರ್ಯವನ್ನು ಅನುಭವಿಸಬೇಕು ಎಂದರು. ಇಳಕಲ್‌ನ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಬಸವರಾಜ ಗವಿಮಠ ಮಾತನಾಡಿ ಶಿವಾನಂದ ಬಂಟನೂರ ಅಧ್ಯಯನ, ಅಧ್ಯಾಪನದೊಂದಿಗೆ ವಿಭಿನ್ನ ಮಾಧ್ಯಮಗಳಲ್ಲಿ ಸಮಕಾಲೀನ ಶೈಲಿಯ ಶಿಲ್ಪಕಲಾಕೃತಿಗಳನ್ನು ರಚನೆ ಮಾಡಿದ್ದಾರೆ. ಅವುಗಳ ಮೌಲಿಕತೆಯನ್ನು ಅನುಭವಿಸಲು, ಅರ್ಥೈಸಿಕೊಳ್ಳಲು ಕಲಾಕೃತಿಗಳನ್ನು ವೀಕ್ಷಿಸಬೇಕು ಎಂದರು. ಸಿದ್ದೇಶ್ವರ ಕಲಾ ಮಂದಿರದ ನಿರ್ದೇಶಕ ಪೊನ್ನಪ್ಪ ಕಡೇಮನಿ ಅಧ್ಯಕ್ಷತೆ ವಹಿಸಿದ್ದರು. ಕಲಾ ಮಂದಿರದ ಪ್ರಾಚಾರ್ಯ ವಿ.ವಿ. ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಭೋಜಣ್ಣ ಬೀಳಗಿ, ಕಲಾವಿದರಾದ ಶಿವಾನಂದ ಬಂಟನೂರ, ಕಲಾ ಮಂದಿರದ ಉಪನ್ಯಾಸಕರಾದ ಎಂ.ಎಂ. ಕನ್ನೂರ, ಪಿ.ಬಿ. ಖ್ಯಾಡದ, ಎಚ್.ಪಿ. ಕೇದ್ರಾಪುರ, ಗಿರಿಜಾ ಬಿರಾದಾರ, ರಮೇಶ ಚವ್ಹಾಣ,

ಸಿದ್ದು ಎಸ್. ಬಂಟನೂರ ಉಪಸ್ಥಿತರಿದ್ದರು. ಎಂ.ಎಂ. ಕನ್ನೂರ ಸ್ವಾಗತಿಸಿದರು. ಎಚ್.ಪಿ. ಕೇದ್ರಾಪುರ ಅತಿಥಿಗಳನ್ನು ಪರಿಚಯಿಸಿದರು, ಡಾ. ಎಚ್.ಎನ್. ಕೃಷ್ಣೇಗೌಡ ವಂದಿಸಿದರು.

ಕಲಬುರ್ಗಿಯಲ್ಲಿ ಚಂದ್ರಪ್ಪ ಕಟ್ಟಿಮನಿ ಗೋಗಿ ಅವರು ದಿ.೨೩ ಜುಲೈ ೨೦೧೬ರಿಂದ ಮೂರು ದಿನಗಳ ಕಾಲ ಕಲಬುರ್ಗಿಯ ಚೈತನ್ಯಮಯಿ ಆರ್ಟ್ ಗ್ಯಾಲರಿಯಲ್ಲಿ ತಮ್ಮ ಏಕವ್ಯಕ್ತಿ ಮರಶಿಲ್ಪ ಕಲಾಕೃತಿಗಳ ಪ್ರದರ್ಶನವನ್ನು ಏರ್ಪಡಿಸಿದರು. ಮರದ ಬೊಡ್ಡೆ ಬೇರುಗಳಲ್ಲಿ ಕಂಡ ಪ್ರಾಣಿ, ಪಕ್ಷಿಗಳ ರೂಪಾಕೃತಿಗಳನ್ನು ಪೆಡೆಸ್ಟಲ್ ಮೇಲೆ ಅಳವಡಿಸಿ ಶಿಲ್ಪಗಳನ್ನು ರೂಪಿಸಿದ್ದರು. ಬರ್ಡ, ಜಿಗಿಯುತ್ತಿರುವ ಕಪ್ಪೆ ಮತ್ತು ಶಿರ್ಷಿಕೆ ರಹಿತ ಕೆಲವು ಶಿಲ್ಪಗಳು ಅವರ ಕೌಶಲಕ್ಕೆ ಉದಾಹರಣೆಯಾಗಿವೆ. ಚಂದ್ರಪ್ಪ ಅವರು ಮುಂದಿನ ದಿನಗಳಲ್ಲಿ ತಮ್ಮ ಅನುಭವ, ವಿಚಾರಗಳನ್ನು ಶಿಲ್ಪ ಕಲಾಕೃತಿಗಳ ಮೂಲಕ ಅಭಿವ್ಯಕ್ತಗೊಳಿಸಬೇಕಿದೆ. ಅವರ ಈ ಪ್ರದರ್ಶನ ಅವರೊಬ್ಬ ಉತ್ತಮ ಸಮಕಾಲೀನ ಶೈಲಿಯ ಶಿಲ್ಪಿಯಾಗಬಲ್ಲರೆಂಬ ಭರವಸೆ ಮೂಡಿಸಿದೆ.

ಶಿಲ್ಪಕಲಾ ಶಿಕ್ಷಣ: ವರ್ತಮಾನ ಮತ್ತು ಭವಿಷ್ಯ

ಚಿತ್ರಕಲೆ ಮತ್ತು ಶಿಲ್ಪಕಲೆ ಎರಡನ್ನೂ ಸೇರಿಸಿಯೇ ನಾವು ದೃಶ್ಯಕಲೆ ಎಂದು ಕರೆಯುತ್ತೇವೆ. ದೃಶ್ಯಕಲೆಗಳಲ್ಲಿ ನೋಡುವುದು ಮುಖ್ಯ. ಕಣ್ಣಿನ ಪಾತ್ರ ಬಹುಮುಖ್ಯ. ಭೌತಿಕ ಕಣ್ಣು ಒಂದು ನೆಪ- ಹೃದಯದ ಕಣ್ಣು ಮುಖ್ಯ. ಚಿತ್ರಕಲೆ ಎರಡು ಆಯಾಮದ ದೃಶ್ಯಕಲೆ(೨ಡಿ) ಉದ್ದ ಮತ್ತು ಅಗಲ. ಶಿಲ್ಪಕಲೆ ಮೂರು ಆಯಾಮದ ದೃಶ್ಯಕಲೆ(೩ಡಿ)ಉದ್ದ, ಅಗಲ ಮತ್ತು ದಪ್ಪ. ಉಬ್ಬು ಶಿಲ್ಪ (ರಿಲೀಪ್) ದುಂಡು ಅಥವಾ ಪೂರ್ಣಶಿಲ್ಪ ಎಂದು ತಾಂತ್ರಿಕವಾಗಿ ಹೇಳುವ ಮಾತು.

ಆದಿಮಾನವನ ಕಾಲದಿಂದಲೂ ಚಿತ್ರಕಲೆ ಮತ್ತು ಶಿಲ್ಪಕಲೆ ಬೆಳೆದು ಬಂದಿದೆ ಎಂಬುದೂ ನಮಗೆ ಗೊತ್ತು. ನಮ್ಮ ದೇಶ ಅಥವಾ ನಾಡಿನಲ್ಲಿ ಚಿತ್ರ- ಶಿಲ್ಪ ಕಲೆಗಳೆರಡಕ್ಕೂ ರಾಜಮಹಾರಾಜರ ಕಾಲದಲ್ಲೂ ಸಾಕಷ್ಟು ಪ್ರೋತ್ಸಾಹ ದೊರತದ್ದನ್ನು ನಾವು ಕಾಣುತ್ತೇವೆ. ಅಜಂತಾ-ಎಲ್ಲೋರಾದ ಚಿತ್ರ ಶಿಲ್ಪಕಲಾಕೃತಿಗಳಿಂದ ಹಿಡಿದು ಚಿಕಣಿ ಚಿತ್ರಕಲೆ- ಭಿತ್ತಿ ಚಿತ್ರಕಲೆ ಹಾಗೂ ದೇವಾಲಯ ಶಿಲ್ಪ, ಮೂರ್ತಿ ಶಿಲ್ಪಕಲೆಗಳನ್ನು ನಾವು ಈ ಹೊತ್ತಿಗೂ ನೋಡುತ್ತಿದ್ದೇವೆ.

ನಮ್ಮ ನಾಡಿನಲ್ಲಿ ಗಂಗರು, ಕದಂಬರು, ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳರು,ವಿಜಯನಗರದ ಅರಸರ ಕಾಲದಲ್ಲೂ ಚಿತ್ರಕಲೆ ಮತ್ತು ಶಿಲ್ಪಕಲೆಳೆರಡಕ್ಕೂ ಸಮಾನ ಆದ್ಯತೆ ನೀಡಿದ್ದರಿಂದ ನಮ್ಮ ಪಾರಂಪಾರಿಕ ಕಲೆ ಸಮೃದ್ಧವಾಗಿ ಬೆಳೆಯಿತು. ಆದರೆ ಬ್ರಿಟೀಷರ ಆಗಮನದೊಂದಿಗೆ ಆಧುನಿಕ ದೃಶ್ಯಕಲೆ ನಿಧಾನಕ್ಕೆ ನಮ್ಮ ದೇಶಗಳಲ್ಲಿ ಹರಡಿಕೊಂಡಿತು. ತತ್ಕಾರಣವಾಗಿ ನಮ್ಮ ದೇಶೀ ದೃಶ್ಯಕಲೆಗೆ ಹಿನ್ನೆಡೆಯಾಯ್ತು. ಬ್ರಿಟೀಷರ(ಶಿಕ್ಷಣ) ದೃಶ್ಯಕಲಾ ಶಿಕ್ಷಣ ಕ್ರಮದಲ್ಲಿ ಶಿಲ್ಪಕಲೆಗೆ ಅಷ್ಟೇನೂ ಆದ್ಯತೆ ಇರಲಿಲ್ಲ. ಆದರೆ ಹೊಸ ಹೊಸ ಮಾಧ್ಯಮಗಳನ್ನು, ತಂತ್ರಗಳನ್ನು ಅವರು ಪರಿಚಯಿಸಿದರು. (ತೈಲವರ್ಣ, ಕುಂಚಗಳು, ಕ್ಯಾನ್ವಾಸ್ ಮತ್ತು ಪಿ.ಒ.ಪಿ) ಮುಂತಾದವುಗಳು.

ವಸಾಹತೋತ್ತರ ಅಥವಾ ಬ್ರಿಟೀಷೋತ್ತರ ಅಥವಾ ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಸಾಕಷ್ಟು ಬದಲಾವಣೆ ಬಂದಿತು. ಅಂದರೆ ಮುಖ್ಯವಾಗಿ ಸಾಮ್ರಾಜ್ಯಗಳು ಕರಗಿಹೋಗಿ ರಾಜ್ಯಗಳ ಉದಯವಾದವು. ಭಾರತದ ಅನೇಕ ಭಾಗಗಳಲಿ ್ಲತನ್ಮೂಲಕ ಕರ್ನಾಟಕದಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳು ಉದಯಿಸಿದವು. ಅಂತೆಯೇ ಹಲವಾರು ಕಲಾಶಿಕ್ಷಣ ಸಂಸ್ಥೆಗಳೂ ಹುಟ್ಟಿಕೊಂಡವು. ಈ ಕಲಾಶಿಕ್ಷಣ ಸಂಸ್ಥೆ ಅಥವಾ ಕಾಲೇಜುಗಳಲ್ಲಿ ನಾವು ಬ್ರಿಟೀಷ್ ಮಾದರಿಯ ಪಠ್ಯಕ್ರಮವನ್ನೇ ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಅಳವಡಿಸಿಕೊಂಡು ಬಂದಿದ್ದೇವೆ. ಸರಿ?

ಆದರೆ ಈ ಕಲಾಶಾಲೆ ಅಥವಾ ವಿದ್ಯಾಲಯಗಳಲ್ಲಿ ಕಲಿಸುವ ಪಠ್ಯಕ್ರಮದಲ್ಲಿ ಈ ಚಿತ್ರಕಲೆ ಮತ್ತು ಶಿಲ್ಪಕಲೆಗಳ ಪಠ್ಯವನ್ನ ತುಲನೆಮಾಡಿ ನೋಡಿದರೆ ಚಿತ್ರಕಲೆಗೆ ನೀಡಿದಷ್ಟು ಆದ್ಯತೆ ಶಿಲ್ಪಕಲೆಗೆ ನೀಡಿಲ್ಲ ಎಂಬುದು ತಿಳಿಯುತ್ತದೆ. ಇದಕ್ಕೆ ಕಾರಣಗಳು ಏನು? ಯಾವುವು? ಎಂಬುದನ್ನು ಪರಾಮರ್ಶನ ಮಾಡಬೇಕಿದೆ. ಏಕೆಂದರೆ ಕರ್ನಾಟಕದಲ್ಲಿನ ಸುಮಾರು ೭೫-೮೦ ಕ್ಕೂ ಮಿಕ್ಕಿರುವ ಸರಕಾರಿ ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಕಲಾ ವಿದ್ಯಾಲಯಗಳಲ್ಲಿ ಗಮನಿಸಿದರೆ, ಶೇ-೫-೬ ರಷ್ಟು ಶಾಲೆಗಳಲ್ಲಿ ಮಾತ್ರ ಶಿಲ್ಪಕಲೆಯನ್ನು ಕಲಿಸಲಾಗುತ್ತದೆ. ಒಂದು ಮೈಸೂರಿನ ಕಾವಾ ಬೆಂಗಳೂರಿನ ಚಿ. ಪರಿಷತ್, ಗುಲಬರ್ಗಾದ ಎಮ್.ಎಮ್.ಕೆ, ಗದುಗಿನ ವಿಜಯ ಕಲಾಮಂದಿರ, ದಾವಣಗೆರೆಯ ವಿ.ವಿ. ಲಲಿತಕಲಾ ಮಹಾವಿದ್ಯಾಲಯ ಇವುಗಳನ್ನು ಬಿಟ್ಟರೆ ಉಳಿದೆಡೆ ಇಲ್ಲ. ಆದರೆ ಇಲ್ಲೂ ಕೂಡ ಶಿಲ್ಪಕಲೆಗೆ ಎರಡನೆ ದರ್ಜೆ, ವ್ಯವಸ್ಥಿತ ವಿಭಾಗ, ಅರ್ಹ ಅಧ್ಯಾಪಕರಿಲ್ಲ. ಹಾಗೆ ನೋಡಿದರೆ ನಮ್ಮ ಕನ್ನಡ ವಿ.ವಿ.ದ ವ್ಯಾಪ್ತಿಯಲ್ಲಿ ಬರುವ ಕಲಾ ಶಾಲೆಗಳ ಪೈಕಿ ಒಂದೆರಡನ್ನು ಬಿಟ್ಟರೆ ಬಾದಾಮಿ, ಚಿಕ್ಕಮಂಗಳೂರು, ಬೇರೆ ಶಾಲೆಗಳಲ್ಲಿ ಶಿಲ್ಪಕಲೆ ಕಲಿಸಲಾಗುತ್ತಿಲ್ಲ. ಇಲ್ಲೂ ಎಲ್ಲ ಮಾಧ್ಯಮ ಮತ್ತು ಶೈಲಿಗಳಲ್ಲಿ ಕಲಿಸಲಾಗುತ್ತಿಲ್ಲ. ಚಿತ್ರಕಲೆ ಮಾತ್ರ ಸಂಖ್ಯೆಯಲ್ಲಿ ಗುಣಮಟ್ಟದಲ್ಲಿ ಮತ್ತು ವೈವಿಧ್ಯತೆಯಲ್ಲೂ ಕೂಡ ಶಿಲ್ಪಕಲೆಗೆ ಹೋಲಿಸಿದರೆ ಸಿಂಹಪಾಲು ಹೊಂದಿದೆ ಎಂದು ಹೇಳಬಹುದು.

ಈ ರೀತಿಯ ಅಸಮತೋಲನಕ್ಕೆ ಕಾರಣಗಳೇನು? ಇದಕ್ಕೆ ಅನೇಕ ಕಾರಣಗಳಿವೆ ೧.ಆರ್ಥಿಕ ಕಾರಣಗಳು ೨. ಸಾಮಾಜಿಕ ಕಾರಣಗಳು ೩. ಸಾಂಸ್ಕೃತಿಕ ರಾಜಕಾರಣದ ಕಾರಣಗಳು ೪. ಸಾಂಸ್ಥಿಕ ಕಾರಣಗಳು ಹೀಗೆ ಕಾರಣಗಳನ್ನು ಪಟ್ಟಿ ಮಾಡಬಹುದು. ಚಿತ್ರಕಲೆಗೆ ಹೋಲಿಸಿದರೆ ಶಿಲ್ಪಕಲೆ ವೆಚ್ಚದಾಯಕ ಎಂದುಕೊಂಡಿರುವುದು. ಉದಾ: ಶಿಲ್ಪಕಲೆ ಎಂದರೆ ಅದು ಶಿಲೆ, ಮರ ಅಥವಾ ಲೋಹ ಅಥವಾ ಸಿಮೆಂಟ್ ಮಾಧ್ಯಮದಲ್ಲಿ ರಚಿಸಬೇಕು, ಮತ್ತು ಸಾಗಾಣಿಕೆಯೂ ವೆಚ್ಚದಾಯಕ ಅನ್ನುವುದು ಒಂದು ಕಾರಣ. ಸಾಮಾಜಿಕವಾಗಿ ಶಿಲ್ಪಕಲೆ ಸಾಂಪ್ರದಾಯಿಕ ಮನೆತನಗಳಿಂದ ಬಂದವರು ಅಥಾತ್ ನಿರ್ಧಿಷ್ಟ ಜನವರ್ಗದವರು ಮಾಡುವಂತದ್ದು ಎನ್ನುವ ಅಭಿಪ್ರಾಯ ಇನ್ನೂ ಜನಮಾನಸದಲ್ಲಿ ಉಳಿದುಕೊಂಡಿರುವುದು. ಇದರಿಂದ ಇತರ ವರ್ಗ ಅಥವಾ ಸಮಾಜದ ವಿದ್ಯಾರ್ಥಿಗಳು ಶಿಲ್ಪಕಲಿಕೆಗೆ ಬರದಿರುವುದು ಮತ್ತೊಂದು ಕಾರಣ.

ಪಾರಂಪಾರಿಕ (ವೃತ್ತಿ) ಕುಟುಂಬಗಳವರೂ ಸಹ ಶಿಲ್ಪಕಲೆ ನಮ್ಮ ವರ್ಗಕ್ಕೇ ಸೇರಿದ್ದು, ನಾವು ಮಾತ್ರ ಮಾಡಿದರೇ ಶ್ರೇಷ್ಠ, ಎಂದುಕೊಂಡ ಕೆಲವು (ಎಲ್ಲರೂ ಅಲ್ಲ) ಮನಸ್ಸುಗಳು (ಶಾಸ್ತ್ರಗಳೂ ಹಾಗೇ ಹೇಳಿವೆ). ಮತ್ತು ಸರಕಾರಗಳೂ ಈ ವಿಷಯದಲ್ಲಿ ಅಜ್ಞಾನವನ್ನೇ ಪ್ರದರ್ಶನ ಮಾಡುತ್ತ ಬಂದಿವೆ. ಸಾಂಸ್ಥಿಕವಾಗಿ ಹಣ, ಖರ್ಚು ಮಾಡದೇ ಸುಲಭದಲ್ಲಿ ಚಿತ್ರಕಲಾ ಶಿಕ್ಷಣ/ ಪದವಿಗಳನ್ನು ನೀಡುವ/ ಹಣಮಾಡುವಂತಹ/ ಅದರಲ್ಲೂ ಈ ದೂರ ಶಿಕ್ಷಣದ ಮೂಲಕ ಪದವಿಗಳನ್ನು ಮಾರಾಟ ಮಾಡುವ ದಂದಗೆ ತೊಡಗಿರುವುದು. ದೂರ ಶಿಕ್ಷಣ ಅಂತೂ ನಮ್ಮ ದೃಶ್ಯಕಲಾ ಶಿಕ್ಷಣದ ಪಾವಿತ್ರ್ಯ ಮತ್ತು ಘನತೆಯನ್ನೇ ಹಾಳುಮಾಡಿದೆ. ಏಕೆಂದರೆ ಈ ಮೂಲಕ ಪದವಿಗಳನ್ನು ಹಂಚುವವರದು ಹಣಮಾಡುವುದೇ ಏಕೈಕ ದಂದೆ ಆಗಿದೆ. ಹೀಗಿರುವಾಗ ರಾಚನಿಕ– ತಾಂತ್ರಿಕ ಸಾಧ್ಯತೆಗಳನ್ನು, ಕೌಶಲಗಳನ್ನು ವಿದ್ಯಾರ್ಥಿಗಳಿಗೆ ಕಲಿಸುವುದಾದರೂ ಹೇಗೆ ಸಾಧ್ಯ? ಹೇಳಿ? ಈ ರೀತಿಯ ಸವಾಲುಗಳು ನಮ್ಮ ಕಲಾಶಾಲೆಗಳು, ಕಲಾಶಿಕ್ಷಣದ ಮುಂದೆ ಇವೆ.

ಈ ಸಮಸ್ಯೆ ಅಥವಾ ಸವಾಲುಗಳನ್ನು ಎದುರಿಸಿ ಶಿಲ್ಪಕಲಾ ಶಿಕ್ಷಣವನ್ನು ಜನಪ್ರೀಯ ಗೊಳಿಸುವುದು ಹೇಗೆ? ಚಿಂತನೆ ಮಾಡಬೇಕಿದೆ. ನೋಡಿ ಈಗ ರಾಜ್ಯದಲ್ಲಿ ದೂರಶಿಕ್ಷಣದ ಮೂಲಕ ದೃಶ್ಯಕಲಾ ಶಿಕ್ಷಣ ಪದವಿಗಳನ್ನು ಹಂಚುತ್ತಿರುವವರು ಬಗ್ಗೆಯಾಗಲಿ– ನಿಜವಾದ ಕಳಕಳಿಯಿರುವವರಲ್ಲ! ಸ್ವತಃ (ಅಂಥವರು) ನಿಜವಾದ ಕಲಾವಿದರೂ ಅಲ್ಲ, ತಜ್ಞರೂ ಅಲ್ಲ! ನಿಜವಾದ ಕಳಕಳಿ ಇರುವ ಅಧ್ಯಾಪಕರು, ಕಲಾವಿದರು/ ಶಾಲೆಗಳವರು ಚಿತ್ರಕಲೆಯೊಂದಿಗೆ ಶಿಲ್ಪಕಲೆಯನ್ನು ಬೆಳೆಸಬೇಕಿದೆ. ಅದಕ್ಕಾಗಿ ಏನು ಮಾಡಬೇಕು ನಾನು ಕೆಲವು ಸೂಚನೆಗಳನ್ನು ಕೊಡುತ್ತೇನೆ. ಬಳಿಕ ಚರ್ಚೆ ಮಾಡೋಣ. ಶಿಲ್ಪಕಲೆ ಕಠಿಣ ಎಂಬುದನ್ನು ಬಿಡಬೇಕು. ಅದಕ್ಕಾಗಿ, ಶಿಲೆ, ಮರ, ಲೋಹದ , ಎರಕಗಳ ಬದಲಾಗಿ ತರಕಾರಿ, ಮೇಣ, ಮೃತ್ತಿಕೆಗಳಲ್ಲಿ, ಗುಜರಿ, ಹತ್ತಿ ನಾರು, ಮೊದಲಾದ ಸುಲಭ/ ಸರಳ ಮಾಧ್ಯಮಗಳಲ್ಲಿ ರಚಿಸುವುದನ್ನು ಹೇಳಿಕೊಡಬೇಕು.

ಯಾರು ಬೇಕಾದರೂ ಯಾವುದೇ ವರ್ಗದವರು ಶಿಲ್ಪಕಲೆ ಕಲಿಯಬಹುದು. ಶಿಲ್ಪಕಲಾ ಅಕಾಡೆಮಿಯಂತಹ ಸರಕಾರದ ಸ್ವಾಯುತ್ತ ಸಂಸ್ಥೆ ಮತ್ತು ಅಂತಹವುಗಳು ಸಮಾಜದ ಎಲ್ಲ ಜಾತಿ–ಜನವರ್ಗಗಳಿಗೂ ಸಂಬಂಧಿಸಿದವುಗಳೆಂಬುದನ್ನು ತಿಳಿ ಹೇಳಿ ಅಂತಹ ಸಂಸ್ಥೆ ಮತ್ತು ಸರಕಾರಗಳು ತಪ್ಪು ಹೆಜ್ಜೆ ಇಡದಂತೆ ಜಾಗ್ರತೆ ಮೂಡಿಸುವುದು ಆಗಬೇಕು.(ಜನಪರವಾಗದಿದ್ದರೆ ನಶಿಸುವುದು ನಿಶ್ಚಿತ). ಪೂರ್ವಾಗ್ರಹ/ ಮೂಢ ನಂಬಿಕೆ ಮತ್ತು ಭ್ರಮೆಗಳನ್ನು ಬಿಡುವುದು, ಬಿಡಿಸುವುದು ಮಾಡಬೇಕು. ಪಾರಂಪರಿಕ ವೃತ್ತಿ ಶಿಲ್ಪಿಗಳವರು ಕೂಡ ಹಳೆಯ ಶಾಸ್ತ್ರಗಳ, ಕಟ್ಟಳೆಗಳನ್ನು ಆಧುನಿಕತೆಯೊಂದಿಗೆ ಬೆರೆಸಿ ಪೂರ್ವಾಗ್ರಹಗಳಿಂದ ಮುಕ್ತರಾಗಿ ಜನಮುಖಿಯಾಗಬೇಕು ಮತ್ತು ಇತರ ಜನವರ್ಗದವರಿಗೂ ಶಿಲ್ಪಕಲೆ ಕಲಿಯುವಂತೆ ಪ್ರೇರೇಪಿಸುವುದು ಮುಖ್ಯ.

ಸಾಂಸ್ಕೃತಿಕ ರಾಜಕಾರಣ: ಇದನ್ನು ತಿದ್ದುವುದು ಕಷ್ಟ, ಇದು ಎಷ್ಟೋ ಅವಾಂತರಗಳನ್ನು ಸೃಷ್ಟಿಸಿದೆ. ಎಂಥೆಂತಹವರಿಗೋ ರಾಜ್ಯೋತ್ಸವ ಮತ್ತಿತರ ಪ್ರಶಸ್ತಿ/ ಫೆಲೋಷಿಪ್ ಕೊಡುವುದು. ಓಟ್ ಬ್ಯಾಂಕ್ ರಾಜಕಾರಣದ ಕಾರಣಕ್ಕಾಗಿ ಮನಸಾಕ್ಷಿಯನ್ನೇ

ಗಾಳಿಗೆ ತೂರುವಂತಹ ಕೆಲಸವನ್ನು ಸ್ವತಃ ಸರಕಾರಗಳೂ/ ರಾಜಕಾರಣಿಗಳೂ ಮಾಡುತ್ತ ಬಂದಿವೆ. ಸಾಂಸ್ಕೃತಿಕ ಲೋಕದವರೂ ಇದಕ್ಕೆ ಹೊರತಲ್ಲ.

ಸಾಂಸ್ಥಿಕ: ಸಂಸ್ಥೆಗಳು ಹಣ ಖರ್ಚು ಮಾಡಬೇಕು. ಶಿಲ್ಪಕಲೆ ಬೆಳಸುವುದಕ್ಕೆ ಬೇಕಾದ ಎಲ್ಲ ಅನುಕೂಲತೆಗಳನ್ನು ಹೊಂದಬೇಕು. ಅದಕ್ಕೆ ಬೇಕಾದ ಸಂಪನ್ಮೂಲಗಳನ್ನು ಕ್ರೂಢಿಕರಿಸಬಕು. ಮತ್ತು ತಜ್ಞರನ್ನು ಬಳಸಿಕೊಳ್ಳಬೇಕು. ಅಂದಾಗ ಮಾತ್ರ ಶಿಲ್ಪಕಲೆಯೂ ಚಿತ್ರಕಲೆಯ ಜೊತೆ ಜೊತೆ ಹೆಜ್ಜೆ ಹಾಕಬಲ್ಲದು.

ಶಿಲ್ಪಕಲೆ ಯಾವುದೇ ಮಾಧ್ಯಮದಲ್ಲಿರಲಿ/ ತಂತ್ರದಲ್ಲಿರಲಿ ಮೊದಲು ಅದು ರಚಿಸಿದವನಿಗೆ ಸಂತೋಷ ಕೊಡಬೇಕು ಬಳಿಕ ಆಸ್ವಾದಕನಿಗೆ ಸಂತೋಷ ಕೊಡಬೇಕು. ಅಷ್ಟಕ್ಕೆ ಅದರ ಸಾಫಲ್ಯ ಸಾರ್ಥಕ ಎಂದೇ ಹೇಳಬೇಕು. ಅದಕ್ಕೆ ಮಾಧ್ಯಮ/ ಶೈಲಿ ಶಾಸ್ತ್ರಗಳ ಯಾವ ಹಂಗೂ ಇಲ್ಲ. ನನ್ನ ಅನುಭವವನ್ನು ನನಗೆ ತೋಚಿದಂತೆ ಅನುಕೂಲಕರವಾದ ಮಾಧ್ಯಮದಲ್ಲಿ ಅಭಿವ್ಯಕ್ತಿಸಿದರೆ ಆಯ್ತು. ಕೆತ್ತುವುದರ ಮೂಲಕ, ಒತ್ತುವುದರ ಮೂಲಕ, ಮೆತ್ತುವುದರ ಮೂಲಕ ಅಥವಾ ಎರಕ ಹೊಯ್ಯುವುದರ ಮೂಲಕ ಅಥವಾ ವಸ್ತುಗಳನ್ನು ಹೊಂದಿಸುವುದರ ಮೂಲಕ ಹೇಗಾದರೂ ಸರಿ. ಅದು ಒಂದು ಭಾವಕ್ಕೆ ಪೂರಕವಾಗಿ ತ್ರಿಮಾನದಲ್ಲಿ ರೂಪುಗೊಂಡಿದ್ದರೆ ಸಾಕು ಅದು 'ಶಿಲ್ಪ' ಅದು ಉಬ್ಬು ಶಿಲ್ಪ ಅಥವಾ ದುಂಡು ಶಿಲ್ಪ ಏನಾದರೂ ಆಗಿರಲಿ, ನಾವು ಸಂಪ್ರದಾಯ ಶಿಲ್ಪಕಲೆ ಎಂದು ಹೇಳುತ್ತೇವಲ್ಲ! ಅಲ್ಲಿಯೂ ಕಾಲಕಾಲಕ್ಕೆ ರಾಜರಿಂದ ರಾಜರು/ ಅರಸು ಮನೆತನಗಳಿಂದ ಅರಸುಮನತನಕ್ಕೆ ಅವರವರ ಅಭಿರುಚಿಗೆ ತಕ್ಕಂತೆ ಬದಲಾವಣೆ ಮತ್ತು ಹೊಸತನಗಳು ಆಗಿರುವುದನ್ನು ಕಾಣುತ್ತೇವೆ. ವಸ್ತು, ಶೈಲಿ, ಮಾಧ್ಯಮ ಮತ್ತು ತಂತ್ರಗಳಲ್ಲೂ ವೈವಿಧ್ಯತೆ ಕಾಣುತ್ತವೆ. ಉದಾ: ಬಾದಾಮಿಯ ಶಿಲ್ಪಗಳಿರುವುದು ಮರಳು ಶಿಲೆಯಲ್ಲಿ; ಹೊಯ್ಸಳರದು-ಕೃಷ್ಣ ಶಿಲೆ; ವಿಜಯನಗರ ಶಿಲ್ಪಗಳದ್ದು ಛಪ್ಪಡಿ ಕಲ್ಲು.

ಇಲ್ಲಿ ಕಾಲದ ಅಂತರವೂ ಇದೆ ಹಾಗೇ ಮಾಧ್ಯಮ, ವಸ್ತು ಮತ್ತು ತಂತ್ರಗಳಲ್ಲೂ ಅಜಗಜಾಂತರ ವ್ಯತ್ಯಾಸವಿದೆ. ಆಗಲೂ ಸಂಘರ್ಷಗಳು ನಡೆದಿವೆ. ಆದರೆ ಈಗ ಅವೆಲ್ಲ ಒಟ್ಟಾಗಿಯೇ ನಮ್ಮ ಸಂಪ್ರದಾಯ. ಕಲಾ ಸಂಪತ್ತು.

ಟಿಪ್ಪಣಿಗಳು

೧. ಶಿಲ್ಪಕಲಾ ಸಂಭ್ರಮ-೨೦ ಕರ್ನಾಟಕ ಶಿಲ್ಪಕಲಾ ಅಕಾಡಮಿ : ಕ್ಯಾಟಲಾಗ್ ಮಾರ್ಚ್-೨೦೧೬ ಕರ್ನಾಟಕ ಶಿಲ್ಪಕಲಾ ಅಕಾಡಮಿ ಮೈಸೂರಲ್ಲಿ ಸಮಕಾಲೀನ ಶಿಲ್ಪಕಲಾ ಶಿಬಿರ ಹಮ್ಮಿಕೊಂಡಿತ್ತು. ಕಟ್ ಪೇಸ್ಟ ಫಾರ್ಮು ಶಿಲ್ಪ ಸಂಚಲನ ಪುಟ ೧೬.೧೭.೧೮

೩). ಕೆ. ವಿ. ಸುಬ್ರಹ್ಮಣ್ಯಂ ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ ಪುಟ- ೮೭-೮೮

೪. ವಿವರಣೆಗೆ ನೊಡಿ : ಕೆ.ವಿ. ಸುಬ್ರಹ್ಮಣ್ಯಂ : ಕ.ಶಿ. ಕ. ಸಮಕಾಲೀನ ದೃಶ್ಯ ಪುಟ-೧೧೪-೧೧೫. ವಿವರಗಳಿಗೆ ನೋಡಿ : ಕೆ.ವಿ.ಸು, ಕ.ಶಿ.ಕ.ಸ. ದೃಶ್ಯ. ಪುಟ-೧೧೯-೧೨೦.

೫. Contemporary Sculpture's forum: An exhibition of recent contemporary culpture's-2008: venue: Karnataka chitrakala parishat kumarkrupa oad, B'lore-01

೬. ಶಿಲ್ಪಕಲಾ ಪ್ರದರ್ಶನ : ಶಿಲ್ಪಕಲಾ ಅಕಾಡೆಮಿ ಕ್ಯಾಟಲಾಗ್-೨೦೦೨

೭. ಹತ್ತನೇ ವಾರ್ಷಿಕ ಶಿಲ್ಪಕಲಾ ಪ್ರದರ್ಶನ-೨೦೧೪, ಕರ್ನಾಟಕ ಶಿಲ್ಪಕಲಾ ಅಕಾಡಮಿ ಕ್ಯಾಟಲಾಗ್

ಅಧ್ಯಾಯ: ಒಂಭತ್ತು

ಸಮಕಾಲೀನ ಶಿಲ್ಪವನಗಳು

ಕರ್ನಾಟಕದ ಕೆಲವು ಭಾಗಗಳಲ್ಲಿ ನಗರ ಸೌಂದರ್ಯೀಕರಣ ಮತ್ತಿತರ ಕಾರಣಗಳ ಹಿನ್ನೆಲೆಯಲ್ಲಿ ಉದ್ಯಾನಗಳನ್ನು ನಿರ್ಮಿಸಲಾಗಿದೆ. ಅಂಥಹ ಉದ್ಯಾನ ವನಗಳಲ್ಲಿ ಶಿಲ್ಪವನಗಳೂ ಸೇರಿವೆ. ಬಹುತೇಕ ಶಿಲ್ಪವನಗಳಲ್ಲಿ ನೈಜ ಶೈಲಿಯ ಪಾಣಿ, ಪಕ್ಷಿ ಸಂಕುಲಗಳು, ಮಕ್ಕಳಾಟದ ನಿರ್ಮಿತಿಗಳನ್ನು ಒಳಗೊಂಡು ಪ್ರವಾಸಿಗರನ್ನು ರಂಜಿಸುವ ಸಾಮಾನ್ಯ ನಲಯ ರಚನಗಳಾಗಿವೆ. ಆದರೆ ಅಪರೂಪಕ್ಕೆ ಕಲವು ಶಿಲ್ಪವನಗಳು ಮಹತ್ವಾಕಾಂಕ್ಷೆ ನಿರ್ದಿಷ್ಟ ದೃಷ್ಟಿ-ಧೋರಣೆಗಳನ್ನು ಇಟ್ಟುಕೊಂಡು ಅಸ್ತಿತ್ವಕ್ಕೆ ಬಂದಂಥಹವುಗಳಾಗಿವೆ. ಅವುಗಳಲ್ಲಿ ಬೆಂಗಳೂರಿನ ಕನ್ನಡ ಭವನದ ಶಿಲ್ಪವನ, ರವೀಂದ್ರ ಕಲಾಕ್ಷೇತ್ರದ ಶಿಲ್ಪವನ, ಬೆಂಗಳೂರು ವಿಶ್ವ ವಿದ್ಯಾಲಯ ಪಕ್ಕದ ಕಲಾಗ್ರಾಮ, ತುಮಕೂರು ವಿಶ್ವವಿದ್ಯಾಲಯದ ಹೊರ ವಲಯದ 'ಶಿಲ್ಪವನ', ದಾವಣಗೆರೆ ವಿ.ವಿ. ಲಲಿತಕಲಾ ಮಹಾವಿದ್ಯಾಲಯದ 'ಶಿಲ್ಪವನ', ಕ.ವಿ. ಹಂಪಿಯ ಬಾದಾಮಿಯ ಶಾಲೆಯ ಶಿಲ್ಪವನ, ಮೈಸೂರಿನ ಕಾವಾ ಹಾಗೂ ಕಲಾನಿಕೇತನ ಸ್ಕೂಲ್ ಆರ್ಟ್‌ನ 'ಶಿಲ್ಪವನ' ಕಲಬುರ್ಗಿಯ 'ದಿ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ' ಶಿಲ್ಪವನ', ಚಿಕ್ಕಮಂಗಳೂರಿನ ಕಲಾನಿಕೇತನದ ' ಶಿಲ್ಪವನ', ಬೆಂಗಳೂರಿನ ಮಾಡರ್ನ 'ಆರ್ಟ್ ಗ್ಯಾಲರಿಯ' 'ಶಿಲ್ಪವನ' ಹಾಗೂ ಕರ್ನಾಟಕ ಚಿತ್ರಕಲಾ ಪರಿಷತ್ತಿನ ' ಶಿಲ್ಪವನ', ಬಳ್ಳಾರಿಯ ಜಿಲ್ಲೆಯ ತೋರಣಗಲ್ಲಿನ 'ಜಿಂದಾಲ್' ನ

'ಶಿಲ್ಪವನ', ಮೂಡಬಿದಿರೆಯ 'ಆಳ್ವಾಸ್ ಶಿಕ್ಷಣ' ಸಂಸ್ಥೆಯ 'ಶಿಲ್ಪವನ', ಮಂಗಳೂರಿನ ' ಮಹಾಲಸಾ ಸ್ಕೂಲ್ ಆಫ್ ಆರ್ಟ್ಸ್' ನ 'ಶಿಲ್ಪವನ', ಗದುಗಿನ ಹುಲಕೋಟಯ 'ರಾಜೇಶ್ವರಿ ಶಿಕ್ಷಣ ಸಂಸ್ಥೆಯ ಆವರಣದ 'ಶಿಲ್ಪವನ', ಕಲಬುರಗಿಯ ಶ್ರೀ ಶಿವಶರಣ ಉಪ್ಪಿನ್ ಅವರ ತೋಟದ ಮನೆಯ 'ಆವರಣದ 'ಶಿಲ್ಪವನ' ಹಾಗೂ ಶ್ರೀ ಗುರು ವಿದ್ಯಾಪೀಠದ ಆವರಣದ' ಶಿಲ್ಪವನ', ಧಾರವಾಡದ ಆರ್ಟ್ ಗ್ಯಾಲರಿಯಲ್ಲಿರುವ 'ಶಿಲ್ಪವನ', ಶಿವಮೊಗ್ಗ ಜಿಲ್ಲೆಯ ಕುಪ್ಪಳ್ಳಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ' ಶಿಲ್ಪವನ', ಬೆಳಗಾವಿಯ ಮಿನಿ

ವಿಧಾನಸೌಧದ 'ಶಿಲ್ಪವನ', ಉಡುಪಿಯ 'ಜಂಗಮ ಮಠ ಸ್ಕೂಲ್ ಆಫ್ ಆರ್ಟ್ಸ' 'ಶಿಲ್ಪವನ'ಗಳಲ್ಲದೆ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಬಸ್‌ನಿಲ್ದಾಣ ಶಹಾಪುರ, ಕಲಬುರಗಿಯ ಬಸ್ ನಿಲ್ದಾಣ, ವಿಜಯಪುರದ ಬಸ್ ನಿಲ್ದಾಣ, ರಾಯಚೂರು, ಯಾದಗಿರಿಗಳ ಬಸ್ ನಿಲ್ದಾಣಗಳಲ್ಲೂ ಶಿಲ್ಪವನಗಳನ್ನು ಕಾಣಬಹುದು. ಈ ಎಲ್ಲ ಶಿಲ್ಪವನಗಳಲ್ಲಿ ಬಹುಪಾಲು ಸಮಕಾಲೀನ ಶಿಲ್ಪಗಳೇ ಸೃಷ್ಟಿಯಾಗಿದ್ದು ವಿವಿಧ ಮಾಧ್ಯಮಗಳನ್ನು ದುಡಿಸಿಕೊಳ್ಳಲಾಗಿದೆ.

ಕನ್ನಡ ಭವನದ ಸಮಕಾಲೀನ ಶಿಲ್ಪವನ

ಕರ್ನಾಟಕ ರಾಜ್ಯದ ರಾಜಧಾನಿಯಾಗಿರುವ ಬೆಂಗಳೂರಲ್ಲಿ, ಸಾಂಸ್ಕೃತಿಕ ಲೋಕದ ಹೆಮ್ಮೆಯ ಕಿರೀಟವೆಂಬಂತೆ 'ಒಂದು ಸಾಂಸ್ಕೃತಿಕ ಸಮುಚ್ಛಯ (ಕಟ್ಟಡ) 'ಕನ್ನಡ ಭವನ' ತಲೆಎತ್ತಿ ನಿಂತಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಾನಾಲಯ ಸೇರಿದಂತೆ ಅನೇಕ ಅಕಾಡೆಮಿಗಳು ಪ್ರಾಧಿಕಾರಗಳು ಒಟ್ಟಾರೆ ಸಾಂಸ್ಕೃತಿಕ ಲೋಕದ ಅನೇಕ ಘಟಕಗಳು ಈ ಸಮುಚ್ಛಯದಲ್ಲಿ ನೆಲಗೊಂಡು ನಾಡಿನ ಸಾಂಸ್ಕೃತಿಕ ಸಮಯನ್ನು ಮಾಡುತ್ತಲಿವೆ. ಸದರಿ

'ಕನ್ನಡ ಭವನ' ಕಟ್ಟಡವು ೧೯೯೭-೯೮ರ ಸಾಲಿನಲ್ಲಿ ನಿರ್ಮಾಣಗೊಂಡಾಗ ಅದರ ಲೋಕಾರ್ಪಣೆ ಸಂದರ್ಭದಲ್ಲಿ 'ಆವರಣ ಸೌಂದರ್ಯದ ದೃಷ್ಟಿಯಿಂದ 'ಶಿಲ್ಪವನವನ್ನು' ಆರಂಭಿಸಲಾಯಿತು. ತನ್ನಿಮ್ಮಿತ್ತ ನಾಡಿನ ಅನೇಕ ಪ್ರಖ್ಯಾತ ಸಮಕಾಲೀನ ಶಿಲ್ಪಿಗಳಿಂದ ನಿರ್ಮಿಸಲ್ಪಟ್ಟ ಶಿಲ್ಪಕಲಾಕೃತಿಗಳನ್ನು ಈ ವನದಲ್ಲಿ ಶಾಶ್ವತ ಪ್ರದರ್ಶನಕ್ಕೆ ವ್ಯವಸ್ಥೆಗೊಳಿಸಲಾಗಿದೆ.

ಬಸ್ ನಿಲ್ದಾಣಗಳ ಶಿಲ್ಪವನಗಳು

ಮೈಸೂರು ಶಿಲೆ, ಚಪ್ಪಡಿ ಶಿಲೆಗಳಲ್ಲದೆ, ಫೈಬರ್, ಗುಜರಿ ವಸ್ತುಗಳು ಕರ್ನಾಟಕ ರಾಜ್ಯ ರಸ್ತೆಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿನ ಶಿಲ್ಪವನಗಳ ವಿಶೇಷವೆಂದರೆ ಸದರಿ ಸಂಸ್ಥೆಯಲ್ಲಿನ ಗುಜರಿ ವಸ್ತುಗಳನ್ನು ಅಂದರೆ ಬಸ್‌ಗಳ ಬಿಡಿಭಾಗಗಳನ್ನು ಬಳಸಿಕೊಂಡು ಕಲಾವಿದರು ವಿವಿಧ ಬಗೆಯ ಶಿಲ್ಪಗಳನ್ನು ರಚಿಸಿರುವುದು. ನಿತ್ಯ ಸಾವಿರಾರು ಜನ ಓಡಾಡಿಕೊಂಡು ಹೋಗುವ ಬಸ್ ನಿಲ್ದಾಣದಂತಹ ಸಾರ್ವಜನಿಕ ಸ್ಥಳಗಳಲ್ಲಿ ಇಂತಹ ಶಿಲ್ಪವನಗಳು ಅನೇಕ ದೃಷ್ಟಿಯಿಂದ ಪ್ರಯೋಜನಕಾರಿಯೇ ಮುಖ್ಯವಾಗಿ ಇಲ್ಲಿನ ಶಿಲ್ಪಗಳು ಮಕ್ಕಳಿಂದ ವಯೋವೃದ್ಧರ ವರಗೆ ಶ್ರೀ ಸಾಮಾನ್ಯರೆಲ್ಲರಿಗೂ ರಂಜನೆ ನೀಡುವಂತಹ ಶಿಲ್ಪಗಳೊಂದಿಗೆ ಅಮೂರ್ತ ಶೈಲಿಯ ಶಿಲ್ಪಗಳೂ ಗಮನ ಸೆಳೆಯುತ್ತವೆ. ನೆಗೆಯುತ್ತಿರುವ ಕುದುರೆ, ಗರಿಬಿಚ್ಚಿ ನರ್ತಿಸುವ ನವಿಲು, ವಿಹರಿಸುತ್ತಿರುವ ಬಾತುಕೋಳಿಗಳು, ಮಧೋನ್ಮತ್ತ ಗೂಳಿ, ಮೇಕೆ, ಎತ್ತು, ಜಿಂಕೆ, ಆಮೆ, ಮೊದಲಾದ ಪಾಣಿ ಪಕ್ಷಿಗಳೂ ಗುಜರಿ ವಸ್ತುಗಳಿಂದ ಸೃಷ್ಟಿಯಾಗಿವೆ. ಕಲಾವಿದರಿಗೂ ಇಂತಹ ಶಿಲ್ಪಗಳ ರಚನೆಯಿಂದ ಉತ್ತೇಜನ ದೊರಕಿದೆ ಎಂದು ಹೇಳಿದರೆ ತಪ್ಪಾಗಲಾರದು. ಲೋಹ, ಲೋಹದ ಹಾಳೆ ಮೊದಲಾದ ಮಾಧ್ಯಮಗಳಲ್ಲಿ ರಚಿಸಲಾದ ಶಿಲ್ಪಗಳು ಇಲ್ಲಿ ಪ್ರದಶನಗೊಂಡಿವ.

ಹಿರಿಯ ಶಿಲ್ಪಿ ವೆಂಕಟಾಚಲಪತಿಯವರ ಶಿಲ್ಪ 'ಸಾಂಗತ್ಯ' ಪರಸ್ಪರ ಸಹಕಾರ ಮನೋಭಾವದಿಂದ ಕೂಡಿ ಬಾಳಿದರೆ ವರ್ಗಸುಖವೆಂಬುದನ್ನು ಸಾಂಕೇತಿಕ ಆಕಾರದಲ್ಲಿದ್ದರೂ ಪರಿಣಾಮಕಾರಿಯಾಗಿ ಅರುಹುತ್ತದೆ. ಕುತೂಹಲದಿಂದ ನೋಡುಗರತ್ತ ನೋಡುತ್ತ ನಿಂತಿರುವ ಹಳ್ಳಿಯ ಮುಗ್ಧ ಮುದ್ದು ಮಕ್ಕಳ ಜೋಡಿ ಶಿಲ್ಪವನ್ನು ಜಾನ್‌ದೇವರಾಜ್ ರಚಿಸಿರುವರು. ಹಾಗೇ ಧ್ಯಾನಸ್ಥ ರೀತಿಯಲ್ಲಿ ನಿಂತಿರುವ ಮನುಷ್ಯನ ಶಿಲ್ಪವನ್ನು ಎಂ.ಸಿ. ರಮೇಶ್ ರಚಿಸಿರುವರು. ಈ ಮೂರು ಶಿಲ್ಪಗಳು ಮೈಸೂರು ಮೃದು ಶಿಲೆಯಲ್ಲಿ ರಚನೆಯಾಗಿವೆ.

ಬಿಸಿಲ ನಾಡು ಕಲಬುರಗಿಯಿಂದ ತಂದು ಕಡೆದು ನಿಲ್ಲಿಸಿರುವ 'ಶಿವಾನಂದ ಬಂಟನೂರರ ಶಿಲ್ಪ' 'ಕನ್ನಡಿಗ' ಕನ್ನಡ ಭವನದಡೆಗೆ ಮುಖಮಾಡಿ ನಿಂತಿದೆ. ನಯ ಹಾಗೂ ದೊಗರು ಮೈವಳಿಕೆ, ಸೂರ್ಯ- ಚಂದ್ರರ ಕಣ್ಣುಗಳಾಗಿರುವ ಈ ಶಿಲ್ಪ 'ಆಚಂದ್ರಾರ್ಕವಾಗಿ' ತನ್ನ ಘನತೆಯನ್ನು ಬಿಂಬಿಸುವಂತಿದೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ವಿದ್ಯಾರಣ್ಯ ಆವರಣದಲ್ಲಿ ವಿದ್ಯಾವಿದ್ಯಾಲಯದ ಆರಂಭ (೧೯೯೧)ದ ದಿನಗಳಲ್ಲಿ ಮಹತ್ವಾಕಾಂಕ್ಷೆಯಿಂದ ಉನ್ಮುಖವಾದ 'ಕನ್ನಡ ವಿಶ್ವವಿದ್ಯಾಲಯ ಶಿಲ್ಪವನ' ಈಗ ಬೃಹತ್ತಾಗಿ ಬೆಳೆದಿದೆ. ಆದಿ ಕುಲಪತಿ ಕೇವಲ ಮೂರು ಎಕರೆ ಪ್ರದೇಶದಲ್ಲಿ 'ಶಿಲ್ಪವನ' ಎಂದು ಗುರುತಿಸಿ ಶಿಲ್ಪ ಶಿಬಿರಗಳನ್ನು ನಡೆಸಿ ಶಿಲ್ಪ ಕಲಾಕೃತಿಗಳನ್ನು ಪ್ರತಿಷ್ಠಾಪಿಸಿದರು. ಹಂತ ಹಂತವಾಗಿ ಇದನ್ನು ಅಭಿವೃದ್ಧಿ ಪಡಿಸುತ್ತ ಬರಲಾಗಿದೆಯಾದೂ ೧೯೯೫-೯೬ ರಲ್ಲಿ ನಡೆದ ಅಂತರಾಷ್ಟ್ರೀಯ ಶಿಲ್ಪ ಶಿಬಿರಗಳು, ನಾಲ್ಕಾರು ರಾಜ್ಯಮಟ್ಟದ ಶಿಲ್ಪ ಶಿಬಿರಗಳಲ್ಲಿ ಅರಳಿದ ಶಿಲ್ಪಕಲಾಕೃತಿಗಳೆಲ್ಲ ವಿದ್ಯಾರಣ್ಯ ಆವರಣದಲ್ಲಿ ಅಲ್ಲಲ್ಲಿ ಪ್ರತಿಷ್ಠಾಪನೆಗೊಂಡು ಇಡೀ ಆವರಣವೇ 'ಶಿಲ್ಪವನವಾಗಿ' ಮಾಡಲ್ಪಟ್ಟಿದೆ ಎಂದರೆ ಅತಿಶಯೋಕ್ತಿಯಲ್ಲ.

ಆದಿ ಕುಲಪತಿಗಳ ನಂತರ ಬಂದ ಡಾ. ಎಂ. ಎಂ. ಕಲಬುರಗಿ, ಡಾ. ಎಚ್. ಜೆ. ಲಕ್ಕಪ್ಪಗೌಡ, ಡಾ.ಬಿ.ಎ. ವಿವೇಕ ರೈ, ಡಾ. ಕೆ. ವಿ. ನಾರಾಯಣ, ಡಾ. ಎ. ಮುರಿಗೆಪ್ಪ, ಡಾ. ಹಿ. ಚಿ. ಬೋರಲಿಂಗಯ್ಯ ಹಾಗೂ ಡಾ. ಮಲ್ಲಿಕಾ ಎಸ್. ಘಂಟಿ ಅವರ ಕಾಲದಲ್ಲಿ ಶಿಲ್ಪವನ ಹಂತಹಂತವಾಗಿ ಬೆಳವಣಿಗೆಯನ್ನು ಕಂಡಿದೆ.

ಶಿಲ್ಪವನದಲ್ಲಿ ಹೊರದೇಶದ ಶಿಲ್ಪಿಗಳು ರಚಿಸಿದ ಧ್ಯಾನಸ್ಥೆ ಮನುಷ್ಯ ಮುಖವನ್ನು ಹೊತ್ತ ಆಮೆ, ಶಿಲೆಯ ನೈಸರ್ಗಿಕ ಆಕಾಲಕ್ಕೆ ತಕ್ಕಂತೆ ಸೃಷ್ಟಿಯಾಗಿರುವ ಹುಲಿ, ಸಿಂಹಗಳು, ತನ್ನ ಸಂಗಾತಿಯನ್ನು ನುಗ್ಗುತ್ತಿರುವ ಗೂಳಿ, ತಿಮಿಂಗಲ, ನೀರೊಳಗಿಂದ ನಭಕ್ಕ ನಗಯುತ್ತಿರುವ ಮಿನು, ಬಿಸಿಲಿಗ ಬಾಯಾರಿ, ಹಸಿರು ಹುಲ್ಲು ಹಾಸಿನ ಮೇಲೆ ಪ್ರಾಣ ಬಿಡುತ್ತಿರುವ ಗಿಳಿ, ಕುಮಾರ ರಾಮನ ಉಬ್ಬು ಶಿಲ್ಪ, ಹೊರ ಹೊತ್ತ ಮಹಿಳೆ, ಹೀಗೆ ಹತ್ತು ಹಲವಾರು ವೈವಿಧ್ಯಮಯ ಶಿಲ್ಪಗಳು ಕಂಗೋಳಿಸುತ್ತವೆ. ಶಿಲ್ಪಿಗಳ ಪ್ರತಿಭೆಗ ಕನ್ನಡಿ ಹಿಡಿದಂತಿವೆ.

ಹಂತ ಹಂತವಾಗಿ ಬೆಳವಣಿಗೆ ಕಂಡಿರುವ ಈ ಶಿಲ್ಪವನದಲ್ಲಿ ಆಗಾಗ ನಡೆದ ಶಿಲ್ಪಕಲಾ ಶಿಬಿರಗಳಲ್ಲಿ ಸೃಷ್ಟಿಯಾದ ಶಿಲ್ಪ ಕಲಾಕೃತಿಗಳು ವನಕ್ಕೆ ಸೇರ್ಪಡೆಯಾಗುತ್ತ ಬಂದಿವೆ. ೨೦೧೪ರಲ್ಲಿ ಡಾ. ಹಿ.ಚಿ. ಬೋರಲಿಂಗಯ್ಯ ಕುಲಪತಿಯಾಗಿದ್ದಾಗ, ನಡೆದ ರಾಜ್ಯ ಮಟ್ಟದ ಶಿಲ್ಪಕಲಾ ಶಿಬಿರದಲ್ಲಿ ಸುಮಾರು ಹದಿನಾರು ಶಿಲ್ಪಗಳು ಸೃಷ್ಟಿಯಾಗಿದ್ದು ಅವೆಲ್ಲವುಗಳನ್ನು ಈ ಶಿಲ್ಪವನದಲ್ಲಿ ಪ್ರತಿಷ್ಠಾಪಿಸಲಾಗಿದೆ.

ಆದಿ ಕುಲಪತಿ ಡಾ. ಚಂದ್ರಶೇಖರ ಕಂಬಾರರ ಕಾವ್ಯ ಮತ್ತು ಕಾದಂಬರಿಗಳಾಧಾರಿತವಾಗಿ ಸೃಷ್ಟಿಯಾದ ಈ ಶಿಲ್ಪಗಳು ವೈವಿಧ್ಯಮಯ ಅನುಭವ ನೀಡುತ್ತವೆ.

ಶಿವಾನಂದ ಬಂಟನೂರರ 'ಸಿಂಗಾರವ್ವ ಮತ್ತು ಅರಮನೆ' , ಕೃಷ್ಣಗೌಡರ ' ವಿರಹಿ', ಮಹಾಂತೇ ಫಲದಿನ್ನಿಯವರ 'ಕಾಡುಕುದುರೆ', ನಿಂಗಪ್ಪ ಕೇರಿಯವರ 'ಆಪೋಷಣ', ಮಹಾಮುನಿ ಮಲ್ಲಿಕಾರ್ಜುನರ 'ಚಲುವ', ಮೊಹನ್ರಾವ್ ಪಾಂಚಾಳರ 'ನವಿಲೆ ನವಿಲೆ', ದಾನಯ್ಯ ಚೌಕಿಮಠರ 'ತಾಯಿತತ್ವ', ರಾಘವಾಚಾರಿಯವರ 'ಬೆಳ್ಳಿ ಮೀನು' ಅಲ್ಲದೆ ಮಂಜುನಾಥ ಕಂಚಗಾರ, ಬಸಮ್ಮ ನರಗುಂದ ಇವರೆಲ್ಲರ ಶಿಲ್ಪಗಳು 'ಮರಳು ಶಿಲೆಯಲ್ಲಿ ಅರಳಿ, ಶಿಲ್ಪವನದ ಅರ್ಥವಂತಿಕೆಯನ್ನು ವಿಸ್ತಾರಗೊಳಿಸಿದೆ.

ಇದೇ ಕುಲಪತಿಗಳ ಅವಧಿಯಲ್ಲಿ ಶಿಲ್ಪವನದ ಹತ್ತಿರವಿರುವ ಬೃಹತ್ ಬಂಡೆಗಳಲ್ಲಿ' ಸಾಗರ ಶಿಲ್ಪ' ಅರಳಿದವು. ೨೦೧೫ ರಲ್ಲಿನ ಈ ಶಿಬಿರದಲ್ಲೂ ಸುಮಾರು ಹದಿನಾರು ಜನ ಶಿಲ್ಪಿಗಳು, ಹದಿನಾರು ಜನ ಸಹಾಯಕ ಶಿಲ್ಪಿಗಳು ಭಾಗವಹಿಸಿ ಹತ್ತಾರು ಶಿಲ್ಪಕಲಾ ಕೃತಿಗಳನ್ನು ರಚಿಸಿರುವರು. ಆವರಣದಲ್ಲಿಯ ನೈಸರ್ಗಿಕವಾಗಿ ಸುಂದರ ಆಕಾರಗಳಲ್ಲಿ ಹೊಂದಿದ ಬೃಹತ್ ಗ್ರಾನೈಟ್ ಶಿಲೆಗಳಲ್ಲಿ ಮತ್ಸ್ಯ ಕಪ್ಪೆ, ತಿಮಿಂಗಲು, ಕಪ್ಪೆಚಿಪ್ಪು, ಶಂಖ, ಅಮೀಬಾ, ಮತ್ಸ್ಯ ಕನ್ಯೆ, ನೀರ್ಗುದುರೆ, ಆಮೆ ಮೊದಲಾದ ಶಿಲ್ಪಗಳು ಬೃಹತ್ ಸೃಷ್ಟಿಯಾಗಿದ್ದು ಭವ್ಯವೆನಿಸುತ್ತವೆ. ವಿಶೇಷವೆಂದರೆ ಈ ಶಿಬಿರದಲ್ಲಿ ಎಲ್ಲ ಕಲಾವಿದರೂ ಸೇರಿ ಎಲ್ಲ ಶಿಲ್ಪಗಳನ್ನು ರಚಿಸಿದುದು.

ಅಂತರಾಷ್ಟ್ರೀಯ 'ಶಿಲ್ಪ ಶಿಬಿರದಲ್ಲಿ' ಬೃಹತ್ತಾದ ಮತ್ತು ತೀವ್ರ ವೈಚಾರಿಕ ಹಾಗೂ ಹೊಸ ದೃಷ್ಟಿಕೋನಗಳಿಂದ ಕೂಡಿದ ಶಿಲ್ಪಗಳು ರಚನೆಯಾಗಿದ್ದು, ನಮ್ಮ ಕಲಾವಿದರಿಗೆ ಹೊಸ ಅನುಭವವನ್ನೇ ನೀಡಿದವು. ಮಳಗೆ 'ಸಂಬಂಧಿಸಿದ ಶಿಲ್ಪ', 'ಡಾಪ್ಸ್ ತನ್ನ ಸರಳತೆ ಮತ್ತು ಎತ್ತರದಿಂದ ಗಮನ ಸೆಳೆಯುತ್ತದಲ್ಲದೆ ಸ್ಥಳೀಯ ಗ್ರಾನೈಟ್ ಶಿಲೆಯ ಮೂರು ಬೃಹತ್ ಕಂಬಗಳನ್ನು ಬಳಸಿ ರಚಿಸಿದುದು ಅದರ ಭವ್ಯತೆಗೂ ಸಾಕ್ಷಿಯಾಗಿವೆ, ತುಂಗಭದ್ರಾ ನದಿಯನ್ನು ನೆನಪಿಸುವ ಕೊರೆದ ಅಭಿವ್ಯಕ್ತಿಸುವ ಉದ್ದಕ್ಕೆ ಹರಡಿಕೊಂಡಿರುವ ಶಿಲ್ಪ ಮತ್ತೊಂದು ಬಾಗಲಕೋಟ ಹತ್ತಿರದ ಕಗಲಗುಂಬದ ಕಪ್ಪು ಶಿಲೆಯಲ್ಲಿ ಮಂಚದಂತೆ ಕಡೆದು ಮಧ್ಯೆ ಬೊಂಗುಣಿಯಾಕಾದ ತಗ್ಗು ಕೊರದು ಪಕ್ಷಿಗಳಿಗೆ ನೀರುಣಿಸುವ ಆಶಯದ ಶಿಲ್ಪ ಇನ್ನೊಂದಿದ. ಹಾಗೆಯೇ ನೈಸರ್ಗಿಕವಾಗಿ ಮಂಗನ ಮುಖದಂತಿರುವ ಬೃಹತಿಲೆಯ ಆಕಾರವೊಂದಕ್ಕೆ ಕಣ್ಣನ್ನು ಮಾತ್ರ ಕೊರೆದು ಆಚಿಜನೇಯನ ಮುಖವಾಗಿಸಿದ ಶಿಲ್ಪ ಕುತೂಹಲಕರ ಅಭಿವ್ಯಕ್ತಿಯಾಗಿದೆ. ಅಲ್ಲದೆ ಹಾಕುತ್ತಿರುವ ವಿಮನಾನವೊಂದು ಮುರಿದು

ನೆಲಕ್ಕೆ ಬಿದ್ದಾಗಿನ ದೃಶ್ಯದ 'ಶಿಲ್ಪ' ಎಲ್ಲವೂ ಅದ್ಭುತವೆನ್ನುವಂತಿದ್ದು ನೋಡುಗರನ್ನು ನಿಜವಾಗಿಯೂ ಬೆರಗುಗೊಳಿಸುತ್ತವೆ. ಈ ಎಲ್ಲ ಶಿಲ್ಪಗಳೂ ವಿಶ್ವವಿದ್ಯಾಲಯದ 'ಶ್ರೀಶೈಲ' ಅತಿಥಿಗೃಹದ ಆವರಣಲ್ಲಿ ಸುತ್ತ ಮುತ್ತಲು ಪ್ರತಿಷ್ಠಾಪನೆಗೊಂಡಿರುವುದನ್ನು ಕಾಣಬಹುದು.

ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ನ ಆವರಣದಲ್ಲಿ ಹಲವಾರು ಸಮಕಾಲೀನ ಶಿಲ್ಪಗಳಿರುವುದನ್ನು ಕಾಣಬಹುದು ಪರಿಷತ್ತ ನಡೆಸಿದ ರಾಷ್ಟ್ರೀಯ, ರಾಜ್ಯ ಮಟ್ಟದ ಶಿಲ್ಪ ಶಿಬಿರಗಳು ಅಲ್ಲದೆ ಇಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ವ್ಯಾಸಂಗದ ಭಾಗವಾಗಿ ರಚಿಸಿರುವ ಶಿಲ್ಪಗಳು ಗಮನಾರ್ಹವಾಗಿವೆ. ಮುಖ್ಯವಾಗಿ ಶಿಲೆ, ಶಿಲೆಯಲ್ಲದೆ ಫೈಬರ್, ಲೋಹ, ಮರಮಾಧ್ಯಮ, ಪ್ಲಾಸ್ಟರ್ ಆಫ್ ಪ್ಯಾರಿಸ್ ಸಿಮಂಟ್ ಮೊದಲಾದ ಮಾಧ್ಯಮಗಳಲ್ಲಿ ರಚನೆಯಾಗಿದ್ದು ನೋಡುಗರನ್ನು ಆಕರ್ಷಿಸುತ್ತವೆ. ಆಧುನಿಕೋತ್ತರ ಪ್ರಯೋಗಗಳಿಂದ ಕೂಡಿದ ಶಿಲ್ಪಗಳು ಇಲ್ಲಿ ಸೃಷ್ಟಿಯಾಗಿದ್ದು ಇಡೀ ಆವರಣವೇ ಶಿಲ್ಪವನವಾಗಿದೆ. ಅಲ್ಲದೆ ಪರಿಷತ್ತಿನ ಮುಂಭಾಗದ ಕಂಪೌಡ್ ಗೋಡೆಗಳ ಮೇಲೆ ಗುಜರಿವಸ್ತುಗಳಿಂದ ರಚಿಸಲಾದ ಶಿಲ್ಪಗಳಂತೂ ನಯನ ಮನೋಹರವಾಗಿದ್ದು ಕುತೂಹಲ ಕೆರಳಿಸುವಂತಿವೆ.

ಕಲಬುರಗಿಯ 'ದಿ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ' ಆವರಣದಲ್ಲಿಯೂ ಹಲವಾರು ಸಮಕಾಲೀನ ಶಿಲ್ಪಕಲಾಕೃತಿಗಳಿವೆ. ಇಲ್ಲಿ ಹಂತ ಹಂತಾವಿ ಶಿಲ್ಪ ಶಿಬಿರ ಮತ್ತಿತರ ಸಂದರ್ಭಗಳಲ್ಲಿ ಸೃಷ್ಟಿಯಾಗಿರುವ ಶಿಲ್ಪಗಳನ್ನು ಒಪ್ಪ ಓರಣವಾಗಿ ಇರಿಸಲಾಗಿದೆ. ಒಂದು ಅಂತರಾಷ್ಟ್ರೀಯ ಶಿಲ್ಪ ಶಿಬಿರ ಬಳಿಕ ನಡೆದ ೩-೪ ರಾಜ್ಯ ರಾಷ್ಟ್ರೀಯ ಮಟ್ಟದ ಶಿಲ್ಪಕಲಾ ಶಿಬಿರಗಳಲ್ಲಿ ಸೃಷ್ಟಿಯಾಗಿರುವ ಶಿಲ್ಪಗಳನ್ನು ಇಲ್ಲಿ ಕಾಣಬಹುದು. ಮೊಬೈಲ್ ಕಿವಿಗೆ ಒತ್ತಿಕೊಂಡು ಮಾತಿನಲ್ಲಿ ನಿರತವ್ಯಕ್ತಿ, ವಿಮಾನ, ಜಾನಪದ ಸೊಗಡಿನ ಗೌತಮ ಅಂದಾನಿಯವರ ಒಂದು ಶಿಲ್ಪ ಅಲ್ಲದೆ ಕರ್ನಾಟಕ ಶಿಲ್ಪ ಕಲಾ ಅಕಾಡೆಮಿಯು ಸಹಯೋಗದೊಂದಿಗೆ ನಡೆಸಿದ ಶಿಲ್ಪ ಶಿಬಿರದಲ್ಲಿ ಅರಳಿದ ಶಿಲಾ ಶಿಲ್ಪಗಳು ಸ್ಯಾಂಡ್ ಕ್ಯಾಸ್ಟಿಂಗ್ ಶಿಲ್ಪಗಳು ಲೋಹದ ಹಾಳೆಯಲ್ಲಿ ಕೊರೆದು ರಚಿಸಿದ ಮರದ ಶಿಲ್ಪ ಹೀಗೆ ಹಲವಾರು ವಸ್ತು ವಿಷಯಗಳನ್ನು ಒಳಗೊಂಡಿರುವ ಹಲವಾರು ಮಾಧ್ಯಮಗಳಲ್ಲಿ ಸೃಷ್ಟಿಯಾಗಿರುವ ಸಮಕಾಲೀನ ಶಿಲ್ಪಗಳು ಆವರಣದ ಸೌಂದರ್ಯವನ್ನು ಇಮ್ಮಡಿಗೊಳಿಸಿವೆ. ಸುಂದರವಾದ ಕಲಾನಿಕೇತನದ ಕಟ್ಟಡಕ್ಕೆ ಈ ಶಿಲ್ಪಗಳು ಮತ್ತಷ್ಟು ಮೆರಗು ತಂದಿವೆ.

ಕಲಬುರ್ಗಿಯ ಜೇವರ್ಗಿ ರಸ್ತೆಯಿಂದ ಒಳಗೆ ಇರುವ ಶ್ರೀಗುರು ವಿದ್ಯಾಪೀಠ ಸಂಸ್ಥೆಯ ಆವರಣದಲ್ಲಿ೨೦೧೨ ರಲ್ಲಿ ಜರುಗಿದ 'ಅಂತರಾಷ್ಟ್ರೀಯ ಸಿಂಪೋಷಿಯಂ ನಲ್ಲಿ ಹಲವು ಶಿಲ್ಪಗಳು ಸೃಷ್ಟಿಯಾಗಿದ್ದು ಅಲ್ಲಿಯೇ ಪ್ರತಿಷ್ಠಾಪನೆಗೊಂಡಿವೆ. ಬೃಹತ್ತಾದ ಸಿಮೆಂಟ್, ನೆಲವನ್ನು ಕೊರೆದು ಕಲ್ಲನ್ನು ಬಗೆಯುವಂತಹ ಶಿಲಾ ಮಾಧ್ಯಮದ ಯಂತ್ರ, ಅಮೂರ್ತ ರೀತಿಯ ಶಿಲಾಮಾಧ್ಯಮದ ಕೆಲವು ಶಿಲ್ಪಗಳು ಮರದ ಶಿಲ್ಪಗಳು, ಫೈಬರ್ ಮಾಧ್ಯಮದ ಶಿಲ್ಪಗಳು ಇಲ್ಲಿ ಅರಳಿದವು. ಬೇರೆ ಬೇರೆ ರಾಜ್ಯಗಳಿಂದ ಬಂದ ಶಿಲ್ಪಿಗಳೊಂದಿಗೆ ನಮ್ಮವರೇ ಆದ ವೆಂಕಟಾಚಲಪತಿ, ಕಲಬುರ್ಗಿಯ ನಾಗರತ್ನ ಸಾಹು, ಮತ್ತಿತರರು ಭಾಗವಹಿಸಿದ್ದರು. ಒಂದು ತಿಂಗಳಕಾಲ ನಡೆದ ಈ ಶಿಬಿರ ಯತಿಹಾಸಿಕ ಮೈಲುಗಲ್ಲು ಎಂದರೆ ತಪ್ಪಲ್ಲ.

ಶಿವಶರಣ ಉಪ್ಪಿನ್ ಅವರ ತೋಟದ ಮನೆಯಲ್ಲೂ ಅಂತರಾಷ್ಟ್ರೀಯ ಶಿಲ್ಪ ಶಿಬಿರ ನಡೆಸಿದಾಗ ಮೂಡಿಬಂದಿರುವ ಹಲವು ಶಿಲ್ಪ ಕಲಾಕೃತಿಗಳು ಸಮಕಾಲೀನ ಸಂವೇದನೆಯ ಅಭಿವ್ಯಕ್ತಿಗಳೇ ಆಗಿರುವುದನ್ನು ಗಮನಿಸಬಹುದು.

ಅತ್ಯಂತ ಹಿಂದುಳಿದ ಪ್ರದೇಶದ ಸಾಂಸ್ಕೃತಿಕ ನಗರ ಕಲಬುರ್ಗಿಯಲ್ಲಿ ನಡೆದ ಈ ಮೂರು 'ಅಂತರಾಷ್ಟ್ರೀಯ ಸಿಂಪೋಷಿಯಂ'ಗಳು ಕರ್ನಾಟಕದ 'ಸಮಕಾಲೀನ ಶಿಲ್ಪಕಲೆಯ ಬೆಳವಣಿಗೆಯ ದೃಷ್ಟಿಯಿಂದ ಮಹತ್ವದ ಹಜ್ಜೆಗುರುತುಗಳಾಗಿವೆ.

ಟಿಪ್ಪಣಿ

೧. ಪ್ರಜಾವಾಣಿ: ಸಾಪ್ತಾಹಿಕ ಪುರವಣಿ, ದಿ: ೧ನೇ ಜೂನ್ ೨೦೦೩, ಶಿಲ್ಪವನ: ಹೊಸ ದೃಷ್ಟಿ ನವೀನ ಸೃಷ್ಟಿ.

ಅಧ್ಯಾಯ: ಹತ್ತು

ಸಮಾರೋಪ

ಯಾವುದೇ ಕಲಾವಿದ ತನ್ನ ಕಾಲದ ವಿಶಿಷ್ಟ ಜೀವಧ್ವನಿಗೆ, ಸವಾಲುಗಳಿಗೆ ತನ್ನನ್ನು ಸಮ್ಮುಖನಾಗಿಸಿಕೊಂಡು ಅಭಿವ್ಯಕ್ತಿಸುವ ಮೂಲಕ ಆ ಕಾಲದ ಕುರಿತ ಅವನ ಧೋರಣೆ ಅಥವಾ ನಿಲುವುಗಳನ್ನು ದಾಖಲಿಸುವ ಸಾಧ್ಯತೆಗಳಿರುತ್ತವೆ. ಇಂಥ ಕೃತಿಯು ಸಮಕಾಲೀನ ದಾಖಲೆಯಾಗಿ ಹೆಚ್ಚು ಮಹತ್ವ ಪಡೆಯುತ್ತದೆ. ಅಂದಿನ ಆಗು ಹೋಗುಗಳಿಗೆ ಅಗತ್ಯವಾದ ಹೆಚ್ಚಿನ ಆಸಕ್ತಿಯಿಂದ ಅಥವಾ ನಿರ್ಲಕ್ಷ, ನಿರ್ಲಿಪ್ತತೆಯಿಂದ ಸ್ಪಂದಿಸಿದ ಕಲಾವಿದನ ಕೃತಿಗಳು ಸಾಮಾನ್ಯ ನೆಲೆಯುವಾಗಬಲ್ಲವು. ಆದರೆ ಸಮಚಿತ್ತದಿಂದ ಅಂದಿನ ಎಲ್ಲವುಗಳ ಒಳನೋಟದ ಸಮಷ್ಟಿ ರೂಪವಾಗಿ ಅಭಿವ್ಯಕ್ತಿಸಿದಾಗ ತೀವ್ರತೆಯ ತುಡಿತವು ನಿಷ್ಕೃಷ್ಣತೆಯನ್ನು ಪಡೆಯಬಲ್ಲದು. ಕೇವಲ ಆ ಒಂದು ಕಾಲದ ಮೇಲ್ಪದರದ ವಸ್ತು, ಜೀವನ ಶೈಲಿ ಇತ್ಯಾದಿಗಳ ಚಿತ್ರಣ ಸಾಂದರ್ಭಿಕವಾಗಿ ಮಾತ್ರ ಉಳಿಯಬಲ್ಲುದು, ಅಂದಿನ ಇನ್ನಾವುದೇ ವಿಶೇಷ ಹೊಳಹುಗಳನ್ನು ಅನುಭವಗಳನ್ನು ನೀಡಲಾರವು.

ಕಲಾವಿದನು ಜೀವಿಸಿರುವ ಕಾಲದ ಸಾಮಾಜಿಕ ಸ್ಥಿತಿಗಳು ಕಲೆಯ ವಿವಿಧ ವಸ್ತು ಆಶಯ, ನಿರ್ವಹಣೆಗಳನ್ನು ನಿರ್ಧರಿಸುತ್ತವೆ. ಅಂದರೆ ಒಂದು ನಿಧಿಷ್ಟಕಾಲದ ಶಿಲ್ಪ- ಚಿತ್ರ- ಗ್ರಾಫಿಕ್ ಇತ್ಯಾದಿಗಳು ಸಮಕಾಲೀನ ಬದುಕಿನ ಪ್ರತಿಬಿಂಬಗಳಾಗಿರುತ್ತವೆ. ಕಲೆಗಳಲ್ಲಿ ಸಮಕಾಲೀನತೆ ಅಥವಾ ಸಮಕಾಲೀನ ಪ್ರಸ್ತುತತೆ ಅಗತ್ಯವಾಗಿ ಇರಲೇಬೇಕಾದ ಒಂದು ಮೌಲ್ಯ. ಪಿಕಾಸೋ 'I have no style' ಎನ್ನುವಷ್ಟು ಎಲ್ಲ ಶೈಲಿಗಳನ್ನು ಮೀರಿದ ಸಮಕಾಲೀನ ದೃಶ್ಯಕಲಾವಿದ ತನ್ನ ಕಾಲಕ್ಕೆ ಅಧ್ಭುತವಾಗಿ ಸ್ಪಂದಿಸಿದವನು. ಸಮಾಜದಿಂದ ಪಡೆದ ಅನುಭವಕ್ಕೆ ತನ್ನದೇ ಆದ ವೈಯಕ್ತಿಕತೆಯ ಗುರುತನ್ನು ಸಾಧಿಸಲು ಹೆಣಗಬೇಕಾಗುತ್ತದೆ, ಆಗ ಕಲಾವಿದನ ಸಮಕಾಲೀನ ಅನುಭವ ಸಾಂದರ್ಭಿಕ ಸೃಷ್ಟಿಯಿಂದ

ಮೇಲೇರಿ ಸೃಜನಶೀಲತೆಯನ್ನು ಪಡೆದುಕೊಂಡು ಹೊಸದೃಷ್ಟಿಯ ಮರುಸೃಷ್ಟಿಯಾಗಿ ರೂಪುಗೊಳ್ಳುತ್ತದೆ. ಸಮಕಾಲೀನವೆಂಬುದು ಒಂದು ನಿರ್ದಿಷ್ಟ ಕಾಲವೆಂದು ಹೇಳಬಹುದಾದರು ಇದು ಭೂತ, ಭವಿಷ್ಯ ಮತ್ತು ವರ್ತಮಾನಗಳನ್ನು ಮೀರಿದಂತೆ ಕಾಣುವ ಒಂದು ನಿರ್ದಿಷ್ಟಕಾಲ. ನಾವಂದುಕೊಂಡ, ನಮ್ಮ ಸಮಕಾಲ ಎಂದರೆ ಪ್ರಸ್ತುತ ವರ್ತಮಾನಕಾಲ, ನಮ್ಮ ಸಮಕಾಲೀನ ಚಿತ್ರ ಶಿಲ್ಪಕಲೆ ಇಂದಿನ ನಮ್ಮ ಸಂದರ್ಭದ ಚಿತ್ರ ಶಿಲ್ಪಕಲೆ ಆದರೆ ಹೀಗೆ ಒಂದು ನಿರ್ದಿಷ್ಟ ಸಂದರ್ಭದಲ್ಲಿ ಸೃಷ್ಟಿಯಾದ ಶಿಲ್ಪಕಲಾ ಪ್ರಕಾರವೆಲ್ಲವೂ ಸಮಕಾಲೀನ ಶಿಲ್ಪಕಲೆ ಯಾಗುವುದಿಲ್ಲ.

ಒಂದು ಕಾಲದ ನೈಜ ಬದುಕಿನ ಪ್ರಾತಿನಿಧ್ಯವನ್ನು ಹೊಂದಿರುವುದಕ್ಕಿಂತಲೂ ಕಲಾಕೃತಿಯೊಂದು ತನ್ನದೇ ಆದ ರೀತಿಯಲ್ಲೂ 'ಸಾರ್ವತ್ರಿಕ' ವೆನಿಸಿ ಉಳಿಯಬಲ್ಲುದು. ಸಮಕಾಲೀನ ನೈಜ ಬದುಕಿನ ಸಂದರ್ಭಗಳನ್ನು ನೇರವಾಗಿ ಹಸಿಹಸಿಯಾಗಿ ದಾಖಲಿಸುವುದು ಶ್ರೇಷ್ಠಕಲೆ ಯಾಗುವುದಿಲ್ಲ. ಸೃಜನಶೀಲ ಶಿಲ್ಪಿಯೊಬ್ಬನ ಸೃಷ್ಟಿಯೊಂದು ಸಮಕಾಲೀನತೆಯ ಕುಲುಮೆಯಲ್ಲಿ ಬೆಂದು, ಕಲಾವಿದನ ಬೌದ್ಧಿಕ ಮತ್ತು ಸಂವೇದನಾ ಶೀಲತೆಗಳಿಂದ ಪಕ್ವಗೊಂಡು ಬಂದಾಗಲೇ ಅದು ಎಲ್ಲರದೂ ಆಗಲು ಸಾಧ್ಯವಾಗುತ್ತದೆ. ಇಲ್ಲದಿದ್ದಲ್ಲಿ ಅದು ಹಿಂದಿನ ಅಥವಾ ಅಂದಿನ ಸಂದರ್ಭದ ವಸ್ತುವಿನ ನಿರ್ಜಿವ ನಕಲು ಆಗುತ್ತದೆ.

ಪ್ರಸ್ತುತ 'ಸಮಕಾಲೀನ ಶಿಲ್ಪಕಲೆಯಲ್ಲಿ ಸಂವೇದನೆಯ ನೆಲೆಗಳು' ಅಧ್ಯಯನದಲ್ಲಿ ಈ ರೀತಿಯ ಸಮಕಾಲೀನತೆಯನ್ನು ಗರ್ಭೀಕರಿಸಿಕೊಂಡು ಕಾಲ ಮತ್ತು ಸಂದರ್ಭಕ್ಕೆ ಪ್ರಸ್ತುತವೆನಿಸುವ ಸಮಕಾಲೀನ ಕಲಾವಿದರು, ಅವರು ವಿವಿಧ ಮಾಧ್ಯಮಗಳಲ್ಲಿ ರಚಿಸುವ ವೈವಿಧ್ಯಮಯವಾದ ಶಿಲ್ಪಕಲಾ ಕೃತಿಗಳನ್ನು ಗಣನೆಗೆ ತೆಗೆದುಕೊಂಡು, ಸಾಧ್ಯವಾದಷ್ಟು ಕಲಾವಿದರ ಭೌತಿಕ ವಿವರಗಳನ್ನು ಕೈಬಿಟ್ಟು (ಬಯೋ–ಡಾಟಾ) ಕಲಾಕೃತಿನಿಷ್ಠವಾದ ಭಾವಾವೇಶಗಳನ್ನು, ತುಡಿತ ತಲ್ಲಣಗಳನ್ನು ಬದುಕಿನ ವಿವಿಧ ಸನ್ನಿವಷ, ಸಂದರ್ಭಗಳಿಂದ ಪ್ರೇರಣೆಗೊಂಡು ಸಂವೇದನಾಶೀಲವಾಗಿ ಸೃಜನಶೀಲತೆಯಿಂದ ಮಾಡಿದ ಸೃಷ್ಟಿಗಳನ್ನು ಕೇಂದ್ರೀಕರಿಸಿ ಅಧ್ಯಯನ ಮಾಡಲಾಗಿದೆ. ಅಭಿವ್ಯಕ್ತಿಸಲೇಬೇಕೆಂಬ ತುಡಿತದಿಂದ ಸೃಷ್ಟಿಸಲ್ಪಟ್ಟಿರುವ, ಸಾಂದರ್ಭಿಕವಾಗಿಯೂ ಕಾಲಧರ್ಮಕ್ಕೆ ಕನ್ನಡಿ ಹಿಡಿಯಲೆಂದೇ ಮೂಡಿಬಂದಿರುವ ಮತ್ತು ಬಹುಮುಖ್ಯವೆನಿಸುವ ಶಿಲ್ಪಕಲಾಕೃತಿಗಳನ್ನು ಮತ್ತು ಕಲಾವಿದರನ್ನು ಪರಿಗಣಿಸಿ ಈ ಅಧ್ಯಯನ ಮಾಡಲಾಗಿದೆ.

ಮೊದಲನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನಗಳನ್ನು ತಿಳಿಸುವುದರ ಜೊತೆಗೆ ಪೀಠಿಕೆಯಾಗಿ ಸಮಕಾಲೀನ ಶಿಲ್ಪಕಲೆಯ ಆರಂಭಿಕ ಸಂದರ್ಭ, ದೃಷ್ಟಿ– ಸೃಷ್ಟಿಗಳನ್ನು ಕಟ್ಟಿಕೊಡುತ್ತದೆ. ಜೊತೆಗೆ ಈ ಅಧ್ಯಯನಕ್ಕೂ ಪೂರ್ವದಲ್ಲಿ ಕರ್ನಾಟಕದ ಸಮಕಾಲೀನ ಶಿಲ್ಪಕಲೆಯ ಕುರಿತು ಕನ್ನಡದಲ್ಲಿ ಯಾರ್‍ಯಾರು ಏನೇನನ್ನು ಬರದಿದ್ದಾರೆ ಪ್ರಕಟಿಸಿದ್ದಾರೆ ಎಂಬುದರ ಕುರಿತು 'ಇದುವರೆಗಿನ ಅಧ್ಯಯನಗಳು' ಶಿರ್ಷಿಕೆಯಡಿಯಲ್ಲಿ ಪರಿಚಯಿಸಲಾಗಿದೆ. ತನ್ಮೂಲಕ 'ಸಮಕಾಲೀನ ಶಿಲ್ಪಕಲಾ ಸಾಹಿತ್ಯದ ಅವಲೋಕನವೂ ಆಗಿದೆ.

ಎರಡನೆಯ ಅಧ್ಯಾಯದಲ್ಲಿ ಸಮಕಾಲೀನ ಶಿಲ್ಪಗಳು ಸೃಷ್ಟಿಗೊಂಡಿರುವ ವಿವಿಧ ಮಾಧ್ಯಮಗಳನ್ನು ಕುರಿತು, ಅವುಗಳ ಗುಣ ವೈಶಿಷ್ಟ್ಯ, ಸೃಷ್ಟಿ ಸಾಧ್ಯತೆಗಳನ್ನು ನಿರ್ವಹಣೆ ಕ್ರಮಗಳನ್ನು ಕುರಿತು ಹಲವು ಅಂಶಗಳನ್ನು ಅಧ್ಯಯನದ ಮೂಲಕ ಕಟ್ಟಿಕೊಡಲಾಗಿದೆ. ಒಂದೊಂದು ಮಾಧ್ಯಮವೂ ತನ್ನದೇ ಆದ ಸ್ವಭಾವ– ಗುಣಗಳ ರೋಚಕತೆ ಮತ್ತು ವೈಶಿಷ್ಟ್ಯತೆಗಳನ್ನು ನಿರೂಪಿಸಲಾಗಿದೆ. ಕೆತ್ತುವ ಕ್ರಮದಿಂದ ಶಿಲ್ಪ ರಚಿಸುವುದು, ಮೆತ್ತುವ ಕ್ರಮದಿಂದ ಶಿಲ್ಪ ರಚಿಸಿಸುವುದು, ಒತ್ತಿ ರೂಪಿಸುವ ಕ್ರಮದಿಂದ ಶಿಲ್ಪ ರೂಪಿಸುವುದು. ಅಲ್ಲದೆ ಎರಕ ಹೊಯ್ಯುವ ಮೂಲಕ, ಶಿಲ್ಪ ರೂಪಿಸುವ ಕ್ರಮಗಳನ್ನು ಪದ್ಧತಿಗಳನ್ನು ಹಾಗೂ ಅವುಗಳ ಫಲಿತಗಳನ್ನು ಚರ್ಚಿಸಲಾಗಿದೆ. ಆಯಾ ಮಾಧ್ಯಮಗಳಲ್ಲಿ ತಜ್ಞತೆ ಹೊಂದಿರುವ ಕಲಾವಿದರನ್ನು ಸಂಪರ್ಕಿಸಿ ಮಾಹಿತಿ ಸಂಗ್ರಹಿಸಿ ದಾಖಲಿಸಲಾಗಿದೆ. ಸಂಕೀರ್ಣ ಮಾಧ್ಯಮಗಳಲ್ಲಿ ಗುರುತಿಸಿರುವ ಸಗಣಿ, ನಾರು, ಗೋಣಿ ಚೀಲ, ಹುಲ್ಲು, ಬಿದಿರು, ಅರಳೆ, ಕಾಗದದ ಗೊಜ್ಜು ಮೊದಲಾದ ತೀರ ಸಾಮಾನ್ಯವೆನಿಸುವ ಮಾಧ್ಯಮಗಳಲ್ಲಿ ರೂಪಿಸಲ್ಪಡುವ ಶಿಲ್ಪಗಳನ್ನು ಅವುಗಳ ಸೌಂದರ್ಯವನ್ನು ವಿವೇಚಿಸಲಾಗಿದೆ. ಮುಖ್ಯವಾಗಿ ಮಣ್ಣಿನ ಮಾಧ್ಯಮ, ಮರಮಾಧ್ಯಮ, ಶಿಲಾಮಾಧ್ಯಮ, ಲೋಹಮಾಧ್ಯಮ, ಸಿಮೆಂಟ್ ಮಾಧ್ಯಮ, ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮ, ಫೈಬರ್ ಗ್ಲಾಸ್ ಮಾಧ್ಯಮದ ಶಿಲ್ಪಗಳನ್ನು ಸಮಕಾಲೀನ ಕಲಾವಿದರು ರಚಿಸಿರುವುದರಿಂದ ಈ ಮಾಧ್ಯಮಗಳನ್ನು ಕುರಿತು ಆಯಾ ಮಾಧ್ಯಮಗಳ ಸೃಷ್ಟಿ ಸಾಧ್ಯತೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಒಂದೊಂದು ಮಾಧ್ಯಮದಲ್ಲಿ ಕಲಾವಿದರು ಹೇಗೆ ಶಿಲ್ಪ ಕಲಾಕೃತಿಗಳನ್ನು ಸೃಷ್ಟಿಸಿರುವರೆಂಬುದನ್ನು ಕಾಣಬಹುದಾಗಿದೆ.

ಮೂರನೇಯದಾದ 'ಸಮಕಾಲೀನ ಶಿಲ್ಪಕಲೆಯ ಚಾರಿತ್ರಿಕ ನೋಟ' ದಲ್ಲಿ ಕರ್ನಾಟಕದಲ್ಲಿ ಆಧುನಿಕ ಸಮಕಾಲೀನ ಶಿಲ್ಪಕಲೆ ಹೇಗೆ ಬೀಜಾಂಕುರ ಪಡೆಯಿತು ಮತ್ತು ಅನೇಕ ಹೊಳಹುಗಳೊಂದಿಗೆ, ಏಳು ಬೀಳುಗಳೊಂದಿಗೆ, ದೇಶಿ ಕಲಾ ಚಳುವಳಿಗಳ ಗಾಳಿಯ ರಭಸವನ್ನು ಎದುರಿಸಿ ಹೇಗೆ ಬೆಳೆಯಿತು ಎಂಬುದನ್ನು ತಿಳಿಸಲಾಗಿದೆ ಎರಡು ಮೂರು ಹಂತಗಳಲ್ಲಿ ಕಲಾವಿದರು ಮೊದಲು ಹೇಗೆ ಪಶ್ಚಿಮದ ಆಧುನಿಕ ಕಲೆಯನ್ನು ಅನುಕರಸಿದರೆಂಬುದನ್ನು ತದನಂತರದ ದಿನಗಳಲ್ಲಿ ಸ್ವಂತಿಕೆಯನ್ನು ಹೇಗೆ ಮೆರೆದರು ಎಂಬುದನ್ನು ನಿರ್ವಚಿಸಲಾಗಿದೆ ಮತ್ತು ಸೃಷ್ಟಿಗಳನ್ನು ಪ್ರಸ್ತಾಪಿಸಿ ಅಧ್ಯಯನದ ಆಳ–ವಿಸ್ತಾರವನ್ನು ಹೆಚ್ಚಿಸಲು ಯತ್ನಿಸಲಾಗಿದೆ. ಜೊತೆಗೆ ಸಮಕಾಲೀನ ಶಿಲ್ಪಕಲೆಯನ್ನು ಬೆಳೆಸುವ ನಿಟ್ಟಿನಲ್ಲಿ ಅಕಾಡೆಮಿಗಳು, ವಿಶ್ವೇಶ್ವರಯ್ಯ ಮ್ಯೂಸಿಯಂನಂತಹ ದೊಡ್ಡ ಸಂಸ್ಥೆಗಳು, ಕಲಾ ಕಾಲೇಜುಗಳು, ನಾಡಿನ ಇತರ ಸಂಘ ಸಂಸ್ಥೆಗಳು ಅಲ್ಲದ ವಿಶ್ವವಿದ್ಯಾಲಯದಂತಹ ಉನ್ನತ ಶಿಕ್ಷಣ ಸಂಸ್ಥೆಗಳು, ಸಾಂಸ್ಕೃತಿಕ ಸಂಘಗಳು ಸಾಮೂಹಿಕವಾಗಿ ಮಾಡಿದ ಶಿಲ್ಪ ಶಿಬಿರ, ಕಾರ್ಯಾಗಾರ ಮೊದಲಾದ ಚಟುವಟಿಕೆಗಳ ಕುರಿತೂ ಅನೇಕ ಒಳನೋಟಗಳನ್ನು ಈ ಆಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅನೇಕ ಜನ ಸಮಕಾಲೀನ ಶಿಲ್ಪ ಕಲಾವಿದರು ಮತ್ತು ಅವರ ಶಿಲ್ಪಕಲಾಕೃತಿಗಳ ಛಾಯಾಚಿತ್ರಗಳನ್ನು ಈ ಅಧ್ಯಾಯಕ್ಕೆ ಸಂಬಂಧಿಸಿದಂತೆ ಪ್ರಸ್ತಾಪಿಸಿ ಅಧ್ಯಯನ

ಮಾಡಲಾಗಿದೆ. ಅನೇಕ ಗ್ರಂಥಗಳನ್ನು ಲೇಖನಗಳನ್ನು ಪರಾಮರ್ಶನ ಗ್ರಂಥಗಳಾಗಿ ಬಳಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಆಧುನಿಕ- ಸಮಕಾಲೀನ ಶಿಲ್ಪಕಲೆಯು ಕರ್ನಾಟಕದಲ್ಲಿ ತನ್ನ ಪ್ರಭಾವವನ್ನು ಬೀರಲು ಆರಂಭಿಸಿದಾಗ ಅಂದಿನ ಕಲಾಸಂದರ್ಭ ಹೇಗಿತ್ತು, ದೇಶದಲ್ಲಿ ಅದರಲ್ಲೂ ಮುಂಬೈ, ಕೊಲ್ಕತ್ತಾ ಮತ್ತು ಶಾಂತಿನಿಕೇತನಗಳಂತಹ ಕಲಾಕೇಂದ್ರಗಳಲ್ಲಿ ಏನೇನು ಪ್ರತಿರೋಧಗಳು, ಪ್ರತಿಭಟನೆಗಳು ಮತ್ತು ಪ್ರಯೋಗಗಳ(ದೇಶೀ) ನಡೆದವು ಎಂಬುದನ್ನುಸೋದಾಹರಣವಾಗಿವಿವರಿಸಲಾಗಿದ. ಮುಖ್ಯವಾಗಿ ಕರ್ನಾಟಕದಲ್ಲಿ ಸಾಂಪ್ರದಾಯಿಕ ಶಿಲ್ಪಕಲೆಯ ವಿರುದ್ಧ ಸೆಟೆದು ನಿಲ್ಲಲು, ತನ್ಮೂಲಕ ಸಂಪ್ರದಾಯವನ್ನು ಹಾಳುಮಾಡಲೆಂದೇ ಸಮಕಾಲೀನ ಶಿಲ್ಪಕಲೆ ತನ್ನ ಬಾಹುಗಳನ್ನು ಚಾಚುತ್ತಿದೆಯೇನೋ ಎಂಬಂತಹ ಭಾವನೆ ಕೆಲವರಲ್ಲಿ ಮೂಡಿದುದು ಕ್ರಮೇಣ ಆಧುನಿಕ-ಸಮಕಾಲೀನ ಶಿಲ್ಪಕಲೆ ಚಿತ್ರಕಲೆಯಂತೆ ಸಾರ್ವತ್ರಿಕವಾದುದರ ಬಗ್ಗೆ ವಿವರಿಸಲಾಗಿದೆ.

ಕೆ.ವೆಂಕಟಪ್ಪ, ಧನಂಜಯ ಶಿಲ್ಪಿ, ರಾಜಾರಾಂ, ಎನ್.ಎಚ್. ಕುಲಕರ್ಣಿಯವರಂತಹ ಮಹಾನ್ ಶಿಲ್ಪಿಗಳ ಆಧುನಿಕ ಶಿಲ್ಪಗಳು, ಅವರು ಮಾಡಿರುವ ಪ್ರಯೋಗಗಳನ್ನು ಅವರು ಪಶ್ಚಿಮದಿಂದ ಪಡೆದ ಪ್ರೇರಣೆ ಪ್ರಭಾವಗಳನ್ನು ಪರಾಮರ್ಶಿಸಲಾಗಿದೆ. ಆಳವಾದ ಚಿಂತನೆ, ತುಡಿತ ಮಿಡಿತಗಳ ಗಾಢವಾದ ಅಭಿವ್ಯಕ್ತಿ ಇಲ್ಲದಿದ್ದರೂ, ಕರ್ನಾಟಕದ ಆಧುನಿಕ ಸಮಕಾಲೀನ ಶಿಲ್ಪಕಲೆಯ ಮುಂದಿನ ಬೆಳವಣಿಗೆಗೆ ಹೇಗೆ ಮೊದಲ ಮೆಟ್ಟಿಲಾದವು ಎಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ ಮತ್ತು ಪೂರಕವಾಗಿ ಅನೇಕ ಛಾಯಾಚಿತ್ರಗಳನ್ನು ಪರಾಮರ್ಶನ ಲೇಖನ, ಗ್ರಂಥಗಳ ಪಟ್ಟಿಯನ್ನು ನೀಡಲಾಗಿದೆ.

ಐದನೆಯ ಅಧ್ಯಾಯವಾದ 'ಸಮಕಾಲೀನ ಶಿಲ್ಪಕಲೆಯ ಎರಡನೇಯ ಘಟ್ಟವನ್ನು' ಕುರಿತು ಬೆಳಕು ಬೀರಲಾಗಿದೆ ಇದು ಕರ್ನಾಟಕದಲ್ಲಿ ಸಮಕಾಲೀನ ಶಿಲ್ಪಕಲೆ ಹೇಗೆ ಪ್ರಸರಿಸಿತು, ಹೊಸ ಹೊಸಪೀಳಿಗೆ ಆಕರ್ಷಿತರಾಗಿ ಹೊಸ ಅನುಭವಗಳಿಂದ ಅಭಿವ್ಯಕ್ತಿಸಿ ಹೇಗೆ ರೋಮಾಂಚನ ಅನುಭವಿಸಿದರು, ಶಿಲ್ಪ ಕಲಾವಿದರು, ಸಮಕಾಲೀನತೆಯೆಡೆಗೆ ಮುಖಮಾಡಿ ಸ್ವಂತಿಕೆ- ಸ್ವಾತಂತ್ರ್ಯಗಳ ಸಂಭ್ರಮದಲ್ಲಿ ಏನೇನನ್ನು ಹೇಗೆ ಹೇಗೆ? ಸೃಷ್ಟಿಸಿದರು. ವೈಯಕ್ತಿಕ ಶೈಲಿ ಮತ್ತು ವಸ್ತು ವಿಷಯಗಳಿಂದ ವೈಯಕ್ತಿಕ ಗುರುತನ್ನು ಹೇಗೆ ದಾಖಲಿಸಿದರು ಎಂಬುದನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಅಲ್ಲದೆ ಕಲಾಕೃತಿಗಳ ವಿಮರ್ಶೆಯನ್ನು ಸಾಂದರ್ಭಿಕ ವಿಶ್ಲೇಷಣೆಯಲ್ಲಿ ಬೆರೆಸಿ ವಿವರಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಸಮಕಾಲೀನ ಶಿಲ್ಪಕಲೆಯ ಮೂರನೆಯ ಘಟ್ಟ ಹೊಸ ಪೀಳಿಗೆಯನ್ನು ಕುರಿತು ಅಧ್ಯಯನವಿದೆ. ಶಿಲ್ಪಕಲಾವಿದರು ಮತ್ತು ಅವರ ಶಿಲ್ಪಕಲಾಕೃತಿಗಳನ್ನು ಮುಖ್ಯವಾಗಿ ಇದರಲ್ಲಿ ಅಧ್ಯಯನ ಮಾಡಲಾಗಿದೆ. ಒಬ್ಬೊಬ್ಬ ಶಿಲ್ಪಿಯ ಕುರಿತು ತುಡಿತ ಮಿಡಿತಗಳನ್ನು/ ಆಲೋಚನೆಗಳನ್ನು ಪ್ರಸ್ತಾಪಿಸಿ ಆ ಆಲೋಚನೆಗಳನ್ನು ಶಿಲ್ಪಕಲಾಕೃತಿಗಳಲ್ಲಿ ಹೇಗೆ ದೃಶ್ಯಾತ್ಮಕಗೊಳಿಸಿರುವರು ಎಂಬುದನ್ನು ಮತ್ತು ಕಲ್ಲು, ಮರ, ಅಲ್ಲದೆ ಸಿಮೆಂಟ್, ಫೈಬರ್‌ನಂತಹ ಹೊಸಮಾಧ್ಯಮಗಳಲ್ಲಿ ಮಾಡಿದ ಪ್ರಯೋಗಗಳನ್ನು ವಿವರಿಸಲಾಗಿದೆ.

ಹೊಸರೂಪ, ಹೊಸ ಶೈಲಿ ಹೊಸ ವಸ್ತುಸಂಗತಿಗಳು ನೋಡುಗ ವರ್ಗದಲ್ಲಿ ಹೇಗೆ ಸಂಚಲನ ಉಂಟಾಗಿದೆ ಎಂಬುದನ್ನು ಪ್ರಸ್ತಾಪಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಕರ್ನಾಟಕದಲ್ಲಿ ಮತ್ತು ಹೊರಗೆ ಸಮಕಾಲೀನ ಶಿಲ್ಪಕಲೆಯ ಕುರಿತು ಬೇರ ಬೇರೆ ಸಂಘ ಸಂಸ್ಥಗಳು, ಅಕಾಡೆಮಿಗಳು ಏರ್ಪಡಿಸಿರುವ ಸಮಕಾಲೀನ ಶಿಲ್ಪಕಲಾ ಶಿಬಿರಗಳು ಅವುಗಳಲ್ಲಿ ಭಾಗವಹಿಸಿ ಕಲಾಕೃತಿಗಳನ್ನು ರಚಿಸಿದ ಶಿಲ್ಪಿಗಳು ಯಾರ್‍ಯಾರು ಎನ್ನವ ಮೊದಲಾದ ಸಂಗತಿಗಳನ್ನು ಕುರಿತು ಸಾಕ್ಷಾಧಾರಗಳ ಸಮೇತ ಪ್ರಸ್ತಾಪಿಸಿ ವಿವರಿಸಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ ಸಮಕಾಲೀನ ಶಿಲ್ಪಕಲೆಯ ಪ್ರದರ್ಶನಗಳ ಕುರಿತು, ಪ್ರದರ್ಶನ ಮಾಡಿದ ಕಲಾವಿದರ ಕುರಿತು, ಕಲಾಕೃತಿಗಳ ವಸ್ತು ವಿಷಯಗಳ ಕುರಿತು ಸೋದಾಹರಣವಾಗಿ ಅಧ್ಯಯನ ಮಾಡಲಾಗಿದೆ. ಒಂಭತ್ತನೆಯ ಅಧ್ಯಾಯದಲ್ಲಿ ಕರ್ನಾಟಕದಾದ್ಯಂತ ಸ್ಥಾಪಿಸಲಾಗಿರುವ 'ಸಮಕಾಲೀನ ಶಿಲ್ಪವನಗಳನ್ನು' ಕುರಿತು, ಅವುಗಳ ರೂಪ, ಸ್ವರೂಪಗಳ ಕುರಿತು ಅಲ್ಲಿರುವ ಶಿಲ್ಪಗಳು ಅವುಗಳ ಸಂವೇದನೆ- ತಾತ್ವಿಕತೆ ಮೊದಲಾದ ಅಂಶಗಳನ್ನು ಅಧ್ಯಯನದ ಮೂಲಕ ಚರ್ಚಿಸಿ ವಿವರಿಸಲಾಗಿದೆ.

ಹತ್ತನೆಯ ಅಧ್ಯಾಯವು ಸಮಾರೋಪವಾಗಿದ್ದು, ಸಮಕಾಲೀನತೆಯ ಪ್ರಸ್ತುತತೆ, ಮತ್ತು ಅಗತ್ಯಗಳ ಕುರಿತು ಚರ್ಚಿಸುವುದರೊಂದಿಗೆ ಎಲ್ಲ ಅಧ್ಯಾಯಗಳ ಫಲಿತಗಳನ್ನು ಪ್ರಸ್ತಾಪಿಸಿ ಚರ್ಚಿಸಲಾಗಿದೆ ಮುಂದಿನ ಪೀಳಿಗೆಗೆ ಮತ್ತು ಅಧ್ಯಯನಕಾರರಿಗೆ ಇದರಿಂದಾಗುವ ಪ್ರಯೋಜನಗಳನ್ನು ಪ್ರಸ್ತಾಪಿಸಲಾಗಿದೆ.

*****

ಸಂಕ್ಷೇಪಗಳು

ಕ.ವಿ.ಹಂ.	– ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕ.ವಿ.ವಿ.	– ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಕ.ಸಾ.ಪ.	– ಕನ್ನಡ ಸಾಹಿತ್ಯ ಪರಿಷತ್ತು
ಸಿ.ಕೆ.ಪಿ.	– ಚಿತ್ರಕಲಾ ಪರಿಷತ್ತು
ಐ.ಎಫ್.ಎ.	– ಐಡಿಯಲ್ ಫೈನ್ ಆರ್ಟ ಸಂಸ್ಥೆ
ಗು.ವಿ.ಕ.	– ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರ್ಗಿ
ಮೈ.ವಿ.ವಿ.	– ಮೈಸೂರು ವಿಶ್ವವಿದ್ಯಾಲಯ
ಕ್ರಿ. ಪೂ.	– ಕ್ರಿಸ್ತ ಪೂರ್ವ
ಹೈ.ಕ.	– ಹೈದರಾಬಾದ ಕರ್ನಾಟಕ
ಕೆ.ವಿ.ಸು.	– ಕೆ.ವಿ. ಸುಬ್ರಹ್ಮಣ್ಯಂ
ಚಿ.ಸು.ಕೃ.	– ಚಿ.ಸು. ಕೃಷ್ಣ ಶೆಟ್ಟಿ
ವಿ.ಜಿ.ಎ.	–ವಿ.ಜಿ. ಅಂದಾನಿ
ಕ.ಶಿ.ಅ.	– ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಕ.ಲ.ಅ.	– ಕರ್ನಾಟಕ ಲಲಿತಕಲಾ ಅಕಾಡಮಿ
ಆರ್.ಎಸ್.ಎನ್	– ಆರ್.ಎಸ್.ನಾಯ್ಡು
E.I.	-Epigraphia India
I.A.	- Indian Antiquary
S.I.I	- South Indian Incription
K.L.A.	-Karnataka lalithakala academy
A.L.N.	- A. L. Narasimhan
K.G.S.	-K. G. Subrahmanyam
V.A.G.	-Venkatappa Art Gallery

ಗ್ರಂಥ ಋಣ

೧. **ಚಿತ್ರ ಶಾಲ್ಮಲಾ**: ಆರ್ಯ ಆಚಾರ್ಯ (ಸಂ): ಧಾರವಾಡ ಉತ್ಸವ ಸಮಿತಿ ಮತ್ತು ಧಾರವಾಡ ಆಡಳಿತ, ಧಾರವಾಡ, ೨೦೦೭.

೨. **ಶಿಲ್ಪಕಲಾ ಪ್ರಪಂಚ**: ಪಿ. ಆರ್.ತಿಪ್ಪೇಸ್ವಾಮಿ (ಪ್ರ. ಸಂ.) : ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ೧೯೯೪.

೩. **ಸಂಸ್ಕೃತಿ**; ಪ್ರೊ. ಸದಾನಂದ ಕನವಳ್ಳಿ ಅಭಿನಂದನ ಗ್ರಂಥ ಸಂಪುಟ: ಡಾ. ವೀರಣ್ಣ ರಾಜೂರ (ಸಂ): ಲಿಂಗಾಯತ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, ೨೦೦೯.

೪. **ಕಲಾಕೋಶ**: ಪಿ. ಆರ್. ತಿಪ್ಪೇಸ್ವಾಮಿ (ಪ್ರ. ಸಂ.): ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು– ೧೯೯೪.

೫. **ಕರ್ನಾಟಕ ಶಿಲ್ಪ ಸಂಚಲನ**: ಸಂಪುಟ ೧, ಸಂಚಿಕೆ ೧, ಜೂನ್– ನವೆಂಬರ್ ೨೦೧೪ ಡಾ. ಶಿವಾನಂದ ಎಚ್. ಬಂಟನೂರ (ಸಂ): ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು, ೨೦೧೪

೬. **ಪ್ರತಿಭಾ ಸಂಪನ್ನರು**: ಭಾಗ ೫, ವಿವಿಧ ಲೇಖಕರು: ವಿ.ಸೀ. ಸಂಪದ, ಬೆಂಗಳೂರು, ೨೦೧೬.

೭. **ಕೆ.ವಿ. ಸುಬ್ರಹ್ಮಣ್ಯಂ ಅವರ ದೃಶ್ಯಕಲಾ ಸಾಹಿತ್ಯ**: ಗಾಯತ್ರಿ ಮಂತ, ಕ.ವಿ.ವಿ. ಗೆ ಸಲ್ಲಿಸಿದ ಎಂ. ಫಿಲ್. ಪ್ರಬಂಧ ೨೦೧೪

೮. **ಸಾಹಿತ್ಯ ಸಂಸ್ಕೃತಿ ಪಥ**: ಸುವರ್ಣ ಕರ್ನಾಟಕ ಸಂಪುಟ ೨, ಪ್ರೊ. ಕರೀಗೌಡ ಬೀಚನಹಳ್ಳಿ (ಸಂ): ಕನ್ನಡ ವಿ.ವಿ. ಹಂಪಿ ಮತ್ತು ಕರ್ನಾಟಕ ಗ್ಯಾಜಟಿಯರ್ ಇಲಾಖೆ ಬೆಂಗಳೂರು, ೨೦೦೭

೯. **ದೃಷ್ಟಿ ಸೃಷ್ಟಿ** : ಡಾ. ಶಿವಾನಂದ ಎಚ್, ಬಂಟನೂರ: ಅಲಕಾ ಪ್ರಕಾಶನ ಖೈನೂರ (ವಿಜಯಪುರ ಜಿಲ್ಲೆ) ೨೦೦೯.

೧೦. **ಮಾಟದೊಳಗಣ ನೋಟ**: ಡಾ. ಶಿವಾನಂದ ಎಚ್. ಬಂಟನೂರ: ಯಾಜಿ ಪ್ರಕಾಶನ ಹೊಸಪೇಟೆ, ೨೦೧೨.

೧೧. **ಸಮಕಾಲೀನ ಶಿಲ್ಪಕಲೆ**: ಡಾ. ಶಿವಾನಂದ ಎಚ್. ಬಂಟನೂರ : ಪ್ರಸಾರಾಂಗ ಕ.ವಿ.ವಿ. ಹಂಪಿ, ೨೦೧೨

೧೨. **ಕರ್ನಾಟಕ ಕಲಾ ದರ್ಶನ**: ಸಂಪುಟ ೧, ಪ್ರೊ. ಎಂ.ಎಚ್. ಕೃಷ್ಣಯ್ಯ, ಡಾ. ವಿಜಯಾ,

ಶ್ರೀ ಸಿ. ಆರ್. ಕೃಷ್ಣರಾವ್ : ನವಕರ್ನಾಟಕ ಪ್ರಕಾಶನ ಬೆಂಗಳೂರು–೨೦೧೦.

೧೩. **ಧನಂಜಯ ಶಿಲ್ಪಿ**: ಡಾ ವೀರೇಶ ಬಡಿಗೇರ: ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು, ೨೦೦೪.

೧೪. **ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ**: ಕೆ.ವಿ. ಸುಬ್ರಹ್ಮಣ್ಯಂ: ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು, ೨೦೦೮.

೧೫. **ಲಲಿತಕಲೆಗಳು ಸಂಪುಟ ೧೬**: ಕೆ.ವಿ. ಸುಬ್ರಹ್ಮಣ್ಯಂ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೨೦೧೫.

೧೬. **ನೋಟ ಪಲ್ಲಟ**: ಎಚ್. ಎ. ಅನಿಲ್‌ಕುಮಾರ್: ಅಭಿನವ ಪ್ರಕಾಶನ ಬೆಂಗಳೂರು, ೨೦೦೦

೧೭. **ಭಾರತೀಯ ಶಿಲ್ಪಕಲೆ**: ಎನ್. ಮರಿಶಾಮಾಚಾರ್, ಕರ್ನಾಟಕ ಶಿಲ್ಪಕಲಾ ಅಕಾಡಮಿ, ೨೦೦೦

೧೮. **ಚಿತ್ರಾಕ್ಷರ : ತ್ರೈಮಾಸಿಕ:** ಸಂಪುಟ ೧, ಸಂಚಿಕೆ ೧, ಕೆ. ವಿ. ಸು., ಅ.ಲ.ನ(ಸಂ): ದೃಶ್ಯಕಲಾ ಸಾಹಿತ್ಯ ಪರಿಷತ್ತು, ೧೯೯೯

೧೯. **ದೃಶ್ಯಕಲಾ ಪ್ರಪಂಚ:** ಎನ್. ಮರಿಶಾಮಾಚಾರ್, ಸಿ. ಎಂ. ಎನ್. ಪ್ರಕಾಶನ ಬೆಂಗಳೂರು, ೨೦೦೭

೨೦. **ಕ್ರುತುಪುರ ಕಲಾ ವೈಭವ:** ಚಿತ್ರ, ಶಿಲ್ಪಕಲಾವಿದರ ಕೈಪಿಡಿ; ಡಾ. ಲಕ್ಷ್ಮೀದೇವಿ ಗವಾಯಿ, ಅಶೋಕ ಅಕ್ಕಿ: ಲಕ್ಕುಂಡಿ ಉತ್ಸವ, ಗದಗ, ೨೦೦೯

೨೧. **ಆರ್. ಎಸ್. ನಾಯು ವ್ಯಕ್ತಿ ಮತ್ತು ಕಲೆ;** ಎಂ. ಎಚ್. ಕೃಷ್ಣಯ್ಯ(ಸಂ): ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು, ೨೦೦೮

೨೨. **ಚಿತ್ರಸಂತೆ ೧೩:** ಕ್ಯಾಟಲಾಗ್, ಕರ್ನಾಟಕ ಚಿತ್ರಕಲಾ ಪರಿಷತ್ ಬೆಂಗಳೂರು, ೨೦೧೬

೨೩. **ದಶಕದ ದೃಶ್ಯಕಲಾ ಸಾಹಿತ್ಯ** : ವಿಮರ್ಶಾತ್ಮಕ ಅಧ್ಯಯನ; ಅಪ್ರಕಟಿತ ಎಂ. ಫಿಲ್. ಪ್ರಬಂಧ : ವೆಂಕಟೇಶ ಪಾಟೀಲ, ೨೦೧೫.

೨೪. **ನಡದಾಡುವ ಕಲಾ ಕೋಶ:** ಎಚ್.ಎ. ಅನಿಲ್‌ಕುಮಾರ್(ಸಂ): ಸಂಯೋಜಿತ ಬೆಂಗಳೂರು, ೨೦೧೨.

೨೫. **ಕರ್ನಾಟಕ ಶಿಲ್ಪಕಲಾ ಪ್ರಪಂಚ:** ಪಿ. ಆರ್. ತಿಪ್ಪೇಸ್ವಾಮಿ(ಸಂ): ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ೧೯೯೪

೨೬. **ಲಲಿತಕಲೆಗಳು ಸಂಪುಟ ೧೬:** ಕೆ.ವಿ.ಸು.(ಸಂ): ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೫

೨೭. **ಕರ್ನಾಟಕ ಶಿಲ್ಪ ಸಂಚಲನ,** ಅರ್ಧವಾರ್ಷಿಕ ಸಂಪುಟ ೧, ಸಂಪುಟ, ೧: ಡಾ. ಶಿವಾನಂದ ಎಚ್. ಬಂಟನೂರ (ಸಂ): ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು, ೨೦೧೫.

೨೮. **ಎಲ್. ನರಸಿಂಹನ್ ಅವರ ಶಿಲ್ಪಕಲಾ ಕೃತಿಗಳು;** ಎಂ.ವಿ.ಎ. ಕಿರುಶೋಧ ಪ್ರಬಂಧ : ಬಸವರಾಜ ಎಸ್. ರೊಳ್ಳಿ, ೨೦೧೪

೨೯. **ಕಲಾನ್ವೇಷಣೆ** : ಬಸವಾಜ ಎಸ್. ಕಲೆಗಾರ : ರೇಖಾಚಿತ್ರ ಪ್ರಕಾಶನ; ಕೊಂಕಲ್ ಯಾದಗಿರಿ ಜಿಲ್ಲೆ ೨೦೧೪

೩೦. **ಕಲಾ ಸಂವೇದನೆಯ ಒಳನೋಟಗಳು** : ಕೆ. ವಿ. ಸುಬ್ರಹ್ಮಣ್ಯಂ : ಕರ್ನಾಟಕ ಲಲಿತಕಲಾ ಅಕಾಡೆಮಿ–೧೯೯೭.

೩೧. **ವಂಕಟಾಚಲಪತಿ :** ಕೆ. ವಿ. ಸುಬ್ರಹ್ಮಣ್ಯಂ : ಕರ್ನಾಟಕ ಶಿಲ್ಪಕಲಾ ಅಕಾಡೆಮಿ–೨೦೧೪.

೩೨. **ಸಿ. ಪಿ. ರಾಜಾರಾಂ** : ಕೆ.ವಿ.ಸು: ಕರ್ನಾಟಕ ಶಿಲ್ಪಕಲಾ ಅಕಾಡೆಮಿ : ೨೦೦೪.

೩೩. **ಇನ್ಸ್ಟಾಲಪನ್ ಕಲಾ ಪ್ರಪಂಚ** : ಕೆ.ವಿ.ಸು : ಕರ್ನಾಟಕ ಲಲಿತಕಲಾ ಅಕಾಡೆಮಿ– ೨೦೦೮.

೩೪. **ಸಮಕಾಲೀನ ಕಲೆ :** ಎಸ್. ನ್. ಚಂದರಶೇಖರ: (ಸಂ): ಕ.ಲ.ಕ.ಅಕಾಡೆಮಿ ಬೆಂಗಳೂರು–೧೯೯೮.

೩೫. **ಚೌಕಟ್ಟು** : ಎಚ್. ಎ. ಅನಿಲ್ ಕುಮಾರ: (ಸಂ) : ಸಂಚಯ ಪ್ರಕಾಶನ; ಬೆಂಗಳೂರು–೧೯೯೭.

೩೬. **ಕಲಾ ಸಂಸ್ಕೃತಿ:** ಎಂ. ಎಚ್. ಕೃಷ್ಣಯ್ಯ: ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೪.

೩೭. **ದೃಶ್ಯಕಲಾ ಪ್ರಶಸ್ತಿ ಪುರಸ್ಕೃತರು:** ಡಾ. ವಿ.ಜಿ. ಅಂದಾನಿ ಮತ್ತು ಡಾ. ಡಿ.ಬಿ. ನಾಯಕ್ (ಸಂ): ಪ್ರಸಾರಾಂಗ, ಗು.ವಿ.ವಿ. ಕಲಬುರ್ಗಿ, ೨೦೧೨.

೩೮. ಶಿಲೆ ಕಲೆ: ವಿಜಯರಾವ್: ಶಿಲ್ಪಕಲೆ, ಜನಪ್ರಿಯ ಕಲಾ ಮಾಲಿಕೆ : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೫.

೩೯. ಪೋಸ್ಟ ಮಾಡರ್ನಿಸಂ: ಜನಪ್ರಿಯ ಕಲಾಮಾಲಿಕೆ: ನೇಮಿರಾಜ ಶೆಟ್ಟಿ: ಕರ್ನಾಟಕ ಲಲಿತಕಲಾ ಅಕಾಡಮಿ, ಬೆಂಗಳೂರು, ೧೯೯೫.

೪೦. ಆಲೇಖ್ಯ: ಡಾ. ಅ.ಲ. ನರಸಿಂಹನ್, ಸಂಯೋಜಿತ ಸಂಸ್ಥೆ ಬೆಂಗಳೂರು ೧೯೯೯

೪೧) ಶಿಲೆ ಕಲೆ: ಡಾ. ಚೂಡಾಮಣಿ ನಂದಗೋಪಾಲ, ಸುಂದರ ಪ್ರಕಾಶನ ಬೆಂಗಳೂರು, ೨೦೦೭

ಪತ್ರಿಕೆಗಳು

೧.ಉದಯವಾಣಿ ಕನ್ನಡ ದಿನಪತ್ರಿಕೆ : ಕುಂಚ ಮಾತಾಡತಾವ ಶಿಲೆಯು ಕುಣಿದಾಡತಾವ: ಸಾಪ್ತಾಹಿಕ ಸಂಪದ : ದಿ: ೩೦.೬.೨೦೦೨, ಲೇ: ಎಚ್. ಎ. ಅನಿಲ್‌ಕುಮಾರ್

೨. ಪ್ರಜಾವಾಣಿ ಕನ್ನಡ ದಿನಪತ್ರಿಕೆ: ಜನಪದೀಯ ಸತ್ವಕ್ಕೆ ಆಧುನಿಕತೆಯ ಸ್ಪರ್ಷಮೂಡಿಸಿದ ಶಿಲ್ಪಿ; ಚಿ.ಸು. ಕೃಷ್ಣಶೆಟ್ಟಿ

೩. ಪ್ರಜಾವಾಣಿ ಕನ್ನಡ ದಿನಪತ್ರಿಕೆ ವನಚೇತನ ಲೇ: ಶಿವಾನಂದ ಕರ್ಕಿ

೪. ವಾರಪತ್ರಿಕೆ 'ವೈವಿಧ್ಯಮಯ ಅಭಿವ್ಯಕ್ತಿ': ದಿ:೨೩.೫.೧೯೯೩ ಲೇ, ಎಚ್.ಎ. ಅನಿಲ್‌ಕುಮಾರ್.

೫. ಜನತಾವಾಣಿ: ಕನ್ನಡ ದಿನಪತ್ರಿಕೆ: ಕಲೆ ಮನಸನ್ನು ಅರಳಿಸುವಂತಿರಬೇಕು: ಡಾ. ಶಿವಾನಂದ ಬಂಟನೂರ; ದಿ: ೩.೬.೨೦೧೩

೬. **Deccan herald:** English Daily News paper: Veguly modernistic: Marta

Jakimoicz Karle Aug 1991.

೭. **Deccan herald** English Daily News paper: Towords Personal expression

Jakimoicz Karle, 5.5.1993.

೮. ಕನ್ನಡ ಪ್ರಭ ದಿನಪತ್ರಿಕೆ: ಸಮಕಾಲೀನ ಶಿಲ್ಪಿಗಳ ಕೆಲವು ನೋಟಗಳು: ಕೆ.ವಿ.ಸು. ದಿ: ಜುಲೈ. ೨೦೦೮

೯. ಪ್ರಜಾವಾಣಿ ಕನ್ನಡ ದಿನಪತ್ರಿಕೆ: ಸಾಪ್ತಾಹಿಕ ಪುರವಣಿ: ನಮ್ಮ ಚಿತ್ರ ಶಿಲ್ಪಕಲೆ: ಸಾ.ಕೃ. ರಾಮಚಂದ್ರರಾವ್ ದಿ: ೧೭.೫.೧೯೯೮.

೧೦. ಪ್ರಜಾವಾಣಿ ಕನ್ನಡ ದಿನಪತ್ರಿಕೆ: ಸಾಪ್ತಾಹಿಕ ಪುರವಣಿ ಶಿಲ್ಪವನ: ಹೊಸದೃಷ್ಟಿ ನವೀನ ದೃಷ್ಟಿ, ದಿ: ೧.೬.೨೦೦೩.

೧೧. ಉಷಾಕಿರಣ: ಕನ್ನಡ ದಿನಪತ್ರಿಕೆ: ಶಿಲ್ಪಕಲೆ ಅಂತರ್ ಮುಖಿಯಲ್ಲ, ಯು. ಭಾಸ್ಕರ್ ರಾವ್ : ೨೭.೮.೨೦೦೬.

೧೨. ಕನ್ನಡ ಪ್ರಭ ದಿನಪತ್ರಿಕೆ: ಗರಿಗೆದರಿದ ಶಿಲ್ಪ ಚಿತ್ರಗಳ ಆಯಾಮ: ಕ.ವಿ.ಸು. ದಿ, ೧೫.೬.೨೦೦೮

೧೩. **ಕನ್ನಡ ಪ್ರಭ ಸಂಕ್ರಾಂತಿ** ವಿಶೇಷಾಂಕ: ಸಮಕಾಲೀನ ಮಹತ್ವಾಕಾಂಕ್ಷೆಯ ಯುವ ಸಂವೇದನೆ: ಕೆ.ವಿ.ಸು. ದಿ. ೧೯೯೯

೧೪. **ಚಿತ್ರಾಕ್ಷರ:** ದೃಶ್ಯಕಲಾ ತ್ರೈಮಾಸಿಕ (ಸಂ): ಕೆ.ವಿ.ಸು.: ಸಂಪುಟ ೧ ಸಂಚಿಕೆ ೧; ಅಗಸ್ಟ್. ೧೯೯೯

೧೫. **ಚಿತ್ರಪತ್ರ:** ೭ನೇ ಕರ್ನಾಟಕ ಕಲಾಮೇಳದ ದೈನಿಕ ವಾರ್ತಾಪತ್ರ:,ದಿ. ೨೯.೧೧.೨೦೦೩.

ಕ್ಯಾಟಲಾಗ್ಸ್

೧. **Chiselled Lyrics** 'Venkatachalapati' Giridhar Khasnis, August-2008.

೨. **೨೦೧೫ರ ಗೌರವ ಪ್ರಶಸ್ತಿ ಪ್ರದಾನ ಸಮಾರಂಭ:** ೧೧ನೇ ವಾರ್ಷಿಕ ಶಿಲ್ಪಕಲಾ ಪ್ರದರ್ಶನ ೨೦೧೫, ಡಾ. ಚೂಡಾಮಣಿ ನಂದಗೋಪಾಲ: ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ೨೦೧೫.

೩. **Hindsight:** sculptures by Dr. Shivanand H. Bantanur: K.v.su, march 2015

೪. **An Exapanded Insights of the space:** Sculptures by Jagannath jakkepalli,

k.v.su. May-2010.

೫. **An Exhibition of Recent Contemporary Sculptures:** Conteporary Sculptor's

Forum: Dr. Pramila Lochan-july-2008.

೬. **An Exihibition of Recent Sculptures**: Contmporary Sculptor's Forum : H.A. Anilkumar,

August 2010

೭. **ಗೌರವ ಪ್ರಶಸ್ತಿ ಪುರಸ್ಕೃತರು ಮತ್ತು ವಾರ್ಷಿಕ ಶಿಲ್ಪಕಲಾ ಪ್ರದರ್ಶನ:** ಬ್ರಹ್ಮಶೀಪುರ ಹರೀಶ್, ಕರ್ನಾಟಕ ಶಿಲ್ಪಕಲಾ ಅಕಾಡೆಮಿ–೨೦೧೨.

೮. **ಮಿಕ್ಸಡ್ ಬ್ಯಾಗ್ ಕಲಾ ಪ್ರದರ್ಶನ ಕ್ಯಾಟಲಾಗ್:** ಡಾ. ಶಿವಾನಂದ ಎಚ್. ಬಂಟನೂರ, ದಿ ಐಡಿಯಲ್ ಫೈನಾರ್ಟ್ ಸಂಸ್ಥೆ ಕಲಬುರ್ಗಿ, ೧೯೯೮



ಕೆ.ವೆಂಕಟಪ್ಪನವರ 'ಹೋಟೆಲ್ ಮಾಣಿ'

ಮಾಧ್ಯಮ: ಪ್ಲಾಸ್ಟರ್ ಆಫ್ ಪ್ಯಾರಿಸ್



ಸಿ.ಪಿ. ರಾಜಾರಾಮ್ ಅವರ 'ತಾಯಿ ಮಗು'

ಮಾಧ್ಯಮ: ಮರ



ಆರ್.ಎಸ್. ನಾಯ್ಡು ಅವರ 'ಟಿ.ಪಿ. ಕೈಲಾಸಂ'

ಮಾಧ್ಯಮ: ಪ್ಲಾಸ್ಟರ್ ಆಫ್ ಪ್ಯಾರಿಸ್



ಧನಂಜಯ್ ಶಿಲ್ಪಿ 'ತಾಯಿ ಮಗು'

ಮಾಧ್ಯಮ: ಅಮೃತ ಶಿಲೆ



ಧನಂಜಯ್ ಶಿಲ್ಪಿ ಅವರ 'ಮೀನುಗಳು'

ಮಾಧ್ಯಮ: ಸಿಮೆಂಟ್



ವೆಂಕಟಾಚಲಪತಿ ಅವರ 'ಬಿರಿದ ಮೊಗ್ಗು'

ಮಾಧ್ಯಮ: ಫೈಬರ್ ಗ್ಲಾಸ್



ಎನ್.ಎಚ್. ಕುಲಕರ್ಣಿ ಅವರ 'ಕೈಗಳು'

ಮಾಧ್ಯಮ: ಲೋಹ



ಬಾಲಾನ್ ನಂಬಿಯಾರ್ ಅವರ 'ಒಂದು ಶಿಲ್ಪ'

ಮಾಧ್ಯಮ: ಉಕ್ಕು



ವಿ.ಎ. ದೇಶಪಾಂಡೆ ಅವರ 'ಒಂದು ಶಿಲ್ಪ'

ಮಾಧ್ಯಮ: ಲೋಹ



ಎಸ್. ಪುಷ್ಪಮಾಲಾ ಅವರ 'ಒಂದು ಶಿಲ್ಪ'

ಮಾಧ್ಯಮ: ಟೆರ್ರಾಕೋಟ



ಶ್ಯಾಮಸುಂದರ ಅವರ 'ಒಂದು ಶಿಲ್ಪ'

ಮಾಧ್ಯಮ: ಮರ



ಜಾನ್ ದೇವರಾಜ ಅವರ 'ಗೋಡೆ'

ಮಾಧ್ಯಮ: ಟೆರ್ರಾಕೋಟ



ನಾಗಪ್ಪ ಪ್ರಧಾನಿ ಅವರ ಒಂದು ಶಿಲ್ಪ

ಮಾಧ್ಯಮ: ಶಿಲೆ



ನಾಗಪ್ಪ ಪ್ರಧಾನಿ ಅವರ 'ತಾಯಿ ಮತ್ತು ಮಗು'

ಮಾಧ್ಯಮ: ಫೈಬರ್



ನಾಗಪ್ಪ ಪ್ರಧಾನಿ ಅವರ ಒಂದು ಶಿಲ್ಪ

ಮಾಧ್ಯಮ: ಫೈಬರ್



ಯೂಸುಫ್ ಅರಕ್ಕಲ್ ಅವರ 'ಜಿನೋಮಿಕ್ ಇನ್‌ಸ್ಪಿರೇಷನ್'

ಮಾಧ್ಯಮ: ಸ್ಟೀಲ್



ಎ. ಓಂ. ಪ್ರಕಾಶ ಅವರ ಒಂದು ಶಿಲ್ಪ

ಮಾಧ್ಯಮ: ಮರ



ಕನಕಾಮೂರ್ತಿ ಅವರ ಒಂದು ಶಿಲ್ಪ

ಮಾಧ್ಯಮ: ಶಿಲೆ



ಮಧುಸೂದನ್ ಅವರ 'ಪ್ರಕೃತಿ ಪುರುಷ'

ಮಾಧ್ಯಮ: ಶಿಲೆ



ರಮೇಶ ಚಂದ್ರ ಅವರ 'ಕಾಮಧೇನು'

ಮಾಧ್ಯಮ: ಅಮೃತ ಶಿಲೆ



ಜಗನ್ನಾಥ ಜಕ್ಕಿಪಳ್ಳಿ ' ವಸಂತಕಾಲ'

ಮಾಧ್ಯಮ: ಕಲ್ಲು ಮತ್ತು ಲೋಹ



ಎಲ್. ಶಿವಲಿಂಗಪ್ಪ ಅವರ 'ತಾಯಿ ಮಗು'

ಮಾಧ್ಯಮ: ಮರಳು ಮತ್ತು ಫೋಮ್




ಆರ್. ಹಡಪದ ಮತ್ತು ಇತರರು 'ಸಮೂಹ ಶಿಲ್ಪ'

ಮಾಧ್ಯಮ: ಶಿಲೆ



ಡಾ. ಶಿವಾನಂದ ಬಂಟನೂರ ಅವರ ಶಿಲ್ಪ 'ಪಲ್ಲಟ'

ಮಾಧ್ಯಮ: ಬೇವಿನ ಮರ



ಈರಣ್ಣ ಅರ್ಕಸಾಲಿ ಅವರ 'ಜೀವನ ಸೌಂದರ್ಯ'

ಮಾಧ್ಯಮ: ಮೃದು ಶಿಲೆ



ಯು. ಭಾಸ್ಕರ್‌ರಾವ್ ಅವರ ಒಂದು ಶಿಲ್ಪ

ಮಾಧ್ಯಮ: ಶಿಲೆ



ಬಿ.ಸಿ. ಶಿವಕುಮಾರ ಅವರ ಒಂದು ಶಿಲ್ಪ

ಮಾಧ್ಯಮ: ಸಿಮೆಂಟ್



ರವಿಕುಮಾರ ಕಾಶಿ ಅವರ ಒಂದು ಶಿಲ್ಪ

ಮಾಧ್ಯಮ: ಫಲ್ಕ್



ಬಾಬು ಈಶ್ವರ ಪ್ರಸಾದ ಅವರ 'ದಿ ರ್‍ಯಾಪಿಂಗ್'

ಮಾಧ್ಯಮ: ಫೈಬರ್ ಗ್ಲಾಸ್ ಶಿಲ್ಪ



ಎಮ್.ಎಸ್. ಉಮೇಶ ಅವರ ಒಂದು ಶಿಲ್ಪ

ಮಾಧ್ಯಮ: ಮಿಶ್ರ



ಎಸ್. ಗೋಪಿನಾಥ ಅವರ ಒಂದು ಶಿಲ್ಪ

ಮಾಧ್ಯಮ: ಮಿಶ್ರ



ಓಂಕಾರಮೂರ್ತಿ ಜಿ.ಬಿ. ಅವರ ಒಂದು ಶಿಲ್ಪ

ಮಾಧ್ಯಮ: ಅಲ್ಯೂಮಿನಿಯಂ



ಓಂಕಾರಮೂರ್ತಿ ಜಿ.ಬಿ. ಅವರ ಒಂದು ಶಿಲ್ಪ

ಮಾಧ್ಯಮ: ಕ್ಲೇ



ಎಂ.ರಾಮಮೂರ್ತಿ ಅವರ ಒಂದು ಶಿಲ್ಪ

ಮಾಧ್ಯಮ: ಮರ



ವೆಂಕಟಾಚಲಪತಿ ಅವರ ಒಂದು ಶಿಲ್ಪ

ಮಾಧ್ಯಮ: ಮೃದು ಶಿಲೆ




ಕನ್ನಡ ವಿಶ್ವವಿದ್ಯಾಲಯದ ಶಿಲ್ಪವನದ ಒಂದು ಶಿಲ್ಪ

ಮಾಧ್ಯಮ: ಗ್ರಾನೈಟ್



ಎಮ್. ರಘುರಾಮ್ ಅವರ 'ಆಮೆ ಮತ್ತು ವಿಮಾನ'

ಮಾಧ್ಯಮ: ಮಿಶ್ರ




ಆನಂದಬಾಬು ಅಂಬರಖಾನೆ ಅವರ 'ಪ್ರಕೃತಿ ಪುರುಷ'

ಮಾಧ್ಯಮ: ಟೆರ್ರಾಕೋಟ



ಎಮ್.ಸಿ. ರಮೇಶ ಅವರ 'ಚರ್ಚೆ'

ಮಾಧ್ಯಮ: ಮರಳು ಶಿಲೆ



ವಿಜಯರಾವ್ ಅವರ 'ಸೃಷ್ಟಿ'

ಮಾಧ್ಯಮ: ಮೃದು ಶಿಲೆ



ವಿಜಯರಾವ್ ಅವರ ಒಂದು ಶಿಲ್ಪ

ಮಾಧ್ಯಮ: ಮರಳು ಶಿಲೆ



ಮೈಸೂರಿನ ಕಾವಾದಲ್ಲಿನ ಒಂದು ಶಿಲ್ಪ

ಮಾಧ್ಯಮ: ಮರಳು ಶಿಲೆ



ಡಾ. ಮೋಹನ್‌ರಾವ್ ಪಂಚಾಳ ಅವರ ಒಂದು ಶಿಲ್ಪ

ಮಾಧ್ಯಮ: ಮರಳು ಶಿಲೆ



ಗೋಪಿನಾಥ ಅವರ ಒಂದು ಶಿಲ್ಪ

ಮಾಧ್ಯಮ: ಮರಳು ಶಿಲೆ



ಡಾ. ಶಿವಾನಂದ ಬಂಟನೂರ ಅವರ 'ಹೆಡ್ ಆಫ್ ದಿ ಇನ್ಸ್ಟಿಟ್ಯೂಶನ್'

ಮಾಧ್ಯಮ: ಮರ ಮತ್ತು ನಾಣ್ಯ



ಡಾ. ಗೀತಾಂಜಲಿ ಆಚಾರ್ಯ ಅವರ 'ಸೃಷ್ಟಿ'

ಮಾಧ್ಯಮ: ಮರಳು ಶಿಲೆ



ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಆವರಣದ ಶಿಲ್ಪ

ಮಾಧ್ಯಮ: ಗ್ರಾನೈಟ್ ಶಿಲೆ



ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಆವರಣದ ಶಿಲ್ಪ

ಮಾಧ್ಯಮ: ಮಿಶ್ರ



ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಆವರಣದ ಶಿಲ್ಪ

ಮಾಧ್ಯಮ: ಮೃದು ಶಿಲೆ



ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಆವರಣದ ಶಿಲ್ಪ

ಮಾಧ್ಯಮ: ಪೇಪರ್ ಕಪ್ಸ್



ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಆವರಣದ ಶಿಲ್ಪ

ಮಾಧ್ಯಮ: ಶಹಬಾದ್ ಶಿಲೆ



ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಆವರಣದ ಶಿಲ್ಪ

ಮಾಧ್ಯಮ: ಕೃಷ್ಣ ಶಿಲೆ




ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಆವರಣದ

~~ದಕ್ಷಿಣಾಮೂರ್ತಿಯವರ ಶಿ~~ಲ್ಪ ಮಾಧ್ಯಮ: ~~ಅಮೃತ~~ ಶಿಲೆ



ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಆವರಣದ ಶಿಲ್ಪ

ಮಾಧ್ಯಮ: ಸಿಮೆಂಟ್



ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಆವರಣದ ಶಿಲ್ಪ

ಮಾಧ್ಯಮ: ಮೃದು ಶಿಲೆ



ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಆವರಣದ

ಗೌತಮ್ ಅಂದಾನಿ ಅವರ ಶಿಲ್ಪ ಮಾಧ್ಯಮ: ಮೃದು ಶಿಲೆ




ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಆವರಣದ ಶಿಲ್ಪ

ಮಾಧ್ಯಮ: ಮೃದುಶಿಲೆ



ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಆವರಣದ ಶಿಲ್ಪ

ಮಾಧ್ಯಮ: ಸಿಮೆಂಟ್




ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಆವರಣದ
ದಕ್ಷಿಣಾಮೂರ್ತಿಯವರ ಶಿಲ್ಪ ಮಾಧ್ಯಮ: ಅಮೃತ ಶಿಲೆ




ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಆವರಣದ ಶಿಲ್ಪ
ಮಾಧ್ಯಮ: ಮೃದು ಶಿಲೆ




ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಆವರಣದ ಶಿಲ್ಪ
ಮಾಧ್ಯಮ: ಮೃದು ಶಿಲೆ



ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಆವರಣದ ಶಿಲ್ಪ
ಮಾಧ್ಯಮ: ಮೃದು ಶಿಲೆ



ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಆವರಣದ ಶಿಲ್ಪ
ಮಾಧ್ಯಮ: ಸಿಮೆಂಟ್



ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಆವರಣದ ಶಿಲ್ಪ
ಮಾಧ್ಯಮ: ಮೃದು ಶಿಲೆ



ಎಂ.ಸಿ.ರಮೇಶ ಅವರ 'ವಿರ್ಲ್‌ಪೂಲ್'

ಮಾಧ್ಯಮ: ಮೃದು ಶಿಲೆ



ಎನ್.ಎಸ್. ಪ್ರದೀಪ ಕುಮಾರ ಅವರ ಒಂದು ಶಿಲ್ಪ

ಮಾಧ್ಯಮ:ಮೃದು ಶಿಲೆ



ಕನ್ನಡ ಭವನದ ಶಿಲ್ಪವನದ ಒಂದು ಶಿಲ್ಪ

ಮಾಧ್ಯಮ: ಮೃದು ಶಿಲೆ




ಜಾನ್ ದೇವರಾಜ ಅವರ ಒಂದು ಶಿಲ್ಪ

ಮಾಧ್ಯಮ: ಮೃದು ಶಿಲೆ



ವಿ.ಎ. ದೇಶಪಾಂಡೆ ಅವರ 'ರಭಸ'

ಮಾಧ್ಯಮ: ಮೃದು ಶಿಲೆ



ಡಾ. ಶಿವಾನಂದ ಬಂಟನೂರು ಅವರ 'ಕನ್ನಡಿಗ'

ಮಾಧ್ಯಮ: ಗ್ರಾನೈಟ್ ಶಿಲೆ



ಕನ್ನಡ ಭವನದ ಶಿಲ್ಪವನದ ಒಂದು ಶಿಲ್ಪ

ಮಾಧ್ಯಮ: ಗುಜರಿ ಲೋಹ




ಕನ್ನಡ ಭವನದ ಶಿಲ್ಪವನದ ಒಂದು ಶಿಲ್ಪ

ಮಾಧ್ಯಮ: ಮೃದು ಶಿಲೆ



ವೆಂಕಟಾಚಲಪತಿಯವರ ಒಂದು ಶಿಲ್ಪ

ಮಾಧ್ಯಮ: ಮೃದು ಶಿಲೆ



ಎಮ್.ಸಿ.ರಮೇಶ ಅವರ ಒಂದು ಶಿಲ್ಪ

ಮಾಧ್ಯಮ: ಮೃದು ಶಿಲೆ



ಗೌತಮ ವಿ. ಅಂದಾನಿ ಅವರ ಒಂದು ಶಿಲ್ಪ

ಮಾಧ್ಯಮ: ಶಿಲೆ



ಗೋಪಿನಾಥ ಅವರ 'ಗ್ಲೋಬಲ್ ವಾರ್ಮಿಂಗ್'

ಮಾಧ್ಯಮ: ಮಿಶ್ರ




ಕೆ.ವಿವೇಕರಾವ್ ಅವರ ಒಂದು ಶಿಲ್ಪ

ಮಾಧ್ಯಮ: ಗಾಜು ಮತ್ತು ಬಣ್ಣ



ಆರ್. ಜಗದೀಶ ಅವರ 'ಆರ್‌ಮರ್'

ಮಾಧ್ಯಮ: ಲೋಹ ಮತ್ತು ಕಲ್ಲು



ಗುರುರಾಜ ನಾಯಕ ಅವರ ಒಂದು ಶಿಲ್ಪ

ಮಾಧ್ಯಮ: ಮೃದು ಶಿಲೆ



ಎನ್.ಎಸ್. ಹರ್ಷ, ರಮೇಶ ಕಲ್ಲೂರ, ಬಾಬು ಈಶ್ವರ ಪ್ರಸಾದ,

ಶಾಂತಾಮಣಿ ಅವರ ಒಂದು ಶಿಲ್ಪ ಮಾಧ್ಯಮ: ಮಿಶ್ರ



ವಿ.ಟಿ.ನಾಯಿಂದ್ರಕರ್ ಅವರ ಒಂದು ಶಿಲ್ಪ

ಮಾಧ್ಯಮ: ಸ್ಟೀಲ್



ಕಿನ್ನಾಳ ಕಲಾ ಶೈಲಿಯ ಸಮಕಾಲೀನ ಶಿಲ್ಪ

ಮಾಧ್ಯಮ: ಮಿಶ್ರ



ಕನ್ನಡ ವಿಶ್ವವಿದ್ಯಾಲಯದ ಶಿಲ್ಪವನದ ಒಂದು ಶಿಲ್ಪ

ಮಾಧ್ಯಮ: ಸಿಮೆಂಟ್ ಮತ್ತು ಬಳೆಚೂರು




ಕನ್ನಡ ವಿಶ್ವವಿದ್ಯಾಲಯದ ಶಿಲ್ಪವನದ ಒಂದು ಶಿಲ್ಪ

ಮಾಧ್ಯಮ: ಗ್ರಾನೈಟ್ ಶಿಲೆ



ಒಂದು ಗುಜರಿ ಶಿಲ್ಪ

ಮಾಧ್ಯಮ: ಲೋಹ



ನಿಂಗಪ್ಪ ಕೇರಿ ಅವರ 'ಸೂರ್ಯ ಶಿಕಾರಿ'


ಮಾಧ್ಯಮ: ಮರಳು ಶಿಲೆ






ಡಾ. ಶಿವಾನಂದ ಬಂಟನೂರ ಅವರ 'ಕಾರ್ಗಿಲ್ ವಿಧವೆ'

ಮಾಧ್ಯಮ: ಕೃಷ್ಣ ಶಿಲೆ



ಕನ್ನಡ ವಿಶ್ವವಿದ್ಯಾಲಯದ ಆವರಣ ಶಿಲ್ಪ

ಮಾಧ್ಯಮ: ಗ್ರಾನೈಟ್ ಶಿಲೆ



ಕನ್ನಡ ವಿಶ್ವವಿದ್ಯಾಲಯದ ಆವರಣ ಶಿಲ್ಪ

ಮಾಧ್ಯಮ: ಮರಳು ಶಿಲೆ

ಡಾ. ಶಿವಾನಂದ ಬಂಟನೂರ ಅವರ 'ತುಳಿಯಲಿನ್ನು ಜಾಗವಿಲ್ಲ'

ಮಾಧ್ಯಮ: ಮರ



ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಆವರಣದ ಶಿಲ್ಪ

ಮಾಧ್ಯಮ: ಸಿಮೆಂಟ್



ಜಾನ್ ದೇವರಾಜ ಅವರ ಒಂದು ಶಿಲ್ಪ

ಮಾಧ್ಯಮ: ಮೃದು ಶಿಲೆ



ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಆವರಣದ ಶಿಲ್ಪ

ಮಾಧ್ಯಮ: ಮಿಶ್ರ




ನಾಗಪ್ಪ ಪ್ರಧಾನಿ ಅವರ 'ತಾಯಿ ಮಗು'

ಮಾಧ್ಯಮ: ಫೈಬರ್ ಗ್ಲಾಸ್



ಹುಲಕೋಟಿಯ ರಾಜೇಶ್ವರಿ ವಿದ್ಯಾಸಂಸ್ಥೆಯ ಆವರಣ ಶಿಲ್ಪ

ಮಾಧ್ಯಮ: ಮೃದು ಶಿಲೆ



ಕಿನ್ನಾಳ ಕಲಾ ಪದ್ಧತಿಯ ಸಮಕಾಲೀನ ಶಿಲ್ಪ

ಮಾಧ್ಯಮ: ಮಿಶ್ರ



ಡಾ. ಗಿರೀಶಕುಮಾರ ಅವರ ಒಂದು ಶಿಲ್ಪ

ಮಾಧ್ಯಮ: ಕೃಷ್ಣ ಶಿಲೆ



ಎನ್. ಪುಷ್ಪಮಾಲಾ ಅವರ ಶಿಲ್ಪ 'ಹಂದಿಗಳು'

ಮಾಧ್ಯಮ: ಟೆರ್ರಾಕೋಟ



ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಆವರಣದ ಶಿಲ್ಪ

ಮಾಧ್ಯಮ: ಸ್ಯಾಂಡ್ ಕ್ಯಾಸ್ಟಿಂಗ್



ಡಾ. ಮಹಾಂತೇಶ ಪಲದಿನ್ನಿ ಅವರ 'ಕಾಡು ಕುದುರೆ'

ಮಾಧ್ಯಮ: ಮರಳು ಶಿಲೆ



ಮೈಸೂರು ವಿಶ್ವವಿದ್ಯಾಲಯದ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನ ಕೇಂದ್ರದಲ್ಲಿರುವ ಒಂದು ಶಿಲ್ಪ

ಮಾಧ್ಯಮ: ಮೃದು ಶಿಲೆ



ಮಾಧ್ಯಮ: ಫೈಬರ್



ಮಾಧ್ಯಮ: ಶಿಲೆ



ಮಾಧ್ಯಮ: ಮರ



ಮಾಧ್ಯಮ: ಶಿಲೆ




ಪ್ರಸನ್ನಕುಮಾರ ಬಿರೂರ ಅವರ ಒಂದು ಶಿಲ್ಪ

ಮಾಧ್ಯಮ: ಶಿಲೆ

ಬೆಂಗಳೂರಿನ ಕಲಾ ಗ್ರಾಮದಲ್ಲಿರುವ ಸಮಕಾಲೀನ ಶಿಲ್ಪಕಲಾಕೃತಿಗಳು


ಮಾಧ್ಯಮ: ಶಿಲೆ













ಬೆಂಗಳೂರಿನ ಕಲಾ ಗ್ರಾಮದಲ್ಲಿರುವ ಸಮಕಾಲೀನ ಶಿಲ್ಪಕಲಾಕೃತಿಗಳು


ಮಾಧ್ಯಮ: ಶಿಲೆ


















ಕೆ. ರಾಘವೇಂದ್ರ ಅವರ ಒಂದು ಶಿಲ್ಪ

ಮಾಧ್ಯಮ: ಶಿಲೆ ಮತ್ತು ಲೋಹ

ರವಿಶಾ ಅವರ ಒಂದು ಶಿಲ್ಪ

ಮಾಧ್ಯಮ: ಮರ



ಬಿ.ಎಮ್. ರವಿಕುಮಾರ ಅವರ 'ಅರ್ಬನ್ ಅನಿಮಲ್'

ಮಾಧ್ಯಮ: ಫೈಬರ್




ಡಾ. ಶಿವಾನಂದ ಬಂಟನೂರ ಅವರ 'ಉಯಿಲು'

ಮಾಧ್ಯಮ: ಮರ ಮತ್ತು ಹಗ್ಗ



ಗೀತಾಂಜಲಿ ಆಚಾರ್ಯ ಅವರ ಒಂದು ಶಿಲ್ಪ

ಮಾಧ್ಯಮ: ಶಿಲೆ



ದಾನಯ್ಯ ಚೌಕಿಮಠ ಅವರ 'ತಾಯಿತತ್ವ'

ಮಾಧ್ಯಮ: ಮರಳು ಶಿಲೆ



ಡಾ. ಮಹಾಂತೇಶ ಪಲದಿನ್ನಿ ಅವರ ಒಂದು ಶಿಲ್ಪ

ಮಾಧ್ಯಮ: ಶಿಲೆ



ನಟರಾಜ ಅವರ 'ಗೂಳಿ'

ಮಾಧ್ಯಮ: ಮರ



ನಿಂಗಪ್ಪ ಕೇರಿ ಅವರ 'ಕರಿಸಿದ್ದ'

ಮಾಧ್ಯಮ: ಮರಳು ಶಿಲೆ



ಹೇಮಂತ ಕುಮಾರ ಅವರ 'ಜಲಗಾರ ಶಿವ'

ಮಾಧ್ಯಮ: ಮರಳು ಶಿಲೆ



ಗಣೇಶ ಉರಾಳ ಅವರ ಒಂದು ಶಿಲ್ಪ

ಮಾಧ್ಯಮ: ಮರಳು ಶಿಲೆ




ವಿಠ್ಠಲ್ ಬಡಿಗೇರ ಅವರ 'ಕುವೆಂಪು ಕಾವ್ಯ'

ಮಾಧ್ಯಮ: ಮರಳು ಶಿಲೆ



ಹರೀಶ ಅವರ 'ಲೇಪ್ಯ'

ಮಾಧ್ಯಮ: ಮೃದು ಶಿಲೆ



ಮಂಜುನಾಥ ಕಂಚಗಾರ ಅವರ 'ಅಲೆಗಳು'

ಮಾಧ್ಯಮ: ಮರಳು ಶಿಲೆ



ನಟರಾಜ ಎಂ. ಶಿಲ್ಪಿ ಅವರ ಒಂದು ಶಿಲ್ಪ

ಮಾಧ್ಯಮ: ಮಿಶ್ರ



ಮೈಸೂರಿನ ಕಾವಾದ ಆವರಣದಲ್ಲಿನ ಶಿಲ್ಪ

ಮಾಧ್ಯಮ: ಮರಳು ಶಿಲೆ




ರಾಜೇಶ ದೇವಣಗಾಂ ಅವರ ಒಂದು ಅಭಿವ್ಯಕ್ತಿ

ಮಾಧ್ಯಮ: ಮಿಶ್ರ




ಡಾ. ಶಿವಾನಂದ ಬಂಟನೂರ ಅವರ 'ವಾಲ್ ಆಫ್ ಚಾಲುಕ್ಯ'

ಮಾಧ್ಯಮ: ಮರಳು ಶಿಲೆ



ಕೆ. ರಾಘವೇಂದ್ರ ಅವರ ಒಂದು ಶಿಲ್ಪ

ಮಾಧ್ಯಮ: ಮರಳು ಶಿಲೆ



ಜಗನ್ನಾಥ್ ಜಕ್ಕೆಪಳ್ಳಿ ಅವರ ಒಂದು ಶಿಲ್ಪ

ಮಾಧ್ಯಮ: ಮೃದು ಶಿಲೆ



ಎಂ.ರಾಮಮೂರ್ತಿ ಅವರ ಒಂದು ಶಿಲ್ಪ

ಮಾಧ್ಯಮ: ಮೃದು ಶಿಲೆ



ವೆಂಕಟೇಶ ಎಂ ಅವರ ಒಂದು ಶಿಲ್ಪ

ಮಾಧ್ಯಮ: ಮೃದು ಶಿಲೆ



ಶಿವಕುಮಾರ ಕೆ. ಅವರ ಒಂದು ಶಿಲ್ಪ

ಮಾಧ್ಯಮ: ಮೃದು ಶಿಲೆ



ನಾರಾಯಣ ಸೂತ್ರದಾರ ಅವರ ಒಂದು ಶಿಲ್ಪ

ಮಾಧ್ಯಮ: ಮೃದು ಶಿಲೆ




ವೀರಣ್ಣ ಅರ್ಕಸಾಲಿ ಅವರ ಒಂದು ಶಿಲ್ಪ

ಮಾಧ್ಯಮ: ಮೃದು ಶಿಲೆ



ವಿಪಿನ್‌ಸಿಂಗ್ ಭದೌರಿಯಾ ಅವರ 'ಕತ್ತಲೆ ಬೆಳಕು'

ಮಾಧ್ಯಮ: ಮೃದು ಶಿಲೆ



ಯು. ಭಾಸ್ಕರ್‌ರಾವ್ ಅವರ 'ಡಿವೈನ್ ಕಾಲಂ'

ಮಾಧ್ಯಮ: ಮೃದು ಶಿಲೆ



ವಿವಿಧ ಮಾಧ್ಯಮದ ಸಮಕಾಲೀನ ಶಿಲ್ಪಕಲಾಕೃತಿಗಳು

ಕೃಪೆ: ಅಂತರ್ಜಾಲ



ವಿವಿಧ ಮಾಧ್ಯಮದ ಸಮಕಾಲೀನ ಶಿಲ್ಪಕಲಾಕೃತಿಗಳು

ಕೃಪೆ: ಅಂತರ್ಜಾಲ



ವಿವಿಧ ಮಾಧ್ಯಮದ ಸಮಕಾಲೀನ ಶಿಲ್ಪಕಲಾಕೃತಿಗಳು

ಕೃಪೆ: ಅಂತರ್ಜಾಲ



ವಿವಿಧ ಮಾಧ್ಯಮದ ಸಮಕಾಲೀನ ಶಿಲ್ಪಕಲಾಕೃತಿಗಳು

ಕೃಪೆ: ಅಂತರ್ಜಾಲ



ವಿವಿಧ ಮಾಧ್ಯಮದ ಸಮಕಾಲೀನ ಶಿಲ್ಪಕಲಾಕೃತಿಗಳು

ಕೃಪೆ: ಅಂತರ್ಜಾಲ



ವಿವಿಧ ಮಾಧ್ಯಮದ ಸಮಕಾಲೀನ ಶಿಲ್ಪಕಲಾಕೃತಿಗಳು

ಕೃಪೆ: ಅಂತರ್ಜಾಲ

ಸಮಕಾಲೀನ ಶಿಲ್ಪಕಲೆಯ ಸಂವೇದನೆಯ ನೆಲೆಗಳು



ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಕನ್ನಡ ಭವನ ಜೆ.ಸಿ.ರಸ್ತೆ, ಬೆಂಗಳೂರು

2015